UNIVERSAL LIBRARY
OU_200449
UNIVERSAL LIBRARY

**OSMANIA UNIVERSITY LIBRARY**

Call No Accession No.

Author

Title

This book should be returned on or before the date last marked below.

# ದಾಸ್ಯ

(ಕಾದಂಬರಿ)

★

ಲೇಖಕರು:

ಕೆ. ಲ. ಸುಬ್ಬರಾವ್

★

ಸತ್ಯಶೋಧನ ಪ್ರಕಟನ ಮಂದಿರ

ಕೋಟೆ, ಬೆಂಗಳೂರು ನಗರ.

[illegible]

ಮೊದಲನೆ ಮುದ್ರಣ

ಬೆಲೆ: ೧—೧೨—೦

[ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ]

ಮುದ್ರಕರು

**ವಿ. ರಾಮಕೃಷ್ಣ, ರಾಮಕೃಷ್ಣ ಅಂಡ್ ಕೋ.,**

**ಕೋಟೆ, ಬೆಂಗಳೂರು ನಗರ.**

# ಅರ್ಪಣೆ

★ 'ಶ್ರೀ'ಗುರುವರ್ಯರಿಗೂ

★ ಪೂಜ್ಯ ಪಿತೃಗಳಿಗೂ

★ ಪ್ರಸಿದ್ಧ 'ಶ್ರೀನಿವಾಸ'ರಿಗೂ

★ ನಮಿಸಿ ಈ ಕೃತಿಯನ್ನು ಭಕ್ತಿಪೂರ್ವಕ

★ ನನ್ನ ಕನ್ನಡ ತಾಯಿಯ ಅಡಿಯಲ್ಲಿ ಅರ್ಪಿಸಿದ್ದೇನೆ.

ಈಶ್ವರ ಪ್ರಸಾದ ಸಾಧನ
[illegible]ೂರು, (ದಕ್ಷಿಣ ಬಸವನಗುಡಿ)

"ಕೆ. ಲ. ಸುಬ್ಬರಾವ್"
ಬೆಂಗಳೂರು ಸಿಟಿ.

# ವಿಜ್ಞಾಪನೆ

ಇದೊಂದು ಕಾದಂಬರಿ. ಕನ್ನಡದಲ್ಲಿ ಈಗತಾನೆ ಇದನ್ನು ಹೊರಗೆಡಹಲು ಅವಕಾಶ ಸಿಕ್ಕಿದೆ ಈ ಸುಯೋಗಕ್ಕಾಗಿ ನನಗೆ ಬಹಳ ಸಂತೋಷ.

ಇದರಲ್ಲಿ ಜೀವನದ ಮೇಲೆ ಪ್ರೇಮದ ಪ್ರಭಾವದಿಂದ ಪರಿಣಾಮವಾಗುವ ಬಗೆಯನ್ನೂ ಅದೃಷ್ಟದ ಮಹತ್ವವನ್ನೂ ಬಾಳಿನ ಗುರಿಯನ್ನೂ ಚಿತ್ರಿಸಿದೆ

ಬಹಳ ಆತುರದಲ್ಲಿ ಈ ಪುಸ್ತಕವನ್ನು ಬರೆದೆನು. ಇನ್ನೂ ಆತುರದಲ್ಲಿಯೇ ಇದು ಮುದ್ರಿತವಾಯಿತು. ತಿದ್ದುವುದಕ್ಕೆ ನನಗೆ ತಕ್ಕಷ್ಟು ಕಾಲ ಸಿಗಲಿಲ್ಲ. ಈ ಕಾರಣ ಅನಿವಾರ್ಯವಾಗಿ ಅನೇಕ ದೋಷಗಳು ಕಂಡು ಬಂದಿವೆ. ಇದಕ್ಕಾಗಿ ಬಹಳ ವಿಷಾದ. ಓದುಗರು ಸಹೃದಯದಿಂದ ಕ್ಷಮಿಸಿ, ಗುಣಗ್ರಹಣಮಾಡಿ, ಹಿಂದಿನ ಗ್ರಂಥಗಳಿಗೆ ಪ್ರೋತ್ಸಹ ಕೊಟ್ಟಂತೆ ಇದಕ್ಕೂ ಕೊಡಬೇಕಾಗಿ ಪ್ರಾರ್ಥನೆ.

ಇಂಗ್ಲಿಷ್ ಭಾಷೆಯಲ್ಲಿರುವ ಸೈಲಾಸ್ ಮಾರ್ನರ್ ಎಂಬ ಪ್ರಸಿದ್ಧ ಗ್ರಂಥ ಇದಕ್ಕೆ ಆಧಾರ. ಅದರ ಸರಳಾನುವಾದ ಇದು. ಸುಮಾರು ಮೂವತ್ತು ವರ್ಷಗಳ ಹಿಂದೆ ಅದನ್ನು ಓದಿದೆನು. ಆಮೇಲೆ ನನಗೆ ಅದೇ ಪಠ್ಯ ಪುಸ್ತಕವೂ ಆಗಿದ್ದಿತು. ಆಗಿನಿಂದ ಅದನ್ನು ತಾಯ್ನುಡಿಯಲ್ಲಿ ಬರೆದು ಕನ್ನಡಿಗರಿಗೆ ಒಪ್ಪಿಸ ಬೇಕೆಂದು ಅತ್ಯುತ್ಕೃಷ್ಟವಾದ ಆಸೆ. ಆದರೆ ವಿರಾಮ ಸಾಲದು, ಮುಂದರಿಸಲು ಸಾಧ್ಯವೇ ಆಗಲಿಲ್ಲ..

ಒಂಡೆರಡು ವರ್ಷಗಳ ಹಿಂದೆ ಇದನ್ನು ಬರೆದು ಮುಗಿಸಲು ಪುನಃ ಕೈ ಹಾಕಿದೆ. ಆಗ ದೇಶೀಯ ವಿದ್ಯಾಶಾಲೆಯ ಶ್ರೀ. ಕೆ ನಂಜುಂಡಯ್ಯ ಬಿ. ಎ. ಅವರು ಹಲವು ಭಾಗಗಳನ್ನು ಓದ್ಲಿಸಿ ಸಲಹೆಗಳನ್ನು ಕೊಟ್ಟು ಸಹಾಯ ಮಾಡಿದರು. ಅವರಿಗೆ ನನ್ನ ಕೃತಜ್ಞತೆ ಸಲ್ಲತಕ್ಕದ್ದಿದೆ.

ಪೂಜ್ಯರಾದ ನನ್ನ ತಂದೆಯವರಿಗೆ ಇದನ್ನು ಓದಬೇಕೆಂಬ ಆಸೆ ಬಹಳ ಇದ್ದಿತು. ಆ ಗುರುವು ಕಾಲವಾದ ಮೇಲೆ ಈ ಪುಸ್ತಕ ಈಗ ಹೊರ ಬಿದ್ದಿದೆ ನನಗೆ ಇದರ ಸಲುವಾಗಿ ವ್ಯಸನ.

ಕಾಲೇಜಿನಲ್ಲಿ ಇದನ್ನು ಪಾಠಹೇಳಿ ಅನುಗ್ರಹಿಸಿದ ಗುರು ಸುಪ್ರಸಿದ್ಧರಾದ 'ಶ್ರೀ' ಗಳವರು. ಶ್ರೀ ಬಿ. ಎಂ. ಶ್ರೀ ಕಂಠಯ್ಯನವರ ಗುಣಕೀರ್ತಿಗಳನ್ನು ಕೇಳದವರಿಲ್ಲ. ಈಗ ಅವರೂ ನಮಗೆ ಕಣ್ಮರೆಯಾಗಿ ಬಿಟ್ಟಿರುವುದರಿಂದ ನನ್ನ ದುಃಖ ಬಹಳವೇ ಸರಿ.

ಮಾನ್ಯರಾದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರವರು ಇದಕ್ಕೆ ಮುನ್ನುಡಿ ಬರೆದು ಕೊಟ್ಟಿರುವುದಕ್ಕಾಗಿ ಅವರಿಗೆ ಅನೇಕ ನಮಸ್ಕಾರಗಳು. 'ಶ್ರೀನಿವಾಸ'ರು ಮಾರ್ಗದರ್ಶಕರು, ಹಿರಿಯ ಸಾಹಿತಿಗಳು, ಸೌಜನ್ಯ ಸರಳತೆಯುಳ್ಳವರು, ಅವರ ಆಶೀರ್ವಾದಕ್ಕಾಗಿ ನಾನು ಬಹಳ ಉಪಕೃತನಿದ್ದೇನೆ.

ಇದನ್ನು ಮುದ್ರಣಮಾಡಿಸಿ ಪ್ರಕಟಪಡಿಸಲು ನೆರವಾದ ಬೆಂಗಳೂರು ನಗರದ ಸುಪ್ರಸಿದ್ಧ ಸತ್ಯಶೋಧನ ಪ್ರಕಟನ ಮಂದಿರದ ಮಿತ್ರರಿಗೂ ಬೆಂಗಳೂರು ಕೋಟೆಯಲ್ಲಿರುವ ರಾಮಕೃಷ್ಣ ಮುದ್ರಣಾಲಯದ ಒಡೆಯರಿಗೂ ಅನೇಕ ಧನ್ಯವಾದಗಳು.

ಕನ್ನಡ ಬಂಧುಗಳು ಇದನ್ನು ಓದಿ ನನ್ನ ಪ್ರಯತ್ನವನ್ನು ಸಾರ್ಥಕ ಮಾಡಬೇಕೆಂದು ವಿಜ್ಞಾಪನೆ. ದೋಷಗಳೆಲ್ಲವನ್ನೂ ಮುಂದಿನ ಮುದ್ರಣದಲ್ಲಿ ಸರಿಪಡಿಸಲಾಗುವುದು. ಗೆಳೆಯರೆಲ್ಲರಿಗೂ ಮತ್ತೆ ಮನಃಪೂರ್ವಕ ವಂದನೆಗಳು.

# ಮುನ್ನುಡಿ

ಆಂಗ್ಲ ವಿಖ್ಯಾತ ಕತೆಗಾತಿ ಜಾರ್ಜ್ ಎಲಿಯಟ್ ಮಹನೀಯಳ ಸೈಲಾಸ್‌ಮಾರ್ನರ್ ಕಾದಂಬರಿಯ ತಮ್ಮ ಈ ಸರಳಾನುವಾದಕ್ಕೆ ನಾನೊಂದು ಮುನ್ನುಡಿ ಬರೆದುಕೊಡಬೇಕೆಂದು ಇದರ ಕರ್ತೃಗಳಾದ ನನ್ನ ಪ್ರಿಯ ಮಿತ್ರರು ಶ್ರೀ ಸುಬ್ಬರಾಯರು ಕೇಳಿದಾರೆ. ಈಮಿತ್ರರು ಈ ಕೆಲಸವನ್ನು ಮಾಡಿರುವುದು ಅವರ ದೃಷ್ಟಿಯಿಂದ ಅತ್ಯುತ್ತಮ ಭಾಷಾಸೇವೆ, ಕನ್ನಡಿಗರ ದೃಷ್ಟಿಯಿಂದ ಬಹು ದೊಡ್ಡ ಉಪಕಾರ, ಎಂದು ನನ್ನ ಭಾವನೆ. ಈ ಸಂಗತಿಯನ್ನು ಸೂಚಿಸುವಷ್ಟರ ಮಾತ್ರಕ್ಕೆ ಕೃತಿಯ ಆರಂಭದಲ್ಲಿ ನನ್ನ ನಾಲ್ಕು ಮಾತನ್ನು ಸೇರಿಸಲು ನಾನು ಬಹು ಸಂತೋಷ ದಿಂದ ಒಪ್ಪಿದೇನೆ.

ಮೂಲಕೃತಿ ಸೈಲಾಸ್‌ಮಾರ್ನರ್ ಆಂಗ್ಲ ಸಾಹಿತ್ಯದ ಎಷ್ಟೋ ವಿಸ್ತಾರವಾದ ಕಥಾ ಪ್ರಪಂಚದಲ್ಲಿ ಕೂಡ ಅಗ್ರಪಂಕ್ತಿಯ ಒಂದು ಪೀಠಕ್ಕೆ ಅಧಿಕಾರಿಯಾಗಿದೆ. ಜಾರ್ಜ್‌ಎಲಿಯಟ್ ಆಂಗ್ಲ ಕತೆಗಾರರಲ್ಲಿ ಒಂದು ಮುಖ್ಯ ಸ್ಥಾನಕ್ಕೆ ಅಧಿಕಾರಿ. ಸೈಲಾಸ್‌ಮಾರ್ನರ್ ಆಕೆಯ ಕೃತಿಗಳಲ್ಲಿ ಪ್ರಾಯಶಃ ಅತ್ಯುತ್ತಮ ಕೃತಿ. ಲೇಖಿಕೆ ಸಹಜವಾಗಿ ಕತೆ ಹೇಳುವ ಶಕ್ತಿ ಉಳ್ಳಾಕೆ; ತನ್ನ ಸುತ್ತಣ ಜೀವನವನ್ನು ಕುತೂಹಲದಿಂದ, ಅನುರಕ್ತಿ ಯಿಂದ, ಕನಿಕರದಿಂದ'ನೋಡಬಲ್ಲಾಕೆ; ಆ ಜೀವನದ ನೋವು ನಗೆ, ಆಶೆ, ಆವೇಶ, ಮೋಸ ಮೋಹಕತೆ, ರೂಪು ಅರೂಪುಗಳನ್ನು ಕುರಿತು ಚಿಂತಿಸಬಲ್ಲ ಧೀಮಂತೆ. ಇಂಥ ಕತೆಗಾತಿ ತಕ್ಕಷ್ಟು ಅನುಭವ ಬಂದಮೇಲೆ ನಾಲ್ಕು ಕೃತಿಯನ್ನು ರಚಿಸಿ ಕುದುರಿದ ಕೈಯಿಂದ ವಯಸ್ಸಾಗುವ ಮುನ್ನ ಈ ಕತೆ ಯನ್ನು ಬರೆದಳು. ಈ ಮಹನೀಯೆ ಆಮೇಲೆ ಬರೆದ ಕೃತಿಗಳಲ್ಲಿ ಧೀಮಂತಿಕೆ ಅತಿಯಾಯಿತು ; ಮೊದಲ ಕೃತಿಗಳಲ್ಲಿ ಅದು ತಕ್ಕಷ್ಟು ಪ್ರಕಟವಾಗಲಿಲ್ಲ; ಈ ಕತೆಯಲ್ಲಿ ಜೀವನದ ಚಿತ್ರ, ಅದನ್ನು ಕುರಿತ ವಿಚಾರ, ಹಾಳತವರಿತು

ಸ್ಟೇರಿ ಕೃತಿಯು ಪಾಶ್ಚಾತ್ಯ ಶ್ರೇಷ್ಠ ಕಥನದ ಪಾಕಕ್ಕೆ ಒಂದು ಆದರ್ಶ ಎಂಬಂತೆ ಹದವಾಯಿತು. ಈ ಕಾರಣದಿಂದ ಸೈಲಾಸ್ ಮಾರ್ನರ್ ನೂರುವರ್ಷ ಬೆಳೆದಿದ್ದ ಆಂಗ್ಲ ಕಥನ ಕಲೆಯ ಉತ್ತಮ ಫಲವಾಗಿ ನೂರು ವರ್ಷ ಮುಂದೆ ಬರಬಹುದಾದ ಲೇಖಕರಿಗೆ ಮೇಲ್ಪಂಕ್ತಿಯಾಗಿ ಸಾಹಿತ್ಯಪ್ರೇಮಿಗಳ ಮನಸ್ಸನ್ನು ಒಪ್ಪಿಸಿಕೊಂಡಿತು.

ಆಂಗ್ಲ ಸಾಹಿತ್ಯವನ್ನು ಓದುವಲ್ಲಿ ಅದು ಎಂತಹ ಭಾಗ್ಯಶಾಲಿ ಸಾಹಿತ್ಯ ಎಂದು ಪರದೇಶೀಯರಿಗೆ ಎನ್ನಿಸುವುದು ಇಂತಹ ಕೃತಿಗಳಿಂದ. ಆ ಸಾಹಿತ್ಯದ ಪರಿಚಯದಿಂದ ನಮ್ಮ ದೇಶಕ್ಕೆ ಬರಬೇಕಾದ ಪ್ರಚೋದನವನ್ನು ಒದಗಿಸಬಲ್ಲ ಅಲ್ಲಿಯ ಕೃತಿಗಳಲ್ಲಿ ಸೈಲಾಸ್‌ಮಾರ್ನರ್ ಒಂದು. ಆಂಗ್ಲ ಸಾಹಿತ್ಯದಿಂದ ಪ್ರೇರಣೆ ಪಡೆದು ನಮ್ಮ ಸಾಹಿತ್ಯದಲ್ಲಿ ಕೆಲಸಮಾಡುತ್ತಿರುವ ಲೇಖಕರು ಇಂಥ ಕೃತಿಗಳನ್ನು ಕನ್ನಡಕ್ಕೆ ತರಬೇಕು; ಕನ್ನಡದ ಜೀವನವನ್ನು ಕುರಿತು ಇಂತಹ ಕೃತಿಗಳನ್ನು ರಚಿಸಬೇಕು ಆ ಸಾಹಿತ್ಯದ ಸ್ಯಾಂಡ್‌ಫರ್ಡ್ ಅಂಡ್ ಮರ್ಟನ್, ದಿ ವಿಕಾರ್ ಆಫ್ ವೇಕ್‌ಫೀಲ್ಡ್ ಮುಂತಾದ ಕೆಲವು ಅತ್ಯುತ್ತಮ ಗದ್ಯ ಕೃತಿಗಳು ಈ ಮೊದಲೇ ನಮ್ಮ ಭಾಷೆಗೆ ಬಂದುದುಂಟು. ಆದರೆ ನನ್ನ ಪೂಜ್ಯ ಗುರುಗಳು ದಿವಂಗತ ಬೆಳ್ಳೂರ ಮೈಲಾರ ಶ್ರೀಕಂಠಯ್ಯನವರು ಮಾಡಿದ ಆಂಗ್ಲ ಗೀತಗಳ ಅನುವಾದದಂತೆ ಈ ಗದ್ಯ ಅನುವಾದಗಳು ನಮ್ಮ ಹೊಸಸಾಹಿತ್ಯದಲ್ಲಿ ಪ್ರೇರಕ ಶಕ್ತಿಗಳಾಗಲಿಲ್ಲ. ಇದು ಕೃತಿಗಳ ತಪ್ಪು ಎಂದಲ್ಲ; ಆ ದಿಕ್ಕಿನ ಪ್ರಯತ್ನ ಸಾಲದೆ ಹೋದದ್ದೇ ಇದಕ್ಕೆ ಕಾರಣ. ಈಗಲಾದರೂ ನಮ್ಮ ತರುಣ ಲೇಖಕರು ಗದ್ಯಸಾಹಿತ್ಯದಲ್ಲಿ ಈ ಕೆಲಸವನ್ನು ಮುಂದರಿಸಲು ದೀಕ್ಷೆ ವಹಿಸಬೇಕಾಗಿದೆ. ಆಂಗ್ಲದೇಶದ ಮಕ್ಕಳು ಆಂಗ್ಲ ಸಾಹಿತ್ಯದಲ್ಲಿ ಶ್ರೇಷ್ಠವೆಂದು ಹೆಸರುಗೊಂಡ ನೂರು ಕತೆಯನ್ನು ಓದಬಹುದಾಗಿರುವಂತೆ ಕನ್ನಡದ ಮಕ್ಕಳು ಕನ್ನಡದಲ್ಲಿ ರುಚಿಯಿಂದ ಓದಿ ಆರೋಗ್ಯ ಬೆಳೆಸಿಕೊಳ್ಳಬಹುದಾದ ನೂರು ಕತೆಯನ್ನು ರಚಿಸಬೇಕಾಗಿದೆ.

ನಮ್ಮ ಇಂದಿನ ಜೀವನದಲ್ಲಿ ನಮ್ಮನ್ನು ಕಾಡುತ್ತಿರುವ ನೂರು ಸಮಸ್ಯೆಗಳ ಮಧ್ಯದಲ್ಲಿ ಕೇವಲ ಸಾಹಿತ್ಯ ಮಾತ್ರ ಆದ ಇಂಥ ಕೃತಿಗಳಿಗೆ ಅವು ಎಷ್ಟೇ ಶ್ರೇಷ್ಠವಾದರೂ ಅವಶ್ಯಕತೆ ಇದೆಯೇ ಇಂಬು ದೊರೆಯಬೇಕೇ

ಎಂದು ಯಾರಾದರೂ ಕೇಳಬಹುದು. "ಕೇವಲ ಸಾಹಿತ್ಯ" ಅಥವಾ "ಸಾಹಿತ್ಯ ಮಾತ್ರ" ಎಂಬ ಮಾತುಗಳು ಸಾಹಿತ್ಯದ ಸ್ವರೂಪವನ್ನು ಮರೆತಾಗ ಮಾತ್ರ ಸಾಧ್ಯ ಎಂದು ನನ್ನ ತಿಳಿವಳಿಕೆ. ಬದುಕನ್ನು ನೋಡುವುದು, ನಲಿಸುವುದು, ಬೆಳೆಸುವುದು, ತಿದ್ದುವುದು, ಇದೆಲ್ಲ ಉತ್ತಮ ಸಾಹಿತ್ಯದ ಅನಿವಾರ್ಯ ಪರಿಣಾಮ. ಇವಕ್ಕೆ ಲೇಖಕನ ಉದ್ದೇಶ 'ಪಾಠಕನ ಒಪ್ಪಿಗೆ' ಆವಶ್ಯಕವಲ್ಲ. ಲೇಖಕನು ಜೀವನವನ್ನು ಕುತೂಹಲದಿಂದ, ಅನುರಕ್ತಿಯಿಂದ, ಕನಿಕರ ದಿಂದ ನೋಡಿ, ಅದನ್ನು ಕುರಿತು ವಿಚಾರಮಾಡಿ, ಅದರ ಒಂದು ಚಿತ್ರ ವನ್ನು ನಮ್ಮ ಮುಂದೆ ಇಟ್ಟರೆ, ಅದು ಎಷ್ಟೇ ಕೇವಲ ಸಾಹಿತ್ಯ ಆದರೂ, ಎಷ್ಟು ತೀರ ಸಾಹಿತ್ಯಮಾತ್ರವೇ ಆದರೂ, ಅದರಿಂದ ನಮ್ಮ ಜೀವನ ಚೆಲು ವಾಗುತ್ತದೆ. ಧರ್ಮಾನ್ ವಕ್ಷ್ಯಾಮಿ ಶಾಶ್ವತಾನ್ ಎಂದ ಮಹಾಭಾರತ ಕರ್ತೃವಾದ ಋಷಿ, ಈ ಮಾತನ್ನು ಸ್ಪಷ್ಟವಾಗಿ ಹೇಳದೆ ಅಷ್ಟೇ ಶಾಶ್ವತವಾದ ಧರ್ಮವನ್ನು ವಕ್ಷಿಸಿದ ರಾಮಾಯಣದ ಕರ್ತೃವಾದ ಋಷಿ, ಈ ತತ್ವಕ್ಕೆ ಸಾಕ್ಷಿಗಳು. ಅವರ ಕೃತಿಗಳು ಜೀವನವನ್ನು ಉದ್ಧರಿಸುವ ಸಾಹಿತ್ಯದ ಸಂಪ್ರದಾಯವನ್ನು ಮೊದಲುಮಾಡಿದವು. ಆ ಸಂಪ್ರದಾಯವನ್ನು ಬಲ್ಲ ಯಾರೂ ಸಾಹಿತ್ಯದ ಉತ್ತಮ ಕೃತಿಯೊಂದನ್ನು ಕೇವಲ ಸಾಹಿತ್ಯ ಎಂದು ವರ್ಣಿಸಿ ಅಲ್ಲಗಳೆಯಲಾರರು; ಕೃತಿ ಉತ್ತಮವಾದದ್ದೇ ಆದರೆ ಅದನ್ನು ಹೀಗೆ ಅಲ್ಲಗಳೆಯುವುದು ಅದರ ವಿಷಯಕ್ಕೆ ಅಪಚಾರ. ಅಲ್ಲಗಳೆಯುವುದರಲ್ಲಿ ಔದ್ಧತ್ಯ, ಎಂಬುದನ್ನು ಮನಗಂಡಿರುವರು; ಕೇವಲ ಸಾಹಿತ್ಯ ಎಂಬ ಶಬ್ದ ಸಮುಚ್ಚಯ ಕೇವಲ ಧರ್ಮ, ಕೇವಲ ಸತ್ಯ, ಕೇವಲ ಸ್ವರ್ಗ ಎಂಬ ಶಬ್ದ ಸಮುಚ್ಚಯಗಳಂತೆ ವಿವೇಚನೆಯ ದಾರಿಯನ್ನು ತೋರದಿರುವುದೆಂದು ತಿಳಿ ಯುವರು. ಇಷ್ಟೇ ಅಲ್ಲ. ಜೀವನದಲ್ಲಿ ಸಾಹಿತ್ಯ ಮಾಡಬೇಕಾದ ಕಾರ್ಯ ಒಂದಿದ್ದರೆ ಸಾಹಿತ್ಯವಾದ ಕೃತಿ ಅದನ್ನು ತಾನು ಎಷ್ಟು ಕೇವಲವಾಗಿ ಸಾಹಿತ್ಯವಾಗುತ್ತದೋ ಅಷ್ಟು ದಕ್ಷವಾಗಿ ಸಾಧಿಸುತ್ತದೆ ಎಂದು ಹೇಳಬೇಕು. ಕೇವಲ ಸಾಹಿತ್ಯವಾಗಿರುವುದು ಸಾಹಿತ್ಯದ ಒಂದು ಸುಂದರ ಕೃತಿಯಲ್ಲಿ ದೋಷವಲ್ಲ, ಹಿರಿಯ ಭೂಷಣ.

ಇಂತಹ ಒಂದು ಉತ್ತಮ ಕೃತಿಯಾದ ಸೈಲಾಸ್‌ಮಾರ್ನರ್ ಗ್ರಂಥ ವನ್ನು ಶ್ರೀಮಾನ್ ಸುಬ್ಬರಾಯರು ಕನ್ನಡಕ್ಕೆ ತಂದದ್ದು ಬಹು ಒಳ್ಳೆಯ

ದಾಯಿತು. ಭಾಷಾಂತರ ಅಥವಾ ಅನುವಾದ ಮಾಡುವವರು ಇಂತಹ ಸಂದರ್ಭದಲ್ಲಿ ಎರಡರಲ್ಲಿ ಒಂದು ದಾರಿಯನ್ನು ಅನುಸರಿಸುತ್ತಾರೆ. ಮೂಲದ ನಾಮ, ಸಂಕೇತ, ಸನ್ನಿವೇಶಗಳನ್ನು ಮಾರ್ಪಡಿಸದೆ, ಇದ್ದುದನ್ನು ಇದ್ದಂತೆ ಇನ್ನೊಂದು ಭಾಷೆಗೆ ತರುವುದು ಒಂದು ದಾರಿ ಆ ನಾಮ ಸಂಕೇತ ಸನ್ನಿವೇಶಗಳನ್ನು ಭಾಷಾಂತರದ ಭಾಷೆಯ ಜನಜೀವನಕ್ಕೆ ಹೊಂದಿಸಿಕೊಂಡು ಅವಶ್ಯಕವಾದ ಕೆಲವೇ ಮಾರ್ಪಾಡುಗಳನ್ನು ಮಾಡಿಕೊಂಡು ಕಥೆ ತಮ್ಮ ನಾಡಜೀವನದ್ದು ಎಂಬಂತೆ ರಚಿಸುವುದು ಒಂದು ದಾರಿ. ಸರಿಯಾದ ಕೈಯಲ್ಲಿ ಎರಡೂ ಸಾಧು, ಎರಡೂ ಚೆನ್ನು; ಒಂದು ಒಂದಕ್ಕಿಂತ ತತ್ವತಃ ಶ್ರೇಷ್ಠ ಎಂದು ಹೇಳಲಾಗುವುದಿಲ್ಲ ಆಂಗ್ಲ ಕೃತಿಗಳ ಅನುವಾದದ ಸಂಪ್ರದಾಯಕ್ಕೇ ಆಚಾರ್ಯರಾದ-ಅವರು ಇಷ್ಟು ಮಾತ್ರಕ್ಕೇ ಆಚಾರ್ಯರೆಂದು ಇಲ್ಲಿ ಅರ್ಥವಲ್ಲ—ಶ್ರೀಮಾನ್ ಶ್ರೀಕಂಠಯ್ಯನವರು ತಮ್ಮ ಕೃತಿ ಅನೇಕದರಲ್ಲಿ ಎರಡನೆಯ ದಾರಿಯನ್ನು ಅಂಗೀಕರಿಸಿದರು. ಈ ಅನುವಾದಪಕರ್ತರೂ ಆ ದಾರಿಯನ್ನು ಅನುಸರಿಸಿದಾರ, ಇಂತಹ ವೇಳೆ ಅನಿವಾರ್ಯವಾದ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ತಮ್ಮ ಕಾರ್ಯವನ್ನು ನಿರ್ವಹಿಸಿದಾರೆ. ಮೂಲದ ಸ್ಕ್ವೈರ್ ಇಲ್ಲಿ ಹೆಗ್ಗಡೆಯಾಗಿರುವುದು, ನೈಲಾನ್ ಇಲ್ಲಿ ದಾಸನಾಗಿರುವುದು, ಹಾಗೆಯೇ ಅಲ್ಲಿಯ ಕುದುರೆ ಇಲ್ಲಿ ಹಸುವಾಗಿರುವುದು, ಅಲ್ಲಿಯ ಇನ್ ಇಲ್ಲಿ ಚಾವಡಿಯಾಗಿರುವುದು, ಉಚಿತವಾಗಿದೆ, ವಿವೇಚನಾಪರವಾಗಿದೆ. ಬಸಪ್ಪ ಮಾಯಿ, ಇವರ ಸಂಬಂಧದ ತೊಡಕು, ಚಾವಡಿಯ ಮಾತುಗಾರರ ಮಾತಾಟದ ಕಲಿಕೆ, ಇಂತಹ ಒಂದೆರಡು ಸಂಗತಿ ಮೂಲಕೃತಿಯ ಸೌರಭವನ್ನು ಸಾಧಿಸಿಲ್ಲ. ನೆಯಿಗೆಯ ದಾಸ ಹೊಸ ಊರಿನ ಸಮಾಜದಲ್ಲಿ ಬೆರೆತು ಕೊಳ್ಳುವುದು, ಬಸಪ್ಪನಂತಹ ದೊಡ್ಡ ಮನೆಯ ಯಜಮಾನ ಗೌರಿಯಂತಹ ಅಜ್ಞಾತ ಪಿತೃವಾದ ಬಾಲೆಯನ್ನು ಸ್ವೀಕಾರ ಮಾಡುವುದೆನ್ನುವದು, ಜಾತಿ ಭೇದವಿಲ್ಲದ ಆಂಗ್ಲ ಸಮಾಜದಲ್ಲಿ ಸಹಜವೆಂದು ಕಾಣುವಂತೆ, ಜಾತಿಜಾತದಿಂದ ಕ್ಷತ ವಿಕ್ಷತವಾಗಿರುವ ನಮ್ಮ ಸಮಾಜದಲ್ಲಿ ಸಾಧ್ಯವೆಂದು ಕಾಣುವುದಿಲ್ಲ. ಆದರೆ ಇಂಥ ಕೊರೆಯೂ ಇಲ್ಲದೆ ಈ ರೀತಿಯ ಅನುವಾದ ಸಾಧ್ಯವೇ ಇಲ್ಲ. ಅನುವಾದಕರು ತಮ್ಮ ಗೌರಿಗೆ ಅವಳ ಮೂಲ ಮೂರ್ತಿಯಾದ ಎಪ್ಪಿಗೆ ಇಲ್ಲದ ಒಂದು ಮಗುವನ್ನು

ಕೊಟ್ಟು ನಮ್ಮ ಜನರ ವಾಡಿಕೆಯ ಒಂದು ಲಾಲಸೆಯನ್ನು ತಾವೂ ತೋರಿ ಓದುವವರ ಪರವಾಗಿ ತುಂಬಿದಾರೆ. ಒಟ್ಟಿನಲ್ಲಿ ಈ ಅನುವಾದ ನನ್ನ ಮನಸ್ಸಿಗೆ ಒಪ್ಪಿಗೆಯಾಗಿದೆ, ಎಂದು ನ್ಯಾಯವಾದ ಸಂಕೋಚ, ನ್ಯಾಯವಾದ ಧೈರ್ಯದಿಂದ, ನಾನು ಹೇಳಬಯಸುತ್ತೇನೆ.

ನಾನು ನೋಡುತ್ತಿರುವಂತೆ ಈ ಪುಸ್ತಕದ ಅಚ್ಚುಮುಗಿದ ಸಂಪುಟದಲ್ಲಿ ಮುದ್ರಣದ ದೋಷಗಳು ನಿಂತಿರುವುದು ಕಾಣುತ್ತದೆ. ಇದು ಸದ್ಯದಲ್ಲಿ ಹಬ್ಬಿರುವ ಮುದ್ರಣದ ಅಸೌಕರ್ಯದ ಒಂದು ಕುರುಹು. ಪ್ರಕಾಶಕರು ಈ ವಿಷಯದಲ್ಲಿ ತಾವೇ ಸಂಕೋಚಪಟ್ಟಿದಾರೆ. ಮುಂದಣ ಮುದ್ರಣಕ್ಕೆ ಇವು ಸರಿಹೋಗಬೇಕು.

ಶ್ರೀಮಾನ್ ಸುಬ್ಬರಾಯರು ಶ್ರೀ ಶ್ರೀಕಂಠಯ್ಯನವರ ಶಿಷ್ಯರಾಗಿದ್ದವರು ಆ ಗುರುವರರು ಈ ಅನುವಾದವನ್ನು ನೋಡಿದ್ದರೆ ತುಂಬಾ ಸಂತೋಷಪಡುತ್ತಿದ್ದರು ಈಗಲಾದರೂ ಅವರು ತಮ್ಮ ಶಿಷ್ಯರ ಈ ಕಾರ್ಯದ ಫಲವಾಗಿ ದಿವಿಯಲ್ಲಿ ಸ್ವಲ್ಪ ಆನಂದವನ್ನು ಅನುಭವಿಸುವರೆಂದು ನನಗೆ ತೋರುತ್ತದೆ. ಕನ್ನಡಿಗರಿಗೆ ಬೇಕಾಗಿದ್ದ ಈ ಕೃತಿಯನ್ನು ರಚಿಸಿ ಗುರುತೃಪ್ತಿ ಲೋಕತೃಪ್ತಿಯನ್ನು ಅವಶ್ಯ ಸಾಧಿಸಿರುವ ಬಗ್ಗೆ ನಾನು ಅನುವಾದಕರನ್ನು ಅಭಿನಂದಿಸುತ್ತೇನೆ

ಈ ಕಥೆ ನಮ್ಮ ಜನರ ಆದರವನ್ನು ಗಳಿಸಲಿ. ದಾಸ, ಮಾಯಿ, ಬಸಪ್ಪ, ಗೌರಿ, ಚೆನ್ನಮ್ಮ, ಶಿವ, ಪರದೇಶದವರಾಗಿರದೆ ನಮ್ಮ ಜನರ ಹೃದಯದ ಜನಗಣತಿಯಲ್ಲಿ ನಮ್ಮವರಾಗಿ ಸೇರಲಿ. ಪ್ರಪಂಚದ ಬಾಳೆಲ್ಲ ಒಂದು, ಅದನ್ನು ರೂಪಿಸುವ ಸಾಹಿತ್ಯವೆಲ್ಲ ಒಂದು, ಎಂಬ ಶಪಥದ ಸಾಧನೆಯಲ್ಲಿ ಈ ಕೃತಿ ಒಂದು ನಿಮಿತ್ತವಾಗಲಿ.

**ಶ್ರೀನಿವಾಸ**

**ಗವಿಪುರದ ವಿಸ್ತರಣ, ಬೆಂಗಳೂರು.**
ವ್ಯಯಸಂ || ಕಾರ್ತಿಕ ಶುದ್ಧ ಏಕಾದಶಿ,
೫—೧೧—೧೯೪೬

*

# ಪರಿವಿಡಿ


| | | ಪುಟಗಳು |
|---|---|---|
| ೧. | ದಾಸ ಬಂದುದು | ೧ |
| ೨. | ಪೂರ್ವವೃತ್ತಾಂತ | ೫ |
| ೩. | ಚೆನ್ನಮ್ಮನಹಳ್ಳಿಯ ಜೀವನ | ೧೨ |
| ೪. | ಹೆಗ್ಗಡೆಯ ಸಂಸಾರ | ೧೬ |
| ೫. | ಕಳವು | ೨೬ |
| ೬. | ದಾಸನ ದುಃಖ | ೩೩ |
| ೭. | ಪರಾರಿ | ೩೭ |
| ೮. | ಫಿರ್ಯಾದು | ೪೩ |
| ೯. | ಬಸಪ್ಪನ ಭಯ | ೪೮ |
| ೧೦. | ತಂದೆಯ ಕೋಪ | ೫೪ |
| ೧೧. | ದಾಸನಿಗೂ ಊರಿಗೂ ಹೊಸ ಸಂಬಂಧ | ೫೮ |
| ೧೨. | ಹೆಗ್ಗಡೆ ಸೋದರ ಸೊಸೆ ಮದುವೆ | ೭೦ |
| ೧೩. | ದಾಸನಿಗೆ ಮಗು ಸಿಕ್ಕಿದುದು | ೮೦ |
| ೧೪. | ಬಸಪ್ಪನ ಹರ್ಷ | ೮೭ |
| ೧೫. | ಮಗುವಿನ ಪೋಷಣ | ೯೪ |
| ೧೬. | ಗೌರಿಯ ಬೆಳವಣಿಗೆ | ೧೦೦ |
| ೧೭. | ಚೆನ್ನಮ್ಮನ ಉಪಹಾಸ್ಯ | ೧೦೯ |
| ೧೮. | ದಾಸನ ಮನೆ | ೧೧೬ |
| ೧೯. | ಗೌರಿಯ ಮದುವೆ ಮಾತು | ೧೨೩ |
| ೨೦. | ಚೆನ್ನಮ್ಮನ ವಿವೇಕ | ೧೨೯ |
| ೨೧. | ರಹಸ್ಯ ರಟ್ಟಾದುದು | ೧೩೭ |
| ೨೨. | ಪರೀಕ್ಷೆ—ಪ್ರೇಮ | ೧೪೩ |
| ೨೩. | ಬಸಪ್ಪನ ಪಶ್ಚಾತ್ತಾಪ | ೧೫೩ |
| ೨೪. | ಸ್ವಗ್ರಾಮಯಾತ್ರೆ | ೧೫೬ |
| ೨೫. | ಗೌರಿ ಮದುವೆ—ಸಮಾಪ್ತಿ | ೧೬೧ |

ಶ್ರೀ

# ದಾಸ

## ೧

## ದಾಸ ಬಂದುದು

ಬೆಟ್ಟಗುಡ್ಡಗಳು. ಹಳ್ಳಿಗಳು ಅಲ್ಲಲ್ಲಿ ಮರಗಳ ಮಧ್ಯೆ. ಅವುಗಳಲ್ಲೊಂದರ ಹೆಸರು ಬೊಮ್ಮನ ಹಳ್ಳಿ. ಅದರ ಹತ್ತಿರ ಒಂದು ಬಂಡೆ. ಆ ಬಂಡೆಯ ಬಳಿ ಒಂದು ಕಲ್ಲು ಮಂಟಪ. ಅದರೊಳಗೆ ಒಬ್ಬ ನೇಯಿಗೆಯವನು ವಾಸವಾಗಿದ್ದನು. ಅವನ ಹೆಸರು ದಾಸ. ಅವನು ಅಲ್ಲಿ ವಾಸಿಸುವುದಕ್ಕೆ ಬಂದು ಬಹಳ ಕಾಲವಾಗಿರಲಿಲ್ಲ.

ದಾಸನ ಮಗ್ಗದ ಶಬ್ದ ಕೇಳಲು ಹಳ್ಳಿಯ ಹುಡುಗರಿಗೆ ಬಲು ಆಸೆ, ಆದರೆ ಭಯ. ಆಟ ಬಿಟ್ಟು ಅವರು ಒಮ್ಮೊಮ್ಮೆ ಅವನ ಮಂಟಪದ ಕೊಠಡಿಯಲ್ಲಿ ಇಣಿಕಿ ನೋಡುವರು. ಕೆಲಸದಲ್ಲಿ ನೆಟ್ಟ ಮನಸ್ಸುಳ್ಳ ಅವನಿಗೆ ಇದು ಕಣ್ಣಿಗೆ ಬೀಳುತ್ತಿರಲಿಲ್ಲ. ಒಂದೊಂದು ಸಲ ದಾಸನು ಇದು ಕಂಡು, ಮಗ್ಗ ಬಿಟ್ಟು, ಹೊರಗೆ ಬಂದು ದಿಟ್ಟಿಸಿ ನೋಡಿದಾಗ ಹುಡುಗರು ನಡುಗುತ್ತ ಕಾಲಿಗೆ ಬುದ್ಧಿ ಹೇಳುತ್ತಿದ್ದರು. ಅವನು ಊರಕಡೆ ಬಂದರಂತೂ ನಾಯಿಗಳು ಗೊಳ್ಳೆಂದು ಸುತ್ತುಕಟ್ಟಿ ಬೊಗಳುತ್ತಿದ್ದುವು. ಔಷಧಮೂಲಿಕೆಗಳ ಪ್ರಯೋಗದಿಂದ ರೋಗಗಳನ್ನು ಅವನು ವಾಸಿ ಮಾಡಬಲ್ಲನೆಂದು ಪ್ರತೀತಿ. ತಂದೆತಾಯಿಗಳು ಮಾತನಾಡುತ್ತಿದ್ದುದನ್ನು ಕೇಳಿದ್ದ ಹುಡುಗರಿಗೆ ಅವನನ್ನು ಕಂಡರೆ ಬಹಳ ಹೆದರಿಕೆ.

ಬೊಮ್ಮನಹಳ್ಳಿಗೂ ಹೆದ್ದಾರಿಗೂ ಬಲು ದೂರ. ಆಧುನಿಕ ಭಾವನೆಗಳು ಅಲ್ಲಿ ಇನ್ನೂ ಹರಡಿರಲಿಲ್ಲ. ಅಲ್ಲಿದ್ದ ಜನರು ಕೇವಲ ಸಂಪ್ರದಾಯ

ಶರಣರು. ಊರಲ್ಲಿ ಒಂದು ಚಾವಡಿ, ಹಳೆದೇಗುಲ, ಹತ್ತಾರು ನಾಡ ಹೆಂಚಿನ ಮನೆಗಳು, ಐವತ್ತು ಅರವತ್ತು ಮಾಳಿಗೆಗಳು, ಉಳಿದವು ಗುಡಿ ಸಲುಗಳು. ಇವು ಬಿಟ್ಟರೆ ಅಲ್ಲಿ ಹೆಚ್ಚಿನವೇನೂ ಇಲ್ಲ. ಹೊರಗಣ ಸುದ್ದಿಯಾಗಲಿ ಜನರಾಗಲಿ ಅಲ್ಲಿಗೆ ಬರುವುದೇ ಕಡಮೆ. ಬಂದರೆ ಊರಲ್ಲೆಲ್ಲ ಗೊಂದಲ. ಆದರೂ ಆ ಊರ ಜೀವನದಲ್ಲಿ ಒಂದು ಬಗೆಯ ಘನತೆಯು ತೋರುತ್ತಿದ್ದಿತು. ಸಾಮಾನ್ಯವಾಗಿ ಈ ಊರ ಮುಂದಾಳುಗಳು ಹೆಚ್ಚು ದುಡಿಯುತ್ತಿರಲಿಲ್ಲ. ಸಿಕ್ಕಿದಷ್ಟರಿಂದಲೇ ತೃಪ್ತಿಹೊಂದಿ, ದಸರ, ದೀಪಾವಳಿ, ಶಿವರಾತ್ರಿ, ಕಾಮನ ಹಬ್ಬ, ಮೊಹರಂ ಮುಂತಾದ ಹಬ್ಬಗಳನ್ನು ಚಾಚೂ ಬಿಡದೆ ಸುಖವಾಗಿದ್ದರು ಜನರೊಂದಿಗೆ.

ದಾಸನು ಬೊಮ್ಮನಹಳ್ಳಿಗೆ ಬಂದುದು ಸುಮಾರು ಹದಿನೈದು ವರ್ಷಗಳ ಹಿಂದೆ. ಅವನಿಗೆ ಆಗ ಮಧ್ಯಪ್ರಾಯ. ಸ್ವಭಾವತಃ ಅವನ ಮುಖವು ನಿಸ್ತೇಜವಾಗಿಯೂ, ದೃಷ್ಟಿಯು ಮಂದವಾಗಿಯೂ ಇದ್ದುವು. ಕಣ್ಣುಗಳು ದೊಡ್ಡವು. ದುರದುರನೆ ನೋಡುವುದು ಅವನ ಅಭ್ಯಾಸ. ಒಟ್ಟಿನಲ್ಲಿ ಅವನ ಹೊರಗಣ ಆಕಾರದಲ್ಲಿ ವಿಶೇಷವೇನೂ ಕಾಣಿಸದು ಆದರೆ ಆಗಿನ ಬಾಹ್ಯ ಪ್ರಪಂಚದ ಸಂಪರ್ಕವಿಲ್ಲದ ಆ ಊರ ಜನರಿಗೆ ಹೊಸದಾಗಿ ಬಂದಾಗ ಅವನ ನಡೆನುಡಿಗಳು ವಿಲಕ್ಷಣವಾಗಿ ತೋರುತ್ತಿದ್ದುವು. ಅವನು ತೆಂಕಣ ಸೀಮೆಯಿಂದ ಎಲ್ಲಿಂದಲೋ ಬಂದಿದ್ದನೆಂಬ ವದಂತಿ. ಅವನ ನೇಯಿಗೆ ಕೌಶಲ್ಯವೂ ಆ ಊರಿನವರಿಗೆ ಹೊಸದು. ಸಾಲದುದಕ್ಕೆ ಅವನ ಜೀವನಕ್ರಮವೂ ಒಂದು ರೀತಿಯಲ್ಲಿ ಅಪೂರ್ವವಾಗಿದ್ದಿತು. ಆ ಊರಿಗೆ ಬಂದು ಅಷ್ಟು ವರ್ಷಗಳಾಗಿದ್ದರೂ ಅವನು ಯಾರೊಡನೆಯೂ ಸೇರುತ್ತಿರಲಿಲ್ಲ. ಅಲ್ಲದೆ ತನ್ನ ಮನೆ ಬಾಗಿಲಿಗೆ ಬಂದವರನ್ನೂ ಅವನು ಒಳಗೆ ಕರೆಯುತ್ತಿರಲಿಲ್ಲ. ತಾನೂ ಊರ ಹಬ್ಬ ಉತ್ಸವಗಳಲ್ಲಿ ಭಾಗ ವಹಿಸುತ್ತಿರಲಿಲ್ಲ. ಊರೊಳಗೆ ಕುಲುಮೆ, ಚಾವಡಿ, ದೇವಸ್ಥಾನ ಮುಂತಾದುವು ಯಾವುದಕ್ಕೂ ಹೋಗಿ ಕೂತು ಅವನು ಮಾತುಕತೆಗಳಿಗೆ ಸೇರುತ್ತಿರಲಿಲ್ಲ. ಈ ಕಾರಣಗಳಿಂದ ಜನರಿಗೆ ಅವನೆಂದರೆ ವಿಚಿತ್ರ ವ್ಯಕ್ತಿಯೆಂಬ ಭಾವನೆ.

ಇಷ್ಟೇ ಅಲ್ಲ. ಅವನಲ್ಲಿ ಭಯ ಹುಟ್ಟಲು ಒಂದು ಕಾರಣ ಸೇರಿತು. ಪುರಗಂಟೆ ವೀರಾಬೋಯಿ ಒಂದು ದಿನ ಸಂಜೆ ತನ [illegible]

ತ್ತಿದ್ದನು. ಆಗ ದಾಸನು ಬೆನ್ನಿನ ಮೇಲೆ ಒಂದು ಬಟ್ಟೆ ಮೂಟೆಯನ್ನು ಹೊತ್ತು, ಅದನ್ನು ಕೈಯಲ್ಲಿ ಬಿಗಿಯಾಗಿ ಅಪ್ಪಿ, ಊರ ಹತ್ತಿರದ ವೀರಗಲ್ಲಿಗೆ ಒರಗಿಕೊಂಡು, ಕಂಬದಂತೆ ನಿಂತಿದ್ದನಂತೆ. ಇದನ್ನು ನೋಡಿ ಬೋಯಿಗೆ ಬಹಳ ಆಶ್ಚರ್ಯವಾಯಿತು. ಅವನು ದಾಸನ ಸಮೀಪಕ್ಕೆ ಹೋಗಿ 'ದಾಸಣ್ಣ ಏಕೆ ಹೀಗೆ ನಿಂತಿದ್ದೀಯೆ ? ಬಾರ ಇಳಿಸಬೇಕಾ ? ಏನು ?' ಎಂದು ಕೇಳಿದನು. ಎಷ್ಟು ಮಾತನಾಡಿಸಿದರೂ ಉತ್ತರವೇ ಇಲ್ಲ. ಕೊನೆಗೆ ಅವನು ಹತ್ತಿರ ಹೋಗಿ ದಾಸನನ್ನು ಮುಟ್ಟಿ ನೋಡಿದಾಗ ಅವನ ಕೈಕಾಲುಗಳು ಮರಗಟ್ಟಿ ಬಿರುಸಾಗಿದ್ದುವು; ಕಣ್ಣುಗಳು ನೆಟ್ಟಿಕೊಂಡಿದ್ದುವು ; ಚಲನೆ ಇಲ್ಲ ; ಮಾತೂ ಇಲ್ಲ. ಸತ್ತಿರಬಹುದೇ ಎಂದು ಬೋಯಿ ನಿಂತಿದ್ದಾಗ ದಾಸನಿಗೆ ಜೀವ ಬರಲು, ಅವನು ಕೈಕಾಲುಗಳು ಅಲುಗಾಡಿಸಿಕೊಂಡು, 'ಮನೆಗೆ ಹೋಗುತ್ತೇನೆ' ಎನ್ನುತ್ತ, ತನ್ನ ಪಾಡಿಗೆ ತಾನು ಬೋಯಿಯನ್ನು ಬಿಟ್ಟು ಹೊರಟೇ ಹೋದನು. ಹೆಗ್ಗಡೆ ತೋಟದ ಹತ್ತಿರ ವೀರಾಬೋಯಿ ಮೊಲ ಹಿಡಿದ ದಿನ ಈ ಮೇಲಣ ಸಂಗತಿ ನಡೆಯಿತೆಂದು ವರ್ತಮಾನ. ಇದನ್ನು ಕೇಳಿ ಕೆಲವರು 'ದಾಸನಿಗೆ ಬೀಳುರೋಗ ಇರಬಹುದು' ಎಂದುಕೊಂಡರು. ಶಾನುಭೋಗ ಮಲ್ಲಿಕಾರ್ಜುನಪ್ಪನವರೇನೋ 'ಇಲ್ಲ ಇಲ್ಲ, ಮೂರ್ಛೆರೋಗ ಬಂದವರು ಎಲ್ಲಾದರೂ ನೆಲಕ್ಕೆ ಬೀಳದೆ ನಿಂತಿರುವುದುಂಟೆ ?' ಎಂದು ತಲೆ ಅಲ್ಲಾಡಿಸುತ್ತ 'ಕೆಂಪಿಗೆ ವೈದ್ಯರ ಔಷಧದಿಂದ ವಾಸಿಯಾಗದೆ ಇದ್ದಾಗ ದಾಸನ ಮದ್ದಿನಿಂದ ಹೇಗೆ ವಾಸಿಯಾಯಿತು ? ಅವನಿಗೆ ಯಂತ್ರ ಮಂತ್ರ ವಶೀಕರಣ ಮುಂತಾದುವು ಗೊತ್ತಿರಬೇಕು. ಎಲ್ಲೋ ಅವನಿಗೆ ಚೌಡೀ ಸ್ವಾಧೀನವಾಗಿರಬೇಕಯ್ಯ! ಅವನೇಕೆ ಸತ್ತವನಂತೆ ನಿಂತಿದ್ದು ಪುನಃ ಜೀವಂತನಂತೆ ಓಡಿ ಹೋದ ? ಎಲ್ಲೋ ಚೌಡೀ ಧ್ಯಾನದಲ್ಲಿದ್ದಾಗ ಅವನಿಗೆ ಹೀಗೆ ಆಗಿರಬೇಕು !' ಎಂದು ತಮ್ಮ ಶಂಕೆಯನ್ನು ಸೂಚಿಸಿದರು. ಊರಿನವರಿಗೆ ಅವನಿಂದ ಎಲ್ಲ ರೀತಿಯಲ್ಲಿಯೂ ಉಪಕಾರವಾಗುತ್ತಿರಲಿಲ್ಲ. ಅವನ ಅಸಮಾಧಾನಕ್ಕೆ ಪಾತ್ರರಾಗದೆ ಅವನ ವಿಷಯದಲ್ಲಿ ಕೆಟ್ಟುದನ್ನು ಆಡದಿರುವುದೇ ಲೇಸೆಂದು ಅವರು ತಿಳಿದಿದ್ದರು. ಇದಕ್ಕೂ ಒಂದು ಕಾರಣವಿದ್ದಿತು

ಸುತ್ತಮುತ್ತಣದ ಹಳ್ಳಿಗಳಲ್ಲಿ ನೇಯಿಗೆಯವರು ಹೆಚ್ಚಾಗಿರಲಿಲ್ಲ. ಅನೇಕರು ಊರು ಬಿಟ್ಟು ವಲಸೆ ಹೋಗಿಬಿಟ್ಟಿದ್ದರು ಬೊಮ್ಮನಹಳ್ಳಿ

ಯವರು ನೂತ ದಾರವನ್ನು ಬಟ್ಟೆ ಮಾಡಿಕೊಡಲು ಒಳ್ಳೆಯ ನೇಯಿಗೆಯವನೊಬ್ಬನು ಅವಶ್ಯಕವಾಗಿ ಬೇಕಾಗಿದ್ದಿತು. ಅಲ್ಲದೆ ದಾಸನು ನೂಲನ್ನು ಹಾಳು ಮಾಡದೆ, ಬಹಳ ಬೇಗ, ನಂಬುಗೆಯಿಂದ ಹಸನಾಗಿ ನೇದು ಬಟ್ಟೆ ಒದಗಿಸಿ ಕೊಡುತ್ತಿದ್ದನು. ಇವುಗಳೆಲ್ಲದರ ಸಲುವಾಗಿ ಬೊಮ್ಮನಹಳ್ಳಿಯ ಜನರು ಅವನಿಗೆ ಯಾವ ತೊಂದರೆಯನ್ನೂ ಕೊಡುತ್ತಿರಲಿಲ್ಲ.

ದಾಸನು ಬಂದು ನೆಲಸಿ ಇಷ್ಟು ವರ್ಷಗಳಾದರೂ ಅವನಲ್ಲಿ ಯಾವ ಬಗೆಯ ವ್ಯತ್ಯಾಸವೂ ಕಾಣಬರುತ್ತಿರಲಿಲ್ಲ. ಊರಿನವರು ಅವನ ವಿಷಯವನ್ನು ಕುರಿತು ಮೊದಲಿನಷ್ಟು ಪ್ರಸ್ತಾಪಿಸದಿದ್ದರೂ ಅವರ ಅಭಿಪ್ರಾಯಗಳೇನೋ ಹಿಂದಿನಂತೆಯೇ ಇದ್ದುವು. ಆದರೆ ಕಾಲಗತಿಯಿಂದ ಒಂದು ಮುಖ್ಯವಾದ ಮಾರ್ಪಾಡು ಆಗಿದ್ದಿತು. 'ದಾಸ ಬಹಳ ಜಿಪುಣ. ಅವನ ಸಂಪಾದನೆ ಹಣ ಸೇರಿ ಸೇರಿ ಒಂದು ದೊಡ್ಡ ನಿಧಿಯಾಗಿರಬೇಕು. ಇಷ್ಟ ಪಟ್ಟರೆ ಅವನು ಊರ ಸಾಹುಕಾರರನ್ನೂ ಕೊಂಡುಕೊಳ್ಳಬಲ್ಲ !' ಎಂದು ಊರ ಜನರು ಹೇಳಿ ಗುಸುಗುಸು ಗುಟ್ಟುತ್ತಿದ್ದರು. ಇದು ನಿಜ. ಏಕೆಂದರೆ ಈ ಧನಾರ್ಜನೆಯೊಂದು ಮಾತ್ರ ಬರಿಗೈಯಲ್ಲಿ ಬಂದ ದಾಸನ ಜೀವನದಲ್ಲಿ ಈಚೆಗೆ ಒಂದು ಹೆಚ್ಚಿನ ಸಂಗತಿಯೇ ಅಹುದು.

೨

# ಪೂರ್ವ ವೃತ್ತಾಂತ

ದಾಸನು ಬೊಮ್ಮನ ಹಳ್ಳಿಗೆ ಬಂದು ನೆಲೆಸಲು ಅವನು ಹುಟ್ಟಿದ ಊರಿನಲ್ಲಿ ನಡೆದ ಒಂದು ಘಟನೆಯೇ ಕಾರಣ. ಆವನ ಜೀವನದಲ್ಲಿ ಅದೊಂದು ಬಹು ಮುಖ್ಯವಾದ ಹಂತ. ಆಗ ಅದರಿಂದ ಅವನ ಜೀವನ ಸ್ವರೂಪವೇಬದಲಾಯಿಸಿ ಅವನಿಗೆ ಸ್ಥಲಾಂತರ ವಾಸ ಪ್ರಾಪ್ತವಾಯಿತು.

ಅವನು ಹುಟ್ಟಿ ಬೆಳೆದುದು ನಂದೀ ಬೆಟ್ಟದ ಹತ್ತಿರ ಗೋಪಾಲ ಪುರ ಎಂಬ ಹಳ್ಳಿಯಲ್ಲಿ. ಅವನ ಹಿರಿಯರು ನೇಯುಗೆಯುವರು, ದೈವಭಕ್ತರು, ಸತ್ಯವಂತರು. ಅವನಿಗೆ ಅಣ್ಣತಮ್ಮಂದಿರಾಗಲಿ ಅಕ್ಕತಂಗಿಯರಾಗಲಿ ಚಿಕ್ಕಪ್ಪದೊಡ್ಡಪ್ಪಂದಿರಾಗಲಿ ಯಾವ ಸಮೀಪ ಬಂಧುಗಳೂ ಇರಲಿಲ್ಲ. ಅವನ ತಂದೆ ಅವನು ಮಗುವಾಗಿದ್ದಾಗಲೇ ಕಾಲವಾದನು. ಅವನು ಬಳೆದುದು ತಾಯಿಯ ಪೋಷಣೆಯಲ್ಲಿ ಆಕೆಯೂ ಅವನಿಗೆ ಹದಿನೈದು ವರ್ಷವಾಗಿದ್ದಾಗಲೇ ಮೃತ್ಯುವಶಳಾದಳು. ಈ ಚಿಕ್ಕ ವಯಸ್ಸಿನಲ್ಲಿಯೇ ಅವನು ತನ್ನ ಉದ್ಯೋಗವನ್ನು ಕಲಿತು ಒಳ್ಳೆಯ ಕೆಲಸಗಾರನಾಗಿದ್ದನು. ರಾಮೇಶ್ವರದ ಯಾತ್ರೆಗೆ ಬಂದಿದ್ದ ಕಬೀರ ಪಂಥದ ಗುರುವೊಬ್ಬನ ಉಪದೇಶದಿಂದ ಆ ಊರ ಹೊರಗೆ ಗೋಸಾಯಿ ಮಠವೊಂದು ಸ್ಥಾಪಿತವಾಗಿದ್ದಿತು. ಅದಕ್ಕೆ ಮಂದಿರವೆಂಬ ಹೆಸರೂ ಉಂಟು. ದಾಸನೂ ಅವನ ಗೆಳೆಯರೂ ಆ ಮಠದ ಭಕ್ತರಾಗಿದ್ದರು. ಅವರಲ್ಲೆಲ್ಲ ದಾಸನೇ ಶ್ರೇಷ್ಠನೆಂಬ ಭಾವನೆ. ಅವನು ಇನ್ನೂ ಹರೆಯುದವನಾಗಿದ್ದರೂ ಆಗಲೇ ಶ್ರಮಜೀವಿಯಾಗಿ ದೈವಭಕ್ತಿ, ಸೌಶೀಲ್ಯ, ಸತ್ಯಸಂಧತೆ, ಸೇವಾಬುದ್ಧಿ ಮುಂತಾದ ಸುಗುಣಗಳಿಂದ ಕೂಡಿ, ಜೀವನದಲ್ಲಿ ಉಚ್ಚಧ್ಯೇಯಗಳನ್ನಿಟ್ಟುಕೊಂಡು, ಎಲ್ಲರ ಪ್ರೀತಿವಿಶ್ವಾಸಗಳಿಗೂ ಪಾತ್ರನಾಗಿದ್ದನು.

ಮಿತ್ರರು ದಾಸನ ಜೀವನವನ್ನೇ ತಮ್ಮ ಆದರ್ಶವಾಗಿ ಎಣಿಸಿದ್ದರು. ಒಮ್ಮೆ ಮಠದಲ್ಲಿ ಭಜನೆ ಮಾಡುತ್ತಿದ್ದಾಗ ಅವನು ಜ್ಞಾನತಪ್ಪಿ ಬಿದ್ದನು.

ಒಂದು ಗಂಟೆಯಾದರೂ ಎಚ್ಚರಗೊಳ್ಳಲಿಲ್ಲ. ಎಲ್ಲರಿಗೂ ಅವನು ಸತ್ತಂತೆಯೇ ತೋರಿತು. ಭಕ್ತ್ಯುತ್ಸಾಹಪೂರಿತನಾದ ದಾಸನ ಗೆಳೆಯರು ಅದು ಕೇವಲ ದೈವಾನುಗ್ರಹದ ಗುರುತೆಂದೂ ಭಕ್ತಿಯ ಪರವಶತೆಯೆಂದೂ ಸುಯೋಗ ವೆಂದೂ ಭಾವಿಸಿದರು.

ದಾಸನ ತಾಯಿಯು ಅವನಿಗೆ ಸೇವೆಯ ಶ್ರೇಷ್ಠತೆಯನ್ನು ಚಿಕ್ಕತನ ದಲ್ಲಿಯೇ ಕಲಿಸಿ, ತನಗೆ ಗೊತ್ತಿದ್ದ ಕೆಲವು ಮೂಲಿಕೆಗಳ ಪ್ರಯೋಗವನ್ನು ಅವನಿಗೆ ಹೇಳಿಕೊಟ್ಟಿದ್ದಳು ಅವನಿಗೆ ಔಷಧ ಪ್ರಯೋಗಕ್ಕಿಂತ ಪ್ರಾರ್ಥನೆಯ ಮಹತ್ವದಲ್ಲಿ ದೃಢವಿಶ್ವಾಸ. ಕೊನೆಕೊನೆಗೆ ಅವನನ್ನು ಪ್ರಾರ್ಥನೆ ಬಿಟ್ಟು ಮೂಲಿಕೆಗಳನ್ನು ಹುಡುಕುತ್ತ ಹೋಗುವುದು ಸರಿಯೇ ಎಂಬ ಸಂದೇಹ ಬಹಳ ಬಲವಾಗಿ ಪೀಡಿಸ ತೊಡಗಿತು

ಮಠದ ಭಕ್ತರಲ್ಲಿ ಒಬ್ಬನು ದಾಸನಿಗಿಂತ ವಯಸ್ಸಿನಲ್ಲಿ ಕೊಂಚ ಹಿರಿ ಯವನು. ಅವನ ಹೆಸರು ಮಾರ. ಅವನು ದಾಸನಿಗೆ ಅಚ್ಚುಮೆಚ್ಚಿನ ಗೆಳೆಯ. ಅವನೂ ಅತಿಶಯವಾದ ಭಕ್ತಿಯುಳ್ಳವನೆಂದು ಮಠದವರೆಲ್ಲರೂ ತಿಳಿದಿದ್ದರು. ಮಾರನ ವಿಷಯದಲ್ಲಿ ಯಾರೇನು ದೋಷವೆಣಿಸಿದರೂ ಏಕ ದೇಹನ್ಯಾಯದಿಂದಿದ್ದ ದಾಸನಿಗೆ ಮಾತ್ರ ಅವನು ನಿಷ್ಕಪಟಿಯಾಗಿ ತೋರಿದ.

ಗೋಪಾಲಪುರದಲ್ಲಿ ಸೀತಮ್ಮನೆಂಬ ಕನ್ಯೆಯೊಬ್ಬಳಿದ್ದಳು. ಅವಳು ದಾಸನ ದೂರ ಬಂಧು. ಅವರಿಬ್ಬರಿಗೂ ವರಸಾಮ್ಯ ಬಹಳ ಚೆನ್ನಾಗಿದ್ದಿತು. ಊರಿನವರು ಅವರನ್ನು ಆಗಲೇ ಗಂಡಹೆಂಡಿರೆಂದು ಕರೆಯುತ್ತಿದ್ದರು. ಅವರ ಮದುವೆಯ ಸುದ್ದಿ ಊರಿನಲ್ಲೆಲ್ಲ ಹರಡಿದ್ದಿತು. ಇನ್ನು ಸ್ವಲ್ಪ ಕಾಲ ಕಳೆದು, ದಾಸನ ಅನುಕೂಲ ತಕ್ಕಷ್ಟು ಹೆಚ್ಚಿದ ಮೇಲೆ ಅವರ ಮದುವೆ ನಡೆಯ ಬೇಕೆಂದು ಸೀತಮ್ಮನ ಕಡೆಯವರು ನಿಶ್ಚಯಿಸಿದ್ದರು. ಆಗಾಗ ಸೀತಮ್ಮನ ಮನೆಗೆ ದಾಸನು ಹೋಗಿಬರುತ್ತಿದ್ದನು ಅಳಿಯನ ಹಿಂದೆ ಗೆಳೆಯ. ಅಲ್ಲವೆ? ಆಗ ಮಾರನೂ ಜತೆಯಲ್ಲಿ ಅಲ್ಲಿಗೆ ಹೋಗಿ ಬರುವುದುಂಟು.

ಹೀಗಿದ್ದಾಗಲೇ ದಾಸನಿಗೆ ಭಜನೆ ಮಾಡುತ್ತಿದ್ದಾಗ ಮಠದಲ್ಲಿ ಎಚ್ಚರ ತಪ್ಪಿದುದು. ಈ ವಿಷಯದಲ್ಲಿ ಎಲ್ಲರೂ ಭಕ್ತಿ ಗೌರವ ಸಹಾನುಭೂತಿಗಳನ್ನು ತೋರುತ್ತಿದ್ದಾಗ ಮಾರನೊಬ್ಬನು ಮಾತ್ರ ಅದು ಪಿಶಾಚಿಯ ಚೇಷ್ಟೆ ಯೆಂದು ಹೇಳತೊಡಗಿದನು. ಪಾಪ! ದಾಸನು ಏನೂ ಹೇಳಲಿಲ್ಲ. ಅವನಿಗೆ

ಸರಿಯಿದ್ದರೂ ಇರಬಹುದೆನ್ನಿಸಿತು. ಗೆಳೆಯನ ಸೂಚನೆ ಕೇಳಿ ಅವನಿಗೆ ಕೋಪ ಬರಲಿಲ್ಲ—ಕೊಂಚ ನೋವಾಯಿತು. ಅಷ್ಟರಲ್ಲಿ ಸೀತಮ್ಮನ ಮನೆಯವರೂ ದಾಸನ ವಿಷಯದಲ್ಲಿ ಸ್ವಲ್ಪ ಉದಾಸೀನ ತೋರಲು ಮೊದಲು ಮಾಡಿದರು. ಮದುವೆ ನಿಲ್ಲಿಸಲು ಜನರು ಒಪ್ಪಬಹುದಾದ ಯಾವುದಾದರೂ ಒಂದು ನೆಪವನ್ನು ಅವರು ಹುಡುಕುತ್ತಿದ್ದಂತೆ ತೋರಿತು.

ಅದೇ ಸಮಯದಲ್ಲಿ ಮಠದ ಗುರುಗಳು ಕಾಯಿಲೆ ಬಿದ್ದರು. ದಿನದಿನಕ್ಕೆ ಅವರ ರೋಗ ಹೆಚ್ಚಲು ಮಠದ ಭಕ್ತರು ಅವರ ಶುಶ್ರೂಷೆಗೋಸ್ಕರ ಹಗಲೂ ಇರುಳೂ ಸರದಿಯ ಪ್ರಕಾರ ನಿಲ್ಲಬೇಕಾಯಿತು ಒಂದು ದಿನ ರಾತ್ರಿ ದಾಸನ ಸರದಿ. ತಟ್ಟನೆ ಇದ್ದಕ್ಕಿದ್ದ ಹಾಗೆಯೇ ಗುರುಗಳ ಶ್ವಾಸವು ನಿಂತು ಹೋಯಿತು. ಇದು ತಿಳಿಯದೆ ದಾಸನು ಹೊತ್ತಿಗೆ ಸರಿಯಾಗಿ ಔಷಧ ಕೊಡಬೇಕೆಂದು ಗುರುಗಳ ಹಾಸಿಗೆ ಬಳಿ ಹೋಗಿ ನೋಡಿದಾಗ ಪ್ರಾಣ ವಾಯುವಿರಲಿಲ್ಲ. ಆಗ ಬೆಳಗಿನ ಜಾವ ಅಂದು ಮೂರುಗಂಟೆಗೆ ಮುಂಚೆಯೇ ಮಾರನು ಬಂದು ದಾಸನಿಗೆ ಬಿಡತಿ ಕೊಡಬೇಕಾಗಿದ್ದಿತು. ಏಕೋ ಮಾರ ಬಂದಿರಲಿಲ್ಲ. ಮುಂದೋರದೆ ದಾಸನು ಓಡಿಹೋಗಿ ಹೊರಗೆ ಮಲಗಿದ್ದವರನ್ನು ಎಬ್ಬಿಸಿ ಗುರುಗಳ ಮರಣದ ಸುದ್ದಿಯನ್ನು ಪ್ರಕಟಮಾಡಲು, ಒಬ್ಬೊಬ್ಬರಾಗಿ ಜನರು ಸೇರಲು ಆರಂಭಿಸಿದರು. ಶವ ಸಂಸ್ಕಾರದ ಸಿದ್ಧತೆಗೋಸ್ಕರ ದಾಸನು ಎಲ್ಲರಿಗಿಂತ ಮುಂಚೆಯೇ ಮಠ ಬಿಟ್ಟು ಹೋದನು ತಡವಿಲ್ಲದೆ ಶವ ಸಂಸ್ಕಾರವೂ ನಡೆದುಹೋಯಿತು. ರುದ್ರಭೂಮಿಯಿಂದಲೇ ನೇರವಾಗಿ ದಾಸನು ತನ್ನ ಮನೆಗೆ ಬಂದನು.

ಸಂಜೆ ಐದು ಗಂಟೆ. ಅದೇ ದಿನ. ಪಟೇಲ ಶಾನುಭೋಗರು ದಾಸನನ್ನು ಚಾವಡಿಗೆ ಬರಹೇಳಿದರೆಂದು ಮಾರನು ಬಂದು ಕರೆದನು. ದಾಸನಿಗೆ ಕಾರಣ ತಿಳಿಯಲಿಲ್ಲ. ಏಕೆಂದು ಕೇಳಿದಾಗ 'ಅಲ್ಲಿಗೆ ಬಂದರೆ ಎಲ್ಲಾ ಗೊತ್ತಾಗುತ್ತೆ' ಎಂದಷ್ಟೇ ಹೇಳಿ ತಟ್ಟನೆ ಮಾರನು ಹೊರಟುಹೋದನು. ದಾಸನಿಗೆ ಸ್ವಲ್ಪ ಕಳವಳವಾಯಿತು.

ಚಾವಡಿಯಲ್ಲಿ ಮಠದವರೂ ಗ್ರಾಮ ಪ್ರಮುಖರೂ ನೆರೆದಿದ್ದರು. ದಾಸನು ಹೋಗಿ ಕುಳಿತನು. ಒಡನೆಯೇ ಪಟೇಲರು ಪೆಟ್ಟಿಗೆಯಿಂದ ಬೇಗದ

ಕೈಗಳ ಗೊಂಚಲೊಂದನ್ನು ತೆಗೆದು, ಅವನ ಮುಂದೆ ಇಡಿಸಿ, 'ಇದು ಯಾರದು? ಎಲ್ಲಿತ್ತು? ಏನು ಸಮಾಚಾರ? ನಿಜ ಹೇಳು' ಎಂದು ಗದರಿಸಿ ಕೇಳಿದರು. ದಾಸನಿಗೆ ಈ ಪ್ರಶ್ನೆಗಳೊಂದೂ ಅರ್ಥವಾಗಲಿಲ್ಲ. ಅರೆಗಳಿಗೆ ಸುಮ್ಮನಿದ್ದು, ಅವನು 'ಇದು ನಂದು, ಎಲ್ಲಿ ಯಾವಾಗ ಬಿಟ್ಟಿದ್ದೆನೋ ಗೊತ್ತಿಲ್ಲ, ನನಗೇನೂ ತಿಳಿಯದು' ಎಂದು ಉತ್ತರವಿತ್ತನು.

ಕೊಂಚ ಹೊತ್ತು ಅಲ್ಲಿ ನೆರೆದಿದ್ದವರು ಒಬ್ಬರ ಮುಖವನ್ನು ಮತ್ತೊಬ್ಬರು ನೋಡುತ್ತ ಸುಮ್ಮನೆ ಕುಳಿತಿದ್ದರು. ದಾಸನ ಎದೆ ಡವಡವಗುಟ್ಟುತ್ತಿದ್ದಿತು. ವಿಷಯವೇನೆಂಬುದೇ ಅವನಿಗೆ ಗೊತ್ತಾಗಲಿಲ್ಲ. ಆಮೇಲೆ ನಾಲ್ಕಾರು ಜನರು ಒಟ್ಟಿಗೆ 'ದಾಸಾ, ಸುಳ್ಳು ಹೇಳಬೇಡ. ಇದ್ದದ್ದನ್ನು ಇದ್ದಹಾಗೇ ಹೇಳು. ತಪ್ಪು ಒಪ್ಪಿಕೋ. ಮರೆಮಾಚಬೇಡ' ಎಂದರು.

ಕೊನೆಗೆ ಈ ಅಂಶಗಳು ಆ ಸಭೆಯಲ್ಲಿ ಬಹಿರಂಗವಾದುವು.

ಆ ಬೀಗದ ಕೈ ಗೊಂಚಲು ಮಠದ ಗುರುಗಳು ಕಾಲವಾದ ದಿನ ಅವರು ಮಲಗಿದ್ದ ಕೋಣೆಯ ಮೂಲೆಯೊಂದರಲ್ಲಿ ಬಿದ್ದಿದ್ದಿತು. ಅದೇ ಕೋಣೆಯ ಗೋಡೆಯಲ್ಲಿ ಒಂದು ಗೂಡು. ಆ ಗೂಡಿನಲ್ಲಿಯೇ ಪೆಟ್ಟಿಗೆಯಲ್ಲಿ ಮಠದ ಹಣವನ್ನು ಇಡುತ್ತಿದ್ದುದು. ಆ ಹಿಂದಿನ ದಿನ ಶಾನುಭೋಗರು ಬಂದು ಗುರುಗಳೊಡನೆ ಮಾತನಾಡುತ್ತ ಕುಳಿತಿದ್ದರು. ಆಗ ಯಾವುದೋ ವೆಚ್ಚಕ್ಕೋಸ್ಕರ ಹಣ ಬೇಕಾಯಿತು. ಗೂಡಿನಲ್ಲಿದ್ದ ಪೆಟ್ಟಿಗೆಯಿಂದ ಹಣದ ಚೀಲವನ್ನು ಹೊರಕ್ಕೆ ತೆಗೆದು, ಬೇಕಾಗಿದ್ದ ಹಣ ತೆಗೆದುಕೊಂಡು, ಪುನಃ ಹಣದ ಚೀಲವನ್ನು ಅಲ್ಲಿಯೇ ಇಟ್ಟು ಬೀಗ ಹಾಕಿದುದನ್ನು ಶಾನುಭೋಗರೇ ಕಣ್ಣಾರ ಕಂಡಿದ್ದರು. ಗುರುಗಳ ಮರಣಾನಂತರ ಅವರ ದೇಹ ಸಂಸ್ಕಾರಕ್ಕೆ ಮುಂಚೆ ನೋಡಿದಾಗ ಪೆಟ್ಟಿಗೆ ಬೀಗ ತೆಗೆದಿದ್ದಿತು. ಹಣದ ಚೀಲವಿರಲಿಲ್ಲ! ಎಲ್ಲ ಕಡೆಯಲ್ಲಿಯೂ ಹುಡುಕಿದಾಗ ಈ ಬೀಗದ ಕೈ ಗೊಂಚಲು ಮೂಲೆಯಲ್ಲಿ ಸಿಕ್ಕಿತು. ಆಗಿನ ಗದ್ದಲದಲ್ಲಿ ಇದರ ವಿಚಾರಣೆ ನಡೆಯಲು ಆಗಲಿಲ್ಲ. ಮಧ್ಯಾಹ್ನ ಮಠಕ್ಕೆ ಸಂಬಂಧಪಟ್ಟವರೆಲ್ಲರನ್ನೂ ಕೇಳಿದಾಗ ಆ ಬೀಗದ ಕೈ ಗೊಂಚಲು ದಾಸನದೆಂದು ಹೊರಪಟ್ಟಿತು. ಸರಿ. ಇನ್ನೇನು! ದಾಸನಲ್ಲದೆ ಮತ್ತಾರು ಹಣದ ಚೀಲವನ್ನು ಕದ್ದಿರಬೇಕು?

## ಪೂರ್ವ ವೃತ್ತಾಂತ

ಆಗ ಎಲ್ಲರ ಕಣ್ಣೂ ದಾಸನ ಮೇಲೆ. ಕೆಲಕಾಲ ದಾಸನು ಮೂಕನಂತೆ ಸ್ತಬ್ಧನಾಗಿ ನಿಂತನು. ಅವನಿಗೆ ಏನೂ ತೋರಲಿಲ್ಲ. 'ದೇವರಿಗೇ ಗೊತ್ತು. ನಾನು ನಿರಪರಾಧಿ. ನನ್ನ ಗೊಂಚಲು ಅಲ್ಲಿಗೆ ಹೇಗೆ ಬಂತೋ ಕಾಣೆ. ಹಣದ ಚೀಲ ನಾನು ಮುಟ್ಟಿಲ್ಲ. ಬೇಕಾದರೆ ಈಗಲೇ ನನ್ನನ್ನೂ ನನ್ನ ಮನೆಯನ್ನೂ ಹುಡುಕಿ ನೋಡಿ. ದೇವರೇ ನನ್ನನ್ನು ಪಾರು ಮಾಡಬೇಕು' ಎಂದು ಹೇಳಿ ನೆಲದ ಮೇಲೆ ಕೂತುಕೊಂಡನು.

ಒಡನೆಯೇ ಅಲ್ಲಿದ್ದವರು ಅದೇ ಪ್ರಕಾರ ಅವನನ್ನು ಶೋಧಿಸಿದರು. ಏನೂ ಸಿಗಲಿಲ್ಲ. ಅವನ ಮನೆಗೆ ಹೋಗಿ ಹುಡುಕುವುದು ಉಳಿದಿದ್ದಿತು. ಹಲವು ಪ್ರಮುಖರು ಅವನ ಜತೆಯಲ್ಲಿ ಅವನ ಮನೆಗೂ ಹೋದರು.

ದಾಸನು ಬಾಗಿಲ ಹೊರಗೆ ನಿಂತುಕೊಂಡನು. ಹೋಗಿದ್ದವರು ಅವನ ಮನೆಯ ಒಳಗೆ ಎಲ್ಲ ಕಡೆಯಲ್ಲಿಯೂ ತಡಕಿದರು. ಯಾರಿಗೂ ಅಪರಾಧದ ಯಾವ ಗುರುತೂ ಸಿಗಲಿಲ್ಲ. ಮುಂದಿನ ಕ್ರಮವೇನೆಂದು ಅವರು ತಮ್ಮ ತಮ್ಮಲ್ಲಿಯೇ ಆಲೋಚಿಸುತ್ತಿದ್ದಾಗ ಮಾರನು ದಾಸನ ಮನೆಯೊಳಗೆ ಅಲ್ಲಿ ಇಲ್ಲಿ ಸುತ್ತಾಡಿ, ಹುಡುಕುತ್ತಿದ್ದವನಂತೆ ನಟಿಸುತ್ತ, ಒಳಗೆ ಹೋಗಿ, ಕೊಂಚ ಹೊತ್ತಾದ ಮೇಲೆ ಅಲ್ಲಿಂದಲೇ 'ಬನ್ನಿ ಬನ್ನಿ! ನೋಡಿ ನೀವೇ! ಇಲ್ಲಿದೆ ಮಠದ ಚೀಲ!' ಎಂದು ಕೂಗಿಕೊಂಡನು ಎಲ್ಲರೂ ಒಳಗೆ ಹೋಗಿ ನೋಡಿದರು. ಮಗ್ಗದ ಕೆಳಗೆ ಒಂದು ಬರಿ ಚೀಲ ಬಿದ್ದಿದ್ದಿತು. ಪರೀಕ್ಷೆ ಮಾಡಿದಾಗ ಅದು ಮಠದ ಚೀಲವೇ. ಇದೇ ರುಜುವಾತು! ದಾಸನೇ ಕಳ್ಳ!! ಎಲ್ಲರೂ 'ದಾಸ, ಈಗ ಏನು ಹೇಳುತ್ತೀ?' ಎಂದು ಕೇಳಿದರು. ಗೆಳೆಯ ಮಾರನೇ 'ಎಲೋ ದಾಸ! ಸುಮ್ಮನೆ ಒಪ್ಪಿಕೊಳ್ಳೊ' ಎಂದನು. ಇದನ್ನು ಕೇಳಿ ದಾಸನಿಗೆ ತಡೆಯಲಾರದಷ್ಟು ಖೇದಕೋಪಗಳುಂಟಾದುವು. ಆದರೂ ದಾಸನು ಹಲ್ಲು ಕಚ್ಚಿಕೊಂಡು, ಕೋಪ ತೋರದೆ, ದುರದುರನೆ ಮಾರನನ್ನು ನೋಡಿ 'ಈಗ ನೆನಪಿಗೆ ಬಂತು. ಒಂದು ವಾರದಿಂದ ಆ ಬೀಗದ ಕೈ ಗೊಂಚಲು ನನ್ನ ಹತ್ತಿರ ಇರಲಿಲ್ಲ. ನಾನು ಅದನ್ನು ಎಲ್ಲಿ ಬಿಟ್ಟೆನೋ ಅರಿಯೆ. ಈಗಲೂ ದೇವರೇ ನನ್ನನ್ನು ಪಾರುಮಾಡಬೇಕು' ಎಂದು ಮಾತ್ರ ತಿರುಗಿ ಉತ್ತರ ಕೊಟ್ಟನು.

ಎಲ್ಲರೂ ಚಾವಡಿಗೆ ಹಿಂದಿರುಗಿದರು. ಹೊಸ ವಿದ್ಯಮಾನಗಳೇನೂ ಬಯಲಿಗೆ ಬರಲಿಲ್ಲ. ದಾಸನೇ ಅಪರಾಧಿ ಎಂಬ ಆಪಾದನೆಯು ಸ್ಥಿರ ವಾಯಿತು. ನಿಜಾಂಶವನ್ನು ನಿರ್ಧರಿಸುವುದು ಹೇಗೆ ?

ಕೊನೆಗೆ ಆಗಲೇ ಪೂಜೆ ಮಾಡಿ, ಭಜನೆ ನಡೆಸಿ, ಚೀಟಿ ಹಾಕಿ ಗೊತ್ತು ಮಾಡುವುದೇ ತಕ್ಕ ದಾರಿಯೆಂದು ಮಠದವರು ನಿರ್ಣಯಿಸಿದರು. ದಾಸನೂ ಅಲ್ಲಿಯೇ ಉಳಿದು, ಭಜನೆ ಮಾಡಿ, ಪುನಃ ' ದೇವರೇ ನನ್ನನ್ನು ಕಾಪಾಡ ಬೇಕು ' ಎಂದು ನಂಬಿ ಕಾದಿದ್ದನು. ಇದೆಂತಹ ದೈವ ಭಕ್ತಿ! ಮಾರನ ಮೋಸದಿಂದ ದಾಸನಿಗೆ ಆಗಲೇ ಮಾನವರಲ್ಲಿ ವಿಶ್ವಾಸ ಕಡಮೆಯಾಯಿತು. ಆದರೂ ತನ್ನ ನಿರಪರಾಧವು ದೈವ ಸಹಾಯದಿಂದ ಈಗಲಾದರೂ ತೋರಿ ಬರುವುದೆಂದು ಸಂಪೂರ್ಣವಾಗಿ ನೆಚ್ಚಿ ನಿಂತು ನೋಡಿದನು.

ಚೀಟಿ ಹಾಕಿದರು. ಕೊನೆಗೂ ದಾಸನೇ ಅಪರಾಧಿ ಎಂದು ಬಂದಿತು. ಅವನ ಮಾತನ್ನು ಯಾರೂ ನಂಬಲಿಲ್ಲ. ಊರಿನವರು ಅವನು ಕಳ್ಳನೆಂದೇ ತಿಳಿದರು. ಆಗಲೇ ಮಠದಿಂದ ಅವನಿಗೆ ಬಹಿಷ್ಕಾರವೂ ಬಿದ್ದಿತು. ಅಲ್ಲದೆ ಕಳವಾದ ಹಣವನ್ನು ಅವನೇ ತೆರಬೇಕೆಂದೂ ನಿಶ್ಚಿತವಾಯಿತು.

ದಾಸನು ಮರುಮಾತನಾಡದೆ ಎಲ್ಲವನ್ನೂ ಕೇಳಿದನು. ಸೇರಿದ್ದವರು ತಮ್ಮ ತಮ್ಮ ಮನೆಗಳಿಗೆ ತೆರಳಲು ಅನುವಾದರು. ಕಟ್ಟಕಡೆಗೆ ಅವನು ಮಾರನ ಬಳಿಗೆ ಹೋಗಿ ' ಎಲೋ ಮಾರ ! ಈಗ ಜ್ಞಾಪ್ತಿಗೆ ಬಂತು. ನೀನೇ ಒಂದು ವಾರದ ಹಿಂದೆ ನನ್ನ ಬೀಗದ ಕೈ ಗೊಂಚಲನ್ನು ನನ್ನಿಂದ ತೆಗೆದು ಕೊಂಡೆ. ಅದು ನಿನ್ನ ಹತ್ತಿರದಲ್ಲೇ ಇತ್ತು. ನೀನೇ ಹಣ ಕದ್ದವನು. ನನ್ನ ಮೇಲೆ ತಪ್ಪು ಹೊರಿಸಲು ಈ ಆಟ ಹೂಡಿದ್ದೀಯೆ. ನೀನೇ ಬದುಕು. ಈ ಲೋಕ ಆಳುವ ದೇವರು ಧರ್ಮಿಷ್ಟನಲ್ಲ. ನಿರಪರಾಧಿ ಮೇಲೆ ತಪ್ಪು ಹೊರಿಸುವವ ಸುಳ್ಳು ದೇವರು ' ಎಂದು ಹೇಳಿ ಎದ್ದು ಹೊರಟು ಹೋದನು.

ಎಂತಹ ಅನ್ಯಾಯ ! ದಾಸನ ಭಕ್ತಿ ಸತ್ಯ ಸೇವೆ ಮುಂತಾದ ಸುಗುಣ ಗಳು ಸರ್ವಜನವಿದಿತವಾಗಿದ್ದುವು. ದೈವ ವಿಲಾಸ ! ಅಂತೂ ಇಂತೂ ಅವ ನಿಗೆ ಈ ದುಸ್ಥಿತಿ ಪ್ರಾಪ್ತವಾಯಿತು. ಇತಃಪರ ಅವನಿಗೆ ಮನುಷ್ಯರಲ್ಲಿ ವಿಶ್ವಾಸವೂ ದೇವರಲ್ಲಿ ಭಕ್ತಿಯೂ ಮಾಯವಾದುವು. ಹುಚ್ಚು ಹಿಡಿದವ

ನಂತೆ ಅವನು 'ಇನ್ನೇನು, ಸೀತೆಯೂ ನನ್ನ ಕೈ ಬಿಡುವಳು' ಎಂದು ತನಗೆ ತಾನೇ ಹೇಳಿಕೊಂಡನು.

ಮನೆಗೆ ಬಂದಮೇಲೆ ದಾಸನು ಆ ದಿನವೆಲ್ಲ ಮಂಕು ಹಿಡಿದು ಬೆಪ್ಪನಂತೆ ಕುಳಿತಿದ್ದನು. ಮಾಳನೆಯ ದಿನ ಮಗ್ಗಬಿಟ್ಟೇಳದೆ ಇಡೀ ಹಗಲು ರಾತ್ರಿ ಒಂದೇ ಸಮನೆ ನೇದು ನೇದು ಬಟ್ಟೆ ಮಾಡಿದನು. ಸಂಜೆಯಲ್ಲಿ ಸೀತಮ್ಮನ ಅಣ್ಣ ಬಂದು 'ನಮ್ಮ ತಂದೆ ಹೇಳಿಕಳಿಸಿದ್ದಾರೆ. ಅನುಕೂಲವಿಲ್ಲ. ಸದ್ಯಕ್ಕೆ ಸೀತಮ್ಮನ ಮದುವೆ ಯೋಚನೆ ಬಿಟ್ಟುಬಿಡು' ಎಂದು ಹೇಳಿ ನಿಲ್ಲದೆ ಹೊರಟುಹೋದನು. ದಾಸನು ನಿರೀಕ್ಷಿಸಿದಂತೆಯೇ ಆಯಿತು. ಅವನು ಈ ವಾರ್ತೆಯನ್ನು ಕೇಳಿದರೂ ಕೇಳದಂತೆ ತನ್ನ ಪಾಡಿಗೆ ತಾನು ನೇಯುತ್ತಿದ್ದನು ಇದಾದ ಒಂದು ವಾರದೊಳಗೆ ಸೀತಮ್ಮನಿಗೂ ಮಾರನಿಗೂ ಮದುವೆ ನಡೆದ ಸಂಗತಿ ಪ್ರಕಟವಾಯಿತು. ಮರುದಿನವೇ ದಾಸನು ಆ ಊರು ಬಿಟ್ಟು ಹೊರಟನು. ಹೀಗೆ ಮಿತ್ರ ದ್ರೋಹದಿಂದ ಅವನಿಗೂ ಹುಟ್ಟಿದ ಊರಿಗೂ ದೂರವಾಯಿತು.

ಅಲೆದಾಡಿ ಅಲೆದಾಡಿ ದಾಸನಿಗೆ ಸಾಕಾಯಿತು. ಯಾವ ಊರೂ ಸರಿಬೀಳಲಿಲ್ಲ. ಕೊನೆಗೆ ಬೊಮ್ಮನಹಳ್ಳಿ ಸಿಕ್ಕಿತು. ಆಗ ಅವನು ಅಲ್ಲಿ ಇರಬೇಕೆಂದು ನಿಶ್ಚಯಿಸಿದನು.

——:o:——

೩

# ಬೊಮ್ಮನಹಳ್ಳಿಯ ಜೀವನ

ಇಷ್ಟೆಲ್ಲ ಆದಮೇಲೆಯೇ ದಾಸನು ಬೊಮ್ಮನಹಳ್ಳಿಗೆ ಬಂದು ನೆಲೆಸಿದುದು. ಊರ ಹೊರಗಣ ಕಲ್ಲು ಮಂಟಪದಲ್ಲಿ ಒಬ್ಬನೇ ಯಾರೊಡನೆಯೂ ಸೇರದೆ ಮಗ್ಗದ ಕೆಲಸ ಮಾಡತೊಡಗಿದನು. ತಾನು ಹುಟ್ಟಿದ ಊರಿನ ಹಿಂದಿನ ಜೀವನವನ್ನು ಮರೆಸಲು ಅವನಿಗೆ ಬೊಮ್ಮನಹಳ್ಳಿಗಿಂತ ಸರಿಯಾದ ಸ್ಥಳವೇ ಕಾಣಿಸಿರಲಿಲ್ಲ ಹೊಸ ಊರು. ಅಪರಿಚಿತ ಜನ. ಉದ್ಯೋಗಕ್ಕೆ ತಕ್ಕ ಅನುಕೂಲಗಳು. ವಾರವಾರಕ್ಕೆ ಕೈ ತುಂಬ ಹಣದ ಸಂಪಾದನೆ. ಅರಸನ ಅಂಕೆಯಿಲ್ಲ, ದೈವದ ಕಾಟವಿಲ್ಲ. ಮನೆ, ಬಾಗಿಲು, ನೆರೆಹೊರೆ, ಗೆಳೆತನ—ಯಾವುದರ ತೊಡಕೂ ಇಲ್ಲ. ಹೊಸರೀತಿಯಲ್ಲಿ ಕೇವಲ ಸ್ವಾರ್ಥ ಜೀವನ ನಡೆಸಲಿಕ್ಕೆ ಅವನಿಗೆ ಬೊಮ್ಮನಹಳ್ಳಿ ಬಹುವಾಗಿ ತಕ್ಕ ಎಡೆಯೆಂದು ತೋರಿತು. ಬೆಟ್ಟಗುಟ್ಟಗಳ ತಪ್ಪಲು. ಮರಗಿಡಗಳ ಮರೆ. ರಾಜಮಾರ್ಗಗಳಿಗೆ ದೂರ. ದಾರಿಹೋಕರೂ ಹೇಳಿಕೇಳುವವರೂ ಇಲ್ಲದ ಊರು, ನೊಂದ ಮನ, ಕುಗ್ಗಿದ ಎದೆ, ಬಯಲಾದ ಆಸೆಗಳು ಉಳ್ಳ ದಾಸನಿಗೆ ಈ ಸನ್ನಿವೇಶವು ಅವನ ಆಗಿನ ಮನೋಧರ್ಮಕ್ಕೆ ಅನುಗುಣವಾಗಿದ್ದಿತು.

ಇಲ್ಲಿ ಅವನು ಯಂತ್ರದಂತೆ ಕೆಲಸ ಮಾಡಲು ಮೊದಲುಮಾಡಿದನು. ಜೇಡನಂತೆ ನೇಯುವುದೇ ಅವನ ಕೆಲಸ. ಊರಿನ ಗಿರಾಕಿಗಳು ಕೊಟ್ಟಿದ್ದ ನೂಲನ್ನು ಕಾಲಕ್ಕಿಂತ ಮುಂಚಿತವಾಗಿ ನೇದು ಮುಗಿಸಿ ಸಿದ್ಧಮಾಡಿಕೊಟ್ಟು ಬಿಡುತ್ತಿದ್ದನು. ಆಗ ಅವನಿಗೆ ಹಣದ ಸಂಪಾದನೆಯ ಯೋಚನೆ ಕೂಡ ಇರಲಿಲ್ಲ. ಹಣ ಏಕೆ? ಯಾರಿಗೆ? ಏತಕ್ಕೋಸ್ಕರ? ಆದುದರಿಂದ ಅವನು ಮೊದಲು ಮೊದಲು ವಿಚಾರರಹಿತನಾಗಿ ಕೇವಲ ಅಭ್ಯಾಸ ಬಲದಿಂದ ಕೆಲಸ ಮಾಡಿಕೊಂಡು ಹೋದನು. ಹಸಿವಾದಾಗ ಅನ್ನ, ಬಾಯಾರಿಕೆಯಾದಾಗ ನೀರು—ಇದನ್ನು ತಕ್ಕಷ್ಟು ಹೊಂದಲು ಬೇಕಾದ ಕಾಲ ಮಾತ್ರ ಅನ್ನ ನೀರಿಗೋಸ್ಕರ ಪ್ರಯತ್ನ; ಉಳಿದ ಕಾಲಗಳಲ್ಲೆಲ್ಲ ಉದ್ಯೋಗ. ಇವು

ಬಿಟ್ಟರೆ ಅವನ ಈಗಿನ ಜೀವನದಲ್ಲಿ ಮತ್ತೇನೂ ಇರಲಿಲ್ಲ. ಆಗ ಅವನಿಗೆ ಹಿಂದಣ ಜೀವನದ ನೆನಪೇ ಆಗದು. ತಾನು ಬಂದು ನೆಲಸಿದ್ದ ಈ ಹಳ್ಳಿಯಲ್ಲಿ ಅವನ ಭಕ್ತಿಪ್ರೀತ್ಯಾದರವಿಶ್ವಾಸಗಳಿಗೆ ಪಾತ್ರವಾದುದೂ ಪಾತ್ರರಾದವರೂ ಇರಲಿಲ್ಲ ಅವನ ಮುಂದಿನ ಜೀವನವು ಕಗ್ಗತ್ತಲೆಯಿಂದ ಕೂಡಿದ್ದಿತು. ಪ್ರೇಮಶೂನ್ಯವಾದವರ ಬಾಳೇ ಹೀಗೆ! ಊರಿನವರಿಗೆ ಬೇಕಾಗಿದ್ದ ಹಚ್ಚಡ, ದುಪ್ಪಟಿ, ಪಂಚೆ, ಸೀರೆ ಮುಂತಾದುವುಗಳನ್ನು ನೇದುಕೊಟ್ಟಾಗ ದಾಸನಿಗೆ ಕೈ ತುಂಬ ಹಣ ರುತ್ತಿದ್ದಿತು. ಅವನು ಹುಟ್ಟಿದ ಊರಿನಲ್ಲಿ ಇಷ್ಟು ಸಂಪಾದನೆ ಇರಲಿಲ್ಲ. ಅಲ್ಲಿ ಆ ಅಲ್ಪಾದಾಯದ ಬಹು ಭಾಗವು ದಾನಧರ್ಮಗಳಿಗೋಸ್ಕರ ವೆಚ್ಚವಾಗುತ್ತಿದ್ದಿತು; ಉಳಿಯುತ್ತಿದ್ದುದು ಕಡಮೆ. ಇಲ್ಲಿಯಾದರೋ ಹೆಚ್ಚು ಸಂಪಾದನೆ, ದಾನಧರ್ಮ ಭಕ್ತಿಪ್ರೇಮ ಮುಂತಾದುವು ಒಂದೂ ಇಲ್ಲ ಕಡಮೆ ವೆಚ್ಚ, ಹೆಚ್ಚು ಉಳಿತ. ಮಾನವನ ಸಂಪಾದನೆಗೆ ತಕ್ಕ ಉತ್ಸಾಹ, ಉದ್ದೇಶ, ಉಪಯೋಗ—ಇದ್ದೇ ಇರಬೇಕು ಆಗಲೇ ಜೀವನವು ಅರ್ಥಪೂರ್ಣವಾಗಿ ಕಾಣುವುದು. ದಾಸನಿಗೆ ಈಗ ಇಲ್ಲಿ ಇದೊಂದೂ ಇರಲಿಲ್ಲ. ದಿನದಿನಕ್ಕೆ ಹಣ ಸೇರುವುದನ್ನು ನೋಡಿ ಕೇವಲ ಉದಾಸೀನನಾಗಿದ್ದ ದಾಸನು ಬರುಬರುತ್ತ ಜೇಡನಂತ ಅಭ್ಯಾಸವಶಾತ್ ಉದ್ಯೋಗ ಮಾಡಿ ಹಣಗಳಿಸಿ ಕೂಡಿಡುವುದರಲ್ಲಿಯೇ ಉದ್ಯುಕ್ತನಾದನು. ಎಂದರೆ ದಾಸನ ಹೊಸ ಜೀವನದಲ್ಲಿ ಧ್ಯೇಯಗಳಿಲ್ಲದೆ ಕೇವಲ ಧನಾರ್ಜನೆಯೇ ಬಾಳಿನ ಪರಮಾರ್ಥವಾಗಿ ಪರಿಣಮಿಸಿತು.

ಹೀಗಿರಲು ಆಗ ದಾಸನಿಗೆ ನೆರೆಹೊರೆಯವರೊಡನೆ ಮನುಷ್ಯಯೋಗ್ಯವಾದ ಸಾಮಾಜಿಕ ಜೀವನದ ಸಂಬಂಧ ಬೆಳೆಸಲು ಒಂದು ಸಣ್ಣ ಸಂದರ್ಭ ಒದಗಿತು. ಅವನ ಪಾದರಕ್ಷೆಗಳು ಹರಿದುಹೋದುವು. ಅವುಗಳನ್ನು ಸರಿಮಾಡಿಸಲು ಅವನು ಊರ ಮೋಚಿಯ ಬಳಿಗೆ ಬರಬೇಕಾಯಿತು. ಮೋಚಿಯ ಮನೆಯಲ್ಲಿ ಅವನ ಹೆಂಡತಿ ನರಳುತ್ತ ಮಲಗಿದ್ದಳು. ಆಗ ಅವಳಿಗೆ ತಡೆಯಲಾರದಷ್ಟು ಹೊಟ್ಟೆನೋವು. ಹೊಟ್ಟೆ ಹಿಡಿದುಕೊಂಡು ವೇದನೆ ಅನುಭವಿಸುತ್ತಿದ್ದ ಅವಳ ಕಷ್ಟ ನೋಡಿ ಅವನಿಗೆ ತನ್ನ ತಾಯಿಯ ನೆನಪು ಬಂದು ಕನಿಕರ ಹುಟ್ಟಿತು. ವೈದ್ಯನು ಕೊಟ್ಟ ಔಷಧದಿಂದ ಮೋಚಿಯ ಹೆಂಡತಿಗೆ

ಉಪಯೋಗವಾಗಿರಲಿಲ್ಲ. ಇದನ್ನು ಕೇಳಿ ದಾಸನು ತಾನಾಗಿಯೇ ತನಗೆ ತಾಯಿಂದ ಗೊತ್ತಾಗಿದ್ದ ಮೂಲಿಕೆಯೊಂದನ್ನು ತಂದು ಕಷಾಯ ಮಾಡಿ ಕೊಟ್ಟನು. ಅವಳಿಗೆ ಕೊಂಚ ಗುಣವಾಯಿತು. ಈ ಉಪಕಾರ ಬುದ್ಧಿಯಿಂದ ಅವನಿಗೆ ಊರಿನವರೊಡನೆ ಸೌಜನ್ಯವನ್ನು ಹೆಚ್ಚಿಸಿಕೊಳ್ಳಲು ಅವಕಾಶ ಇದ್ದಿತು. ಆದರೆ ಅದೃಷ್ಟವಶಾತ್ ಆ ಅವಕಾಶ ಈಗ ಫಲಕಾರಿಯಾಗಲಿಲ್ಲ. ಇದಾದ ಮೇಲೆ ಊರಿನ ಜನರು ಆಗಾಗ ಬಂದು ಅವನನ್ನು ಔಷಧಕ್ಕಾಗಿ ಪೀಡಿಸತೊಡಗಿದರು. ಕೆಲವರಿಗೆ ಜ್ವರ, ಕೆಲವರಿಗೆ ಕೆಮ್ಮು, ಈ ಬಾಣಂತಿ ಯರಿಗೆ ಎದೆಹಾಲಿಲ್ಲ, ಆ ಹೆಂಗಸರಿಗೆ ಮೈ ಕೈ ನೋವು, ಈ ಹುಡುಗ ಬೆದರು ತ್ತಾನೆ, ಆ ಮಗು ರಚ್ಚೆ ಹಿಡಿಯುತ್ತದೆ—ಇವರಿಗೆಲ್ಲ ಔಷಧಬೇಕು. ಹೀಗೆ ಬಗೆಬಗೆಯ ರೋಗಗಳಿಗೆ ಮದ್ದುಕೊಡೆಂದು ಜನರು ಬಂದು ಅವನನ್ನು ಪೀಡಿಸಲಾರಂಭಿಸಿದರು. ಪಂಡಿತನ ಔಷಧಿಯಿಂದ ವಾಸಿಯಾಗುವುದು ಸರಿ. ನೇಯಿಗೆ ದಾಸನ ಕಷಾಯದಿಂದ ವಾಸಿಯಾಗುವುದು ಹೇಗೆ? ಅವನ ಯಂತ್ರ ಮಂತ್ರ ಶಕ್ತಿಯಿಂದ ಗುಣವಾಗಿರಬೇಕೆಂದು ಜನರು ಭಾವಿಸಿದರು. ಇಂತಹ ಶಕ್ತಿಯೊಂದೂ ಅವನಲ್ಲಿರಲಿಲ್ಲ. ಇದೆಯೆಂದು ಊರಿನವರು ಊಹಿಸಿ ಕೊಂಡರು ಕಾರಣ? ಅವರ ಮೌಢ್ಯ. ಹಣಕಾಸಿಗೆ ಆಸೆಪಡದೆ ಯಥಾರ್ಥ ವಾಗಿದ್ದ ಅವನು ತನಗೆ ಹೆಚ್ಚು ವೈದ್ಯಪರಿಶ್ರಮವಿಲ್ಲವೆಂದು ಎಷ್ಟು ಹೇಳಿ ದರೂ ಜನರು ನಂಬಲಿಲ್ಲ. ಇದರಿಂದ ಅವನಿಗೆ ಸಾಮಾಜಿಕ ಸಂಪರ್ಕ ಹೆಚ್ಚುವುದಕ್ಕೆ ಬದಲು ಅವಿಶ್ವಾಸ ಅಪ್ರಿಯತೆಯೇ ಹೆಚ್ಚಿತು. ಆದುದರಿಂದ ದಾಸನು ತನಗೆ ತಿಳಿದಿದ್ದ ಔಷಧೀಯ ಪ್ರಯೋಗಗಳನ್ನೂ ಮಾಡದೆ ಸುಮ್ಮ ನಾದನು. ಉದ್ಯೋಗ ಯಥಾಪ್ರಕಾರ ನಡೆಯುತ್ತಿತ್ತು.

ದಾಸನ ಹಣವು ಸೇರುತ್ತಹೋಯಿತು. ತಾಮ್ರದ ಕಾಸುಗಳು ಬೆಳ್ಳಿ ನಾಣ್ಯಗಳಾದುವು. ಬೆಳ್ಳಿ ನಾಣ್ಯಗಳು ಚಿನ್ನದ ನಾಣ್ಯಗಳಾದುವು. ಚಿನ್ನದ ನಾಣ್ಯಗಳ ಸಂಖ್ಯೆಯೂ ಹೆಚ್ಚಿತು. ದಾಸನು ಮಗ್ಗದ ಕೆಳಗೆ ಒಂದು ಗುಂಡಿ ತೋಡಿ, ಚಿನ್ನದ ನಾಣ್ಯಗಳನ್ನೇ ಒಂದು ಗಡಿಗೆಯಲ್ಲಿ ತುಂಬಿ ಹೂತಿಟ್ಟು, ಗುಂಡಿಗೆಯ ಮೇಲೆ ಮರಳನ್ನು ಮುಚ್ಚಿ, ಅದನ್ನು ಸರ್ಪದಂತೆ ಕಾಯು ತಿದ್ದನು. ರಾತ್ರಿಯಾದರೆ ಗಡಿಗೆ ತೆಗೆದು, ನಾಣ್ಯಗಳನ್ನು ಸುರಿದು, ಎಣಿ ಸುವುದು, ಹಿಸುಗಿ ನೋಡುವುದು, ರಾಶಿಹಾಕಿ ತಡವರಿಸಿ ನೋಡಿ ನಲಿ

ಯುವುದು—ಇದೇ ಇವನ ನಿತ್ಯ ಜೀವನ, ಸಂತತ ಚಿಂತೆ. ಇದು ಬಿಟ್ಟು ಅವನಿಗೆ ಬೇರೆ ಹವ್ಯಾಸವೇ ಇರಲಿಲ್ಲ.

ಹೀಗೆ ಹದಿನೈದು ವರ್ಷಗಳು ಕಳೆದುವು. ಚಿನ್ನದ ನಾಣ್ಯಗಳ ರಾಶಿ ದೊಡ್ಡದಾಗುತ್ತ ಬಂದಿತು. ಹೇಗೆ ಚಿನ್ನದ ರಾಶಿ ಹಿರಿದಾಯಿತೋ ಹಾಗೆಯೇ ಅವನ ಜೀವನ ಪ್ರವಾಹ ಕಿರಿದಾಯಿತು. ಬಟ್ಟೆ ನೇಯುವುದು, ಚಿನ್ನ ಕೂಡಿಡುವುದು, ಕೂಡಿಟ್ಟ ಚಿನ್ನ ನೋಡಿ ನೋಡಿ ಹಿಗ್ಗುವುದು—ಇದು ಬಿಟ್ಟರೆ ಅವನ ಆಗಿನ ಬಾಳಿನಲ್ಲಿ ಮತ್ತಾವ ಗುರಿಯೂ ತೋರಲಿಲ್ಲ. ಈ ಆಂತರಿಕ ಪರಿವರ್ತನೆಗೆ ಅನುಗುಣವಾಗಿ ಅವನ ಮುಖವೂ ಅಂಗಾಂಗಗಳೂ ಕುಗ್ಗಿದುವು. ನಡುಹರೆಯದವನಾದರೂ ಅವನು ಮುದುಕನಂತೆ ಕಾಣು ತಿದ್ದನು. ಊರಿನ ಮಕ್ಕಳು ಅವನನ್ನು "ದಾಸಜ್ಜ" ಎಂದು ಕರೆಯಲು ಉಪಕ್ರಮಿಸಿದರು. ಮುಂದಿನ ವರ್ಷದ ಗೌರಿಹಬ್ಬದಲ್ಲಿ ನಡೆದ ಒಂದು ಘಟನೆಯಿಂದ ದಾಸನ ಜೀವನವು ಊರಿನವರ ಜೀವನದೊಂದಿಗೆ ಬೆರೆಯುವ ಯೋಗವು ಮತ್ತೆ ದೊರೆಯಿತು.

——:o:——

೪

# ಹೆಗ್ಗಡೆಯ ಮನೆವಾರ್ತೆ

ಬೊಮ್ಮನ ಹಳ್ಳಿಯಲ್ಲಿ ಮಂಜಪ್ಪ ಹೆಗ್ಗಡೆಯೇ ದೊಡ್ಡ ಮನುಷ್ಯ. ಅವನ ಮನೆ ಇದ್ದುದು ದೇವಸ್ಥಾನದ ಮಗ್ಗುಲಲ್ಲಿ, ಆ ಮನೆ ಇಟ್ಟಿಗೆ ಗಚ್ಚುಳ್ಳ ಮನೆ. ಅದನ್ನು "ಹೆಗ್ಗಡೆ ಮನೆ" ಎಂದು ಕರೆಯುವರು. ಆ ಮನೆಗೆ ಮುಂದುಗಡೆ ವಿಶಾಲವಾದ ಪಡಸಾಲೆಯೂ, ಹಿಂದುಗಡೆ ದೊಡ್ಡ ದನದ ಕೊಟ್ಟಿಗೆಯೂ ಇದ್ದುವು ಆ ಊರಿನಲ್ಲಿ ಹೆಚ್ಚು ಭೂಮಿಯುಳ್ಳವರು ಕಡಮೆ. ಅನೇಕರು ತಮ್ಮ ತಮ್ಮ ಭೂಮಿಗಳನ್ನು ತಾವೇ ಬೇಸಾಯ ಮಾಡಿ ಕೊಳ್ಳುತ್ತಿದ್ದರು. ಆದರೆ ಹೆಗ್ಗಡೆಯೊಬ್ಬನೇ ಏಳೆಂಟು ರೈತರಿಗೆ ಜಮೀನು ಕೊಟ್ಟಿದ್ದ ಭಾರಿ ಜಮೀನುದಾರ. ಹಿಂದೆ ಹೆಗ್ಗಡೆ ಮೇಲೆ ಏಕೋ ಒಬ್ಬಿಬ್ಬರು ಏನೋ ದೂರು ಹೇಳಿದ್ದರು. ಅದು ಹಾಗಿರಲಿ. ಆ ಊರಿನಲ್ಲಿ ಆಗ ಸಾಹುಕಾರ ಸಿದ್ದಪ್ಪನನ್ನು ಬಿಟ್ಟರೆ ಹೆಗ್ಗಡೆಯೇ ಹೆಚ್ಚು ಸಿರಿವಂತ.

ಆಗ ಇನ್ನೂ ರೈಲುರಸ್ತೆಗಳು ಹೆಚ್ಚಾಗಿ ಬಂದಿರಲಿಲ್ಲ. ಪಟ್ಟಣಗಳು ಹೆಚ್ಚಿ ಹಳ್ಳಿಗಳು ಹಾಳಾದುದು ರೈಲು ಹೆಚ್ಚಿದಮೇಲೆಯೇ ಆಸಡ್ಡೆ, ಕೆಟ್ಟ ಬೇಸಾಯ, ದುಂದುಗಾರಿಕೆ, ಕೋರ್ಟುಕಚೇರಿ ವ್ಯವಹಾರಗಳು ಮುಂತಾದುವು ಸೇರಿ ಗ್ರಾಮನಿವಾಸಿಗಳ ನೆಮ್ಮದಿ ಕ್ರಮೇಣ ಕೆಟ್ಟಿತು. ಜೀವನ ಒಂದು. ಆದರ ಎಲ್ಲ ಅಂಗಗಳೂ ಬೆರೆಯದಿದ್ದರೆ ಬದುಕು ಸುಸೂತ್ರವಾಗಿ ನಡೆಯುವುದು ಕಷ್ಟ. ಆದರಲ್ಲಿಯೂ ಹಳ್ಳಿಯಲ್ಲಿ ಜನರು ಬೆರೆಯದೆ ಜೀವನ ಸಾಗುವುದೇ ದುಸ್ತರವೆನ್ನಬಹುದು. ದೈವಸೃಷ್ಟಿಯಲ್ಲಿ ವಾಯು ಭೂಗುಣ ಮೊದಲುಗೊಂಡು ಮನುಷ್ಯರ ಅಂತಃಕರಣಗಳವರೆಗೆ ಎಲ್ಲವೂ ಸರಿಯಾಗಿ ಸೇರಿದ ಹೊರತು ಸಂಸ್ಕೃತಿ ಹೆಚ್ಚಿ, ಜೀವನ ಪ್ರವಾಹವು ಸುಖ ಸಂತೋಷ ಶಾಂತಿಗಳೊಡನೆ ಮುಂದುವರೆಯಲಾರದು.

ತಗ್ಗಿನಲ್ಲಿ ಮರಗಿಡಗಳ ಮಧ್ಯೆ ಅಡಗಿದ್ದ ಬೊಮ್ಮನಹಳ್ಳಿಯಲ್ಲಿ [illegible] ಇತರ ಕಡೆಗಳಲ್ಲಿ ಆಗುತ್ತಿದ್ದ ಯಾವ ಬದಲಾವಣೆಗಳೂ ಕಾಣ[illegible]

ಜನರು ಮೊದಲಿನಹಾಗೆಯೇ ಇಲ್ಲಿ ಅನ್ನ ಬಟ್ಟೆಗಳನ್ನು ಸಂಪಾದಿಸಿಕೊಂಡು ಜೀವಿಸುತ್ತಿದ್ದರು. ಅವರ ಭಾವನೆಗಳು ರೀತಿನೀತಿಗಳು ಕೊಂಚವಾದರೂ ಚಿಕ್ಕಕಡನೆಯಾಗಿರಲಿಲ್ಲ. ಅನುಕೂಲಸ್ಥರು ಬೇಕಾದಷ್ಟು ತಿಂದು ತೇಗಿ ಸುಖಪಡುತ್ತಿದ್ದರು. ರೋಗ ಮುಂತಾದುವು ಬಂದರೆ ಹಣೆಬರಹವೆಂದು ಕೊಳ್ಳುವರು. ಬಡವರಿಗೆ ಹಣವಂತರನ್ನು ಕಂಡರೆ ಹೊಟ್ಟೆಕಿಚ್ಚಿರಲಿಲ್ಲ. ಹಣವಂತರಿಗೆ ಬಡವರನ್ನು ಕಂಡರೆ ಮಮತೆ. ಆಗ ಹಳ್ಳಿಗಳಲ್ಲಿ ಹಬ್ಬಗಳು ಬಂದರೆ ದೊಡ್ಡ ದೊಡ್ಡ ಮನೆಗಳ ಹತ್ತಿರ ರುಚಿರುಚಿ ಅಡುಗೆ ವಾಸನೆ. ಊರಿನಲ್ಲಿ ಉತ್ಸವಗಳಾದರೆ ಬಡಬಗ್ಗರಿಗೆ ಬಲು ಅನುಕೂಲ. ಆಗ ಇತರ ಕಡೆ ಹೇಗಿದ್ದರೂ ಬೊಮ್ಮನಹಳ್ಳಿಯಲ್ಲಿ ಮಾತ್ರ ದುರ್ಭಿಕ್ಷದ ಸೊಲ್ಲು ಇರಲಿಲ್ಲ. ಒಂದು ಹಬ್ಬವಾದಮೇಲೆ ಮತ್ತೊಂದು ಹಬ್ಬ ಸಿದ್ಧವಾಗುತಿದ್ದಿತು. ಸಾಮಾನ್ಯವಾಗಿ ಹಬ್ಬಗಳು ಬರುವುದು ಸುಗ್ಗಿಯ ಕಾಲದಲ್ಲಿ ಅಥವಾ ಸುಗ್ಗಿ ಯಾದಮೇಲೆ. ಹೆಂಗಸರು ಹಬ್ಬಗಳಲ್ಲಿ ತಮ್ಮ ಹಿರಿಯರ ಕಾಲದ ಉಡುಗೆ ತೊಡುಗೆಗಳನ್ನು ಹೊರಕ್ಕೆ ತೆಗೆದು ಅವುಗಳನ್ನು ಮೈ ಮೇಲೆ ಹಾಕಿಕೊಂಡು ನಲಿಯುವರು. ಆಗ ಜನರಿಗೆ ಚಿಂತೆ ಕಡಮೆ, ಸೊಂಪು ಹೆಚ್ಚು. ನೆಂಟರಿಷ್ಟರಿಗೆ ಊಟ ಉಪಚಾರಗಳನ್ನು ಒದಗಿಸಲು ಅದೇ ಒಳ್ಳೆಯ ಕಾಲ.

ಹೆಗ್ಗಡೆ ಮನೆಯಲ್ಲಿ ಸುಗ್ಗಿಗೆ ಸರಿಯಾಗಿ ಹೋದರೆ ಯಾರಿಗೆ ಬೇಕಾದರೂ ಮನದಣಿಯ ಊಟಉಪಚಾರಗಳು. ಅಲ್ಲಿ ತಿಂದು ಬೇಸರವಾದರೆ ನರು ರುಚಿತಿಂಡಿಗಳಿಗಾಗಿ ಸಾಹುಕಾರ ಸಿದ್ದಪ್ಪನವರ ಮನೆಗೆ ಹೋಗು ಸಿದ್ದಪ್ಪನ ಮನೆಯಲ್ಲಿದ್ದಷ್ಟು ಣೆ, ಒಪ್ಪ, ಅಂದ ಹೆಗ್ಗಡೆ ಮನೆಯಲ್ಲಿ

ಡೆ ಹೆಂಡತಿ ಸತ್ತುಹೋಗಿ ಬಹಳ ದಿನಗಳಾಗಿದ್ದುವು. ಅವನ ಯಜಮಾನಿಯ ವಿಚಾರಣೆ ಇರಲಿಲ್ಲ. ಎಲ್ಲಿ ಜಾಣೆಯಾದ ಹೆಂಗ ೂ ದೃಷ್ಟಿಯೂ ಇರುವುದಿಲ್ಲವೋ ಅಲ್ಲಿ ಗೃಹಕೃತ್ಯಗಳು ಸರಿ ಸಿದ್ದಪ್ಪನ ಮನೆಗೂ ಹೆಗ್ಗಡೆ ಮನೆಗೂ ವ್ಯತ್ಯಾಸವಿದ್ದುದಕ್ಕೆ ಣ. ಹೆಗ್ಗಡೆಯಾದರೂ ಮನೆಯ ಕೆಲಸಕಾರ್ಯಗಳನ್ನು ನೋಡಿ ದಾಗಿದ್ದಿತು. ಆದರೆ ಅವನಿಗೆ ಮನಸ್ಸಿರಲಿಲ್ಲ. ಅವನು ಸದಾ

ಚಾವಡಿ ಮುಂದೆ ಹರಟೆಹೊಡೆಯುತ್ತ ಕಾಲಹರಣ ಮಾಡುತ್ತಿದ್ದನು. ಅವನಿಗೆ ಮೂವರು ಗಂಡು ಮಕ್ಕಳು. ಅವನ ಮಕ್ಕಳೂ ಅವನಂತೆಯೇ ಇದ್ದರು. ಹಿರಿಯವನ ಹೆಸರು ಬಸಪ್ಪ, ನಡುಕಲವನ ಹೆಸರು ನಾಗಣ್ಣ, ಕಿರಿಯವನ ಹೆಸರು ಬೀರಪ್ಪ. ಹೆಗ್ಗಡೆ ತನ್ನ ಮಕ್ಕಳನ್ನು ದಂಡಿಸದೆ ಹಾಗೆ ಸೋಮಾರಿಗಳಾಗಿ ಬಿಟ್ಟುಬಿಟ್ಟಿದು ಒಳ್ಳೆಯದಲ್ಲ. ಹೌದು. ಹಣವಂತರ ಮಕ್ಕಳು ತಮ್ಮ ಹೊಟ್ಟೆಯ ಪಾಡಿಗಾಗಿ ಕಷ್ಟಪಡಬೇಕಾಗಿಲ್ಲ. ಆದರೆ ಅವರೂ ಸಜ್ಜನರಾಗಿರಬೇಡವೆ? ಅವರಿಗೂ ಸುಶಿಕ್ಷಣವು ಅವಶ್ಯಕವಲ್ಲವೆ? ನಾಗಣ್ಣನ ಚಾಳಿಯನ್ನು ನೋಡಿದರೆ ಯಾರಿಗೆ ಸರಿಬೀಳುವುದು? ಅವನ ಜೂಜುಗಾರಿಕೆ ದುಂದುತನ ಆ ಊರಿನವರಿಗೆಲ್ಲ ಗೊತ್ತು. ಅಲ್ಲದೆ ಅವನು ಆಗಾಗ ತನಗೆ ಆಗದವರ ಮೇಲೆ ಬಹಳ ಚಲವಿಟ್ಟು ಅವರನ್ನು ಹಿಂಸೆಗೂ ಗೇಲಿಗೂ ಗುರಿ ಮಾಡುವನು. ಅವನ ಕೆಟ್ಟತನ ಹೋಗಲಿ. ಹೆಗ್ಗಡೆ ಹಿರಿ ಮಗ ಬಸಪ್ಪನ ವಿಷಯ ಮುಖ್ಯ. ಅವನೂ ತಮ್ಮನ ಹಾಗೆಯೇ ಆದರೆ ಕಷ್ಟ!

ಬಸಪ್ಪನು ಒಳ್ಳೆಯವನು; ನಿಜವಾದಿ; ಹತ್ತು ಮಂದಿಗೆ ಬೇಕಾದವನು; ಮುಂದೆ ಹೆಗ್ಗಡೆಯ ಸ್ಥಾನಕ್ಕೆ ಬರತಕ್ಕವನು ಅವನೇ. ಸ್ವಲ್ಪ ಈಚೀಚೆಗೆ ಅವನೂ ನಾಗಣ್ಣನ ಹಾದಿ ಹಿಡಿಯುವಂತೆ ತೋರುತಿದ್ದಿತು. ಆಗ ಬಸಪ್ಪನಿಗೂ ಸಾಹುಕಾರ ಸಿದ್ದಪ್ಪನ ಮಗಳು ಚನ್ನಮ್ಮನಿಗೂ ಮದುವೆಯೆಂಬ ಸುದ್ದಿ. ಬಸಪ್ಪನಿಗೆ ಆ ಮದುವೆ ತಪ್ಪಿಹೋದೀತೆಂದು ಬಹಳ ಭಯ. ಅವರ ಮದುವೆ ಸುದ್ದಿ ಏಳೆಂಟು ತಿಂಗಳಿಂದ ಬೊಮ್ಮನಹಳ್ಳಿಯಲ್ಲೆಲ್ಲ ಹರಡಿದ್ದಿತು. ಇಷ್ಟು ಕಾಲವಾದರೂ ಮದುವೆ ನಡೆದಿರಲಿಲ್ಲ. ಏಕೆ? ಏನೋ ಹೆಚ್ಚು ವಿಷಯ ಇರಬೇಕು. ಅಲ್ಲವೆ? ಕೆಲವು ದಿನಗಳಿಂದ ಬಸಪ್ಪನು ಮನೆಗೆ ಸರಿಯಾಗಿ ಬರುತ್ತಿರಲಿಲ್ಲ. ಅವನ ಮುಖವು ಕೆಟ್ಟಿರಲು ಕಾರಣವೇನು? 'ಚೆನ್ನಮ್ಮನಿಗೂ ಬಸಪ್ಪನಿಗೂ ಎಷ್ಟು ಹೊಂದಿಕೆಯಾಗಿದೆ! ಅವಳು ಬಂದರೆ ಹೆಗ್ಗಡೆ ಮನೆವಾರ್ತೆ ಸರಿಹೋಗುವುದು. ಅವಳ ಮನೆತನದಲ್ಲಿ ಹಾಳು ಮಾಡುವ ಅಭ್ಯಾಸವಿಲ್ಲ ಅಲ್ಲಿ ಯಾರು ಯಾರಿಗೆ ಏನೇನು ಬೇಕೋ ಅದು ಅವರಿಗೆ ತಕ್ಕ ಹಾಗೆ ಸಿಕ್ಕುವುದು. ಅವಳು ಸೊಸೆಯಾಗುವುದು ಹೆಗ್ಗಡೆ ಪುಣ್ಯ ಹೆಗ್ಗಡೆಯೇನೋ ಅನುಕೂಲವಂತನೇ. ಆದರೆ ಅವನ ಮನೆಯಲ್ಲಿ ಬಹಳ ವೆಚ್ಚ. ನೋಡಿಕೊಳ್ಳುವ ಹೆಂಗಸು ಬೇಕು. ಬಸಪ್ಪನು

ಹಿಂದಿನ ಹಾಗೇ ಸರಿ ಇರದಿದ್ದರೆ ಈ ಸಂಬಂಧ ತಪ್ಪುವುದು ನಿಜ' ಎಂದು ಊರಿನ ಜನರು ತಮತಮ್ಮಲ್ಲಿ ಮಾತನಾಡಿಕೊಳ್ಳುವರು

ಒಂದು ದಿನ ಸಂಜೆ ಮನೆ ಅಂಗಳದಲ್ಲಿ ಬಸಪ್ಪನು ತಲೆ ಮೇಲೆ ಕೈಯಿಟ್ಟು ಏನೋ ಯೋಚಿಸುತ್ತ ನಿಂತಿದ್ದನು. ದಾಸನು ಬೊಮ್ಮನಹಳ್ಳಿಗೆ ಬಂದು ಆ ಕಾಲಕ್ಕೆ ಸರಿಯಾಗಿ ಹದಿನೈದು ವರ್ಷ. ಅಂದು ಇನ್ನೂ ಸೂರ್ಯನ ಬೆಳಕಿದ್ದಿತು. ಮನೆಯೊಳಗೆ ಹಜಾರದಲ್ಲಿಯೇ ಕೊಡಲಿ, ಹಾರೆ, ಮಚ್ಚು, ಗುದ್ದಲಿ ಮುಂತಾದ ವ್ಯವಸಾಯದ ಉಪಕರಣಗಳೂ, ತಟ್ಟೆ, ಬಟ್ಟಲು, ತಪ್ಪಲೆ ಮುಂತಾದ ಸಂಸಾರದ ಪಾತ್ರೆಗಳೂ, ಕಾಳು ಕಡ್ಡಿ, ಹುಲ್ಲು, ಸೊಪ್ಪು ಮುಂತಾದ ಆಹಾರ ಪದಾರ್ಥಗಳೂ ಅಲ್ಲಿ ಇಲ್ಲಿ ಕಾಲಿಗೆ ಸಿಕ್ಕುವ ಹಾಗೆ ಬಿದ್ದಿದ್ದುವು ಹೆಂಗಸಿಲ್ಲದ ಮನೆ ಹಾಳು. 'ಗೃಹಿಣೀ ಗೃಹಮುಚ್ಯತೇ' ಮನೆಯ ಒಳಗೆ ಮಬ್ಬು ಇದ್ದಂತೆಯೇ ಏಕೋ ಬಸಪ್ಪನ ಮುಖದಲ್ಲಿಯೂ ಮಬ್ಬು ಇದ್ದಿತು. ಆಗ ಅವನು ಯಾರನ್ನಾದರೂ ನಿರೀಕ್ಷಿಸುತ್ತ ಇದ್ದನೋ ಏನೋ. ಸ್ವಲ್ಪಹೊತ್ತಿನೊಳಗೆ ಯೌವನಸ್ಥನೊಬ್ಬನು ಸಿಳ್ಳೆ ಹಾಕುತ್ತ ದಡದಡನೆ ಬಂದನು ಅವನೇ ನಾಗಣ್ಣ! ಬಾಗಿಲು ತೆರೆಯಿತು. ಒಳಗೆ ಬಂದಾಗ ಅವನ ಪ್ರಜ್ಞೆಯು ಸರಿಯಾಗಿದ್ದಂತೆ ತೋರಲಿಲ್ಲ. ಅವನು ಆವೇಶ ಬಂದವನಂತೆ ಆಡುತ್ತಿದ್ದನು. ಅವನನ್ನು ನೋಡುತ್ತಲೇ ಬಸಪ್ಪನ ಮುಖ ಕೆಂಪೇರಿತು. ನಾಗನ ಉರವಣೆಗೆಗೆ ಅಲ್ಲಿ ಮಲಗಿದ್ದ ನಾಯಿಯೂ ಎದ್ದೋಡಬೇಕೆ? ಆಮೇಲೆ ಅವರೀರ್ವರಿಗೂ ಹೀಗೆ ಮಾತು ನಡೆಯಿತು.

ನಾಗಣ್ಣ–ನನ್ನಿಂದೇನಾಗಬೇಕು, ಬಸಪ್ಪನವರೆ? ನೋಡಿ (ಗೇಲಿಮಾಡುತ್ತ) ನೀವು ದೊಡ್ಡವರು. ನೀವು ಹೇಳಿಕಳಿಸಿದ್ದಕ್ಕೆ ನಾನು ಬಂದೆ. ಏನು ಸಮಾಚಾರ?

ಬಸಪ್ಪ—ಏಕೆ ಹೀಗೆ ಕೇಳುತ್ತೀ? ಗೊತ್ತೇ ಇದೆ ನಿನಗೆ. ಸ್ವಲ್ಪ ಜ್ಞಾನ ಇಟ್ಟು ಕೇಳು. (ಕೋಪದಿಂದ) ಇಗೋ! ಇನ್ನು ನಾನು ಅಪ್ಪನಿಗೆ ಮುನಿಯನ ಬಾಡಿಗೆ ಹಣ ಕೊಟ್ಟುಬಿಡಬೇಕು. ನೀನು ಕೊಡದಿದ್ದರೆ ನೀನೇ ತೆಗೆದುಕೊಂಡೆಯೆಂದು ನಾನು ಅಪ್ಪನಿಗೆ ತಿಳಿಸಬೇಕಾಗುತ್ತದೆ.

ಅಪ್ಪ ಮುನಿಯುನ ಮೇಲೆ ದಾವೆ ಹಾಕುವನೆಂದು ವರ್ತಮಾನ. ಇದು ಅಪ್ಪನಿಗೆ ಹೇಗಾದರೂ ಗೊತ್ತಾಗುತ್ತೆ. ಅಪ್ಪ ಮುನಿಯುನ ಬಳಿಗೆ ಆಳು ಕಳಿಸಿದ್ದ. ಈಗ ಅಪ್ಪನ ಹತ್ತಿರ ಹಣವಿಲ್ಲ. ಅದು ನಿನಗೂ ಗೊತ್ತು. ಅವನು ರೇಗುವುದು ನಿಜ. ಅಪ್ಪ ಹೇಳಿದ್ದು ನೆನಪಿದೆಯೋ? ಆ ಹಣ ನೀನು ಕರ್ಚು ಮಾಡಿರುವುದು ತಿಳಿದರೆ ಕಷ್ಟ. ಹೇಗಾದರೂ ತಡ ಮಾಡದೆ ಆ ಹಣ ನನಗೆ ಕೊಟ್ಟುಬಿಡು. ಗೊತ್ತಾಯಿತೋ?

ನಾಗಣ್ಣ—ಸರಿಸರಿ. ನೀನೇ ಹೇಗಾದರೂ ಕೊಟ್ಟುಬಿಡು. (ಹತ್ತಿರಕ್ಕೆ ಬಂದು ಹುಡುಗಾಟದಿಂದ) ಆಗ ನನಗೆ ಕಷ್ಟ ತಪ್ಪುತ್ತೆ. ಅಂದು ನೀನೇ ನನಗೆ ಕೊಟ್ಟೆ ಇಂದೂ ನೀನೇ ಅಪ್ಪನಿಗೆ ಕೊಟ್ಟುಬಿಡು, ನಿನಗೆ ನನ್ನ ಮೇಲೆ ಬಹಳ ಪ್ರೀತಿ. ಅಲ್ಲವೇ?

ಬಸಪ್ಪ—(ಹಲ್ಲು ಕಡಿಯುತ್ತ ಕೈಯೆತ್ತಿ) ನನ್ನ ಹತ್ತಿರ ಬರಬೇಡ. ಬಂದರೆ ತಲೆ ಹೋಳು ಮಾಡಿಬಿಡುತ್ತೇನೆ. ಏನೋ ಹೀಗೆ ಹೇಳುತ್ತೀಯೆ?

ನಾಗಣ್ಣ—(ದೂರಹೋಗಿ) ನಾನೆಷ್ಟು ಒಳ್ಳೆಯವನು! ಈಗ ನಾನು ಬಾಯಿ ಬಿಟ್ಟರೆ ನೀನು ಒಂದು ಕಾಸೂ ಇಲ್ಲದೆ ಮನೆ ಬಿಟ್ಟು ಹೋಗಬೇಕಾ ದೀತು. ಮಾಯಿ ಸಮಾಚಾರ ತಿಳಿದರೆ ಸಾಕು. ಅಪ್ಪ ನಿನ್ನನ್ನು ಓಡಿ ಸುವುದು ನಿಜ. ಆಮೇಲೆ ನಿನ್ನ ಪಾಲೂ ನನಗೇ ಸಿಕ್ಕುತ್ತೆ. ಆದರೆ ನಾನು ಹಾಗೆ ಮಾಡುವನಲ್ಲ. ನಾನು ಎಂದರೆ ನೀನು ಏನಾದರೂ ಮಾಡುವೆ! ನೀನೇ ನನಗಾಗಿ ಆ ನೂರು ರೂಪಾಯಿ ಒದಗಿಸಿ ಕೊಟ್ಟುಬಿಡು.

ಬಸಪ್ಪ—ಈಗ ನನಗೆಲ್ಲಿ ಹಣ ಸಿಗುತ್ತೊ? ನನ್ನ ಪಾಲು ನಿನಗೇ! ಅದು ಸುಳ್ಳು. ನಿಜ ತಿಳಿದರೆ ಅಪ್ಪ ನಿನ್ನನ್ನೂ ಓಡಿಸುತ್ತಾನೆ. ನೀನು ಚಾಡಿ ಮೊದಲು ಮಾಡಿದರೆ ನಾನೂ ಚಾಡಿ ಮೊದಲು ಮಾಡುತ್ತೇನೆ. ನಿನ್ನ ಪಾಡು ನೋಡಿಕೊ.

ನಾಗಣ್ಣ—(ಅತ್ತಿತ್ತ ನೋಡಿ) ಹೋಗಲಿ, ಬಿಡು. ಇಬ್ಬರೂ ಜಗಳ ಆಡಿ ಕೊಂಡೇ ಇರೋಣ. ನಿನಗೆ ನನ್ನನ್ನು ಬಿಡಲು ಆದೀತೆ? ಏನಾದರೂ ಮಾಡಿ ನೀನೇ ಆ ಹಣ ಕೊಡು ಅಪ್ಪನಿಗೆ.

ನಾಗಣ್ಣನು ಹೊರಟು ಹೋಗುವುದರಲ್ಲಿದ್ದನು. ಬಸಪ್ಪನು ಹಿಂದೆ ಹೋಗಿ ಅವನನ್ನು ನಿಲ್ಲಿಸಿದನು. ಮತ್ತೆ ಸಂಭಾಷಣೆ ಮೊದಲಾಯಿತು

ಬಸಪ್ಪ—ನಾಗ, ನನ್ನ ಮಾತು ಕೇಳು. ಈಗ ನನ್ನಲ್ಲಿ ಹಣ ಇಲ್ಲ. ನನಗೆ ಸಿಕ್ಕುವುದೂ ಅಸಾಧ್ಯ.

ನಾಗಣ್ಣ—ವೆಂಕಟರಮಣಪ್ಪನ ಹತ್ತಿರ ಸಾಲ ತೆಗೆದುಕೊ.

ಬಸಪ್ಪ—ಸಾಧ್ಯವಿಲ್ಲ ಈಗಲೇ ಅವನ ಹತ್ತಿರ ಬಹಳ ಸಾಲ ಆಗಿದೆ. ನಾನು ಮತ್ತೆ ಅವನ ಹತ್ತಿರ ಕೇಳುವುದಿಲ್ಲ.

ನಾಗಣ್ಣ—ಹಾಗಾದರೆ ನಿನ್ನ ಹಸು ಮಾರಿಬಿಡು

ಬಸಪ್ಪ—ಆಗಬಹುದು. ಸರಿ. ಆದರೆ ಈ ವಾರವೇ ಹಣ ಬೇಕಲ್ಲ!

ನಾಗಣ್ಣ—ಅದೇನುಕಷ್ಟ. ಸಂತೆಗೆ ಹೋದರಾಯಿತು. ಅಲ್ಲಿ ಗಿರಾಕಿ ಸಿಕ್ಕುತ್ತೆ.

ಬಸಪ್ಪ—ಸಂತೆ ದಿನ ನನಗೆ ಬಿಡುವಿಲ್ಲ.

ನಾಗಣ್ಣ—ಓಹೋ! (ತಲೆ ಅಲ್ಲಾಡಿಸುತ್ತ) ಗೊತ್ತಾಯಿತು. ನೀನು ಆ ದಿನ ಚೆನ್ನಮ್ಮನು ಇರುವ ಕಡೆಗೆ ಹೋಗಬೇಕು! ಕಣ್ಣು ತುಂಬಾ ಅವಳನ್ನು ನೋಡಿ, ಅವಳ ಮನೆಯವರಿಗೆ ಇನ್ನುಮೇಲೆ ಸರಿಯಾಗಿರುತ್ತೇನೆಂದು ಹೇಳುವುದಕ್ಕೆ ಅಲ್ಲವೆ? ನಾನೂ ಬರಲೆ?

ಬಸಪ್ಪ—ಮುಚ್ಚೋಬಾಯಿ. ಚೆನ್ನಮ್ಮನ ಸುದ್ದಿ ನಿನಗೇಕೆ? (ಸಿಟ್ಟಿನಿಂದ) ಆ ಮಾತು ಎತ್ತಿದರೆ ನಿನ್ನ ತಲೆ ಒಡೆದುಹಾಕೇನು.

ನಾಗಣ್ಣ—ಏಕೆ ಬಸಪ್ಪನವರೆ? (ಹತ್ತಿರ ಬಿದ್ದಿದ್ದ ತನ್ನ ಚಾಟಿಕೋಲು ಎತ್ತಿಕೊಂಡು) ಇದೇ ಒಳ್ಳೆ ಸಮಯ. ಮಾಯಿ ಬರದಹಾಗೆ ಮಾಡು. ಚೆನ್ನಮ್ಮನ ಮನೆಗೂ ಹೋಗು. ಮಾಯಿ ವಿಷಯ ಚನ್ನಮ್ಮನಿಗೂ ಅವಳ ಮನೆಯವರಿಗೂ ತಿಳಿಯದಿದ್ದರೆ ಸರಿ. ನಾನೇನೋ ಯಾರಿಗೂ ಹೇಳುವುದಿಲ್ಲ. ನೀನು ಉಪಕಾರ ಮಾಡಿದರೆ ನಾನು ಉಪಕಾರ ಮಾಡಲೆ?

ಬಸಪ್ಪ—(ಬೆಪ್ಪು ಮೋರೆ ಹಾಕಿಕೊಂಡು) ನನಗೆ ಸಾಕಾಗಿಹೋಗಿದೆ! ಎಷ್ಟು ಸಹಿಸಲಿ? ಏನಾಗುವುದೋ ಕಾಣೆ. ನಾನೇ ಅಪ್ಪನಿಗೆ ಹೇಳಿ ಬಿಟ್ಟರೊ? ನಿನ್ನ ಹೆದರಿಕೆ ತಪ್ಪುತ್ತೆ. ಅವಳೂ ಪೀಡಿಸುತ್ತಿದ್ದಾಳೆ. ನೀನೇನು ಮಾಡಿದರೂ ನಾನು ಸುಮ್ಮನಿರುವೆ ಎಂದು ತಿಳಿಯಬೇಡ.

ಎಲ್ಲ ನಿನಗೆ ಕೊಟ್ಟುಬಿಟ್ಟರೆ ಅವಳಿಗೆ ಏನು ಕೊಡುವುದು ? ನಾನೇ ಅಪ್ಪನಿಗೆ ನಿಜ ಹೇಳುತ್ತೇನೆ  ನೀನು ಹಾಳಾಗು.

ಆಗ ನಾಗಣ್ಣನಿಗೆ 'ನಾನು ಅಷ್ಟು ದೂರ ಹೋಗಬಾರದಾಗಿತ್ತು. ನಿರಾಶೆಯಿಂದ ಬಸಪ್ಪನಿಗೂ ಧೈರ್ಯ ಬರಬಹುದು' ಎಂದು ತೋರಿತು. ಆವರೂ ಏನೂ ತಿಳಿಯದವನಂತೆ ಚಾಪೆ ಮೇಲೆ ಗೋಡೆಗೆ ಒರಗಿಕೊಂಡು ಸಿಳ್ಳೆ ಹಾಕುತ್ತ ಕುಳಿತನು. ಬಸಪ್ಪನು ಕೂಡಲೇ ಏನೂ ಹೇಳಲಿಲ್ಲ.

ಬಸಪ್ಪನಿಗೆ ತಡೆಯಲಾರದಷ್ಟು ಚಿಂತೆ. ಹುಬ್ಬು ಗಂಟು ಹಾಕಿಕೊಂಡು ನೆಲ ನೋಡುತ್ತ ನಿಂತನು. ಅವನ ಮೈ ಕಟ್ಟು, ಬಲ, ಗಾತ್ರ—ಯಾವುದೂ ಆಗ ಉಪಯೋಗಕ್ಕೆ ಬರುವಂತಿರಲಿಲ್ಲ. ಅರೆ ಮನಸು, ಅಸಮಾಧಾನ, ಅಧೈರ್ಯ ಇವುಗಳಿಗೆ ಸಿಕ್ಕಿ, ಚಿಂತೆಗೊಳಗಾಗಿ ಅವನು ಯಾವ ನಿಶ್ಚಯಕ್ಕೂ ಬರಲಾರದಿದ್ದನು. ಕೋಪದಲ್ಲಿ ನಾಗಣ್ಣನನ್ನು ತಾನು ಹೆದರಿಸಿದರೂ ಅವನಿಗೆ ಮಾಯಿ ಗುಟ್ಟು ರಟ್ಟಾಗುವ ಭಯ ಇದ್ದೇ ಇದ್ದಿತು. ಈಗ ಆ ಭಯ ಇನ್ನೂ ಹೆಚ್ಚಿತೆನ್ನಬಹುದು  ರಟ್ಟಾಗುವುದರಿಂದ ಉಂಟಾಗುವ ಫಲಿತಾಂಶಗಳಿಗಿಂತ ಸದ್ಯಃ ಸ್ಥಿತಿಯೇ ಮೇಲೆನ್ನಿಸಿತು  ಬಸಪ್ಪನದು ಸಂಕಲ್ಪ ದೌರ್ಬಲ್ಯವುಳ್ಳ ಪ್ರಕೃತಿ. ಅವನಿಗೆ ತನ್ನ ಕರ್ಮದ ಫಲವನ್ನು ಧೈರ್ಯದಿಂದ ಅನುಭವಿಸಲು ಅಂಜಿಕೆ. ಸತ್ಯವಾಗಿರುವುದಕ್ಕೂ, ದುಡಿಯುವುದಕ್ಕೂ, ತಿರಿಯುವುದಕ್ಕೂ ಹಿಂದೆಗೆಯುವ ಮಾನವರ ಬಾಳೇ ಹೀಗೆ. ಅದರಲ್ಲಿಯೂ ಕುಲೀನರೆನಿಸಿಕೊಂಡವರ ಸ್ಥಿತಿಯು ಇನ್ನೂ ಕಷ್ಟ. ಅವರ ಮಕ್ಕಳು ಗಾಳಿಯ ಹೊಡೆತದಿಂದ ಬೇರು ಕಿತ್ತು ಬುಡಸಹಿತ ಬಿದ್ದ ಮರಗಳನ್ನು ಹೋಲುವರು. ಬಸಪ್ಪನು ಕೂಲಿಗೆ ದುಡಿದು ಜೀವನ ಮಾಡಲಿಕ್ಕೂ ಸಿದ್ಧನೇ. ಆದರೆ ಆಗ ಅವನಿಗೆ ಎಲ್ಲಿಚೆನ್ನಮ್ಮನು ತನ್ನನ್ನು ಮದುವೆಯಾಗುವುದು ತಪ್ಪೀತೋ ಎಂಬ ಯೋಚನೆ ಬಹು ದೊಡ್ಡದಾಗಿದ್ದಿತು. ಅವಳೂ ಸಿಕ್ಕದೆ, ಆಸ್ತಿಯೂ ಹೋಗಿ, ಮೇಲೆ ತಲೆಯೆತ್ತುವ ದಾರಿಯನ್ನೂ ನೀಗಿಕೊಂಡು, ಮಾಯಿಯ ಹಾಳು ಸಂಬಂಧ ತೊಲಗದೆ ಕಾಲಹರಣ ಮಾಡುವುದಕ್ಕಿಂತ ದೇಶಾಂತರ ಹೋಗುವುದೇ ಮೇಲೆನ್ನಿಸಿತು. ಬೀಸುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯುಸ್ಸೆನ್ನುವರು. ಚೆನ್ನಮ್ಮನ ಯೋಚನೆ ಹೆಚ್ಚಾದೊಡನೆಯೇ ದುಃಖ

ಮರೆತು, ಹೇಗೋ ತಿಂದು ಕುಡಿದು, ಜೀವನ ತಳ್ಳುವುದು ಲೇಸೆಂದು ಬಸಪ್ಪನು ಪುನಃ ಸಂಭಾಷಣೆಯನ್ನು ಮುಂದುವರಿಸಿದನು.

(ಮೆತ್ತಗೆ ಮಾತನಾಡಿದರೆ ಮಾನಕ್ಕೆ ಕಡಮೆಯೆಂದು ಕೋಪದಿಂದ ಗಟ್ಟಿಯಾಗಿ)

ಬಸಪ್ಪ—ಎಲೋ ನಾಗ! ನೀನು ಹೇಳಿದ್ದು ನಿನಗೆ ಸರಿಯಾಗಿದೆ. ಈಗ ಹಸು ಮಾರುವುದು ಸರಿಯಲ್ಲ. ಆಗಲೇ ನಮ್ಮ ಕೊಟ್ಟಿಗೆ ಬರಿದಾಗುತ್ತ ಬಂದಿದೆ. ಇತರರ ಹಾಸ್ಯದ ಯೋಚನೆ ನಿನಗೆ ಇಲ್ಲವಲ್ಲ! ಯಾರನ್ನಾದರೂ ಕಷ್ಟಕ್ಕೆ ಸಿಕ್ಕಿಸಲು ನೀನು ಏನು ಮಾಡಲಿಕ್ಕೂ ಸಿದ್ಧನಾಗಿದ್ದೀಯೆ.

ನಾಗಣ್ಣ—ಎಷ್ಟು ನಿಜ. (ಗೇಲಿಯಿಂದ) ಚನ್ನಾಗಿ ಹೇಳಿದೆ! ಅಣ್ಣ, ಇಲ್ಲಿ ನೋಡು. ಬೇರೆ ಉಪಾಯ ಇಲ್ಲ. ನಾನೇ ಹಸು ಮಾರಿ ಹಣ ತರುತ್ತೇನೆ. ನಾಳೆ ಸಂತೆಗೆ ನಾನು ಹಸು ತೆಗೆದುಕೊಂಡು ಹೋಗಲೋ?

ಬಸಪ್ಪ—ಏನು? ನೀನು ತೆಗೆದುಕೊಂಡು ಹೋಗುವುದೆ!

ನಾಗಣ್ಣ—(ಸಿಳ್ಳೆ ಹೊಡೆಯುತ್ತ) ಹಾಗಾದರೆ ನಿನ್ನ ಇಷ್ಟ. ಮುನಿಯನ ಹಣ ನೀನು ಕೊಡಬೇಕಾದ್ದು, ನಾನಲ್ಲ. ಆ ದಿನ ನೀನೇ ಮುನಿಯನ ಹಣ ಬಂದಿಲ್ಲವೆಂದು ಅಪ್ಪನಿಗೆ ಹೇಳಿದೆ. ನಾನು ಆ ಗೋಜಿಗೆ ಬಂದವನೇ ಅಲ್ಲ. ಅಪ್ಪನಿಗೆ ಕೊಟ್ಟರೂ ಒಂದೇ ಬಿಟ್ಟರೂ ಒಂದೇ. ನಿನಗೆ ಅನುಕೂಲವಾಗಲೆಂದು ನಾನು ಹಾಗೆ ಹೇಳಿದೆ.

ಬಸಪ್ಪನು ಕೆಲವು ನಿಮಿಷ ಕಾಲ ಸುಮ್ಮನಿದ್ದನು. ನಾಗಣ್ಣನನ್ನು ಚೆನ್ನಾಗಿ ಹೊಡೆದು ಬಜ್ಜಿ ಮಾಡಬೇಕೆನ್ನಿಸಿತು. ಆವನಿಗೆ ಅದಕ್ಕೆ ತಕ್ಕ ದೇಹಶಕ್ತಿ ಇಲ್ಲದೆ ಇರಲಿಲ್ಲ. ಅವನಲ್ಲಿ ಇಲ್ಲದೆ ಇದ್ದುದು ಸಂಕಲ್ಪ ಬಲ. ಪರಿಣಾಮದ ಯೋಚನೆ ಬಂದೊಡನೆಯೇ ಅವನು ಪುಸಲಾಯಿಸಿ ಮತ್ತೆ ಮಾತನಾಡ ತೊಡಗಿದನು.

ಬಸಪ್ಪ—ಹಾಗಾದರೆ ಹಸುವಿಗೆ ಭಯವಿಲ್ಲವೋ? ಧೈರ್ಯವಾಗಿರುತ್ತೇನೆ. ಸರಿಯಾಗಿ ಮಾರಿ, ಎಲ್ಲ ಹಣ ತಂದು ಕೊಡು. ಇಲ್ಲದಿದ್ದರೆ ಸರ್ವನಾಶ ನಿಶ್ಚಯ. ಈಗ ನನಗೆ ಬೇರೆ ಗತಿಯಿಲ್ಲ ಗೊತ್ತಾಯಿತೆ? ಅದನ್ನು ಬಿಟ್ಟರೆ. ನಾನುಹಾಳಾದರೆ ನೀನೂ ಹಾಳಾಗುವೆ. ತಪ್ಪಿದ್ದಲ್ಲ

ನಾಗಣ್ಣ—(ಏಳುತ್ತ)ನೀನು ಮೊದಲು ಸರಿಹೋಗು ನೋಡೋಣ. ನೀನು ದಾರಿಗೆ ಬರುವುದು ನನಗೆ ಗೊತ್ತು. ಈ ವ್ಯಾಪಾರಕ್ಕೆ ನಾನೇ ಸರಿ. ಒಂದು ನೂರಕ್ಕೆ ಕಡಮೆ ಇಲ್ಲದೆ ನಿನಗೆ ಸಿಕ್ಕಿದರೆ ಒಪ್ಪಿಗೆಯಷ್ಟೆ.

ಬಸಪ್ಪ—ನಿನ್ನೆ ಹಾಗೆ ಮಳೆ ಬಂದರೆ ಹೋಗಲು ಸಾಧ್ಯವೆ?

ನಾಗಣ್ಣ—ಮಳೆ ಬರುವುದಿಲ್ಲ ನಾನು ಅದೃಷ್ಟಶಾಲಿ. ನೀನು ಹೋದರೆ ಬರಬಹುದು ನಾನು ಹೋದಾಗಲೆಲ್ಲಾ ಜಯವೇ. ಈಗ ನನ್ನನ್ನು ಬಿಟ್ಟರೆ ನಿನಗೆ ಬೇರೆ ಯಾರೂ ಗತಿ ಇಲ್ಲ

ಬಸಪ್ಪ—ಆಗಲಿ. ಹರಟೆ ಬೇಡ. ನಾಳೆ ಜ್ಞಾನ ನೆಟ್ಟಗಿರಲಿ

ನಾಗಣ್ಣ—ಆ ಚಿಂತೆ ಬಿಡು. ನಾನು ಒಂದು ಹೇಳಿ ಇನ್ನೊಂದು ಮಾಡುವುದಿಲ್ಲ. ಅದರಲ್ಲೇನಿದೆ ಸ್ವಾರಸ್ಯ?

ನಾಗಪ್ಪನು ಥಡಾರೆಂದು ಕದ ಎಳೆದುಕೊಂಡು, ಸಿಳ್ಳೆ ಹಾಕುತ್ತ, ಹೊರಟುಹೋದನು ಅಲ್ಲಿಗೆ ಮತ್ತಾರೂ ಬರಲಿಲ್ಲ. ಬಸಪ್ಪನಿಗೆ ಪುನಃ ಚಿಂತೆ ಕವಿಯಿತು.

ಆಗ ಬಸಪ್ಪನಿಗೆ ಇಪ್ಪತ್ತೈದನೆಯ ವರ್ಷ. ಸ್ವಭಾವತಃ ಅವನು ಕೆಟ್ಟವನಲ್ಲ. ಹೇಗೋ ಸಂಗ ದೋಷದಿಂದ ಅವನಿಗೆ ಮಗ್ಗಲೂರಿನಲ್ಲಿ ತಮ್ಮ ಮನೆಯವರಿಗಾರಿಗೂ ತಿಳಿಯದಂತೆ ಮಾಯಿಯೆಂಬ ಬಡ ಹುಡುಗಿಯೊಬ್ಬಳೊಂದಿಗೆ ಸಂಬಂಧ ಉಂಟಾಗಿದ್ದಿತು. ಆ ಅವಿವೇಕಕ್ಕೆ ಕೊಂಚಮಟ್ಟಿಗೆ ನಾಗಣ್ಣನೂ ಭಾಗಿ. ಈ ರಹಸ್ಯ ಗೊತ್ತಿದ್ದುದರಿಂದಲೇ ಅವನು ಬಸಪ್ಪನನ್ನು ಹೆದರಿಸುತ್ತಿದ್ದುದು ತಮ್ಮನ ಚೇಷ್ಟೆಯಿಂದ ಬಸಪ್ಪನ ದುಃಖವು ಹೆಚ್ಚುತ್ತಿದ್ದಿತು. ಸ್ವಯಂಕೃತಾಪರಾಧದ ಫಲವಾಗಿ ಅವನ ಮನಸ್ಸಿನ ಬೇಗುದಿಯು ಅಷ್ಟಿಷ್ಟಲ್ಲ. ಅವನಿಗೆ ಈಗ ಚೆನ್ನಮ್ಮನನ್ನು ಮದುವೆಯಾಗಲು ಅತ್ಯುತ್ಕಟವಾದ ಆಸೆ. ಅವಳ ಮನೆತನ ಒಳ್ಳೆಯದು. ಅವಳ ಸಹವಾಸದಿಂದ ತನ್ನ ದುರ್ಗುಣಗಳು ಹೋಗುವುವು. ಅವಳು ಬಂದರೆ ತನ್ನ ಮನೆವಾರ್ತೆಯೂ ನೇರ್ಪಡುತ್ತದೆ ಎಂಬ ಅಂಶಗಳು ಅವನಿಗೆ ಮುಂದಟ್ಟಾಗಿದ್ದುವು. ಚಿಕ್ಕಂದಿನಲ್ಲಿ ಕೇಳುವವರಿದ್ದಿದ್ದರೆ ಅವನು ಹಾಗಾಗುತ್ತಿರಲಿಲ್ಲ. ಆಗ ಬಸಪ್ಪನಮನೆಯಲ್ಲಿ ಇಲ್ಲದಿದ್ದುದು ಪ್ರೇಮ. ಅವನ ಉದ್ಧಾರಕ್ಕೆ ಬೇಕಾಗಿದ್ದುದೂ ಪ್ರೇಮ.

ಮನುಷ್ಯನ ಸರ್ವತೋಮುಖವಾದ ಅಭಿವೃದ್ಧಿಗೆ ಎಲ್ಲಕ್ಕಿಂತ ಹೆಚ್ಚಾಗಿ ಪ್ರೇಮ ಇರಲೇ ಬೇಕು.

ಚೆನ್ನಮ್ಮನನ್ನು ಮದುವೆಯಾಗಲು ಈಗ ಅವನಿಗೆ ಒಂದೇ ಒಂದು ಅಡ್ಡಿ. ಅದೇನೆಂದರೆ ಮಾಯಿಯ ಸಂಬಂಧ. ಎಲ್ಲಿ ತನ್ನ ಗುಟ್ಟು ಬಹಿರಂಗ ವಾಗುವುದೋ ಎಂದು ಅವನು ದಿನ ಕಳೆಯುವನು ತಂದೆಗೆ ಕೋಪ ಉಂಟಾಗಿ, ಆಸ್ತಿಯೂ ಸಿಕ್ಕದೆ, ಚೆನ್ನಮ್ಮನೂ ಸಿಕ್ಕದೆ, ದುಃಖವಾದೀತೆಂಬ ಭಯ. ಕಾಲಕ್ರಮದಲ್ಲಿ ಹೇಗೋ ಮಾಯಿಯ ಸಂಬಂಧ ತಪ್ಪಿ, ಎಲ್ಲವೂ ಸರಿಹೋಗಿ, ಚೆನ್ನಮ್ಮನು ತನ್ನ ಮಡದಿಯಾಗಬಹುದೆಂಬ ಆಸೆ. ಆ ಆಸೆ ಬಲವಾದಾಗ ಅವನು ಉತ್ಸಾಹದಿಂದ ಇರುತ್ತಿದ್ದನು. ಈ ದಿನ ಅವನು ನಾಗಣ್ಣನಿಗೆ ಹಸು ಒಪ್ಪಿಸಲು ಈ ಉತ್ಸಾಹವೇ ಒಂದು ಕಾರಣ. ಅದಕ್ಕೆ ಇನ್ನೊಂದು ಕಾರಣವೂ ಇದ್ದಿತು. ಮಾಯಿ ಇದ್ದ ಊರು ಸಂತೆಯಾಗುವ ಊರಿಗೆ ಬಹಳ ಹತ್ತಿರ ಅವಳ ಊರ ಕಡೆ ಹೋಗುವುದಕ್ಕೇ ಅವನಿಗೆ ಸಹಜವಾಗಿ ಹೆದರಿಕೆ. ಅವನಿಗೆ ಈಚೆಗೆ ಅವಳ ಹೆಸರೆತ್ತಿದರೇ ಒಂದು ಬಗೆಯ ಕ್ರೋಧಾವೇಶ ಬರುತ್ತ ಇದ್ದಿತು ಬಸಪ್ಪ ಸರಸಿ, ದಯಾಳು, ಪ್ರೀತಿಯುಳ್ಳವನು. ಆದರೆ ಅವನು ದಿನದಿನಕ್ಕೆ ಈ ಕಾರಣದಿಂದ ಕಠಿಣ ಹೃದಯ ನಾಗುತ್ತಿದ್ದನು.

ಬಸಪ್ಪನಿಗೆ ಹೊತ್ತು ಕಳೆಯಲು ಆಗಲಿಲ್ಲ. ಚಾವಡಿಗೆ ಹೋಗಿ, ಅಲ್ಲಿ ಟಗರಿನ ಕಾಳಗದ ವಿಷಯವಾಗಿ ಮಾತನಾಡಿಕೊಂಡಿರುವುದು ಒಳ್ಳೆಯದಾಗಿ ತೋರಿತು. ಆದರೆ ಅದೂ ಹಿತವಾಗಿ ಬೇಕಾಗಲಿಲ್ಲ. ಮನೆಯ ನಾಯಿಯು ಹತ್ತಿರಕ್ಕೆ ಬಂದು ಹೊರಳಾಡಿತು. ಅವನು ಅದನ್ನೂ ಮನಸ್ಸಿಗೆ ತಂದು ಕೊಳ್ಳಲಿಲ್ಲ. ಮುದ್ದಾಡಬೇಕೆಂದು ನಾಯಿಯು ಅವನ ಮೇಲೆ ಬಿದ್ದಿತು. ಆಗ ಬಸಪ್ಪನು ಎದ್ದು, ಬೇಸರದಿಂದ ಅದನ್ನು ಒದೆದು, ಎಲ್ಲಿಗೋ ಹೊರಟು ಹೋದನು

೫

# ಕಳವು

ಮಾರನೆಯ ದಿನ ಮುಂಜಾನೆ ನಾಗಣ್ಣನು ಹಸುವಿನೊಡನೆ ಸಂತೆ
ಹೊರಟನು. ಊರಾಚೆ ಬಯಲು ಸಿಕ್ಕಿತು.. ಅಲ್ಲಿಯೇ ದೊಡ್ಡ ಕುಳ
ಆದರ ಹತ್ತಿರದ ಕಲ್ಲು ಮಂಟಪದಲ್ಲಿಯೇ ದಾಸನು ವಾಸವಾಗಿದ್ದುದು.
ಸ್ಥಳದ ಸುತ್ತಲೂ ಕೆಸರು, ನೀರಿನ ಹಳ್ಳಗಳು, ಹಳ್ಳಗಳಲ್ಲಿ ಕೆಂಪು ನೀರು
ಹೋಗುತ್ತಿದ್ದ ನಾಗಪ್ಪನಿಗೆ ಮೊದಲು ಕಾಣಿಸಿದುದು ಇವೇ. ಆಮೇಲೆ ಅ
ನಿಗೆ ದಾಸನ ಮಗ್ಗದ ಸದ್ದು ಕೇಳಿಸಿತು. ದಾಸನ ಬಳಿ ಹಣವಿದೆಯೆಂದ
ಜನರು ಹೇಳುತ್ತಿದ್ದುದು ನೆನಪಿಗೆ ಬಂದಿತು ಅವನಿಗೆ ಆಗ. ಆದೇಕೆ ನಾ
ಣ್ಣನು ಅಣ್ಣನಿಗೆ ಬಡ್ಡಿಗಾಗಿ ಹಣವನ್ನು ದಾಸನಿಂದ ತೆಗೆದುಕೊಳ್ಳಲು ಹೇ
ಲಿಲ್ಲ? ದಾಸನಿಂದ ಬಸಪ್ಪನಿಗೆ ಸಾಲ ಕೊಡಿಸುವ ಯೋಚನೆ ಹೊಳೆ
ಕೂಡಲೇ ನಾಗಪ್ಪನಿಗೆ ಆ ಯೋಚನೆ ಬಹಳ ಸುಲಭವಾಗಿಯೂ ಒಳ್ಳೆಯ
ದಾಗಿಯೂ ಕಂಡು ಬಂದಿತು. ದಾಸನ ಬಳಿ ಹೆಚ್ಚಾಗಿ ಹಣವಿದ್ದುದರಿಂ
ಅಣ್ಣನ ಕಚರ್ಾ ಕಳೆದು ತನಗೂ ಲಾಭ ಸಿಕ್ಕೀತೆಂದು ಅವನು ಆಲೋಚಿ
ತೊಡಗಿದನು. ಹಸುವು ಉಳಿಯುವುದೆಂಬ ಸಂತೋಷದಿಂದ ಇದಕ್ಕೆ ಅಣ್ಣ
ಒಪ್ಪಿಗೆ ಸಿಕ್ಕುವುದು ಖಂಡಿತವೆಂದೂ ತೋರಿತು. ಆದರೆ ಒಂದೆರಡು ನಿಮಿ
ಗಳೊಳಗಾಗಿ ಮನಸ್ಸು ಬದಲಾಯಿಸಿ ಅವನು ಮುಂದೆ ಹೊರಟನು. ಇದಕ್ಕೆ
ಎರಡು ಮೂರು ಕಾರಣಗಳು—ಒಂದು ಕಾರಣ ಬಸಪ್ಪನಿಗೆ ಸಂತೋ
ವಾಗುವುದು ಅವನಿಗೆ ಇಷ್ಟವಿರಲಿಲ್ಲ. ಇನ್ನೊಂದು ಕಾರಣ ಸಂತೆಯ
ತಾನೇ ಹಸುವನ್ನು ಮಾರಬೇಕೆಂಬ ಪ್ರತಿಷ್ಠೆಯ ಆಸೆ ಬಹಳ ಬಲವಾಯಿತು
ಮತ್ತೊಂದು ಕಾರಣ ಸಮಯ ಬಂದರೆ ಹೊಸದಾಗಿ ಸುಳ್ಳು ಹೇಳಿ, ಹಸ
ವನ್ನೂ ಮಾರಿಬಿಟ್ಟು, ಆಮೇಲೆ ಹೇಗಾದರೂ ದಾಸನ ಹತ್ತಿರ ಸಾಲವನ್ನೂ
ಕೊಡಿಸಿ, ಅಣ್ಣನಿಗೆ ಹಲ್ಲು ಕಿರಿಯುವಂತೆ ಮಾಡಬೇಕೆಂಬ ದುರುದ್ದೇಶ.

ತಾನು ಅದೃಷ್ಟಶಾಲಿಯೆಂದು ನಾಗಣ್ಣನು ಜಂಬ ಮಾಡುತ್ತಿದ್ದನಷ್ಟೆ. ಹಸುವಿನ ಮಾರಾಟಕ್ಕಾಗಿ ಅವನು ಚಿಕ್ಕಣ್ಣನನ್ನೂ ಬೊಮ್ಮಯ್ಯನನ್ನೂ ನೋಡಬೇಕಾಗಿದ್ದಿತು. ಅವರೇ ಅಷ್ಟರೊಳಗೆ ದಾರಿಯಲ್ಲಿ ಸಿಕ್ಕಿದರು. ಮೊದಲು ಸಿಕ್ಕಿದವನು ಚಿಕ್ಕಣ್ಣ.

ಚಿಕ್ಕಣ್ಣ—ಏನೋ ನಾಗಣ್ಣ, ಸೌಖ್ಯವಾ? (ಹಸುವನ್ನು ನೋಡಿ) ಇದೇನು ನಿಮ್ಮ ಅಣ್ಣನ ಹಸು! ಎಲ್ಲಿಗೆ ಹೊರಟೆ?

ನಾಗಣ್ಣ—ಹೌದೊ! ಇದನ್ನು ನಾನು ಬಸಪ್ಪನಿಂದ ಬದಲಾಯಿಸಿಕೊಂಡಿದೇನೆ. ಇದು ನನ್ನದು ಈಗ.

ನಾಗಣ್ಣನಿಗೆ ಸುಳ್ಳು ಹೇಳುವುದೆಂದರೆ ನೀರು ಕುಡಿದ ಹಾಗೆ. ಸುಳ್ಳಿನಿಂದ ಉಪಯೋಗವಾಗಲಿ ಆಗದಿರಲಿ, ಕೇಳಿದವರು ನಂಬಲಿ ನಂಬದಿರಲಿ ಸುಳ್ಳು ಹೇಳುವುದು ಅವನ ಹುಟ್ಟುಗುಣ.

ಚಿಕ್ಕಣ್ಣ—ಏನು! ನಿನ್ನ ಮುದಿ ಎತ್ತಿಗೆ ಇದನ್ನು ಬದಲು ಕೊಟ್ಟುಬಿಟ್ಟನೆ?

ಇದನ್ನು ಕೇಳಿದಾಗ ನಾಗಣ್ಣನು ಮತ್ತೆ ಕೆಲವು ಸುಳ್ಳುಗಳನ್ನು ಹೇಳುವನೆಂದು ಚಿಕ್ಕಣ್ಣನಿಗೆ ಚೆನ್ನಾಗಿ ಗೊತ್ತಿದ್ದಿತು.

ನಾಗಣ್ಣ—(ಸಿಳ್ಳೆ ಹಾಕುತ್ತ ಹುಬ್ಬೆಗರಿಸಿಕೊಂಡು) ಹೌದು ನನಗೂ ಅವನಿಗೂ ಸ್ವಲ್ಪ ಲೆಕ್ಕಾಚಾರವಿತ್ತು. ಇದನ್ನು ಕೊಡುತ್ತಲೇ ಅದು ಸರಿಹೋಯಿತು. ಈಗ ಇದನ್ನು ಇನ್ನೂರ ಐವತ್ತಕ್ಕೆ ಕೇಳುತ್ತಿದಾರೆ. ನನಗೇ ಮಾರುವುದಕ್ಕೆ ಇಷ್ಟವಿಲ್ಲ

ಚಿಕ್ಕಣ್ಣನಿಗೆ ಅವನ ಉದ್ದೇಶ ತಿಳಿಯಿತು. ಮನುಷ್ಯನಿಗೆ ಎಷ್ಟೋ ವ್ಯವಹಾರಗಳು. ಅವುಗಳಲ್ಲಿ ಹಸುವಿನ ವ್ಯಾಪಾರವೂ ಒಂದು. ಸುಳ್ಳಿಲ್ಲದೆ ವ್ಯಾಪಾರ ನಡೆಯುವುದೆ? ಇದು ನಾಗಣ್ಣನ ನೀತಿ.

ಚಿಕ್ಕಣ್ಣ—ಸರಿಸರಿ. ಗೊತ್ತಾಯಿತು. ಹಾಗೆ ಹೇಳಿದರೆ ಏನು ಉಪಯೋಗ? ಈ ಹಸುವಿಗೆ ಈಗ ನೂರು ಕೊಟ್ಟರೆ ಹೆಚ್ಚು.

ಆ ಸಮಯಕ್ಕೆ ಅಲ್ಲಿಗೆ ಬೊಮ್ಮಯ್ಯನೂ ಬಂದನು. ಅವರೆಲ್ಲರಿಗೂ ಬಹಳ ಹೊತ್ತು ಮಾತು ನಡೆಯಿತು. ಕಡೆ ವ್ಯಾಪಾರ ಒಂದು ನೂರ ಐವತ್ತು ರೂಪಾಯಿ. ಆಗಲೇ ಚಿಕ್ಕಣ್ಣನು ಅದನ್ನು ಅಷ್ಟಕ್ಕೆ ಕೊಂಡನು. ನಾಗಪ್ಪನು ಖುದ್ದಾಗಿ ಅದನ್ನು ಚಿಕ್ಕಣ್ಣನ ಊರಿಗೆ ಹೊಡೆದುಕೊಂಡು ಹೋಗಿ, ಅವನ

ಮನೆಯಲ್ಲಿ ಹಣ ತೆಗೆದುಕೊಂಡು, ಅಲ್ಲಿ ಹಸುವನ್ನು ಬಿಟ್ಟು ಬರಬೇಕೆಂದು ಒಪ್ಪಂದವಾಯಿತು. ಅದೇ ಪ್ರಕಾರ ನಾಗಣ್ಣ ಹಸುವನ್ನು ನೇರವಾಗಿ ಹೊಡೆದುಕೊಂಡು ಅವರೊಡನೆಯೇ ಹೋಗಿದ್ದರೆ ಚೆನ್ನಾಗಿದ್ದಿತು. ಆದರೆ ದುರ್ದೈವವು ಹಾಗೆ ಮಾಡಗೊಡಿಸಲಿಲ್ಲ. ನಾಗಣ್ಣನೂ ಆವನ ಜತೆಯವರೂ ಏನೋ ಹರಟೆ ಹೊಡೆದುಕೊಂಡು ಹೋಗುತಿದ್ದಾಗ ಅವರಲ್ಲಿ ಯಾರು ಮುಂಚೆ ಊರು ಸೇರಬಲ್ಲರೆಂಬ ಹಟ ಹುಟ್ಟಿತು. ಗೆದ್ದವನಿಗೆ ಸೋತವ ರಿಬ್ಬರೂ ಐವತ್ತು ಐವತ್ತು ರೂಪಾಯಿ ತೆರಬೇಕೆಂದು ಜೂಜು ಕಟ್ಟಿಕೊಂಡು ಅವರೆಲ್ಲರೂ ಹೊರಟರು. ನಾಗಣ್ಣನಿಗೆ ಮುಂದೆ ಏನಾದರೂ ಸರಿಯೆ! ಈಗ ಅವನಿಗೆ ಹುಡುಗಾಟ ಮತ್ತು ಹಣ ಸಿಕ್ಕಿದರೆ ಸಾಕು ಅವರಲ್ಲೆಲ್ಲ ನಾಗಣ್ಣನದೇ ದೊಡ್ಡ ನಡಿಗೆ. ಮೊದಲೇ ಅವನಿಗೆ ತಾನು ಅದೃಷ್ಟಶಾಲಿ ಎಂಬ ಅಹಂಕಾರ. ಈಗ ಜತೆಗೆ ಸುಲಭವಾಗಿ ವೆಚ್ಚಕ್ಕೆ ಹಣ ಸಿಕ್ಕುವುದೆಂಬ ದುರಾಶೆಯೂ ಸೇರಿತು. ಪಂದ್ಯ ಕಟ್ಟಿ ಎಲ್ಲರೂ ಹೊರಟರು. ನಾಗಣ್ಣನೂ ಹೊರಟನು. ಸುಮಾರು ಒಂದೂವರೆ ಎರಡು ಮೈಲಿ ದೂರ ಅವರಿಬ್ಬರೂ ಹತ್ತಿರದಲ್ಲಿಯೇ ನಡೆದರು, ಮಧ್ಯದಲ್ಲಿ ಒಂದು ಸೀಳು ದಾರಿ ಸಿಕ್ಕಿತು. ಆ ದಾರಿಯನ್ನು ಹಿಡಿದರೆ ತಾನು ಮುಂಚೆ ಊರು ಸೇರುವೆನೆಂದು ನಾಗಣ್ಣನು ಆ ಸೀಳು ದಾರಿ ಹಿಡಿದನು. ಆದರೆ ಸಾಧಾರಣವಾಗಿ ಆ ದಾರಿಯಲ್ಲಿ ಯಾರೂ ಹೆಚ್ಚಾಗಿ ಹೋಗುತ್ತಿರಲಿಲ್ಲ. ಅಲ್ಲಿ ಕಾಡು ಮೃಗಗಳ ಭಯ ಬಹಳ ಹೆಚ್ಚು

ಆಗ ಹೊತ್ತು ಮುಳುಗುವ ಸಮಯ. ಎಲ್ಲರಿಗಿಂತ ಮುಂಚೆ ಊರು ಮುಟ್ಟುವ ಆತುರದಲ್ಲಿ ಅತ್ತಿತ್ತ ನೋಡದೆ ನಾಗಣ್ಣನು ಕೊಂಚ ದೂರ ಓಡಿದನು ಅವನ ಹಿಂದೆ ಹಸು ಬರುತ್ತಿದ್ದಿತು. ಮುಂದೆ ಮುಂದೆ ಹೋಗುತ್ತ ಅವನು ಹಿಂದೆ ಬರುತ್ತಿದ್ದ ಹಸುವನ್ನು ಆಗಾಗ ನೋಡುತ್ತಿದ್ದನು. ಸೀಳು ದಾರಿ ಮಧ್ಯೆ ಒಂದು ಬಾರಿ ನೋಡಿದಾಗ ಹಸು ಕಾಣಿಸಲಿಲ್ಲ. ಹಾಗೆಯೇ ನೋಡುತ್ತ ಅವನು ಸ್ವಲ್ಪ ದೂರ ನಡೆದನು. ಹಸು ಬರಲಿಲ್ಲ. ಸ್ವಲ್ಪ ಹೊತ್ತು ನಿಂತು ಕಾದನು. ಹಸು ಕಾಣಿಸಲಿಲ್ಲ. ಗಾಬರಿಯಾಯಿತು ಆಮೇಲೆ ಅದನ್ನು ಹುಡುಕುತ್ತ ಹಿಂದಕ್ಕೆ ಒಬ್ಬನೇ ತಿರುಗಿದನು. ಅಷ್ಟು ಹೊತ್ತಿಗೆ ಕತ್ತಲಾಯಿತು. ಸುತ್ತಮುತ್ತ ಚೆನ್ನಾಗಿ ಕಾಣುತ್ತಿರಲಿಲ್ಲ. ಸ್ವಲ್ಪ ದೂರ ನಡೆದು, ಅಲ್ಲಲ್ಲಿ ನೋಡುತ್ತ, ಕಿವಿಗೊಟ್ಟು ಆಲೈಸುತ್ತಿರಲು ಸಮಾ

ಪದ ಒಂದು ಪೊದೆಯಲ್ಲಿ ಯಾವುದೋ ಪ್ರಾಣಿ ಇದ್ದಂತೆ ತೋರಿತು. ನಿಶ್ಶಬ್ದ
ವಾಗಿ ಅವನು ಹತ್ತಿರ ಹೋಗಿ ಇಣಿಕಿ ನೋಡಿದನು. ಪೊದೆಯೊಳಗೆ ಒಂದು
ಚಿರತೆ. ಅದು ಸತ್ತು ಬಿದ್ದಿದ್ದ ಒಂದು ಎತ್ತನ್ನೋ ಹಸುವನ್ನೋ ಬಗೆದು
ತಿನ್ನುತ್ತಿದ್ದಿತು. ಇದನ್ನು ಕಂಡ ಒಡನೆಯೇ ಅವನು ಪಲಾಯನ ಸೂತ್ರ
ಹೇಳತೊಡಗಿ ತನ್ನ ಊರ ಕಡೆಗೆ ತಿರುಗಿದನು. ಅವನು ಎಷ್ಟು ನೋಡಿ
ದರೂ ಹಸುವು ಸಿಗಲೇ ಇಲ್ಲ. ರಾತ್ರಿ, ಕತ್ತಲೆ, ಕಾರ್ಮುಗಿಲು, ಒಬ್ಬೊಂಟಿಗ,
ಅಡವಿಯ ಮಧ್ಯಭಾಗ! ಆಗ ಅವನಿಗೂ ಕಳವಳ ಹುಟ್ಟಿತು. ಜೀವಸಹಿತ
ಉಳಿದು ಬಂದರೆ ಸಾಕೆಂದು ಅತ್ಯಂತ ತ್ವರೆಯಿಂದ ಓಡಿ ಪುನಃ ದೊಡ್ಡ
ದಾರಿಗೆ ಬಿದ್ದನು. ಜತೆಯವರು ಮುಂದೆ ಹೋಗಿಬಿಟ್ಟಿದ್ದರು. ಬಂದ ದಾರಿ
ಯಲ್ಲಿಯೇ ಹಿಂದಿರುಗಿ ತನ್ನ ಊರಲ್ಲಿ ತನ್ನ ಮನೆಗೇ ಸೇರಬೇಕೆಂದು ಅವನು
ಒಂದೇ ಸಮ ಓಡ ತೊಡಗಿದನು ಅವನ ಸ್ಥಿತಿಯಲ್ಲಿ ಮತ್ತಾರಾದರೂ
ಇದ್ದಿದ್ದರೆ ಸಜ್ಜನ ಭಾವದಿಂದ ಭಗವಂತನನ್ನು ನೆನೆಯುತ್ತಿದ್ದರು. ಅವನಿಗೆ
ದೇವರ ಸ್ಮರಣೆಯೇ ಬರಲಿಲ್ಲ. ಅಲೆ ದಾಟಿಕೊಂಡು ಪುನಃ ಊರ ಮುಂದಣ
ಹೆದ್ದಾರಿ ಸೇರಿ ಆಪತ್ತಿನಿಂದ ಪಾರಾದಮೇಲೂ ಅವನ ದುಸ್ವಭಾವವು ಕಡಮೆ
ಯಾಗಲಿಲ್ಲ. ಊರು ಹತ್ತಿರವಾಗುತ್ತಲೇ ಯಾವ ಸುಳ್ಳು ಹೇಳಿದರೆ ಚೆನ್ನಾ
ಗಿರುವುದೆಂದು ಯೋಚಿಸುತ್ತಿದ್ದನು. ಅವನಿಗೆ ಹಸು ನಷ್ಟವಾದುದಕ್ಕಾಗಲಿ,
ಅಣ್ಣನಿಗೆ ತೊಂದರೆಯಾದುದಕ್ಕಾಗಲಿ ಪಶ್ಚಾತ್ತಾಪ ಹುಟ್ಟಲಿಲ್ಲ.

ಬೆಳಗ್ಗೆ ಅವನು ಊರು ಬಿಟ್ಟಾಗ ಊರ ಮುಂದೆ ಅವನಿಗೆ ತೋರಿದ
ಯೋಚನೆಯು ಜ್ಞಾಪಕವಿರಬಹುದು. ಹಸು ಹೋದರೇನು? ಹಣ ಸಿಕ್ಕಿ
ದರೆ ಸರಿಯಷ್ಟೆ! ದಾಸನ ಹತ್ತಿರ ಸಾಲ ತೆಗೆದರಾಯಿತು. ತನ್ನ ಹೆದರಿಕೆ
ಗೋಸ್ಕರ ಅಣ್ಣನು ಏನಾದರೂ ಮಾಡುತ್ತಾನೆ—ಎಂದು ಮುಂತಾಗಿ ಅವನು
ಆಲೋಚನೆ ಮಾಡುತ್ತಾ ನಡೆದನು. ಊರ ಬಳಿಗೆ ಬರುವ ಹೊತ್ತಿಗೆ ಮುಲ
ಗುವ ಸಮಯ. ಕಗ್ಗತ್ತಲೆ, ಹಾದಿ ಕಾಣಿಸದು. ಅವನು ಹಜ್ಜೆ ಹಜ್ಜೆಗೂ
ತನ್ನ ಚಾಟಿಯ ಕೋಲಿನಿಂದ ದಾರಿಯನ್ನು ತಡಕುತಿದ್ದನು. ಸಾಲದುದಕ್ಕೆ
ಅಷ್ಟು ಹೊತ್ತಿಗೆ ಮಳೆಯೂ ಸುರಿಯಲಾರಂಭಿಸಿತು. ಕುಳಿಯ ಹತ್ತಿರಕ್ಕೆ
ಬರುವಷ್ಟರಲ್ಲಿ ಮಳೆಯು ಹೆಚ್ಚಾಗಲು, ದಾರಿ ಕಾಣದೆ, ಅವನುಮುಂದಕ್ಕೆ
ಹೋಗಲಾಗಲಿಲ್ಲ. ನಿಂತು, ಸುತ್ತಮುತ್ತ ನೋಡುತ್ತಿದ್ದ ಹಾಗೆಯೇ ದೀಪ

ವೊಂದು ಮಿಣಗುಟ್ಟುವುದು ಕಾಣಿಸಿತು ಅವನು ಅದನ್ನೇ ಅನುಸರಿಸಿ ನಡೆದನು. ಅದು ಯಾವುದು? ಕಲ್ಲು ಮಂಟಪ. ಅದೇ ಅಲ್ಲವೆ ದಾಸನ ವಾಸಸ್ಥಾನ!

ನಾಗಣ್ಣನ ಕಣ್ಣು ಆ ದಿನ ದಾಸನ ಮೇಲೆಯೂ ಅವನ ಹಣದ ಮೇಲೆಯೂ ಬಿದ್ದಿದ್ದುದು ಸರಿಯಷ್ಟೆ! ಈಗ ಅವನ ಮನಸ್ಸಿನಲ್ಲಿ ದಾಸನ ಹಣವನ್ನು ಹೇಗೆ ಕಕ್ಕಿಸಬೇಕೆಂಬ ಯೋಚನೆ ಬಲವಾಗಿ ಹಿಡಿಯಿತು ಉಬ್ಬಿಸುವುದರಲ್ಲಿಯೂ ನಾಗಣ್ಣನು ಬಲು ಮೊನೆಗಾರ. ಅಂಜಿಕೊಂಡು ದಾಸನನ್ನು ನೋಡುವ ಕೆಲಸವನ್ನೂ ಬಸಪ್ಪನುತನಗೇ ಒಪ್ಪಿಸದೆ ಇರಲಾರ ನೆಂಬ ನಂಬುಗೆಯಿಂದ ಅವನು ಆಗಲೇ ದಾಸನೊಡನೆ ಅನುಸರಿಸತಕ್ಕ ಕ್ರಮವನ್ನು ಆಲೋಚಿಸ ತೊಡಗಿದನು ಒಡನೆಯೇ ಅವನಿಗೆ ಮಂಟಪಕ್ಕೆ ಹೋಗಿ ದಾಸನ ಗುರುತನ್ನು ಬೇಗ ಮಾಡಿಕೊಳ್ಳುವುದೇ ಉತ್ತಮವೆನ್ನಿಸಿತು. ಅದುವರೆಗೆ ದಾರಿ ತಡಕಾಡಿ ಬೇಸತ್ತು ಇದ್ದುದರಿಂದ ಲಾಂದ್ರ ಕೇಳುವ ನೆಪ ದಿಂದ ಮಂಟಪಕ್ಕೆ ಹೋಗಬೇಕೆಂದು ಗೊತ್ತುಮಾಡಿದನು. ಇನ್ನೂ ಮಳೆ ಸುರಿಯುತ್ತಲೇ ಇದ್ದಿತು. ಕಾಲು ಜಾರುತ್ತಿರಲು ಚಾಟಿಕೋಲನ್ನೂರಿ ಕೊಂಡು ಅತಿ ಪ್ರಯಾಸದಿಂದ ಅವನು ಕೊನೆಗೆ ದಾಸನ ಮಂಟಪಕ್ಕೆ ಬಂದನು. ಅಲ್ಲಿ ಯಾವ ಸದ್ದೂ ಇರಲಿಲ್ಲ ಅವನು ಹೊರಗಿನ ಬಾಗಿಲನ್ನು ತಟ್ಟನೆ ಗಟ್ಟಿಯಾಗಿ ಹೊಡೆದನು. ದಾಸನು ಒಳಗೆ ಬೆಚ್ಚಿಬಿತ್ತುಕೊಂಡು ಕದ ತೆರೆಯುವನೆಂದು ನಗುತ್ತಾ ಅವನೆಷ್ಟು ಹೊಡೆದರೂ ಉತ್ತರವೇ ಇಲ್ಲ. ಕಾರಣವೇನು? ದಾಸನು ನಿದ್ದೆ ಮಾಡುತಿದ್ದನೆ? ಜಿಪುಣನು ಹಾಗೆ ದೀಪ ಉರಿಸುತಿದ್ದುದು ಆಚ್ಚರಿಯೇ ಸರಿ! ನಾಗಣ್ಣನು ಮತ್ತೊಮ್ಮೆ ಬಲವಾಗಿ ಶಬ್ದ ಮಾಡಿದನು. ಈ ಸಲವೂ ಕದ ತೆರೆಯಲಿಲ್ಲ. ಕಡೆಗೆ ಸಂದಿಯಲ್ಲಿ ಇಣಿಕಿ ನೋಡಿ, ಒಳಗಿನ ಅಗಣಿ ಹಾಕಿದೆ ಯೆಂದುಕೊಂಡು ಹೊರಗಿನ ಚಿಲಕವನ್ನು ಮುಟ್ಟಿ ನೋಡಲು ಬಾಗಿಲ ಹೊರಗೆ ಚಿಲಕ ಹಾಕಿದ್ದಿತು. ಬಳಿಕ ಕದ ತೆರೆದು ನಾಗಣ್ಣನು ಒಳಕ್ಕೆ ನುಗ್ಗಿದನು.

ಒಳಗೆ ಒಂದು ಅಗ್ಗಿಷ್ಟಿಕೆಯಲ್ಲಿ ಕೆಂಡವು ಧಗಿಧಗಿಸುತ್ತಿದ್ದಿತು ಮಗ್ಗ, ಹಾಸಿಗೆ, ಕಾಲುಮಣೆ ಮುಂತಾದುವು ತಮ್ಮ ಉಚಿತ ಸ್ಥಳಗಳಲ್ಲಿ ಇದ್ದುವು. ದಾಸ ಮಾತ್ರ ಒಳಗಿರಲಿಲ್ಲ ಸುತ್ತಾಡಿ ಸುತ್ತಾಡಿ ನೆನೆದು ಬಳಲಿ ಬೆಂಡಾ

ಗಿದ್ದ ನಾಗಣ್ಣನಿಗೆ ಒಳಗೆ ಬಹು ಸುಖವಾಗಿದ್ದಿತು. ಹಸಿವಾಗಲು, ತಿಂಡಿ ಸಿಕ್ಕೀತೆಂದು ಮೊದಲು ಅವನು ಒಲೆಯ ಮುಂದೆ ಹೋಗಿ ಬಗ್ಗಿ ನೋಡಿದನು. ಅಲ್ಲಿ ಒಣಗಿದ್ದ ಒಂದೆರಡು ರೊಟ್ಟಿ ಮುರುಕುಗಳೂ ಕೆಂಡದ ಮೇಲೆ ಅರಬೇಗ ಲಾಗಿದ್ದ ಅನ್ನವೂ ಹೊರತು ಬೇರೆ ಏನೂ ಸಿಗಲಿಲ್ಲ. ದಾಸನು ಹೊಟ್ಟೆಗೆ ಸರಿಯಾಗಿ ಕೂಳನ್ನೂ ತಿನ್ನನೆಂದು ಜನರು ಹೇಳುತ್ತಿದ್ದರಲ್ಲವೆ? ಅದು ಹೋಗಲಿ. ಅಷ್ಟು ಹೊತ್ತಿನಲ್ಲಿ ಆ ಮಂಕನು ಬಾಗಿಲಿಗೆ ಬೀಗವನ್ನೂ ಹಾಕದೆ ಏಕೆ ಹೋಗಿದ್ದನು? ಒಂದು ವೇಳೆ ಸೌದೆ ತರಲಿಕ್ಕೆ ಹೋಗಿದ್ದನೆ? ಆಗ? ಎಲ್ಲಿಗೆ? ಅಥವಾ ನೀರು ತರಲಿಕ್ಕೆ ಹೋಗಿದ್ದಿರಬಹುದೋ? ಏಕೆ ಹೊತ್ತಾದರೂ ಬರಲಿಲ್ಲ? ಕುಳಿಗೆ ಮಗುಚಿಕೊಂಡಿರಬಹುದೆ? ಇದ್ದರೂ ಇರಬಹುದು

ನಾಗಣ್ಣನಿಗೆ ಈ ಸಂಭವವು ಬಹಳ ಹಿತವಾಗಿದ್ದಿತು. ಅಷ್ಟರ ಹೊತ್ತಿಗೆ ಮತ್ತೆ ಕೆಲವು ಯೋಚನೆಗಳು ತೋರಿದುವು. ಈ ನೇಯಿಗೆಯವನು ಸತ್ತಿದ್ದರೆ ಹಣವು ಯಾರಿಗೆ ಸಲ್ಲತಕ್ಕದ್ದು? ಅವನ ಹಣವಿದ್ದ ಸ್ಥಳವು ಯಾರಿಗಾದರೂ ತಿಳಿದಿದ್ದೀತೆ? ಯಾವನಾದರೂ ಬಂದು ಹಣ ಕದ್ದರೆ ಯಾರೆಂದು ಆವನಿಗಾದರೂ ಹೇಳಲು ಸಾಧ್ಯವೆ? ಸುಲಭವಾಗಿ ಹಣ ಪಡೆಯಲು ಆ ಸನ್ನಿವೇಶವು ಬಹಳ ಅನುಕೂಲವಾಗಿದ್ದಿತು. ಹಣದ ದುರಾಶೆಯು ತಡೆಯಲಾರದಷ್ಟಾಗಲು ನಾಗಣ್ಣನು ತಿಂಡಿ ತಿನ್ನುವುದನ್ನೂ ಬಿಟ್ಟು ಹಣವಿದ್ದ ಎಡೆಯನ್ನು ಹುಡುಕಲಾರಂಭಿಸಿದನು. ಆಗ ಅವನ ಮನಸ್ಸಿನಲ್ಲಿ ದಾಸ ಇಲ್ಲವೇ ಇಲ್ಲವೆಂಬ ನಿಶ್ಚಯ ಸಾಧಾರಣವಾಗಿ ತಪ್ಪು ಮಾಡುವವರೇ ಹಾಗೆ!

ಗುಡಿಸಲಿನಲ್ಲಿ ವಾಸಮಾಡುವವರು ಹಣವನ್ನು ಬಚ್ಚಿಡುವುದೆಲ್ಲಿ? ಸಾಮಾನ್ಯವಾಗಿ ಮೂರುಕಡೆಗಳಲ್ಲೆಂದು ಹೇಳುತ್ತಾರೆ. ಮೊದಲನೆಯದು ಅಟ್ಟ, ಎರಡನೆಯದು ಹಾಸಿಗೆ, ಮೂರನೆಯದು ನೆಲ. ದಾಸನಿದ್ದುದು ಕಲ್ಲುಮಂಟಪದಲ್ಲಿ. ಅದಕ್ಕೆ ಅಟ್ಟವೇ ಇಲ್ಲ. ಆಮೇಲೆ ನಾಗಣ್ಣನು ಬಲು ಅವಸರದಿಂದ ಹಾಸಿಗೆಯನ್ನೂ ಬಿಚ್ಚಿ ನೋಡಿದನು. ಅಲ್ಲಿಯೂ ಏನೂ ಸಿಗಲಿಲ್ಲ. ಇನ್ನು ಉಳಿದಿದ್ದುದು ನೆಲವೊಂದೇ. ಅವನು ಅತ್ಯಾಶೆಯಿಂದ ನೆಲವನ್ನೂ ಕಣ್ಣಲ್ಲಿ ಕಣ್ಣಿಟ್ಟುಕೊಂಡು ತಡಕಾಡಿದನು. ಒಂದು ಭಾಗ ಹೊರತು ಮಿಕ್ಕ ಎಡೆಗಳಲ್ಲೆಲ್ಲ ನೆಲ ಗಟ್ಟಿಯಾಗಿದ್ದಿತು. ಮೆದುಭಾಗ ಇದ್ದುದು ಮಗ್ಗದ

ಕೆಳಗೆ ಒಂದು ಗುಂಡಿಯುಲ್ಲಿ. ಅಲ್ಲಿ ಮಾತ್ರ ಮರಳು. ಅದರ ಮೇಲೆ ಎಚ್ಚರಿಕೆಯಿಂದ ಸಮ ಮಾಡಿದ ಮೇಲುಭಾಗ ಆ ಮರಳಿನ ಮೇಲೆ ಒಂದೆರಡು ಗೀರುಗಳು. ಇದನ್ನು ನೋಡುತ್ತಲೇ ನಾಗಣ್ಣನ ಎದೆಯು ಡವಡವಗುಟ್ಟಿತು. ಅವನ ತವಕವು ತುಸವಾಗಿರಲಿಲ್ಲ. ಬೇಗಬೇಗ ಅವನು ಮರಳನ್ನು ಕೈಗಳಿಂದ ತೋಡಿಹಾಕಿದನು. ತೋಡುವಾಗ ಕೈಗೆ ಏನೋ ತಡೆಯಿತು. ಕೊನೆಗೆ-ಎರಡು ದೊಡ್ಡ ಚರ್ಮದ ಚೀಲಗಳು ಸಿಕ್ಕಿದುವು. ಹೊರಕ್ಕೆ ಎಳೆದಲೆ ಬರಲಿಲ್ಲ. ಭಾರವಾಗಿದ್ದುದರಿಂದ ತೆಗೆಯುವುದು ಕಷ್ಟ ವಾಯಿತು. ಭಾರವನ್ನು ನೋಡಿ ಅವೇ ದಾಸನ ಹಣದ ಚೀಲಗಳಾಗಿರ ಬೇಕೆಂದು ಅವನು ಅವನ್ನು ಪ್ರಯಾಸದಿಂದ ಹೊರಕ್ಕೆ ಎಳೆದುಕೊಂಡನು. ದಾಸನು ಹೊರಗಿನಿಂದ ಒಳಕ್ಕೆ ಬಂದಾನೆಂಬುದು ಅವನಿಗೆ ಈಗಲೂ ತೋರಲೇ ಇಲ್ಲ. ನಾಗಣ್ಣನು ಒಳಗೆ ನುಗ್ಗಿ ಅಷ್ಟು ಹೊತ್ತಿಗೆ ಐದಾರು ನಿಮಿಷಗಳಾಗಿರಬಹುದು. ಆದರೆ ಅವನಿಗೆ ಅವು ಐದಾರು ಗಂಟೆಗಳಂತೆ ತೋರಿದುವು. ಕಂಕುಳಲ್ಲಿ ಚಾಟಿ ಕೋಲವನ್ನು ಇರುಕಿ, ಎರಡು ಕೈಗಳಲ್ಲೂ ಹಣದ ಚೀಲಗಳನ್ನು ಹಿಡಿದುಕೊಂಡು, ಅವನು ಹೊರಕ್ಕೆ ಹೋಗಲು ಎದ್ದನು. ಆಗ ಅವನ ಮೈಮೇಲೆಲ್ಲ ಬೆವರು. ನಾಲಿಗೆ ಒಣಗಿತು. ಎದೆ ಅದುರಿತು. ಮೈ ನಡುಗಿತು. ಎಷ್ಟು ಪ್ರಯತ್ನ ಪಟ್ಟರೂ ಏಳಲು ತ್ರಾಣವೇ ಇರಲಿಲ್ಲ. ಬಹಳ ಆಶ್ಚರ್ಯವಾಯಿತು. ಕಡೆಗೆ ಬಹಳ ಕಷ್ಟದಿಂದ ಹೊರಕ್ಕೆ ಬಂದು, ದೀಪದ ಬೆಳಕು ಈಚೆಗೆ ಬರದಂತೆ ಕದ ಹಾಕಿ, ಯಾರಿಗೂ ಸಿಕ್ಕದೆ ಮುಂದೆ ಹೋದರೆ ಸಾಕೆಂದು ತಲ್ಲಣ ಪಡುತ್ತ ಅವನು ಹೊರಟನು. ಆಗಲೂ ಕತ್ತಲು, ಮಳೆ, ಗಾಳಿ. ಹೊರಗೆ ಪ್ರಕೃತಿ ಬಹು ಭಯಂಕರವಾಗಿದ್ದಳು. 'ಹಾಗಿದ್ದುದೇ ಲೇಸು' ಎನಿಸಿತು. 'ಮುಂದೆ ಆದುದಾಗಲಿ. ಈಗ ಇದನ್ನು ದಕ್ಕಿಸಿಕೊಳ್ಳುವ ಯೋಚನೆ ಮಾಡೋಣ. ದೂರ ಹೋದರೆ ಬದುಕಿದೆ' ಎಂದು ಹೇಳಿಕೊಳ್ಳುತ್ತ, ಅವನು ಚೀಲಗಳನ್ನೂ ಹೊತ್ತುಕೊಂಡು, ನಡೆ ಯುತ್ತ ತನ್ನ ಕೋಲಿನೊಡನೆ ಕತ್ತಲೆಯಲ್ಲಿ ಮರೆಯಾದನು!

——:o:——

೬

# ದಾಸನ ದುಃಖ

ನಾಗಣ್ಣನು ಮಂಟಪದಿಂದ ಹಿಂದಿರುಗಿದಾಗಲೇ ಸುಮಾರು ನೂರು ಹಜ್ಜೆಗಳ ದೂರದಲ್ಲಿ ದಾಸನು ತಲೆಮೇಲೆ ಗೊಪ್ಪೆ ಹಾಕಿಕೊಂಡು ಮಳೆಯಲ್ಲಿ ಬರುತ್ತಿದ್ದನು. ಆಗ ದಾಸನ ಕೈ ಕಾಲುಗಳು ಕೆಲಸ ಮಾಡಿ ಬಳಲಿದ್ದುವು. ಆದರೆ ಅವನ ಮನಸ್ಸಿನಲ್ಲಿ ಯಾವ ಬಳಲಿಕೆಯೂ ಇರಲಿಲ್ಲ. ಮನೆಗೆ ಬರುತ್ತಿದ್ದಾಗ ಅಗ್ಗವಾಗಿ ಸಿಕ್ಕಿದ್ದ ಅಕ್ಕಿಯ ಬಿಸಿ ಅನ್ನವನ್ನು ಉಂಡು ಸುಖಪಡಬೇಕೆಂಬ ಯೋಚನೆಯಿಂದಲೂ, ಅದಕ್ಕಿಂತಲೂ ಹೆಚ್ಚಾಗಿ ಊಟವಾದ ಮೇಲೆ ಚಿನ್ನವನ್ನು ಕೈಯಾರ ಹಿಡಿದುಕೊಂಡು ನೋಡಿ ನೋಡಿ ಹಿಗ್ಗಬಹುದೆಂಬ ಸಡಗರದಿಂದಲೂ ಅವನು ಉಲ್ಲಾಸ ಪಡುತ್ತಿದ್ದನು. ಅವನ ಸಂತೋಷವೆಲ್ಲ ರಾತ್ರಿಯಲ್ಲಿ ತಾನೆ!

ಆ ದಿನ ಸಂಜೆಯಲ್ಲಿಯೂ ಅವನು ಎಂದಿನಂತೆ ಮಗ್ಗದ ಮುಂದೆ ನೇಯುತ್ತಲೇ ಕುಳಿತಿದ್ದನು. ತಟ್ಟನೆ ಮಗ್ಗದ ಒಂದು ದಾರವು ಕಿತ್ತು ಹೋಗಿದ್ದಿತು. ಹೊಸ ದಾರವು ಸಿಕ್ಕಿದ ಹೊರತು ಕೆಲಸವೇ ನಡೆಯುವಂತಿರಲಿಲ್ಲ. ಆಗಲೇ ಮಗ್ಗವನ್ನು ಸರಿಪಡಿಸಿಕೊಳ್ಳದಿದ್ದರೆ ಬೆಳಗ್ಗೆ ಕೋಳಿ ಕೂಗುವ ಹೊತ್ತಿನಲ್ಲಿ ಅವನ ಕೆಲಸವು ನಿಂತುಹೋಗಬೇಕಾಗುತಿದ್ದಿತು. ಕೆಲಸ ಮಾಡುವ ವೇಳೆಯಲ್ಲಿ ದಾರಕ್ಕೋಸ್ಕರ ಹೊರಗೆ ಹೋಗುವುದೂ, ಅಷ್ಟು ಹೊತ್ತೂ ನೇಯದೆ ಸುಮ್ಮನೆ ಕಾಲ ಕಳೆವುದೂ ಅವನಿಗೆ ಸರಿಬೀಳಲಿಲ್ಲ. ಆಗಲೇ ಊರಿನೊಳಕ್ಕೆ ಹೋಗಿ ದಾರವನ್ನು ತಂದು ಬಿಡುವುದೇ ಒಳ್ಳೆಯದೆಂದು ಗೊತ್ತುಮಾಡಿ ಹೊರಗೆ ಇಣಿಕಿ ನೋಡಿದಾಗ ತುಂತುರು ಹನಿ ಬೀಳುತ್ತಿದ್ದಿತು. ಹೊರಕ್ಕೆ ಹೋಗಲು ಅಷ್ಟು ಅನುಕೂಲವಿರಲಿಲ್ಲ. ಆದರೂ ದಾಸನು ಆಗಬೇಕಾದ ಕೆಲಸ ಹೊರತು ಮತ್ತಾವ ತೊಂದರೆಯನ್ನೂ ಲೆಕ್ಕಿಸದೆ, ಆಗ ಅಲ್ಲಿಗೆ ಯಾರು ಬಂದಾರೆಂದು ಉದಾಸೀನ ಮಾಡಿ, ಕದ ಮುಚ್ಚಿಕೊಂಡು, ಬೀಗ ಹಾಕದೆ, ಹೊರಗಣ ಚಿಲಕವನ್ನು ಮಾತ್ರ ಸಿಕ್ಕಿಸಿ ಅವ

ಸರವಾಗಿ ಊರೊಳಕ್ಕೆ ಹೋದನು. ಅವನ ಕೆಲಸಕ್ಕೆ ಸುಮಾರು ಅರ್ಧ ಗಂಟೆ ಕಾಲ ಸಾಕಿದ್ದಿತು. ಅಲ್ಲಿ ಹದಿನೈದು ವರ್ಷಗಳಿಂದಲೂ ಒಂದು ದಿನ ಕೂಡ ಕಳ್ಳತನದ ಸೊಲ್ಲೇ ಇರಲಿಲ್ಲ. ಆ ದಿನವೇ ಕಳ್ಳನು ಬಂದಾನೆ ?

ದಾಸನು ಊರಿಗೆ ಹೋಗಿ ದಾರ ಸಂಪಾದಿಸಿಕೊಂಡು ಹಿಂದಿರುಗುವಷ್ಟರಲ್ಲಿ ಮಳೆ ಹೆಚ್ಚಾಯಿತು. ಸ್ವಲ್ಪ ಹೊತ್ತು ಕಾದಿದ್ದು ಮಳೆ ಕೊಂಚ ಕಡಮೆಯಾದಮೇಲೆ ಅವನು ತನ್ನ ನಿಲ್ದಾಣಕ್ಕೆ ಬಂದನು ಒಳಗೆ ಹೋಗುವುದಕ್ಕೆ ಮುಂಚೆ ಅವನು ಪಟ್ಟ ಹರುಷವು ಅಷ್ಟಿಷ್ಟಲ್ಲ. ಎಲ್ಲ ಸರಿಯಿದ್ದಂತೆ ತೋರಿತು ಸಾಮಾನುಗಳು ತಮ್ಮ ಎಡೆಗಳಲ್ಲಿದ್ದುವು. ಯಾವ ಚಿಂತೆಯೂ ಕಾಣಿಸಲಿಲ್ಲ. ಒಡನೆಯೇ ಊಟ ಮಾಡುವುದಕ್ಕೆಂದು ಅವನು ಬೆಂಕಿಯ ಮುಂದೆ ಕೂತನು

ದಾಸನ ಬಿಳಿ ಮೋರೆ, ಮಬ್ಬು ಕಣ್ಣು, ಬಡವಾದ ಮೈ ದೀಪದ ಬೆಳಕಿನಲ್ಲಿ ವಿಲಕ್ಷಣವಾಗಿ ತೋರುತ್ತಿದ್ದುವು ಊರಿನವರ ಅಸಡ್ಡೆ, ಅಂಜಿಕೆ, ಅವಿಶ್ವಾಸಕ್ಕೆ ಇದೂ ಒಂದು ಕಾರಣ ಆಗಾಗ ಅವರಿಗೂ ಅವನನ್ನು ಕಂಡರೆ ಮರುಕವಾಗುತಿದ್ದಿತು. ಆ ಊರಲೆಲ್ಲ ನಿಜವಾಗಿ ದಾಸನಿಗಿಂತ ಹೆಚ್ಚಾದ ಸಜ್ಜನರಿರಲಿಲ್ಲ. ಅವನು ಈಚೆಗೆ ಧನ ಪಿಶಾಚಗ್ರಸ್ತನಾಗಿದ್ದರೂ, ಸೌಶೀಲ್ಯವನ್ನು ಕಳೆದುಕೊಳ್ಳದೆ, ಪರರಿಗೆ ಕೇಡು ಬಯಸದೆ ಸಾಧುವಾಗಿದ್ದನು ಹಿಂದಿನ ಶ್ರದ್ಧೆ ಹೋಗಿದ್ದುದರಿಂದ, ಭಕ್ತಿ ತಪ್ಪಿದ್ದುದರಿಂದ, ದ್ರೋಹ ನಡೆದುದರಿಂದ, ಪ್ರೇಮ ಮಾಯವಾಗಿದ್ದುದರಿಂದ ಅವನು ಎಡೆಬಿಡದೆ ನೇಯುವುದು, ಹೊನ್ನು ಕೂಡಿಡುವುದು ಇವೆರಡು ಹೊರತು ಮತ್ತಾವುದರ ಗೋಜಿಗೂ ಹೋಗದಿರಬೇಕಾಯಿತು ಅವನ ಮನೋವೃತ್ತಿ ಕಾರ್ಯಗಳಿಗೆ ತಕ್ಕಂತೆ ಅವನ ಚೇಷ್ಟೆಯೂ ರೂಪೂ ಮಾರ್ಪಾಡಾದುವು. ಸದಾ ಯಂತ್ರದ ಮುಂದೆ ಕೆಲಸ ಮಾಡಿ ಅವನೇ ಒಂದು ವಿಜಾತೀಯ ಯಂತ್ರವಾಗಿ ಪರಿಣಮಿಸಿದನು. ದಿನೇ ದಿನೇ ಹೆಚ್ಚುತ್ತಿದ್ದ ಧನವು ತಾನು ಹೇಗೆ ಬಂಧಿತವಾಯಿತೋ ಹಾಗೆಯೇ ಅವನನ್ನೂ ಬಂಧಿತನನ್ನಾಗಿ ಮಾಡಿತು.

ದಾಸನು ಊಟಕ್ಕೆ ಸಿದ್ಧ ಮಾಡಿಕೊಂಡನು. ಅಷ್ಟರಲ್ಲಿ ಚಿನ್ನವನ್ನು ಕಣ್ಣೆದುರಿನಲ್ಲಿಯೇ ರಾಶಿಯಾಗಿ ಸುರಿದಿಟ್ಟು ನೋಡುತ್ತ ತಿಂದರೆ ಅನ್ನವು ಮತ್ತಷ್ಟು ರುಚಿಕರವಾಗಿರುವುದೆಂದು ತೋರಿತು. ಜಿಪುಣನಿಗೆ ಹೊನ್ನೇ ಹೆಚ್ಚು, ಅದಕ್ಕಿಂತ ಮಿಗಿಲಾದುದೇ ಇಲ್ಲ !

ಬಳಿಕ ದಾಸನು ಹೊಸ್ಸಿದ್ದ ಮರಳಿನ ಗುಂಡಿಯ ಕಡೆಗೆ ತಿರುಗಿದನು. ಅವನಲ್ಲಿ ಸುತ್ತಮುತ್ತ ನೋಡುವ ವಾಡಿಕೆ ಹೆಚ್ಚಾಗಿರಲಿಲ್ಲ. ಮರಳನ್ನು ಅವನು ಜೇಗ ಜೇಗ ಬಗೆದನು. ಕೂಡಲೆ ಗುಂಡಿಯು ಬರಿದಾಗಿದ್ದಂತೆ ತೋರಿತು. ಈಚೆಗೆ ಅವನು ತನ್ನ ಸಿಧಿಯನ್ನು ಗಡಿಗೆಯಲ್ಲಿ ಇಡುತ್ತಿರಲಿಲ್ಲ; ಎರಡು ಚರ್ಮದ ಚೀಲಗಳಲ್ಲಿ ತುಂಬಿ ಇಡುತ್ತಿದ್ದನು. ಆ ಚೀಲಗಳು ಇದ್ದ ಗುರುತು ಸಿಕ್ಕಲಿಲ್ಲ. ಮತ್ತಷ್ಟು ತೋಡಲು ಗುಂಡಿಯ ತಳ ಸಿಕ್ಕಿತು. ಕಳ ವಳ ಉಂಟಾದರೂ ಚೀಲಗಳಿಲ್ಲವೆಂಬುದರ ನಿಜ ತೋರಲಿಲ್ಲ. ಆ ಮೇಲೆ ಅವನು ಮಂಟಪದ ಎಲ್ಲ ಭಾಗಗಳಲ್ಲಿಯೂ ತಡಕಿ ನೋಡಿದನು. ಎಲ್ಲಿಯೂ ಚೀಲಗಳು ಸಿಕ್ಕಲಿಲ್ಲ. ತಲ್ಲಣದಿಂದ ಕೈ ಕಾಲುಗಳು ಅದುರ ತೊಡಗಿದುವು. ಕೈಯಿಂದ ದೀಪವು ಜಾರಿಹೋಯಿತು ಬುದ್ಧಿ ವಿಕಲ್ಪವಾಗಿ ಕೊಂಚ ಕಾಲ ಅವನಿಗೆ ಯೋಚಿಸುವುದಕ್ಕೂ ಸಾಧ್ಯವಾಗಲಿಲ್ಲ ಸ್ವಲ್ಪಹೊತ್ತಿನ ಮೇಲೆ ಅವನು ನಿಟ್ಟುಸಿರು ಬಿಡುತ್ತ, ಒಳಗೆಲ್ಲ ಮತ್ತೊಂದಾವೃತ್ತಿ ಹುಡುಕಿ, ಚೀಲ ಗಳಿಲ್ಲವೆಂಬುವನ್ನು ದೃಢಮಾಡಿಕೊಳ್ಳಲು ಇನ್ನೊಂದು ಸಾರಿ ಪ್ರಯತ್ನ ಪಟ್ಟನು. ಅವನ ಮನಸ್ಸಿಗೆ ಅವು ಗುಂಡಿಯಲ್ಲಿದ್ದಂತೆಯೇ ತೋರಿತು. ಪುನಃ ಹುಡುಕಿದನು. ಎಲ್ಲ ಪದಾರ್ಥಗಳೂ ಆಯಾ ಸ್ಥಾನಗಳಲ್ಲಿದ್ದುವು. ಹಣದ ಚೀಲಗಳು ಮಾತ್ರ ಕುಳಿಯಲ್ಲಿ ಇರಲಿಲ್ಲ. ಜೇಸತ್ತು, ಹುಡುಕಾಡಿ, ತತ್ತರಿಸುತ್ತ, ಕೈಕಾಲುಗಳನ್ನು ತಲೆಯ ಮೇಲಿಟ್ಟು ಸದ್ಯಃ ಸ್ಥಿತಿಯನ್ನು ತಡೆಯ ಲಾರದೆ ಅಸಹಾಯನಾಗಿ ಅಲುಗಾಡದೆ ರೋದನ ಮಾಡಿದನು. ರೋದನ ಮಾಡಿದ ಬಳಿಕ ವಿಕಲ್ಪವು ಸ್ವಲ್ಪ ಇಳಿಯಿತು ಒಡನೆಯೇ ಅವನು ಮಗ್ಗದ ಹತ್ತಿರ ಹೋಗಿ, ಅದನ್ನು ಎರಡು ಕೈಗಳಿಂದಲೂ ಬಿಮ್ಮನೆ ಅಪ್ಪಿಕೊಂಡನು. ಆ ಆಪತ್ಕಾಲದಲ್ಲಿ ಅವನಿಗೆ ಮಗ್ಗವನ್ನು ಬಿಟ್ಟರೆ ಆಪ್ತೇಷ್ಟರೇ ಕಾಣಿಸಲಿಲ್ಲ!

ಅಷ್ಟುಹೊತ್ತಿಗೆ ಅವನಿಗೆ ತಿಳಿವುಂಟಾಗಿ, ತನ್ನ ಹುಟ್ಟಿದ ಊರಿನ ದ್ರೋಹ ನೆನಪಿಗೆ ಬಂದು, ಚೀಲಗಳ ಕಳವು ದೈವದ ಮಾಯೆಯಾಗಿರ ಲಾರದು, ಯಾವನೋ ಕಳ್ಳನ ಕೆಲಸವಾಗಿರಬೇಕು ಎಂದು ತೋರಿತು. ದೈವದ ಮಾಯೆಯಾದರೆ ಸಿಕ್ಕುವುದು ಕಷ್ಟ! ಕಳ್ಳನಾದರೆ ಸಿಕ್ಕುವುದು ಸುಲಭ ಎಂಬ ಊಹೆಯಿಂದ ಅವನು ತಟ್ಟನೆ ಹೊರಗೆ ಬಂದನು. ಈ ಯೋಚನೆ ಹೊಳೆಯದಿದ್ದರೆ ಅವನಿಗೆ ಏಳಲಿಕ್ಕೂ ಆಗುತ್ತಿರಲಿಲ್ಲ.

ಇನ್ನೂ ಮಳೆಯ ಸೋನೆಯು ಬೀಳುತ್ತಿದ್ದಿತು. ಲಾಂದ್ರದ ಬೆಳಕಿನಲ್ಲಿ ಹೆಜ್ಜೆಯ ಗುರುತನ್ನು ನೋಡಿ ಕಳ್ಳನನ್ನು ಹಿಡಿಯಬಹುದೆಂದು ಹೊರಟನು. ಅಷ್ಟರಲ್ಲಿಯೇ ಪುನಃ ಸಂದೇಹಗಳು ಪ್ರಬಲವಾದುವು. ಹಿಂದೆ ತನಗೆ ಕೆಡಕನ್ನು ಮಾಡಿದ್ದ ದೈವದ ಜ್ಞಾಪಕವು ಮತ್ತೆ ಬಂದಿತು. ಕಳ್ಳನಿಂದ ಹಣವನ್ನು ಹೊಂದುವ ಸಾಧ್ಯವಿದ್ದುದರಿಂದ ಕಳ್ಳನೇ ಕದ್ದಿರಬೇಕೆಂದು ಅವನು ಇನ್ನೊಮ್ಮೆ ನಿರ್ಧರಿಸಿದನು. ಆಮೇಲೆ ಅವನಿಗೆ ಊರಿನವರಲ್ಲಿ ಯಾರಯಾರ ಮೇಲೆಯೋ ಸಂಶಯಗಳು ಹುಟ್ಟಿದುವು ಹಾಗೆಯೇ ವೀರಾಬೋಯಿ ಕದ್ದಿರಬಹುದೆಂಬ ಶಂಕೆಯು ತೋರಿತು. ಬೋಯಿಯು ಊರಿನಲ್ಲಿ ಕಳ್ಳತನ ಮಾಡಿದ್ದುದೂ, ತನ್ನ ಮನೆ ಮುಂದೆ ಸುತ್ತಾಡುತ್ತಿದ್ದುದೂ, ಎರಡು ಮೂರು ಬಾರಿ ಹಣದ ಮಾತೆತ್ತಿ ಗೇಲಿ ಮಾಡಿದ್ದುದೂ ಅವನ ನೆನಪಿಗೆ ಬಂದುವು. ಕೊನೆಗೆ ಬೋಯಿಯೇ ಕದ್ದಿರಬೇಕೆಂದು ಗೊತ್ತು ಮಾಡಿದನು ಆದರೆ ದಾಸನಿಗೆ ಬೋಯಿಯನ್ನು ಶಿಕ್ಷೆಗೆ ಗುರಿಮಾಡಬೇಕೆಂಬ ಯೋಚನೆ ಬರಲಿಲ್ಲ. ಅವನಿಗೆ ಬೇಕಾಗಿದ್ದುದು ತನ್ನ ಹಣವೊಂದೇ ಅಲ್ಲದೆ ಕಳ್ಳನನ್ನು ಹಿಡಿಯಲು ಅನುಸರಿಸಬೇಕಾದ ಕ್ರಮವೂ ಅವನಿಗೆ ಚೆನ್ನಾಗಿ ತಿಳಿದಿರಲಿಲ್ಲ. ಪಟೇಲ, ತಾಳೆದಾರ, ಪೂಜಾರಿ ಮುಂತಾದವರಿಗೆ ತಿಳಿಸಿದರೆ ಅವರು ತನ್ನ ಹಣವನ್ನು ಕೊಡಿಸುವರೆಂದು ಅವನು ಬರಿತಲೆಯಲ್ಲೇ ಬಾಗಿಲು ಮುಚ್ಚದೆ ಊರಿನ ಕಡೆಗೆ ಓಡಿದನು. ಚಾವಡಿ ಸಿಕ್ಕುವವರೆಗೂ ಅವನು ನಿಲ್ಲಲೇ ಇಲ್ಲ.

ಗ್ರಾಮ ಪ್ರಮುಖರು ಚಾವಡಿಯಲ್ಲಿ ಆಗ ಇರಲಿಲ್ಲ. ಎಲ್ಲರೂ ಸಾಹುಕಾರ ಸಿದ್ದಪ್ಪನ ಮನೆಗೆ ಊಟಕ್ಕೆ ಹೋಗಿದ್ದರೆಂದು ತಿಳಿಯಿತು. ದಾಸನು ಬಂದು ನೋಡಿದಾಗ ಚಾವಡಿಯಲ್ಲಿ ಊರಿನ ಹಲವು ಮಂದಿ ಸಾಧಾರಣ ಗೃಹಸ್ಥರು ಮನಸ್ಸಿಗೆ ಬಂದಂತೆ ಹರಟುತ್ತ ಕುಳಿತಿದ್ದರು.

——:o:——

೭

# ಹರಟೆ

ಚಾವಡಿಗೆ ದಾಸನು ಹೋದಾಗ ಅಲ್ಲಿ ಸೇರಿದಿದ್ದವರ ಹರಟೆ ಬಲು ಬಲು ಚುರುಕಾಗಿ ನಡೆಯುತಿದ್ದಿತು ಸಾಧಾರಣವಾಗಿ ನಿತ್ಯವೂ ಅವರು ಸೇರಿದೊಡನೆಯೇ ಮಾತುಕತೆಗಳು ಮೊದಲಾಗುತ್ತಿರಲಿಲ್ಲ. ಎಲೆ, ಅಡಿಕೆ, ನಶ್ಯ, ತಂಬಾಕು, ಮುಂತಾದುವುಗಳ ವಿನಿಮಯವಾದ ಮೇಲೆ ಸ್ವಲ್ಪ ಹೊತ್ತು ಎಲ್ಲರೂ ಸುಮ್ಮನೆ ಕುಳಿತಿರುವರು ಅವನು ಮಾತಾಡಲಿ ಎಂದು ಇವನು; ಇವನು ಮಾತಾಡಲಿ ಎಂದು ಅವನು. ಮಾತು ಮೊದಲಾದ ಮೇಲೆ ಮುಗಿಯುವುದು ಅರ್ಧರಾತ್ರಿಯಾದ ಬಳಿಕ. ಈ ದಿನವೂ ಹಾಗೆಯೇ. ಕೊನೆಗೆ ಅಂಗಡಿ ಬೋರಣ್ಣನು ಗಾಣಿಗರ ಹುಚ್ಚಪ್ಪನನ್ನು ನೋಡಿ ಮಾತು ಮೊದಲುಮಾಡಿದನು

' ನೀನು ಕೊಂಡ ಹಸು ಬಲು ಚೆಂದಾಗಿದೆಯಂತೆ ಹುಚ್ಚಪ್ಪ? '

ಹುಚ್ಚಪ್ಪನಿಗೆ ಕೊಂಚ ಕೊಂಚ ತೊದಲು. ಅವನು ಹಸನ್ಮುಖಿ, ಯಾರೊಡನೆಯೂ ಕೋಪ ಮಾಡುತ್ತಿರಲಿಲ್ಲ ಅವನು ಎಲೆಯನ್ನು ಅಗಿದು ನುಂಗುತ್ತಾ ಅರೆಗಳಿಗೆ ಸುಮ್ಮನಿದ್ದು ' ಹಂಗೆ ಅಂತಾರೆ ದಿಟ ' ಎಂದನು.

ತಿರುಗಿ ನಿಶ್ಯಬ್ದ. ಎಲ್ಲರೂ ಸುಮ್ಮನಿದ್ದರು.

' ಅದು ಕೆಂಪಗಮೊ ? ಗಿಡ್ಡಜಾತಿದಲ್ಲವಾ ?' ಎಂದು ಈಗ ಅಕ್ಕಸಾಲೆ ರಾಮಾಚಾರಿ ಹುಚ್ಚಪ್ಪನನ್ನು ನೋಡಿದನು.

ಹುಚ್ಚಪ್ಪ ಈಗ ತಿರುಗಿ ಉತ್ತರ ಕೊಡಬೇಕಾಯಿತು.

' ಹೌದು. ಕೆಂಪಗದೆ. ಗಿಡ್ಡಜಾತಿ ' ಎಂದು ತಲೆ ದೂಗಿದನು

' ನೀನು ಅದನ್ನು ಎಲ್ಲಿ ಕೊಂಡೆಯೋ ನಾನು ಬಲ್ಲೆ. ಆ ಜಾತಿ ಈ ಕಡೆ ಇಲ್ಲ. ಅದರ ತಲೇಮೆಲೆ ಒಂದು ಬಿಳಿ ಪಟ್ಟೆ ಇದೆ. ಅಲ್ಲವಾ ' ಎಂದು ರಾಮಾಚಾರಿ ಮತ್ತೆ ಪ್ರಶ್ನೆ ಮಾಡಿದನು.

' ಹೌದು. ಅದೆ ' ಎಂದನು ಹುಚ್ಚಪ್ಪ.

'ಅವು ಚನ್ನೇಗೌಡನವು ಅಲ್ಲವಾ?' ಎಂದು ತಿರುಗಿ ರಾಮಾಚಾರಿ ನೆಲ ಹೊಡೆಯುತ್ತ, ಗಾಣಿಗನ ಕಡೆ ನೋಡಿ,

'ನೀನು ಎಷ್ಟಕ್ಕೆ ಕೊಂಡೆಯೋ ಕಾಣೆ. ಅವರ ಹೊಟ್ಟೆ ಉಬ್ಬರಿಸಿಕೊಂಡಾಗ ನಾನೇ ಮದ್ದು ಕೊಟ್ಟವನು' ಎನ್ನುತ್ತಾ ಎಲ್ಲರನ್ನೂ ದಿಟ್ಟಿಸಿದನು

'ಇದ್ದೀತು. ಈಗ ಚೆಂದಾಗಿದೆ' ಎಂದು ಹುಚ್ಚಪ್ಪನು ಉತ್ತರವಿತ್ತನು

ರಾಮಾಚಾರಿಗೆ ತನ್ನ ಮಾತೇ ತನಗೆ ಹೆಚ್ಚು. ಆ ಮೇಲೆ ಆ ಹಸುವನ್ನು ಊರಿಗೆ ಮೊದಲು ಯಾರು ತಂದರೆಂಬ ವಿಷಯದಲ್ಲಿ ಚರ್ಚೆಗಳು ನಡೆದುವು. ಆಗ ಬೋರಣ್ಣನ ಮಧ್ಯಸ್ಥ ಮೊದಲಾಯಿತು

'ಬಿಡಿ, ಬಿಡಿ. ಆ ಮಾತು ಈಗೇಕೆ? ಹಾಲಿ ಹಸ ಹುಚ್ಚಪ್ಪನದು. ಹುಚ್ಚಪ್ಪ ಚನ್ನೇಗೌಡನಿಂದ ಕೊಂಡುಕೊಂಡ. ಚಾವಡಿಯನ್ನು ಚಾವಡಿ ಎಂದರೆ ತಪ್ಪೆ? ನೀವು ಚನ್ನೇಗೌಡನ ತಾತನ್ನ ಬಲ್ಲಿರೋ? ಅವನೇಕೆ ಗುಡಿ ತೋಟ ವಾರಕ್ಕೆ ಮಾಡಿದ್ದು? ಹೇಳಿ ನೋಡೋಣ' ಎಂದು ಬೋರಣ್ಣನು ಬೇರೆ ಪ್ರಸ್ತಾಪ ಹೂಡಿದನು

ಮಾತಿನ ಮಲ್ಲಪ್ಪ ಊರಿನಲ್ಲೆಲ್ಲ ಹಿರಿಯವನು. ಅವನು ಹಿಂದೆ ಗುಡಿಯ ಅರ್ಚಕನಾಗಿದ್ದನಂತೆ. ವಾಯುರೋಗ ಬಂದಮೇಲೆ ಅವನು ಆ ವೃತ್ತಿ ಬಿಡಬೇಕಾಯಿತು. ತನ್ನ ನರೆತ ತಲೆ ಒಂದು ಕಡೆ ತಿರುಗಿಸಿಕೊಂಡು, ಹೆಬ್ಬೆರಳು ಸುತ್ತುತ್ತ, ಆತ್ಮತೃಪ್ತನಾಗಿ, ಅವರಿವರಲ್ಲಿ ಹುಳುಕು ಹುಡುಕುವುದೇ ಅವನು ಈಗ ಮಾಡುತ್ತಿದ್ದ ಕೆಲಸ

ಬೋರಣ್ಣನ ಪ್ರಶ್ನೆ ಕೇಳಿ, ಅವನಿಗೆ ಹೆಚ್ಚು ತಿಳಿಯದೆಂಬ ಭಾವನೆಯಿಂದ ನಗುತ್ತ, ಮಲ್ಲಪ್ಪನು 'ಬಲ್ಲೆ, ಬಲ್ಲೆ. ನನ್ನ ಕೇಳಬೇಡಿ. ಇವರನ್ನು ಕೇಳಿ ಬೇಕಾದರೆ' ಎಂದನು. ಅಲ್ಲಿದ್ದ ನಡುಪ್ರಾಯದವನ ಮೇಲೆ ಅವನ ದೃಷ್ಟಿ ಬಿದ್ದಿತು. ಅವನು ಅಲ್ಲಿಗೆ ಹೊಸಬ. ಈಗ ಅರ್ಚಕನ ಕೆಲಸವನ್ನು ಮಾಡುವವನು ಇವನೇ. ಇವನು ಮಲ್ಲಪ್ಪನ ಅರ್ಥ ತಿಳಿದು 'ನನ್ನ ಗೇಲಿ ಮಾಡಬೇಡಿ. ನಾನು ಹೊಸಬ' ಎಂದು ಬೇಡಿಕೊಂಡನು.

ಆಗ ಇನ್ನೊಬ್ಬನು ಕಣ್ಣು ಮಿಟುಕಿಸಿಕೊಂಡು ತನ್ನ ಜತೆಗಾರರಲ್ಲಿ ಒಬ್ಬರನ್ನು ನೋಡಿ ನಕ್ಕನು. ನಕ್ಕವನ ಹೆಸರು ಭದ್ರಪ್ಪ. ಅವನು ಹಾಡು

ವುದರಲ್ಲಿ ಸ್ವಲ್ಪ ಪರಿಶ್ರಮವುಳ್ಳವನು. ಹೊಸ ಅರ್ಚಕನಿಗೂ ಕೊಂಚ ಹಾಡುಗಾರಿಕೆ ಬರುತ್ತಿದ್ದಿತು ಅವರಿಬ್ಬರಿಗೂ ಹಾಡುಗಾರಿಕೆಯ ಸಲುವಾಗಿ ಸ್ವಲ್ಪ ಪೋಟಾಪೋಟಿ.

ಅರ್ಚಕನು ಗಾಬರಿ ಪಟ್ಟು 'ನಾನೇನು ತಪ್ಪು ಮಾಡಿದೆ? ಭದ್ರಪ್ಪ ನವರೆ? ಕೆಲವರು ತಮ್ಮ ಮೂಗು ನೇರಕ್ಕೇ ಮಾತಾಡುತ್ತಾರೆ. ನಾನು ಅಂಥವನಲ್ಲ' ಎಂದನು.

ಮಲ್ಲಪ್ಪ ಸಂತಸದಿಂದ 'ನಿಜ. ಎಲ್ಲಾ ವಾದಕ್ಕೂ ಎರಡು ಪಕ್ಷ ಇರಲೇ ಬೇಕು. ಗುಲಗಂಜಿಗೆ ತನ್ನ ಕಪ್ಪು ತನಗೇ ಕಾಣಿಸದು' ಎಂದು ಟೀಕೆ ಮಾಡಿದನು.

ಎಲ್ಲರೂ ನಕ್ಕರು ಅರ್ಚಕನು ಪೆಚ್ಚಾದನು.

ಆಮೇಲೆ ದುಃಖದಿಂದ ಅವನು 'ಗೊತ್ತಾಯಿತು. ನನ್ನ ಓಡಿಸಲು ಹೀಗೆ ಮಾಡುತಿದ್ದೀರಿ. ನಾನು ಬಿಟ್ಟು ಹೋಗುವವನಲ್ಲ' ಎಂದು ಉತ್ತರ ಕೊಟ್ಟನು.

ಪುನಃ ಬೋರಣ್ಣನು ಸಮಾಧಾನ ಮಾಡಲು ಪ್ರಯತ್ನ ಪಟ್ಟನು.

ಆಮೇಲೆ ಚನ್ನೇಗೌಡ ಊರಿಗೆ ಬಂದ ಮಾತು ಮುಖ್ಯವಾಯಿತು.

'ನಿಮಗೆ ಜ್ಞಾಪಕವದಾ, ಮಲ್ಲಪ್ಪನವರೆ?' ಎಂದು ಬೋರಣ್ಣನು ಕೇಳಿದನು.

ಮಲ್ಲಪ್ಪನಿಗೆ ಹೊಗಳಿಕೆ ಕಂಡರೆ ಇಷ್ಟ. ಅವನು ತಿಳಿದುದನ್ನು ಬೇಗ ಹೇಳುತ್ತಿರಲಿಲ್ಲ. ಇತರರನ್ನು ಪ್ರಶ್ನಿಸುವುದು ಅವನ ಅಭ್ಯಾಸ.

ಸ್ವಲ್ಪ ಹೊತ್ತಿನ ಮೇಲೆ ಅವನು 'ಅವನು ಬಲೆ ದೊಡ್ಡ ಮನುಷ್ಯ ನಯ್ಯ. ಅವನು ಬಂದದ್ದು ಬಡಗ ಸೀಮೆಯಿಂದ. ಅವನು ಬಂದಾಗ ಅವನ ಹತ್ತಿರ ದೊಡ್ಡ ಕುರಿ ಹಿಂಡಿತ್ತು. ಗುಡಿ ತೋಟ ತಗೊಂಡದ್ದು ಅವನು ಈ ಊರಿಗೆ ಬಂದಾಗಲೇ. ಅಣ್ಣ ತಮ್ಮಂದಿರು ಜಗಳ ಆಡಿಕೊಂಡು ಅವನು ಇಲ್ಲಿಗೆ ಬಂದನಂತೆ. ಅವರ ಮನೆ ಅಚ್ಚುಕಟ್ಟೇ ಅಚ್ಚುಕಟ್ಟಯ್ಯ ಈ ಊರಿಗೆ ಬಂದಮೇಲೆ ಅವನ ಮಗನಿಗೂ ಸಮ್ಮೂರ ಲಕ್ಷ್ಮಮ್ಮನ ತಂಗಿಗೂ ಮದುವೆಯಾಯಿತು' ಎಂದು ಮಾತು ನಿಲ್ಲಿಸಿದನು.

ಒಂದು ಸಲ ಮಾತನಾಡಿದರೆ ಎಲ್ಲವನ್ನೂ ಬಿಡದೆ ಹೇಳುವುದು ಮಲ್ಲಪ್ಪನ ಮತ್ತೊಂದು ಪದ್ಧತಿ.

'ಸರಿಸರಿ. ಮದುವೆ ಮನೆಯಲ್ಲಿ ಏನಾಯಿತು? ನೀನು ಹೋದ್ದೆಯಾ?' ಎಂದು ಬೋರಣ್ಣನೇ ಪುನಃ ವಿಚಾರಿಸಿದನು.

'ಇದ್ದೆ. ಒಂದು ತಮಾಷೆ ಆಯಿತಯ್ಯ. ಧಾರೆ ಮುಹೂರ್ತದಲ್ಲಿ ಅಯ್ಯನವರು ಹೇಳಿದ ಹೆಸರುಗಳೆಲ್ಲಾ ತಪ್ಪೇ ಆದರೆ ಅದು ಯಾರಿಗೂ ತಿಳಿದಿರಲಿಲ್ಲ. ಹೆಣ್ಣು ಗಂಡು ಮದುವೆ ಆಗೇ ಬಿಟ್ಟಿತು........' ಎಂದು ಏನೋ ಹೇಳುವುದರಲ್ಲಿದ್ದನು.

ಆಗ ಹುಚ್ಚಪ್ಪನು 'ನೀವು ಸುಮ್ಮನಿದ್ದರ, ಮಲ್ಲಪ್ಪನವರೆ?' ಎಂದ ವಿಚಾರಿಸಿದನು.

ಈ ಪ್ರಶ್ನೆ ಕೇಳಿ ನಗುತ್ತ ಮಲ್ಲಪ್ಪನು 'ಯಾಕೆ ಹಿಂಗೆ ಕೇಳುವಿರಿ? ಆ ದಿನವೆಲ್ಲ ನನಗೆ ಅದೇ ಯೋಚನೆ. ಮದುವೇಲಿ ಗಂಟು ಹಾಕೋದು ಶಾಸ್ತ್ರನೋ ಸೂಸ್ತ್ರನೋ?' ಎಂದು ಕೇಳಿದನು.

'ನೀನು ಕೇಳದೆ ಬಿಟ್ಟೆಯಾ?' ಎಂದು ಬೋರಣ್ಣ ಮತ್ತೆ ಪ್ರಶ್ನೆ ಮಾಡಿದನು.

ಅದಕ್ಕೆ ಮಲ್ಲಪ್ಪನು 'ಎಲ್ಲಾ ಆಗುವ ತನಕ ಸುಮ್ಮನಿದ್ದೆ. ಆಮೇಲೆ ಕೇಳಿದೆ ಅಯ್ಯನವರನ್ನ. ಅವರು ನಗುತ್ತಾ "ಶಾಸ್ತ್ರನೂ ಇಲ್ಲ ಸೂಸ್ತ್ರನೂ ಇಲ್ಲ. ಚಪ್ಪರದ ಸಭೆ" ಎಂದರು. ಮದುವೆ ನಡೆದೇ ಹೋಯಿತು. ಏನೂ ಆಗಲಿಲ್ಲ. ಗಂಡ ಹೆಂಡರು ಮಕ್ಕಳು ಮರಿ—ಎಲ್ಲ ಸುಖವಾಗೇ ಇದ್ದರು ಅವಳು ಮಾತ್ರ ಪ್ರಾಯದಲ್ಲೇ ಸತ್ತಳು' ಎಂದು ಹೇಳಿದನು.

ಬಳಿಕ ದೇವಸ್ಥಾನದ ತೋಟದ ವಿಷಯ ಮುಂದೆ ಬಂದಿತು.

ತೋಟದ ಮಾತುಕತೆಗಳಾದ ಮೇಲೆ

'ಅಲ್ಲಿ ರಾತ್ರೀ ಹೊತ್ತು ಏನೇನೋ ಕಾಣ್ತದಂತೆ' ಎಂದು ಬೋರಣ್ಣನು ಹೇಳಿದನು.

'ಎನು ಹಿಂಗೆ ಹೇಳ್ತೀ? ಅಲ್ಲಿ ಮಧ್ಯ ರಾತ್ರೀಲಿ ದೀಪ ಉರಿತ್ತದೆ ಗಂಟೆ ಸದ್ದು ಕೇಳ್ತದೆ. ನಿಮಗೆ ಗೊತ್ತಿಲ್ಲವಾ? ನಮ್ಮಪ್ಪ ಹೇಳಿದ್ದ' ಎಂದು ಆಚ್ಚರಿಪಟ್ಟನು.

ಆಗ ಬೋರಣ್ಣನು 'ಕೇಳಿದೆಯಾ! ಈಗ ಏನು ಹೇಳ್ತೀ? ಸುಳ್ಳೋ ನಾನು ಹೇಳಿದ್ದು?' ಎಂದು ಕೇಳಿ ಮೈ ಮುರಿಯುತ್ತಿದ್ದ ರಾಮಾಚಾರಿಯನ್ನು ನೋಡಿದನು.

ರಾಮಾಚಾರಿಗೆ ಇವುಗಳಲ್ಲಿ ನಂಬುಗೆ ಕಡಮೆ.

'ಹೇಳೋದೇನು! ಮಾತಾಡಿದರೆ ಆಯ್ತೆ? ನನ್ನೊಂದಿಗೆ ಯಾರಾದರೂ ಬರಲಿ ಈಗ ಹೋಗಿ ನೋಡೋಣ' ಎಂದನು.

ಇದನ್ನು ಕೇಳಿ ಭದ್ರಪ್ಪನು 'ಬಾಯಿ ಮಾತಲ್ಲ. ಬೆಂಕೀಲಿ ಕೈ ಯಿಟ್ಟರೆ ಏನಾಗ್ತತೆ? ಯಾರು ಬರ್ತಾರೆ ನಿನ್ನ ಜತೇಲಿ!' ಎಂದು ಕೇಳಿದನು.

ಮಲ್ಲಪ್ಪನು ನಗುತ್ತ 'ನೀನು ಒಬ್ಬನೇ ಹೋಗು. ಯಾರು ಬೇಡ ವೆನ್ನುತ್ತಾರೆ? ಊರಿನವರ ಮಾತು ಸುಳ್ಳೋ ದಿಟವೋ ನೋಡು' ಎಂದು ರಾಮಾಚಾರಿಗೆ ಹೇಳಿದನು.

ಆಗ ಹುಚ್ಚಪ್ಪನು 'ಇದು ಸರಿಯೋ? ಅವನು ನೋಡೋದು ಯಾರಿಗೆ ಗೊತ್ತು! ಸಾಕ್ಷಿ ಯಾರಾದರೂ ಒಂದಿಗೆ ಹೋದರಲ್ಲವಾ?' ಎಂದು ತರ್ಕ ಮಾಡಿದನು.

ಆಚಾರಿಯು ಕೋಪಗೊಂಡು 'ಇದು ನನ್ನ ತಪ್ಪೆ? ಯಾರಾದರೂ ಬರಲಿ ಕಳಿಸು' ಎಂದು ನೆಲ ಬಡಿದನು

ಆ ಸಮಯದಲ್ಲಿ ಹುಚ್ಚಪ್ಪನ ಸಮಾಧಾನ ಮೊದಲಾಯಿತು.

ಅವನು 'ನಿನ್ನ ಮಾತೇ ನಿನಗೆ. ಹೋಗಲಿ. ಬಿಡು. ಯಾವಾರ ಬೇಡ' ಎಂದು ರಾಮಾಚಾರಿಗೆ ಹೇಳಿದನು.

ತಿರುಗಿ ರಾಮಾಚಾರಿ 'ಇದೇನು ಮಾತು! ಹಿಂಗೆ ಹೇಳಿದರೆ ಯಾರಿಗೆ ಕೇಗೋದಿಲ್ಲ' ಎಂದು ಕೇಳಿದನು.

ನಿಜ ಏಕೆಂದರೆ—'ದೆವ್ವ ಭೂತ ಎಲ್ಲರ ಕಣ್ಣಿಗೂ ಕಾಣಿಸೋದಿಲ್ಲ. ರೂ ಸರಿ. ಇಬ್ಬರೂ ತಪ್ಪು' ಎಂದು ಹುಚ್ಚಪ್ಪನು ತೀರ್ಮಾನ ಮಾಡಿದನು.

ಈ ಮಾತುಗಳು ಆಚಾರಿಗೆ ಸರಿ ಬೀಳಲಿಲ್ಲ.

'ಹಾಗಾದರೆ ಅವು ಇಲ್ಲಿ ಯಾಕೆ ಬರೋದಿಲ್ಲ?' ಎಂದು ತನ್ನ ಅವಿ ವನ್ನು ಮತ್ತೆ ಪ್ರಕಟಿಸಿದನು

ಹೀಗೆಯೇ ಅನೇಕರು ತಮ್ಮ ಅಭಿಪ್ರಾಯಗಳನ್ನು ಬಗೆಬಗೆಯಾಗಿ ಸೂಚಿಸಿದರು.

ಆಗ್ಗೆ ಸರಿಯಾಗಿ ಬಾಗಲಿಂದ ಬಲವಾದ ಗಾಳಿ ಬೀಸಿ ದೀಪ ಆರಿತು. ಪುನಃ ದೀಪ ಹೊತ್ತಿಸಿ ಬಾಗಲು ಮುಚ್ಚಲು ಹೋದರು. ಬಾಗಲಲ್ಲಿ ಆಕಾರ ವೊಂದು ನಿಂತಿದ್ದಂತೆ ಕಾಣಿಸಿತು. ಕೂಗಿದರು. ಮಾತಿಲ್ಲ. ಚಲನೆ ಇಲ್ಲ. ಸವೆದ ಮೈ, ಬಿಳುಪು ಮೋರೆ, ಹೊಳಪಿಲ್ಲದ ಕಣ್ಣು! ನೋಡಿದರೆ ದಾಸ ನಂತಿದ್ದಿತು. ಆದರೆ ದಾಸ ಅಲ್ಲಿಗೆ ಎಂದೂ ಬಂದಿರಲಿಲ್ಲ ಹಾಗಾದರೆ ಇದೇನು ?

೮

# ಫಿರ್ಯಾದು

ದಾಸನು ದೀಪ ಆರಿದಾಗ ಚಾವಡಿಯೊಳಕ್ಕೆ ಬಂದು ಸುಮ್ಮನೆ ನಿಂತಿದ್ದನು. ಯಾರೂ ಇದನ್ನು ನೋಡಿರಲಿಲ್ಲ. ಎಲ್ಲರೂ ಇದು ಭೂತವೆಂದೇ ಬಗೆದರು. ನಿಶ್ಶಬ್ದ! ಎಲ್ಲರಿಗೂ ಭೀತಿ!! ಮಲ್ಲಪ್ಪ ತನ್ನ ಮಾತು ನಿಜವಾಯಿತೆಂದು ಹಿಗ್ಗಿರಬೇಕು.

ಕೊನೆಗೆ ಬೋರಣ್ಣನು, ಧೈರ್ಯತಾಳಿ ವಿನಯದಿಂದ ಆ ವ್ಯಕ್ತಿಯನ್ನು ದಾಸನಿರಬಹುದೆಂದು ಯೋಚಿಸುತ್ತ 'ದಾಸಣ್ಣ! ನಿಂಗೇನು ಅರೆ? ಏನು ಬೇಕು? ಯಾಕೆ ಬಂದೆ ಇಲ್ಲಿ? ಎಂದು ಮೆತ್ತಗೆ ಕೇಳಿದನು.

ದಾಸನು ಒಡನೆಯೇ 'ಕಳವು! ಕಳವು!! ನನ್ನ ಹೊನ್ನು ಕಳುವಾಗಿದೆ!!!' ಎಂದು ಉಸಿರು ಬಿಡದೆ ಹೇಳಿದನು

ಯಾರಿಗೂ ಏನೂ ಅರ್ಥವಾಗಲಿಲ್ಲ. ಎಲ್ಲರಿಗೂ ಭಯ ಬೋರಣ್ಣನೆ ಮತ್ತೆ ಪ್ರಶ್ನೆ ಮಾಡಿದನು.

ದಾಸನು ಪುನಃ ಹಾಗೆಯೇ ಹೇಳಿ 'ಪಟೇಲ, ತಳವಾರ, ಹೆಗ್ಗಡೆ—ಇವರೆಲ್ಲ ಎಲ್ಲಿ?' ಎಂದು ಆತುರದಿಂದ ಕಿರಿಚಿದನು.

ಎಲ್ಲರಿಗೂ ಅಷ್ಟು ಹೊತ್ತಿಗೆ ಭೂತದ ಮೇಲಿನ ಗಮನ ಕಡಮೆಯಾಗಿ ಆ ಆಕೃತಿ ದಾಸನೇ ಎಂದು ನಿಶ್ಚಯವಾಯಿತು.

ಆಮೇಲೆ ಬೋರಣ್ಣ 'ಪಾಪ. ದಾಸನನ್ನು ಹಿಡಿದುಕೋ, ನಡಗುತ್ತಾ ಇದ್ದಾನೆ, ಬಿದ್ದಾನು' ಎಂದು ದೂರದಲ್ಲಿದ್ದ ವೀರಾಬೋಯಿಗೆ ಹೇಳಿದನು.

ದಾಸನಿಗೂ ಬೊಯಿಗೂ ದೂರವಿರಲಿಲ್ಲ.

'ನೀನೇ ಬಂದು ಹಿಡಿದುಕೋ, ಬೇಕಾದರೆ. ಕಳುವಿನ ಜತೆಗೆ ಕೊಲೆಯೂ ಆಗಿರಬಹುದು' ಎಂದು ಬೋಯಿ ಏನೋ ಗೊಣಗುಟ್ಟಿದನು.

ದಾಸನಿಗೆ ಬೋಯಿಯ ಮೇಲೆ ಸಂಶಯವಿದ್ದಿತಷ್ಟೆ.

'ವೀರಾಬೋಯಿ!' ಎಂದು ಗಟ್ಟಿಯಾಗಿ ಕೂಗಿ ದಾಸನು ಅವನನ್ನು ದುರದುರನೆ ನೋಡಿದನು.

ಎಲ್ಲರೂ ಸುಮ್ಮನೆ ಕುಳಿತಿದ್ದರು.

'ಏನು ದಾಸಣ್ಣಾ!' ಎನ್ನುತ್ತ ಬೋಯಿಯು ಹೆದರಿ ಎದ್ದು ನಿಂತನು.

ದಾಸನು ಅವನ ಬಳಿಗೆ ಹೋಗಿ ಅವನ ಕೈಗಳನ್ನು ಹಿಡಿದುಕೊಂಡು, ದೀನತೆಯಿಂದ 'ನನ್ನ ಹಣ ನೀನೇ ಕದ್ದಿದ್ದರೆ ಕೊಟ್ಟುಬಿಡು. ನಾನೇನು ಮಾಡುವುದಿಲ್ಲ ನನ್ನ ಮಾತು ಕೇಳು. ತಳವಾರನೂ ಬೇಡ ಯಾರೂ ಬೇಡ. ನಾನೇ ನಿನಗೆ ಹತ್ತು ರೂಪಾಯಿ ಕೊಡುವೆ' ಎಂದು ಮೊರೆಯಿಟ್ಟನು.

'ನಾನು ನಿನ್ನ ಹಣ ಕದ್ದಿದ್ದರೆ! ಪುನಃ ಹಾಗೆ ಹೇಳಬೇಡ. ನಿನ್ನ ತಲೆ ಬುರುಡೆ ಹಾರಿಸಿಬಿಟ್ಟೇನು!' ಎನ್ನುತ್ತ ಬೋಯಿ ತನ್ನ ಮುಷ್ಟಿಯನ್ನು ದಾಸನಿಗೆ ತೋರಿಸಿದನು.

ಆಗ ಬೋರಣ್ಣನು ತಾನೇ ಎದ್ದುಹೋಗಿ, ದಾಸನನ್ನು ಹಿಡಿದುಕೊಂಡು, ಅವನ ಮೈ ಮುಟ್ಟಿನೋಡಿ, 'ಬಾ ಬಾ, ದಾಸಣ್ಣಾ! ನೆಟ್ಟಗಿದ್ದೀಯಾ? ತಿಳಿಯುವ ಹಾಗೆ ಹೇಳು. ನಿನ್ನ ಬಟ್ಟೆ ಒದ್ದೆಯಾಗಿದೆ. ಸ್ವಲ್ಪ ಆರಿಸಿಕೊ' ಎಂದು ಉಪಚಾರ ಮಾಡಿದನು.

ಇದುವರೆಗೆ ರಾಮಾಚಾರಿ ಮಾತಾಡಿರಲಿಲ್ಲ.

ಅವನೂ 'ನಿಜ ನಿಜ. ಕೂತುಕೊ, ದಾಸಣ್ಣ. ಏನಾಗಿದೆ ಹೇಳು' ಎಂದು ಕೇಳಿದನು.

ಎಲ್ಲರೂ ಒಂದೇ ಬಾರಿ ಕೂಗಿಕೊಂಡು ಅವನ ಮೈ ಮೇಲೆ ಇದ್ದ ಒದ್ದೆ ಬಟ್ಟೆ ತೆಗೆಸಿ, ತಮ್ಮ ಮೈ ಮೇಲಿದ್ದ ಹೆಚ್ಚು ಬಟ್ಟೆ ಕೊಟ್ಟರು. ಅವರೆಲ್ಲರ ಕಣ್ಣೂ ಅವನ ಮೇಲೆ ಇದ್ದಾಗಲೇ ಬೋರಣ್ಣ ಅವನನ್ನು ನೋಡುತ್ತ 'ದಾಸಣ್ಣಾ! ಈಗ ಹೇಳು ಅದೇನು ಕಳುವಿನ ವಿಷಯ?' ಎಂದು ಕೇಳಿದನು.

ಅಷ್ಟರಲ್ಲಿ ಬೋಯಿ 'ದಾಸಣ್ಣಾ! ಜೋಕೆ! ನನ್ನ ಹೆಸರು ಮಾತ್ರ ಹೇಳಬೇಡ.' ಎಂದು ಎಚ್ಚರ ಕೊಟ್ಟನು.

ಬೋರಣ್ಣನು 'ಬೋಯಿ, ಸುಮ್ಮನಿರು. ದಾಸ ಹೇಳುವುದು ಕೇಳುವ' ಎಂದನು.

ಅಲ್ಲಿದ್ದವರು ಪದೇ ಪದೇ ಪ್ರಶ್ನೆಮಾಡಿ ಕೊನೆಗೆ ಕಳವಿನ ವಿಷಯ ವನ್ನು ತಿಳಿದುಕೊಂಡರು.

ದಾಸನು ತನ್ನ ಮನದ ಅಳಲನ್ನು ಹೀಗೆ ಊರಿನವರಿಗೆ ಹೇಳಿದುದು ಅದೇ ಮೊದಲು. ಆಗ ಅವನು ತನ್ನ ನಷ್ಟವಿನಾ ಮತ್ತಾವುದನ್ನೂ ಕುರಿತು ಯೋಚಿಸುತ್ತಿರಲಿಲ್ಲ. ಆದರೂ ಇದರ ಪ್ರಭಾವವು ಅವನ ಮೇಲೆಯೂ ಊರಿನವರ ಮೇಲೆಯೂ ಇದ್ದೇ ಇದ್ದಿತು. 'ಜನದೊಡನೊಂದಿದ್ದು ಬಾಳ್ವನೇ ಸತ್ಪುರುಷಂ' ಎಂಬುದು ಜೀವನದ ರಹಸ್ಯ ಜೀವನದ ಕಾರ್ಯ ಕಾರಣಗಳ ಪರಂಪರೆಯನ್ನು ಸಂಪೂರ್ಣವಾಗಿ ಅರಿತು, ಅಳೆದು, ಅರುಹ ಬಲ್ಲವರಾರು? ಪರರ ಮನಸ್ಸನ್ನು ತಿಳಿಯುವುದು ಕಷ್ಟ!

ಮೊದಲು ಮೊದಲು ಚಾವಡಿಯಲ್ಲಿದ್ದವರು ದಾಸನ ಹೇಳಿಕೆಯನ್ನು ನಂಬಲಿಲ್ಲ. ಕ್ರಮೇಣ ಅವನ ದುಃಖದ ಸ್ವಭಾವನ್ನು ನೋಡಿ ಅವರಿಗೂ ಅನುತಾಪ ಉಂಟಾಯಿತು ಅವನು ಸಹಜವಾಗಿಯೂ ಸಾಧುವೆಂಬುದನ್ನು ಅವರು ಈಗ ಅರಿತರು

ಆಮೇಲೆ ಬೋರಣ್ಣನು 'ನೀನು ಬೋಯಿ ಹೆಸರು ಹೇಳಬೇಡ. ಅವನು ಸಂಜೆಯಿಂದ ಇಲ್ಲೇ ಕುಂತಿದ್ದಾನೆ. ಅವನಿಗೇನು ಗೊತ್ತು?' ಎಂದು ದಾಸನಿಗೆ ನಂಬುಗೆ ಹೇಳಿದನು.

ಆಗ ಮಲ್ಲಪ್ಪನು 'ಬೋರಣ್ಣ ಹೇಳಿದ್ದು ಸರಿ. ವಿಚಾರಿಸಿ ಅಪರಾಧ ಹೊರಿಸಬೇಕು. ಅದೇ ನ್ಯಾಯ' ಎಂದು ಅನುಮೋದಿಸಿದನು.

ದುಃಖವಿದ್ದರೂ ದಾಸನಿಗೆ ನೆನಪು ತಪ್ಪಿರಲಿಲ್ಲ. ಮತ್ತೊಂದು ಸಾರಿ ಕಣ್ಣು ಮರಳಿಸಿಕೊಂಡು ಅವನು ಬೋಯಿಯನ್ನು ನೋಡಿದನು. ಮಲ್ಲಪ್ಪನ ಮಾತು ಕೇಳುತ್ತಲೇ ಅವನ ಸಂತಾಪವು ಇಮ್ಮಡಿಸಿತು.

ಬಳಿಕ ದಾಸನೇ ತಾನಾಗಿ 'ಹೌದು ಹೌದು ತಪ್ಪು ಮಾಡಿದೆ ಬೋಯೀ, ನೀನೇ ಅನ್ನುವುದಕ್ಕೆ ಗುರುತಿಲ್ಲ. ನೀನು ನನ್ನ ಮಂಟಪದ ಹತ್ತಿರ ಹೆಚ್ಚಾಗಿ ಬಂದಿದ್ದೆ. ಅಷ್ಟೇ. ಅದರಿಂದ ನಿನ್ನ ಹೆಸರು ನೆನಪಿಗೆ ಬಂತು. ನಾನು ಕಳವನ್ನು ನಿನ್ನ ಮೇಲೆ ಹೊರಿಸುವುದಿಲ್ಲ—ಯಾರ ಮೇಲೂ ಹೊರಿಸುವುದಿಲ್ಲ' ಎನ್ನುತ್ತ ಉಕ್ಕಿ ಬರುತ್ತಿದ್ದ ದುಃಖವನ್ನು ಸಹಿಸಲಾರದೆ,

ಕೈಗಳನ್ನು ತನ್ನ ತಲೆ ಮೇಲೆ ಇಟ್ಟುಕೊಂಡು, ಅತ್ತ ಕಡೆ ತಿರುಗಿ, ' ನನಗೆ ಬೇಕಾದ್ದು ನನ್ನ ಹಣ ' ಎಂದು ಮರುಕ ಹುಟ್ಟುವಂತೆ ಹೇಳಿದನು.

' ಸರಿಸರಿ. ಯಾವದೋ ದೆವ್ವ ಕೊಂಡು ಹೋಗದೆ ' ಎಂದು ಮಲ್ಲಪ್ಪನು ಊಹಿಸಿದನು.

ಆಚಾರಿಯು ' ಹುಷ್, ಹುಷ್ ! ' ಎಂದು ಆ ಮಾತು ಮರೆಯಿಸಿ ' ದಾಸಣ್ಣ ಚೀಲದಲ್ಲಿ ಎಷ್ಟು ಹಣ ಇತ್ತು ' ಎಂದು ಕೇಳಿದನು.

ದಾಸನು ಬಿಸುಸುಯ್ಯುತ್ತ ' ನಾನೇ ನಿನ್ನೆ ರಾತ್ರಿ ಲೆಕ್ಕ ಮಾಡಿದೆ ಒಟ್ಟು ಎಂಟುನೂರ ಇಪ್ಪತ್ತು ರಾಣಿ ಸವರನ್ ಇತ್ತು ಸುಳ್ಳಲ್ಲ ' ಎಂದನು.

ಆಗ ರಾಮಾಚಾರಿ ' ಹಂಗಿದ್ದರೆ ಅಷ್ಟೇನೂ ಬಾರ ಇರಲಿಲ್ಲ. ಯಾವನೋ ತಿರುಗಗಾಲ ಅದನ್ನು ಹೊಡೆದುಬಿಟ್ಟಿದಾನೆ. ನಿಂಗೆ ಕಣ್ಣು ಚೆನ್ನಾಗಿ ಕಾಣಿಸೋಕಿಲ್ಲ. ಈಗ ನಾನು ಹೇಳೋದು ಕೇಳು. ತಳವಾರನಿಗೆ ಜರ ಬಂದಿತ್ತು. ಅವನು ಏಳಲಾರ. ಯಾರಾದರೂ ಇಬ್ಬರು ನನ್ನೊಂದಿಗೆ ಪಟೀಲನ ಮನೆಗೆ ಬರಲಿ. ಪಟೇಲ ಯಾರನ್ನು ಗೊತ್ತು ಮಾಡುವನೋ ನೋಡೋಣ. ನನ್ನನ್ನೇ ಗೊತ್ತು ಮಾಡಿದರೆ ನಾನು ನಿನ್ನೊಂದಿಗೆ ಹೋಗಿ, ಸ್ಥಳ ಅಜಮಾಯಿಷಿ ಮಾಡಿಕೊಂಡು ಬರ್‍ತೇನೆ ' ಎಂದು ಹೇಳಿದನು

' ಆಕಾಸ ಹೆಂಗದೋ ನೋಡುವ ' ಎಂದು ಬೋರಣ್ಣ ಹೊರಗೆ ಬಂದು ನೋಡಿ ' ಈಗಲೂ ಮಳೆ ಸುರೀತಾ ಇದೆ ? ಎಂದನು.

ಆಗ ರಾಮಾಚಾರಿ ' ಈಗ ಮಳೆಗೆ ಹೆದರಬಹುದೆ ? ಫಿರ್ಯಾದು ಬಂದಾಗ ಹೋಗದಿದ್ದರೆ ಸರ್ಕಾರದವರು ಏನೆಂದಾರು ? ನಮ್ಮಂತ ದೊಡ್ಡ ಮನುಷ್ಯರು ತಿಳಕೊಂಡು ಸುಮ್ಮನಿರಬಾರದು ' ಎಂದು ತನ್ನ ಕರ್ತವ್ಯ ಜ್ಞಾನವನ್ನು ಪ್ರದರ್ಶಿಸಿ ಎಲ್ಲರನ್ನೂ ನೋಡುತ್ತ ಎದ್ದನು. ಕೊನೆಗೆ ಅಲ್ಲಿದ್ದವರು ಅದೇ ಯುಕ್ತವೆಂದು ಸಮ್ಮತಿಸಿದರು. ಬೋರಣ್ಣನೂ ರಾಮಾಚಾರಿಯೂ ಪಟೇಲನ ಮನೆಗೆ ಹೋಗಬೇಕೆಂದು ಇತ್ಯರ್ಥವಾಯಿತು. ಅಷ್ಟರಲ್ಲಿ ' ತಳವಾರನ ಕೆಲಸವನ್ನು ಅಕ್ಕಸಾಲೆ ಮಾಡಬಹುದೆ ? ' ಎಂದು ಮಲ್ಲಪ್ಪನು ಪ್ರಶ್ನೆ ಮಾಡಿದನು. ಆಚಾರಿಗೆ ಕೋಪಾ ಬಂದಿತು. ' ನಾನು ಬರೋಕಿಲ್ಲ ಯಾರು ಬೇಕಾದರೂ ಹೋಗಲಿ. ನನ್ನ ಬಿಟ್ಟು ಬಿಡಿ '

ಎಂದು ಅವನು ಕೂತುಬಿಟ್ಟನು ತರುವಾಯ ಬೋರಣ್ಣನ ಪ್ರಯತ್ನದಿಂದ ಈ ವಿವಾದವು ಬಗೆಹರಿಯಿತು. ಕಡೆಗೆ ರಾಮಾಚಾರಿ ಒಪ್ಪಿದನು. ಅವರಿಬ್ಬರೂ ಅಲ್ಲಿಂದ ದಾಸನೊಡನೆ ಮಳೆಯಲ್ಲಿ ಹೊರಟರು. ಆಗ ದಾಸನಿಗೆ ಎಂದಿಗೆ ಬೆಳಗಾದೀತೋ ಎಂಬ ಚಿಂತೆ ಅವನಿಗೆ ಒಂದೊಂದು ಕ್ಷಣವೂ ಒಂದೊಂದು ವರ್ಷದಂತೆ ತೋರುತ್ತಿದ್ದಿತು.

——:o:——

## ೬

# ಬಸಪ್ಪನ ಭಯ

ಸಾಹುಕಾರ ಸಿದ್ದಪ್ಪನ ಮನೆಯಿಂದ ಬಸಪ್ಪನು ಬಂದಾಗ ಅರ್ಧರಾತ್ರಿ ನಾಗಣ್ಣ ಹಿಂದಿರುಗಿ ಬಂದಿರಲಿಲ್ಲ 'ಇನ್ನೂ ಮಾರಾಟ ಆಗಿರಲಾರದು. ಮಳೆಗೋಸ್ಕರ ಅವನು ಮನೆಗೆ ಬಂದಿಲ್ಲ ಎಲ್ಲೋ ಹೋಗಿ ಕಾಲ ಕಳೆಯುತ್ತ ಇರಬಹುದು' ಎಂದು ಮುಂತಾಗಿ ಬಸಪ್ಪನಿಗೆ ಏನೇನೋ ಯೋಚನೆಗಳು. ಅಷ್ಟರಲ್ಲಿ ಚೆನ್ನಮ್ಮನ ನೆನಪು ಬಂದಿತು 'ನನ್ನಂತಹ ನಿರ್ಭಾಗ್ಯರು ಉಂಟೆ? ನಾನೆಂತಹ ಅವಿವೇಕಿ! ಮುಂದೇನು ಆಗುವದೋ' ಎಂದು ಪುನಃ ಚಿಂತೆ ಈ ಚಿಂತೆಯಲ್ಲಿ ತಮ್ಮನ ಯೋಚನೆಯು ಗಣನೆಗೆ ಬರಲಿಲ್ಲ.

ಮಾರನೆಯ ದಿನ ಬೆಳಿಗ್ಗೆ ಊರಿನಲ್ಲೆಲ್ಲ ದಾಸನ ಹೊನ್ನಿನ ಕಳುವಿನ ಸುದ್ದಿ ಹರಡಿ ಒಂದೇ ಗುಜುಗುಜು. ಬಸಪ್ಪನೂ ಎಲ್ಲರಂತೆ ಅಲ್ಲಿಗೆ ಹೋಗಿ, ದಾಸನನ್ನು ವಿಚಾರಿಸಿ ಕಳ್ಳನನ್ನು ಹಿಡಿಯಲು ಪ್ರಯತ್ನ ಪಟ್ಟನು ಮಳೆಯಿಂದ ಕಳ್ಳನ ಹೆಜ್ಜೆ ಗುರುತುಗಳು ಅಳಿಸಿ ಹೋಗಿದ್ದುವು ಎಷ್ಟು ನೋಡಿದರೂ ಕಳ್ಳನ ಜಾಡೇ ಸಿಗಲಿಲ್ಲ. ಬೋರಣ್ಣ ಬೆಳಿಗ್ಗೆ ಹೋಗಿ ನೋಡಿದಾಗ ಕುಳಿಯ ಹತ್ತಿರ ಒಂದು ಜತೆ ಪಾವರಕ್ಷೆ ಹೂತು ಬಿದ್ದಿದ್ದಿತು ಅದರ ಸಹಾಯದಿಂದ ಕಳ್ಳನು ಸಿಕ್ಕಬಹುದೆಂದು ಅನೇಕ ಮಂದಿ ಉತ್ಸಾಹಗೊಂಡರು. ಕೆಲವರು ನಂಬದೆ 'ದಾಸನು ಸುಳ್ಳು ಹೇಳಿ ಸುಮ್ಮ ಸುಮ್ಮನೆ ಕಳವಳ ಉಂಟುಮಾಡಿದಾನೆ ಎಂದು' ಸಂಶಯ ಪಟ್ಟರು. ಹಲವರು 'ಸುಳ್ಳಿರಲಾರದು' ಎಂದರು. ಒಬ್ಬಿಬ್ಬರ ಬಾಯಿಂದ 'ದಾಸನಿಗೆ ಹುಚ್ಚು ಹಿಡಿದಿದೆ' ಎಂಬ ಮಾತೂ ಬಂದಿತು

'ಕಳವು ನಡೆದಿರುವುದು ನಿಜ. ಕಳ್ಳನನ್ನು ಹೇಗೆ ಹಿಡಿಯುವುದು?' ಎಂದು ಮಲ್ಲಪ್ಪನು ಕೇಳಿದನು.

'ತಳವಾರ, ನೀರುಗಂಟಿ ಇದನ್ನು ಕಂಡು ಹಿಡಿಯಬಲ್ಲರೆ' ಎಂದು ಅರ್ಚಕ ಸಂಶಯಪಟ್ಟನು

ಮಲ್ಲಪ್ಪನು ಸಿಟ್ಟುಗೊಂಡು 'ನೋಡಿದೆಯೋ ನೀನೂ ಈ ಹಳ್ಳಿಯವನು. ಹಾಂಗೆ ಹೆಸರು ಹೇಳಬಾರದು' ಎಂದು ಬುದ್ಧಿ ಹೇಳಿದನು.

ಆ ವೇಳೆಗೆ ಗ್ರಾಮದ ಪಟೇಲ ಶಾನುಭೋಗ ಮುಂತಾದ ಅಧಿಕಾರಿಗಳೂ ಕಳವಿನ ವಿಷಯವನ್ನೇ ಯೋಚಿಸುತಿದ್ದರು.

ಚಾವಡಿ ಬಳಿ ಓಡಾಡಿದ ಒಬ್ಬ ಯಾವುದೋ ಊರಿನ ವ್ಯಾಪಾರಿಗೂ ಆ ಪಾದರಕ್ಷೆಗಳಿಗೂ ಸಂಬಂಧವನ್ನು ಬೋರಣ್ಣನು ಕಲ್ಪಿಸಿದನು. ಆ ವ್ಯಾಪಾರಿಯ ಹೆಸರು ಎತ್ತಲು ಮರೆತುಹೋಗಿದ್ದ ಸಂಗತಿಗಳೂ ಜ್ಞಾಪಕಕ್ಕೆ ಬಂದುವು ಅವನ ಮೈಬಣ್ಣ, ಚಹರೆ, ಬಟ್ಟೆ ಮುಂತಾದುವನ್ನೂ ಜ್ಞಾಪಿಸಿಕೊಳ್ಳುತಿದ್ದಾಗ 'ಅವನ ಕಿವಿಯಲ್ಲಿ ಉಂಗುರವಿತ್ತೆ ?' ಎಂದು ಪಟೇಲನು ಕೇಳಿದನು ಬೋರಣ್ಣ 'ನಂಗೆ ಜ್ಞಾಪ್ತಿ ಇಲ್ಲ ಯಾರಾದರೂ ನೋಡಿರಬಹುದು. ಕೇಳೋಣ' ಎಂದನು. ಈ ಸುದ್ದಿ ಹರಡಿತು. ಊರಿನವರು ಬಂದ ಎಲ್ಲ ವ್ಯಾಪಾರಿಗಳ ಕಿವಿಗಳನ್ನೂ ನೋಡಲು ಮೊದಲು ಮಾಡಿದರು. ಏಕೆಂದರೆ ಅದು ಕಳ್ಳನನ್ನು ಹಿಡಿಯಲಿಕ್ಕೆ ಮುಖ್ಯವಾದ ಗುರುತಾಗಿದ್ದಿತು. ಆ ಮೇಲೆ ಬೇಕಾಗಿದ್ದ ವ್ಯಾಪಾರಿಯನ್ನು ನೋಡಿದ್ದೆವೆಂದು ತಿಳಿದುಕೊಂಡಿದ್ದ ಸಾಕ್ಷಿಗಳೂ ಸಿಕ್ಕಿದರು ರಾಮಕ್ಕನು 'ಅವನ ಕಿವಿಯಲ್ಲಿ ಬಾವಲಿ ಇತ್ತು. ನಾನು ನೋಡಿದ್ದೆ' ಎಂದಳು. ಅವಳು ಸುಳ್ಳು ಹೇಳುವವಳಲ್ಲ. ಲಕ್ಕವ್ವನಿಗೂ ಇದು ಗೊತ್ತಿದ್ದಿತಂತೆ. ಮುನಿಯಮ್ಮನೆಂಬವಳು 'ನೀರಿಗೆ ಹೋಗಿದ್ದಾಗ ಅವನನ್ನು ನಾನು ನೋಡಿದೆ. ನನ್ನ ಮೈ ನಡುಗಿತು' ಎಂದು ಹೇಳಿದಳು. ಹೀಗೆ ಕಂಚುಗಾರರು, ಪಸಾರೆಯವರು, ಕಂದಾರಿಯವರು ಮುಂತಾದ ವ್ಯಾಪಾರಿಗಳ ಮೇಲೆಲ್ಲ ಅವರಿಗೆ ಸಂಶಯ ಹುಟ್ಟಿತು. ಕೊನೆಗೆ ಹಳ್ಳಿಯವರು ಆಗ ಅವರಿಂದ ಕೊಂಡುಕೊಂಡಿದ್ದ ಸಾಮಾನುಗಳನ್ನೆಲ್ಲ ಚಾವಡಿಯಲ್ಲಿ ಒಟ್ಟುಗೂಡಿಸಿ ಎಲ್ಲರನ್ನೂ ವಿಚಾರಿಸಿದರು. ಅಂತು ಊರಿನವರು ಕಳ್ಳನನ್ನು ಹಿಡಿಯಲು ಬಗೆಬಗೆಯಾಗಿ ಮೆಹನತ್ತು ಮಾಡಿದರು.

ಜನರು ಗುಮಾನಿಪಟ್ಟ ಒಬ್ಬ ಚಾಕು ವ್ಯಾಪಾರಿಯ ವಿಷಯದಲ್ಲಿ ಪ್ರಶ್ನಿಸಿದಾಗ ದಾಸನು ಕೊಟ್ಟ ಉತ್ತರವು ಅಷ್ಟು ಉತ್ತೇಜಕವಾಗಿರಲಿಲ್ಲ. ಆ ವ್ಯಾಪಾರಿಯು ಬಂದಿದ್ದನೆಂದೂ, ಹೊರಗೇ ನಿಂತು ತನ್ನನ್ನು ಕೂಗಿದನೆಂದೂ, ಏನೂ ಬೇಡವೆಂದು ತಾನು ಹೇಳಲು ಅವನು ಹೊರಟು ಹೋದ

ನೆಂದೂ, ಅದಕ್ಕಿಂತ ಹೆಚ್ಚಾಗಿ ತನಗೆ ಗೊತ್ತಿಲ್ಲವೆಂದೂ ದಾಸನು ಹೇಳಿದನು. ದಾಸನ ಸತ್ಯವನ್ನೂ ತವಕವನ್ನೂ ನೋಡಿ ಅವರಿಗೆ ಆಶ್ಚರ್ಯವಾಯಿತು. ಅವನ ಹೇಳಿಕೆಯನ್ನು ಗಮನಕ್ಕೆ ತಂದುಕೊಳ್ಳದೆ ಊರಿನವರು ಆ ವ್ಯಾಪಾರಿಯೇ ಕಳ್ಳನೆಂದು ತೀರ್ಮಾನ ಮಾಡಿದರು. ಒಂಟಿಯಾಗಿ ಊರ ಹೊರಗಿದ್ದ ದಾಸನನ್ನು ಕೊಲೆ ಮಾಡದೆ ಅವನ ಹಣವನ್ನು ಮಾತ್ರ ಕದ್ದುದಕ್ಕಾಗಿ ಅವರಿಗೆ ತುಂಬಾ ಹರಿಸವೂ ಆಯಿತು.

ಆಗಲೇ ಬಸಪ್ಪನೂ ಚಾವಡಿಗೆ ಬಂದನು. ತಾನೂ ಚೂರಿಯೊಂದನ್ನು ಆ ವ್ಯಾಪಾರಿಯಿಂದ ಕೊಂಡುಕೊಂಡಿದ್ದುದರಿಂದ ಹೀಗೆ ಅವನ ಮೇಲೆ ನಿಷ್ಕಾರಣವಾಗಿ ತಪ್ಪು ಹೊರಿಸುವುದು ಅವನಿಗೆ ನ್ಯಾಯವಾಗಿ ತೋರಲಿಲ್ಲ. ಆದರೂ ಸರ್ಕಾರದ ಮುಂದೆ ಆವಶ್ಯಕತೆ ಬಂದರೆ ವ್ಯಾಪಾರಿಯ ಮೇಲೆ ಹೇಳಿಕೆ ಕೊಡಲು ಕೆಲವರು ಸಿದ್ಧರಿದ್ದರು.

ಈ ಪರಿಯಲ್ಲಿ ಎಷ್ಟು ವಿಚಾರಣೆಗಳೂ ಊಹೆಗಳೂ ನಡೆದರೂ ಆ ಕಳ್ಳ ವ್ಯಾಪಾರಿ ಸಿಗಲಿಲ್ಲ.

ದಿನವು ಕಳೆದ ಹಾಗೆಲ್ಲ ಬಸಪ್ಪನ ಯೋಚನೆ ಹೆಚ್ಚಾಯಿತು. ಹಸು ಮಾರಿ, ಬಂದ ಹಣದಿಂದ ಜೂಜಾಡಿ ಸೋತು, ಕೊನೆಗೆ ಎಲ್ಲಿ ಬರಿ ಕೈಯಲ್ಲಿ ನಾಗಣ್ಣನು ಬರುವನೋ, ಅವನ ಉದ್ದಂಡತನದಿಂದ ತಾನು ಯಾವ ಕೇಡಿಗೆ ಒಳಗಾಗಬೇಕಾಗುವುದೋ, ಯಾವ ರೀತಿಯಲ್ಲಿ ತನ್ನ ಸ್ಥಿತಿಯು ಪರಿಣಮಿಸುವುದೋ ಎಂಬ ಭಯದಿಂದ ಬಸಪ್ಪನು ಬೆಂದು ಬಳಲುತಿದ್ದನು. ಚೆನ್ನಮ್ಮನನ್ನು ಮದುವೆಯಾಗುವ ಪುಣ್ಯವು ಇನ್ನೂ ದೂರವಿದ್ದುದರಿಂದ ಅವನ ಮನೋವೇದನೆಯು ಅಧಿಕವಾಗುತಿದ್ದಿತು.

ಇದನ್ನೇ ಯೋಚಿಸುತ್ತ ಬಸಪ್ಪನು ಊರ ಹೊರಗೆ ನೋಡುತ ನಿಂತಿದ್ದಾಗ ದೂರದಲ್ಲಿ ಯಾವನೋ ಬರುತ್ತಿದ್ದುದು ಕಾಣಿಸಿತು. ಅವನೇ ನಾಗಣ್ಣನಿರಬಹುದೇ ಎಂದು ಕುತೂಹಲದಿಂದ ಇರಲು ಚಿಕ್ಕಣ್ಣನು ಬಂದನು. ಅವರಿಬ್ಬರಿಗೂ ಈ ಸಂಭಾಷಣೆ ನಡೆಯಿತು.

ಚಿಕ್ಕಣ್ಣ—ಏನು ಬಸಪ್ಪನವರೆ ? ನಿಮ್ಮ ತಮ್ಮನ ಅದೃಷ್ಟವೇನೆಅದೃಷ್ಟ.
ಅವನ ಹೆಸರು ನಾಗಣ್ಣ ಅಲ್ಲವೆ ?

ಬಸಪ್ಪ—(ಅತ್ಯಾತುರದಿಂದ) ಹೌದು. ಏನು ಸಮಾಚಾರಾ ?

ಚಿಕ್ಕಣ್ಣ—ಅವನು ಇನ್ನೂ ಮನೆಗೆ ಬರಲಿಲ್ಲವೊ ?

ಬಸಪ್ಪ—ಇಲ್ಲ. ಇಲ್ಲ. ಏನಾಯಿತು ? ಹಸು ನೋಡಿದಿರಾ ?

ಚಿಕ್ಕಣ್ಣ—ಅದು ನಿಮ್ಮ ಹಸ ಅಂತ ನನಗೆ ಗೊತ್ತು. ಅದು ತನ್ನದೆಂದೇ ಅವನು ಬುರುಡೆ ಹೊಡೆದ. ಅವನು ಸುಳ್ಳಿನಲ್ಲಿ ನಿಸ್ಸೀಮ

ಬಸಪ್ಪ—(ಚಿಂತೆಯಿಂದ) ಹಸು ಏನಾಯಿತು ?

ಚಿಕ್ಕಣ್ಣ—ನಾನೇ ಅದನ್ನು ೧೫೦ ರೂ. ಗೆ ಕೊಳ್ಳಲು ಒಪ್ಪಿದೆ. ಮಾತಿನ ಪ್ರಕಾರ ಹಸು ಹೊಡೆದುಕೊಂಡು ನಮ್ಮ ಮನೆಗೆ ಬರಲಿಲ್ಲ. ನಿಮ್ಮ ಮನೆಗಾದರೂ ವಾಪಸು ತಂದನೊ ? ವಿಚಾರಿಸಲು ಬರುತ್ತಿದ್ದೆ.

ಬಸಪ್ಪ—ನನಗೂ ತಿಳಿಯದೆ ಯೋಚನೆಯಾಗಿದೆ.

ಚಿಕ್ಕಣ್ಣ—ಸೀಳು ದಾರಿಯಲ್ಲಿ ಹೋದಾಗ ಅವನಿಗೆ ಏನೋ ಆಗಿರಬೇಕು.

ಬಸಪ್ಪ—ಅವನಿಗೆ ಏನಾಯಿತು !

ಚಿಕ್ಕಣ್ಣ—ಹಾಗಾದರೆ ನೀವೇ ಹಸು ಕಳಿಸಿದಿರೊ ?

ಬಸಪ್ಪ—ಹೌದು ನನಗೆ ಇನ್ನೊಂದು ಬೇಕಾಗಿತ್ತು. (ಎನ್ನುತ್ತ ಆತ್ಮ ಗೌರವವನ್ನು ಉಳಿಸಿಕೊಳ್ಳಲು ಯತ್ನಿಸಿ ನಿಲ್ಲದೆ ಊರ ಕಡೆಗೆ ತಿರುಗಿ ದನು).

ಚಿಕ್ಕಣ್ಣ—ನಾನೂ ನಿಮ್ಮ ಊರಿಗೇ ಹೋಗಬೇಕು. ನಾಗಣ್ಣ ಬರಲಿ. ನೋಡೋಣ.

ಬಸಪ್ಪ—ಆಗಲಿ. ಎಲ್ಲಾ ತಾನಾಗೇ ಗೊತ್ತಾಗುತ್ತೆ.

ಬಸಪ್ಪನು ಅವನನ್ನು ಬಿಟ್ಟು ತಾನೊಬ್ಬನೇ ಮುಂದೆ ಮುಂದೆ ನಡೆದನು. ಚಿಕ್ಕಣ್ಣನಿಗೆ ಇದು ಸರಿಬೀಳಲಿಲ್ಲ. ಅವನಿಗೆ ಬಸಪ್ಪನ ಆತುರವೂ ಚಿಂತೆಯೂ ಅವನ ಮೋರೆಯಿಂದಲೂ ಮಾತಿನಿಂದಲೂ ತಿಳಿಯಬಂದುವು.

ಚಿಕ್ಕಣ್ಣ—ಒಳ್ಳೇದು ನಾನೂ ಹೀಗೇ ಹೋಗ್ತೀನೆ ಈಗ ನಿಮ್ಮ ಊರಿಗೆ ಬರುವದಿಲ್ಲ.

ಚಿಕ್ಕಣ್ಣನು ದಾರಿ ಬದಲಾಯಿಸಿ ಹೋದ ಮೇಲೆ ಬಸಪ್ಪನು ತನ್ನ ನಡಿಗೆಯನ್ನು ಚಿಕ್ಕದು ಮಾಡಿಕೊಂಡು ಯೋಚಿಸುತ್ತ ಊರ ಮುಂದು ಗಡೆಗೆ ಬಂದನು. ಅಷ್ಟರಲ್ಲಿ ಸಂತೆಗೆ ಹೋಗಿದ್ದ ಇಬ್ಬರು ಬೊಮ್ಮನಹಳ್ಳಿಯ ವರ್ತಕರು ಅವನಿಗೆ ಸಿಕ್ಕಿದರು. ಅವರೂ ನಾಗಣ್ಣ ಹೋಗಿದ್ದ ಸೀಳು

ದಾರಿಯಲ್ಲಿಯೇ ಬಂದಿದರಿಂದ ಅವರಿಗೆ ಹಸುವಿಗಾದ ದುರ್ಗತಿಯು ಗೊತ್ತಿದ್ದಿತು. ಆದರೆ ಅವರಿಗೂ ನಾಗಣ್ಣನಿಗೂ ಸಂದರ್ಶನವಾಗಿರಲಿಲ್ಲ. ಬಸಪ್ಪನು ಅವರಿಂದ ತನ್ನ ಹಸು ಸತ್ತ ರೀತಿಯನ್ನು ತಿಳಿದನು. ಆಗ ಅವನಿಗೆ 'ಹಸು ಹೋಯಿತು. ನಾಗಣ್ಣ ಹಿಂದಿನಂತೆ ತಪ್ಪಿಸಿಕೊಂಡಿದಾನೆ. ಬರುವದು ಯಾವಾಗಲೋ ಗೊತ್ತಿಲ್ಲ' ಎಂಬುದು ಹೊಳೆಯಿತು.

ಈಗಲಂತು ಬಸಪ್ಪನಿಗೆ ಸದಾ ಚಿಂತೆಯೇ. ಹಣದ ಸಂಪಾದನೆಗೆ ಬೇರೆ ದಾರಿ ಕಾಣದೆ ಅವನು ಮೂರನೆಯ ದಿನ ಬೆಳಿಗ್ಗೆ ತಂದೆಗೆ ಎಲ್ಲವನ್ನೂ ತಿಳಿಸುವುದೇ ಉತ್ತಮವೆಂದೂ, ನಾಗಣ್ಣ ಹಿಂದಿರುಗಿ ಬಂದು ಚಾಡಿ ಹೇಳಿದರೆ ತಂದೆಯ ಕೋಪವನ್ನು ತಡೆಯಲಾಗದೆಂದೂ ತನ್ನಲ್ಲಿ ತಾನೇ ಆಲೋಚಿಸಿಕೊಂಡನು. ಆದರೆ ಪುನಃ ಅವನಿಗೆ ಹಾಗೆ ತಾನೇ ತಿಳಿಸುವುದರಿಂದ ಅನುಕೂಲವಿಲ್ಲವೆನ್ನಿಸಿತು. 'ನಾನೇ ಬಾಡಿಗೆ ತೆಗೆದುಕೊಂಡು ವೆಚ್ಚ ಮಾದಿದೆನೆಂದರೆ ಅಷ್ಟು ತಪ್ಪಿಲ್ಲ. ಹಿಂದೆ ನಾನು ಇಂತಹ ಕೆಲಸ ಮಾಡಿಲ್ಲ. ಆದ್ದರಿಂದ ಅಪ್ಪ ಸುಮ್ಮನಿರಬಹುದು. ಅಪ್ಪನಿಗೆ ಹೇಳದಿದ್ದರೆ ಎರಡು ತಪ್ಪುಗಳು-ಕೇಳದೆ ತೆಗೆದುಕೊಂಡದ್ದು ಒಂದು, ಸುಳ್ಳು ಹೇಳಿದ್ದು ಇನ್ನೊಂದು. ಸುಳ್ಳು ಮಾನಹಾನಿಕರ' ಎಂದು ತನಗೆ ತಾನೇ ಹೇಳಿಕೊಂಡನು. ಹಸುವಿನ ಮಾತು ಎತ್ತಿ ತಂದೆಗೆ ಎಲ್ಲವನ್ನೂ ತಿಳಿಸಿ ತನ್ನ ಅವಿವೇಕದ ಫಲವನ್ನು ಅನುಭವಿಸಲು ಸಿದ್ಧನಾಗಿ ಚಿಂತೆ ಕಡಮೆ ಮಾಡಿಕೊಳ್ಳುವುದೇ ಒಳ್ಳೆಯದೆಂದು ತಿರುಗಿ ತೋರಿತು.

ಆ ದಿನ ರಾತ್ರಿ ಬಸಪ್ಪನಿಗೆ ನಿದ್ರೆಯೇ ಬರಲಿಲ್ಲ. 'ನಾಗಣ್ಣ ಹಿಂದಿರುಗಿ ಕ್ರೋಧದಿಂದ ನನಗೆ ಕೇಡು ಮಾಡಿಯಾನು. ಮಾಯಿಯೇ ಬಂದು ಅಪ್ಪನಿಗೆ ನಿಜ ಹೇಳಿ ನನ್ನನ್ನು ಕಷ್ಟಕ್ಕೂ ಅಪಮಾನಕ್ಕೂ ಗುರಿ ಮಾಡಿಯಾಳು' ಎಂಬ ಕಳವಳದಿಂದ ಅವನು ಹಾಸಿಗೆ ಮೇಲೆಯೇ ಹೊರಳಾಡುತಿದ್ದನು. ಎಷ್ಟೋ ಸಲ ಹೆಗ್ಗಡೆ ಮೊದಲು ಮೊದಲು ಸುಮ್ಮನಿದ್ದು ಆ ಮೇಲೆ ಹುಚ್ಚನಂತೆ ರೇಗಿ ಮಾಡಬಾರದುದನ್ನು ಮಾಡಿದ್ದುದು ಬಸಪ್ಪನಿಗೆ ಮರೆತಿರಲಿಲ್ಲ. ಆದರೆ ಮಾನವು ಮುಖ್ಯವಷ್ಟೆ! ಒಂದು ವೇಳೆ ಹೆಗ್ಗಡೆ ತನ್ನ ಕುಲಕ್ಕೇ ಕೆಟ್ಟ ಹೆಸರು ಬಂದೀತೆಂಬ ಭಯದಿಂದಲಾದರೂ ಮಗನ ಮತ್ತು ಮಾಯಿಯ ಸಂಬಂಧ ತನಗೆ ತಿಳಿದರೂ ಮಗನನ್ನು ಮನೆಯಲ್ಲಿಯೇ

ಇಟ್ಟುಕೊಂಡು ಕ್ಷಮಿಸಿ, ಮಾಯಿಯ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಇರಬಹುದಾದ ಸಂಭವವೂ ಇದ್ದಿತು. ಮತ್ತೆ ಬೆಳಗಾಗುವುದರೊಳಗೆ ಬಸಪ್ಪನ ಸಂಕಲ್ಪ ಸಡಿಲವಾಗಿ ಭಯವೂ ನಾಚಿಕೆಯೂ ಅರೆಮನಸ್ಸೂ ಹೆಚ್ಚಿ ಅವನ ನಿಶ್ಚಯವನ್ನು ಬದಲಾಯಿಸಿದುವು. 'ಸದ್ಯಕ್ಕೆ ಸುಮ್ಮನಿರುವುದೇ ಲೇಸು' ಎಂದು ಬಸಪ್ಪನು ತಿರುಗಿ ಗೊತ್ತುಮಾಡಿದನು. ಈ ಮಧ್ಯೆ ನಾಗಣ್ಣನು ಬರದೆ ಇನ್ನೂ ತಡ ಮಾಡಿದರೆ ಅದರಿಂದಲೂ ಮತ್ತಷ್ಟು ತನ್ನಗೆ ಅನುಕೂಲವೆನ್ನಿಸಿತು.

## ೧೦

# ತಂದೆಯ ಕೋಪ

ಮಾರನೆಯ ದಿನ ಬಸಪ್ಪನು ಎಂದಿಗಿಂತ ಮುಂಚೆ ಊಟ ಮಾಡಿ ಜಗುಲಿಯ ಮೇಲೆ ಕುಳಿತನು. ಮನೆಯವರು ಒಬ್ಬೊಬ್ಬರಾಗಿ ಮನಸ್ಸಿಗೆ ಬಂದಾಗ ಊಟ ಮಾಡಿ ಹೊರಟರು. ಪ್ರತಿದಿನವೂ ಸಾಧಾರಣವಾಗಿ ಊಟಕ್ಕೆ ಅಕ್ರಮವಾಗಿ ಬರುವುದೇ ಅವರ ಮನೆ ವಾಡಿಕೆ ಆ ದಿನ ಹೆಗ್ಗಡೆ ಕೊನೆಗೆ ಬಂದನು. ಕಾಯಿಪಲ್ಯ, ರೊಟ್ಟಿ, ತುಪ್ಪ ಮುಂತಾದುವು ಅವನ ತಟ್ಟೆಯಲ್ಲಿ ಒಣಗುತ್ತಾ ಬಿದ್ದಿದ್ದುವು ಹಸಿವು ಚುರುಕಾಗಲೆಂದೋ ಏನೋ ಅವನು ಹೀಗೆ ಸುತ್ತಿಕೊಂಡು ಹೊತ್ತು ತಪ್ಪಿಸಿ ತನಗೆ ಇಷ್ಟ ವಾದಂತೆ ಬರುವನು.

ಹೆಗ್ಗಡೆಗೆ ಸುಮಾರು ಅರವತ್ತು ವರ್ಷ ನೋಡಲಿಕ್ಕೆ ಅವನು ಎತ್ತರ, ದಪ್ಪ, ಮತ್ತು ಘನದಿಂದ ಆಕಾರವುಳ್ಳವನಾಗಿದ್ದನು. ಅವನ ಮುಖದ ಗಂಟು ಹುಬ್ಬು, ಬಿರುಸು ನೋಟ, ಕಿಸುಬಾಯಿ ಪರಸ್ಪರ ವಿರೋಧಭಾವವನ್ನು ಸೂಚಿಸುತಿದ್ದುವು ಅವನ ಬಟ್ಟೆ ಬರೆಗಳು ಅಷ್ಟು ಚೆಂದವಾಗಿರಲಿಲ್ಲ. ಆದರೂ ಹೊಸಬರಿಗೆ ಅವನ ನಡೆನುಡಿಗಳಿಂದಲೇ ಅವನು ಊರಿನಲ್ಲಿ ಗಣ್ಯನೆಂಬುದು ಭಾಸವಾಗುತ್ತಿದ್ದಿತು ಊಟಮಾಡು ತ್ತಿದ್ದಾಗ ಅವನಿಗೂ ಬಸಪ್ಪನಿಗೂ ಹೀಗೆ ಸಂಭಾಷಣೆ ಮೊದಲಾಯಿತು.

ಹೆಗ್ಗಡೆ—(ಬಸಪ್ಪನನ್ನು ಕರೆದು) ಏನಯ್ಯಾ ಇನ್ನೂ ಊಟವಿಲ್ಲವೋ ?

ಬಸಪ್ಪ—ಆಯಿತು ಅಣ್ಣ. ನಿಮ್ಮ ಸಂಗಡ ಮಾತನಾಡಲು ಕಾದಿದ್ದೆ.

ಹೆಗ್ಗಡೆ—ಓಹೋ ! ಅದೇನು ಸಮಾಚಾರ ? (ಕೆಮ್ಮುತ್ತ ತಟ್ಟೆಮುಂದೆ ಕುಳಿತು ಊಟಮಾಡತೊಡಗಿ) ಇನ್ನೂ ಸ್ವಲ್ಪ ತುಪ್ಪ ತರಹೇಳು. ನಿಮ್ಮ ಉಪಚಾರ ನೀವು ನೋಡಿಕೊಳ್ಳುವಿರಿ. ನನ್ನ ಚಿಂತೆ ನಿಮ ಗೇಕೆ ?

ಹೆಗ್ಗಡೆಯೂ ತನ್ನ ಹಿರಿಯತನದಲ್ಲಿ ತನ್ನ ಮಕ್ಕಳಹಾಗೆಯೇ ಕಾಲ ಕಳೆದುಕೊಂಡು ಇದ್ದನು. ಆದರೆ ಜನರು ಪ್ರಾಯದಲ್ಲಿ ತಾವು ತಪ್ಪು ಮಾಡಿದರೂ ಮುದಿತನದಲ್ಲಿ ಕಿರಿಯರ ತಪ್ಪನ್ನು ಕ್ಷಮಿಸದಿರುವುದು ಸಾಮಾನ್ಯ. ಹೆಗ್ಗಡೆ ಊಟಮಾಡುತ್ತಿದ್ದಾಗ ಬಸಪ್ಪನೇ ಪುನಃ ಮಾತನೆತ್ತಿದನು.

ಬಸಪ್ಪ—ಮೊನ್ನೆಯಿಂದ ನನ್ನ ಹಸು ಮನೆಗೆ ಬರಲಿಲ್ಲ.

ಹೆಗ್ಗಡೆ—ಎಲ್ಲಿಗೆ ಹೋಯಿತು? ನೀನು ಸರಿಯಾಗಿ ಬದುಕು ನೋಡುತ್ತಿಲ್ಲ. ನಾನು ಹೀಗೆ ಮಾಡಿದ್ದರೆ ನಮ್ಮ ಯಜಮಾನರು ಮನೆಬಿಟ್ಟು ನನ್ನ ಓಡಿಸಿಬಿಡುತ್ತಿದ್ದರು. ಈಗ ನಿಮ್ಮಿಂದ ಎಲ್ಲಾ ಹಾಳಾಗುತ್ತಿದೆ. ನನಗೆ ಹೊರಗೆ ಬರಬೇಕಾದ ಹಣ ಬರುತ್ತಿಲ್ಲ. ಮುನಿಯನ ಮೇಲೆ ದಾವೆ ಹಾಕಲೇ ಬೇಕು. ಸುಮ್ಮನಿದ್ದರೆ ಅವನು ಕೊಡುವದಿಲ್ಲ.

ಹಣದ ಚಿಂತೆಯಿಂದ ಹೆಗ್ಗಡೆ ರೇಗಿದ್ದಾಗ ತನ್ನ ವಿಷಯವನ್ನು ತಿಳಿಸುವುದು ಅಪಾಯಕರವೆಂದು ಬಸಪ್ಪನಿಗೆ ಭಯವಾಯಿತು. ಆದರೆ ಹೆಗ್ಗಡೆಯೇ ತಾನಾಗಿ ಅವನೊಡನೆ ಹೇಳತೊಡಗಿದನು. ಮಾತು ಮೊದಲಾಗಿ ಬಿಟ್ಟಿದ್ದುದರಿಂದ ತಕ್ಕ ಸಮಯವಲ್ಲದಿದ್ದರೂ ಬಸಪ್ಪನು ಅಷ್ಟಕ್ಕೇ ನಿಲ್ಲಿಸಲಾಗಲಿಲ್ಲ.

ಬಸಪ್ಪ—(ತಂದೆಗೆ ಸ್ವಲ್ಪ ಸಮಾಧಾನವಾದಮೇಲೆ) ಹಸು ಸತ್ತುಹೋಯಿತಂತೆ. ಅದನ್ನು ಮಾರಿ ಬಂದ ಬೆಲೆ ನಿಮಗೆ ಕೊಡಬೇಕೆಂದಿದ್ದೆ ನಾನು. ಈಗ ಅದಕ್ಕೆ ಅವಕಾಶ ತಪ್ಪಿಹೋಯಿತು. ನಾಗಣ್ಣನೇ ಅದನ್ನು ಸಂತೆಗೆ ಹೊಡೆದುಕೊಂಡು ಹೋದ. ಚಿಕ್ಕನಿಗೆ ೧೫೦ ರೂಪಾಯಿಗೆ ಮಾರಾಟವಾಯಿತು. ಚಿಕ್ಕನ ಮನೆಗೆ ಹಸು ಹೊಡೆದುಕೊಂಡು ಹೋಗಿ ತಲಪಿಸಿ ಹಣ ತರಲು ಹೋಗುತ್ತಿದ್ದಾಗ ನಾಗ ದಾರಿಯಲ್ಲಿ ತಪ್ಪಿಸಿಕೊಂಡುಬಿಟ್ಟ, ಹಸು ಚಿರತೆಗೆ ತುತ್ತಾಯಿತು.

ಚಿಕ್ಕನಿಂದಲೂ ತಮ್ಮ ಊರಿನ ವರ್ತಕರಿಂದಲೂ ತನಗೆ ತಿಳಿಯಬಂದ ಸಂಗತಿಗಳೆಲ್ಲವನ್ನೂ ಬಸಪ್ಪನು ಹೆಗ್ಗಡೆಗೆ ಹೇಳಿದನು. ಆ ಸುದ್ದಿ ಕಿವಿಗೆ ಬಿದ್ದೊಡನೆಯೇ, ಊಟ ಬಿಟ್ಟು ಮಾತನಾಡದೆ ಹೆಗ್ಗಡೆ ಮಗನನ್ನು ನೋಡುತ್ತ ಕುಳಿತನು. ಸ್ವಲ್ಪ ಹೊತ್ತಿನ ಮೇಲೆ ಮುನಿಯನ ಹಣದ ಮಾತು ಬಂದಿತು.

ಬಸಪ್ಪ—ಹೋದ ತಿಂಗಳೇ ಮುನಿಯ ಹಣ ಕೊಟ್ಟುಬಿಟ್ಟೆ. ನಾ
ನಿಂದ ಹಣ ತಂದೆ. ನಾಗನಿಗೆ ಏಕೋ ಹಣ ಬೇಕಾಗಿತ್ತಂತೆ. ಈ
ನನ್ನಿಂದ ಆ ಹಣ ತೆಗೆದುಕೊಂಡು ಕರ್ಚುಮಾಡಿಬಿಟ್ಟಿದಾನೆ.

ಹೆಗ್ಗಡೆ—ಏನೋ! ನೀನು ಕೊಟ್ಟೆಯ ನಾಗನಿಗೆ? ಎಷ್ಟು ದಿನಗಳಿಂ
ನೀನೂ ಅವನೂ ಹೀಗೆ ಮಾಡುತ್ತಿದೀರಿ? ನೀನೂ ಪೋಕರಿಯಾಗು
ತ್ತಿದೀಯೊ? ನಿಮ್ಮಿಬ್ಬರನ್ನೂ ಮನೆಯಿಂದ ಓಡಿಸಿ ನಾನು ಮುದು
ಯಾಗುತ್ತೇನೆ. ಗೊತ್ತಾಯಿತೊ! ಅವನು ಕೇಳುವವ, ನೀನು
ಕೊಡುವವ. ಇದೆಲ್ಲ ಸುಳ್ಳು!

ಬಸಪ್ಪ—ಇಲ್ಲ ಅಣ್ಣಾ. ಸುಳ್ಳಲ್ಲ. ನಿಜವಾಗಿಯೂ ವೆಚ್ಚಮಾಡಿಲ್ಲ ನಾನು.
ನಾಗ ಹಿಂಸೆ ಮಾಡಿ ಕಿತ್ತುಕೊಂಡ ನಾನೇ ನಿಮಗೆ ಅದನ್ನು ಕೊಡ
ಬೇಕೆಂದಿದ್ದೆ. ಎಂದಾದರೂ ಸುಳ್ಳು ಹೇಳಿದ್ದೇನೆಯೆ ನಾನು?

ಹೆಗ್ಗಡೆ—ನಾಗ ಎಲ್ಲಿ? ಏಕೆ ಬರಲಿಲ್ಲ? ಹಿಂದಿನ ಹಾಗೆ ಈಗಲೂ
ಹೋದನೋ?

ಬಸಪ್ಪ—ಇಷ್ಟರಲ್ಲೇ ಬಂದಾನು.

ಹೆಗ್ಗಡೆ—ನೀನು ಹೇಗೆ ಅವನಿಗೆ ಹಣ ಕೊಟ್ಟೆ?

ಬಸಪ್ಪ—ಅವನ ಕಾಟ ಹೆಚ್ಚಾಯಿತು ವಾಪಸು ಕೊಡುವೆನೆಂದು ನಂಬಿಸಿ
ಹೇಳಿ ತೆಗೆದುಕೊಂಡ. ಈಗ ಹೀಗೆ ಆಗಿಹೋಗಿದೆ.

ಹೆಗ್ಗಡೆ—ಸರಿ. ತಿಳಿಯಿತು ತಿಳಿಯಿತು ನೀನೇ ಏನೇನೋ ಮಾಡಿ
ಅವನಿಗೆ ಲಂಚ ಕೊಟ್ಟಿರಬಹುದು.

ಬಸಪ್ಪ—ಇಲ್ಲ ಅಣ್ಣಾ. ಚಿಕ್ಕವರ ವಿಷಯ ಅದು ಹಸು ಮಾರಿದ ಹಣ
ಬಂದಿದ್ದರೆ............

ಹೆಗ್ಗಡೆ—ಛೆ! ಬಾಯಿಮುಚ್ಚು. ಈ ಹೊತ್ತಿಗೆ ನೀನು ಇದನ್ನೆಲ್ಲ ಬಿಟ್ಟಿರ
ಬೇಕಾಗಿತ್ತು. ನೀವು ಕೆಡುವುದಕ್ಕೆ ನಾನೇ ಕಾರಣ. ಆಗಲಿ
ಮೇಲೆ ನಾನೇ ನೋಡಿಕೊಳ್ಳುತ್ತೇನೆ.

ಬಸಪ್ಪನು ಸುಮ್ಮನಿದ್ದನು. ಹೆಗ್ಗಡೆ ಅರ್ಥವು ಚೆನ್ನಾಗಿ ತಿಳಿಯಿತು
ಅವಸರದಿಂದ ಹೆಗ್ಗಡೆ ಒಂದೆರಡು ತುತ್ತು ನುಂಗಿ... ಹೇಳಿದನು

ಹೆಗ್ಗಡೆ—ನನಗೆ ಸಹಾಯಮಾಡದೆ ಇದ್ದಷ್ಟೂ ನಿನಗೇ ಕೇಡು.

—ನನಗೂ ಕೊಂಚ ಜವಾಬ್ದಾರಿ ಕೊಡಿ ಎಂತ ನಾನೇ ನಿಮ್ಮನ್ನು ಷ್ಟೋಸಲ ಕೇಳಿದ್ದೆ. ನೀವು ಕೋಪಮಾಡಿದಿರಿ. ಜ್ಞಾಪಕವಿರಬಹುದು.

ಹೆಗ್ಗಡೆ—ನೀನು ಕೇಳಲೂ ಇಲ್ಲ, ನಾನು ಕೋಪ ಮಾಡಲೂ ಇಲ್ಲ. ವಯಸ್ಸಿಗೆ ಬಂದ ಹುಡುಗರು ಹೀಗೆ ಮಾಡಿದರೆ ಕಷ್ಟ. ನೀನು ಹೀಗೆ ಇದ್ದರೆ ನಿನಗೆ ಈ ಸಲವೂ ಮದುವೆ ಆಗುವದಿಲ್ಲ. ಮುಂದೆ ನಿನ್ನ ಕೈ ಹಿಡಿದ ಹುಡುಗಿ ಪಾಡೇನು! ನಿನ್ನ ಮನಸ್ಸಿನಲ್ಲಿ ಏನಿದೆ? ನೀನು ನಿಮ್ಮ ತಾಯಿ ಹೋಲುತ್ತಿದ್ದೀಯೆ. ಚೆನ್ನಮ್ಮನಿಗಿಂತ ಒಳ್ಳೆ ಹುಡುಗಿ ಸಿಕ್ಕುವದಿಲ್ಲ. ನೀನು ಯೋಗ್ಯನಾಗಿದ್ದರೆ ಮದುವೆ ನಡೆಯುತ್ತೆ. ಇಲ್ಲದಿದ್ದರೆ ನಡೆಯುವುದಿಲ್ಲ. ಹುಷಾರ್ !

ಬಸಪ್ಪ—ಮದುವೆ ಇರಲಿ. ನನ್ನ ಪಾಲು ನನಗೆ ಕೊಟ್ಟರೆ ನಾಗನ ಕಾಟ ತಪ್ಪುತ್ತೆ

ಹೆಗ್ಗಡೆ—(ಕೋಪದಿಂದ) ಪಾಲೇ ! ಏನು ಅವಸರ ? ಅದು ನನ್ನಿಷ್ಟ. ಯಜಮಾನಿಕೆ ನನ್ನದು. ನಿನ್ನನ್ನು ಮೊದಲು ಓಡಿಸುತ್ತೇನೆ. ಎಲ್ಲಾದರೂ ಹೋಗು. ನಾಗನೂ ಇರಬೇಕಾಗಿಲ್ಲ. ಕೂಲಿ ಮಾಡಿ ತಿನ್ನಿ. ಬಂದ ಮೇಲೆ ನಾಗನಿಗೂ ಹೇಳು. ಗೊತ್ತಾಯಿತೊ ?

ಬಸಪ್ಪ—ಏನು ಹೇಳಲಿ ?

ತಲೆಕೆರೆಯುತ್ತ ಬಾಗಿಲ ಕಡೆಗೆ ಬಸಪ್ಪನು ಹೋದನು

ಹೆಗ್ಗಡೆ—ಹರಟೆ ಬೇಡ ಸಾಕು.

ಬಳಿಕ ಹೆಗ್ಗಡೆ ಊಟ ಮುಗಿಸಿ, ಕೈ ತೊಳೆದು, ನಶ್ಯ ಸೇದಿ ಹಾಕಿ, ವಡಿ ಕಡೆಗೆ ಹೊರಟನು.

ಚೆನ್ನಮ್ಮನ ಸುದ್ದಿ ಎತ್ತುತ್ತಲೇ ಬಸಪ್ಪನ ಎದೆ ಕುಸಿದು ಹೋಯಿತು. ನನಿಗೂ ಮಾಯಿಯ ಸಂಬಂಧ ತಿಳಿಸಲು ಧೈರ್ಯ ಬರಲಿಲ್ಲ. ಆದರೂ ದ್ದ ಕಷ್ಟಗಳು ಹೇಗಾದರೂ ತೊಲಗಿ ಅನುಕೂಲವಾದೀತೆಂಬ ನಿರೀ ಇದ್ದೇ ಇದ್ದಿತು. ಕೆಟ್ಟ ಕೆಲಸಕ್ಕೆ ಹೇಸದೆ, ಕರ್ಮಫಲಾನುಭವವನ್ನು ಕೊಳ್ಳಲು ಹೆಣಗುತ್ತ, ದೈವಿಕವಾದ ಸಂಘಟನೆಗಳಿಂದ ಪಾರಾಗುವೆ ಬಯಸುವವರೆಲ್ಲರಂತು ಆತ್ಮದ್ರೋಹಿಗಳಾಗುತ್ತಾರೆ !

——:೦:——

## ೧೧

# ದಾಸನಿಗೂ ಊರಿಗೂ ಹೊಸ ಸಂಬಂಧ

ವಿಚಾರಣೆಗಳು ನಡೆದಾಗ ಪೋಲಿಸರೂ ಯಾವನೋ ವ್ಯಾಪಾರಿಯೇ ದಾಸನ ಹಣ ಕದ್ದಿರಬೇಕೆಂದು ಅಭಿಪ್ರಾಯಪಟ್ಟರು ಆದಕ್ಕೆ ಸರಿಯಾಗಿ ಇನ್ನೊಬ್ಬ ವ್ಯಾಪಾರಿ ಆ ಊರಿಗೆ ಬಂದು ಸುತ್ತಿಹೋಗಿದ್ದನು. ಅವನ ಊರು ಕೇರಿ ಹೆಸರು ಮುಂತಾದುವು ಯಾರಿಗೂ ಗೊತ್ತಿರಲಿಲ್ಲ. ಅಂತೂ ಇಂತೂ ಎಷ್ಟು ವಿಚಾರಣೆ ನಡೆದರೂ ರುಜುವಾತು ದೊರೆಯದೆ ಕಳ್ಳನನ್ನು ಹಿಡಿಯಲು ಸಾಧ್ಯವಾಗದೆ ಹೋಯಿತು. ಕೊನೆಗೆ ಎರಡುಮೂರು ವರ್ಷ ಗಳಾದುವು ಈ ಕಳ್ಳತನದ ನೆನಪೇ ಇಲ್ಲವಾಯಿತು,

ನಾಗಣ್ಣನು ಮನೆಗೆ ಬಂದಿದ್ದರೆ ಯಾರಿಗೆ ಏನು ? ಅದನ್ನು ಹೆಚ್ಚಾಗಿ ಒಬ್ಬನೂ ಗಮನಿಸಲೇ ಇಲ್ಲ. ಅವನು ಹಿಂದೆ ಎರಡು ಬಾರಿ ಜಗಳವಾಡಿ ಕೊಂಡು, ಎಲ್ಲಿಗೋ ಹೊರಟುಹೋಗಿ ಆರೇಳು ತಿಂಗಳು ಆದಮೇಲೆ ಮನೆಗೆ ಬಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದನು. ಅವನು ತಪ್ಪಿಸಿ ಕೊಂಡಿರುವುದಕ್ಕೂ ದಾಸನ ಹಣ ಕಳುವಾಗಿರುವುದಕ್ಕೂ ಸಂಬಂಧವಿದ್ದೀತೆ ? ಹೆಗ್ಗಡೆ ಮನೆಯವರು ಅಂತಹ ಕೀಳು ಕೆಲಸವನ್ನು ಮಾಡಲಾಪರೆ ? ಏನೇ ಆಗಲಿ ಹೆಗ್ಗಡೆ ಮನೆತನವನ್ನು ಬಲ್ಲವರು ಇಂತಹ ಅಪಮಾನಕರ ವಾದ ಕೆಲಸವನ್ನು ಕನಸುಮನಸಿನಲ್ಲಿಯೂ ಬಗೆಯರು.

ಈ ಮಧ್ಯೆ ದಾಸನು ಅನುಭವಿಸಿದ ಕ್ಲೇಶವು ಅಷ್ಟಿಷ್ಟಲ್ಲ. ಅವನ ಸ್ಥಿತಿಯನ್ನು ನೋಡಿದವರಿಗೆ ಅವನು ಬದುಕಿದ್ದುದೇ ಹೆಚ್ಚೆನಿಸಿತು. ಆದರೆ ದಾಸನ ಸ್ವಭಾವವು ಅವರು ಎಣಿಸಿದಂತಿರಲಿಲ್ಲ. ಮೃತಪ್ರಾಯನಂತೆ ತೋರಿ ದರೂ ಅವನು ಸ್ವಭಾವತಃ ಕೇವಲ ಉತ್ಸಾಹಶಾಲಿ, ಆಸ್ತಿಕ, ಸತ್ಯವಾದಿ ಮತ್ತು ಸಹಿಷ್ಣು. ಈಚೆಗೆ ಧನಾರ್ಜನೆಯೇ ಜೀವನದ ಪರಮೋದ್ದೇಶವಾಗಿ ಅವನಿಗೆ ಅದರಿಂದಲೇ ಅವಲಂಬನ ಉಂಟಾಗಿದ್ದುದು ನಿಜ. ಮಗ್ಗ ನೇಯಿಸಿ

ಬಟ್ಟೆ, ಮನೆ ಸಾಮಾನುಗಳು ಮುಂತಾದುವು ಎಂದಿನಂತೆಯೇ ಕಣ್ಣೆದುರಿಗೆ ಇದ್ದುವು ಗುಂಡಿಯಲ್ಲಿ ಹಣದ ಚೀಲಗಳು ಮಾತ್ರ ಇರಲಿಲ್ಲ. ಚಿನ್ನವನ್ನು ಕೈಯಾರಮುಟ್ಟಿ, ಲೆಕ್ಕಮಾಡಿ, ನೋಡಿ ಸುಖಪಡುವ ಭಾಗ್ಯವು ಮಾಯ ವಾಗಿದ್ದಿತು. ಹೊಸದಾಗಿ ಸಂಪಾದನೆ ಮಾಡುವೆನೆಂದು ಅವನು ಸಮಾ ಧಾನ ಹೇಳಿಕೊಳ್ಳಬಹುದಾಗಿದ್ದಿತಲ್ಲವೆ? ಆದರೆ ಹೊಸದಾಗಿ ಸಿಗುವುದು ಕಳೆದು ಹೋದುದಕ್ಕೆ ಸಮವಾದೀತೆ! ಹೊಸನಾಣ್ಯಗಳನ್ನು ನೋಡಿ ದಷ್ಟೂ ಅವನ ದುಃಖವು ಹೆಚ್ಚುತ್ತಿದ್ದಿತು ಕೆಲಸವಿಲ್ಲದಾಗ ಸಂಜೆಯಲ್ಲಿ ಅವನಿಗೆ ಕಳೆದುಹೋದ ಹೊನ್ನಿನ ಮೇಲೆ ಹೊರತು ಮತ್ತಾವುದರ ಮೇಲೂ ಚಿಂತೆಯೇ ಇರಲಿಲ್ಲ. ತನ್ನ ದುಃಖವನ್ನು ಇತರರಿಗೆ ಹೇಳುವ ಯೋಚನೆ ಕೂಡ ಅವನಿಗೆ ತೋರದು

ಹೀಗೆ ಅವನು ದುಃಖಪಡುವುದನ್ನು ನೋಡಿದ ಬೊಮ್ಮನಹಳ್ಳಿಯ ಸಜ್ಜನರು ಸುಮ್ಮನಿರಲಿಲ್ಲ ಈ ಕಷ್ಟ ಪ್ರಾಪ್ತವಾದಮೇಲೆ ಅನೇಕರಿಗೆ ಅವನಲ್ಲಿ ಭಯ ತಪ್ಪಿ ಮರುಕ ಹುಟ್ಟಿತು. ತನ್ನ ಒಡವೆಯನ್ನು ತಾನೇ ಕಾಪಾಡಿಕೊಳ್ಳಲಾರದವನು ಹೇಗೆ ನೆರೆಯವರಿಗೆ ಅಪಕಾರವಾಗಲಿ ಉಪ ಕಾರವಾಗಲಿ ಮಾಡಿಯಾನು? 'ಬಡಪಾಯಿ' ಎಂದು ಕೊಂಡು ಅದು ಮೊದಲು ಊರಿನ ಜನರು ಅವನಿಗೆ ತಮ್ಮ ಅನುತಾಪವನ್ನು ಬಗೆಬಗೆಯಾಗಿ ತೋರಿದರು.

ದಾನಧರ್ಮ ಪರೋಪಕಾರಗಳಿಗೆ ಹಬ್ಬಕ್ಕಿಂತ ಸಮಯವಿಲ್ಲ. ಅಂದು ನೆಮ್ಮದಿವಂತರು ತಮ್ಮ ಮನೆಗಳಲ್ಲಿ ಹಲವು ಬಗೆ ಸವಿಯೂಟ ಗಳನ್ನು ಮೆಲ್ಲುವರು. ಸಜ್ಜನರು ಆಗ ಬಡಬಗ್ಗರನ್ನು ಮರೆಯುವುದಿಲ್ಲ. ಸಾಹುಕಾರ ಸಿದ್ದಪ್ಪನ ಮನೆಯವರು ಆ ವರ್ಷದ ಹಬ್ಬಗಳಲ್ಲಿ ದಾಸನಿಗೂ ಬೇಕಾದಷ್ಟು ತಿಂಡಿಗಳನ್ನು ಕಳುಹಿಸಿದರು. ಅವನು ದೇವಸ್ಥಾನಕ್ಕೆ ಹೋಗದಿದ್ದುದರಿಂದ ಇಂತಹ ಪೀಡೆ ಪ್ರಾಪ್ತವಾಯಿತೆಂದು ಅಭಿಪ್ರಾಯ ಪಟ್ಟ ಊರಿನ ಜನರೂ ಅವನ ವಿಷಯದಲ್ಲಿ ಕನಿಕರತೋರದಿರಲಿಲ್ಲ. ಕೆಲ ಮಂದಿ ದಾಸನಿಗೆ ತಾವು ಬೆಳೆದ ಕಾಯಿ ಪಲ್ಯಗಳನ್ನು ಕೊಟ್ಟು ತಮ್ಮ ಸ್ನೇಹ ವನ್ನು ವ್ಯಕ್ತಪಡಿಸಿದರು. ಇನ್ನು ಕೆಲ ಮಂದಿಗೆ ಕೈಯಿಂದ ವೆಚ್ಚಮಾಡ ಲಿಷ್ಟವಿರಲಿಲ್ಲ. ಅವರೂ ಅವನನ್ನು ದಾರಿಯಲ್ಲಿ ನಿಲ್ಲಿಸಿಕೊಂಡು ಯೋಗ

ಕ್ಷೇಮ ವಿಚಾರಿಸಿ, ಆಗಾಗ ಅವನ ಮಂಟಪಕ್ಕೂ ಹೋಗಿ, ಕಳ್ಳತನದ ರೀತಿಯನ್ನು ಪುನಃ ಪುನಃ ಕೇಳಿ 'ದಾಸಣ್ಣ ಹೋದದ್ದು ಹೋಗಲಿ. ಯೋಚನೆ ಮಾಡಬೇಡ. ಕೊನೆಗಾಲದಲ್ಲಿ ಊರಿನವರು ನಿನ್ನ ಕೈ ಬಿಡುವರೆ' ಎಂದು ಸಂತೈಸುವರು. ಶುಷ್ಕೋಪಚಾರ ಶೂನ್ಯಹಸ್ತಕ್ಕಿಂತ ದಾನ ಪೂರ್ವಕ ಸಂತಾಪಸೂಚನೆ ಮಾಡುವುದು ಸುಲಭ ಮತ್ತು ಶ್ರೇಷ್ಠ. ಊರಿನ ಕೆಲ ಜನರು ತಮ್ಮ ಭೂತದಯೆಯನ್ನು ಮತ್ತೆ ಬೇರೆ ರೀತಿಯಲ್ಲಿಯೂ ತೋರಿದರು

ಉದಾಹರಣೆಗೆ ಮಾತಿನ ಮಲ್ಲಪ್ಪ. ತನ್ನ ಜ್ಞಾನವಿವೇಕಗಳಿಗೆ ಸಮವೇ ಇಲ್ಲವೆಂಬ ಭಾವನೆಯುಳ್ಳವನು ಅವನು. ಒಂದು ದಿನ ದಾಸನ ಮಂಟಪಕ್ಕೆ ಹೋಗಿ ಅವನ ಮಗ್ಗುಲಲ್ಲಿ ಕುಳಿತು ಹೆಬ್ಬೆರಳು ತಿರುಗಿಸುತ್ತ, ಮಾತನಾಡತೊಡಗಿ 'ದಾಸಣ್ಣ, ನೀನು ಗೋಳಾಡೋದು ಸರಿಯಲ್ಲ. ಹಣ ಹೋದ್ದೇ ಒಳ್ಳೇದು. ಅದಿದ್ದಾಗ ಚಿಂತೆ ಇತ್ತಲ್ಲವ? ನೀನು ನಮ್ಮೂರಿಗೆ ಬಂದಾಗ ಹರೆಯದವನು. ನಿನ್ನ ಮೋರೆ ಯಾವಾಗಲೂ ಸಪ್ಪೆ. ನಿನ್ನದು ದುರದುರನೆ ಕಣ್ಣು, ಬಿಳಿ ಬಣ್ಣ. ನೀನೂ ಹಸು ಹಾಗೆ ಅನ್ನು. ನೀನು ಎಲ್ಲರಂತೆ ಗುಡಿಗೆ ಬಂದಿದ್ದರೆ ಚೆನ್ನಾಗಿತ್ತು. ದಾಸಣ್ಣ, ನನ್ನ ಮಾತು ಇಷ್ಟೇ. ಕುಗ್ಗಬೇಡ. ಜನರು ಏನಾದರೂ ಹೇಳಿಕೊಳ್ಳಲಿ. ಕಳವೇ ಸುಳ್ಳು ಎಂಬುವರು ಇದ್ದಾರೆ. ಬೆದರಿದ ಮೊಲದಂತೆ ಕುಂತಿರಬೇಡ.' ಎಂದು ಬುದ್ಧಿ ಹೇಳಿದನು.

ಆಗ ದಾಸನು ತಲೆಮೇಲೆ ಕೈಯಿಟ್ಟುಕೊಂಡು ಜೂಗರಿಸುತ್ತಿದ್ದನು. ಮಲ್ಲಪ್ಪ ಅಷ್ಟು ಹೇಳಿದರೂ ಅವನ ಬಾಯೇ ಬಿಡಲಿಲ್ಲ. ಆದರೂ ಮಲ್ಲಪ್ಪನ ಅರ್ಥವೇನೋ ಅವನಿಗೂ ತಿಳಿಯಿತು. ಅವನಿಗೆ ಒಂದೂ ಬೇಕಿರಲಿಲ್ಲ

ಬೇಸರದಿಂದ ಮಲ್ಲಪ್ಪನು 'ಬಾ ಬಾ, ದಾಸಣ್ಣ ಮಾತಾಡು' ಎಂದು ಅವನ ಕೈ ಹಿಡಿದುಕೊಂಡನು.

'ಹೂಂ!' ಎಂದು ದಾಸನು ತಲೆತೂಗುತ್ತ 'ಸರಿ ಸರಿ ಆಗಲಿ. ಒಳ್ಳೆ ಮಾತು.' ಎಂದು ಮುಖ ತಿರುಗಿಸಿಕೊಂಡನು.

ಮಲ್ಲಪ್ಪನು ಅಷ್ಟಕ್ಕೇ ಬಿಡದೆ 'ನೋಡಿಲ್ಲಿ. ನನ್ನ ಮಾತು ಕೇಳು. ನಿನ್ನ ಹತ್ತಿರ ಪಟ್ಟೆಮಡಿ ಇದೆಯೊ?' ಎಂದನು.

ಅರ್ಥವಾಗಲಿಲ್ಲ ದಾಸನಿಗೆ, 'ಇಲ್ಲ' ಎಂದುತ್ತರವಿತ್ತನು.

'ನಾನೂ ಹಾಂಗೇ ಅಂದುಕೊಂಡೆ. ಮೊದಲು ಪಟ್ಟಿಮಾಡಿ ಕೊಂಡು ಕೋ ನಮ್ಮೂರಿನ ಜವಳಿ ಅಂಗಡಿಯಲ್ಲಿವೆ ನಾನು ಹೇಳಿದರೆ ನಿಂಗೆ ಅಗ್ಗವಾಗಿ ಸಿಕ್ಕೀತು, ಅಂಗಡಿಯವನು ಸಾಲವೂ ಕೊಟ್ಟಾನು. ಇನ್ನು ಮೇಲಾದರೂ ಗುಡಿಗೆ ಬಾ. ಹತ್ತು ಜನಕ್ಕೆ ಬೇಕಾದವನಾಗು. ಹೀಗೆ ಕಾಲ ಕಳೆಬೇಡ. ನಾನೂ ಮುದುಕನಾದೆ' ಎಂದು ಮಲ್ಲಪ್ಪನು ದಾಸನ ಮುಖ ನೋಡಿದನು.

ಇನ್ನೂ ದಾಸನ ಮುಖದಲ್ಲಿ ಯಾವ ವ್ಯತ್ಯಾಸವೂ ತೋರದು, ಅವನು ಮೊದಲಿನಂತೆಯೇ ಸುಮ್ಮನೆ ಕುಳಿತಿದ್ದನು.

'ಹೋದ ಹಣಕ್ಕೆ ಚಿಂತ ಪಡಬೇಡ ನಿನಗೆ ವಾರಕ್ಕೆ ಹತ್ತು ರೂ ಪಾಯಿ ಸಿಗುತ್ತೆ. ನೀನೇನೂ ಮುದುಕನಲ್ಲ. ನಿನಗೆ ವಯಸ್ಸಾದ ಹಾಗೆ ಕಾಣುತ್ತೆ ಅಷ್ಟೆ ನೀನು ಇಲ್ಲಿಗೆ ಬಂದಾಗ ನಿನಗೆ ಸುಮಾರು ಇಪ್ಪತ್ತೈದು ವರ್ಷ ಅಲ್ಲವಾ?' ಎಂದು ಮಲ್ಲಪ್ಪನು ಕೇಳಿದನು.

ಈಗ ಮಾತ್ರ ದಾಸನು ತಲೆ ಎತ್ತಿ ನೋಡಿ 'ಗೊತ್ತಿಲ್ಲ. ಹೇಳಲಾರೆ. ಬಹಳ ದಿನ ಆಯಿತು' ಎಂದು ಮೆಲ್ಲನೆ ನುಡಿದನು

ಇದಾದ ಮೇಲೆ ಮಲ್ಲಪ್ಪನು ಹೊರಟುಹೋದನು.

ಒಂದು ವಾರದ ಬಳಿಕ ಊರಿನ ಜನರಲ್ಲಿ ಕೆಲವರು ಕಟ್ಟೆಯ ಹತ್ತಿರ ಸೇರಿದರು. ಮರಳಿ ದಾಸನ ಮಾತೇ ಬಂದಿತು ಆಗ ಮಲ್ಲಪ್ಪನು 'ದಾಸನ ತಲೆ ಬುರುಡೆ ಬರಿದು ಅವನಿಗೆ ಶಿವರಾತ್ರಿ ಯಾವಾಗ ಗೊತ್ತಿಲ್ಲ. ಕುಲಾಚಾರ ಅವನಿಗೆ ತಿಳಿಯದು.' ಎಂದನು. ಹೀಗೆ ಏನೇನೋ ಮಾತು ಕತೆಗಳು ಅವನ ವಿಷಯವಾಗಿ ಜನರಲ್ಲಿ ನಡೆಯುತ್ತಿದ್ದುವು

ಭದ್ರವ್ವನೂ ಮಲ್ಲಪ್ಪನ ಹಾಗೆಯೇ ದಾಸನಿಗೆ ಸಮಾಧಾನ ಹೇಳಿದಳು ಶಂಕರಪ್ಪನ ಹೆಂಡತಿ ಭದ್ರವ್ವ. ಅವಳ ಅನುತಾಪ ಮತ್ತಾರಿಗೂ ಇರಲಿಲ್ಲ.

ಹಬ್ಬದ ದಿನ ದೇವರಿಗೆ ಗುಡಿಯಲ್ಲಿ ಪೂಜೆ ಮಾಡಿದರೆ ಸುಖಸದ್ಗತಿಗಳೆಂದು ಜನರಿಗೆ ಭಾವನೆಯಷ್ಟೆ. ಗುಡಿಗೆ ತಪ್ಪದೆ ಹೋಗುವವರಲ್ಲಿ ಭದ್ರವ್ವನಿಗೆ ಸಮ ಇರಲಿಲ್ಲ. ನಮ್ಮ ಬಾಳು ಸೇವೆಗಾಗಿ ಎಂದು ಆಕೆ ತಿಳಿದಿದ್ದಳು.

ಮುಂಜಾನೆ ಏಳುತ್ತಿದ್ದುದರಿಂದ ಆಕೆಯ ಮನೆಗೆಲಸವು ಬೇಗ ಮುಗಿಯು ತ್ತಿದ್ದಿತು. ಮಗ್ಗಲು ಮನೆಯವರು ಕೆಲಸವಾಗಿಲ್ಲವೆಂದು ಒದ್ದಾಡುತ್ತಿದ್ದರೆ ಈಕೆ ಕೆಲಸ ಸಾಲದೆ ಏನು ಮಾಡಲೆಂದು ಯೋಚಿಸುವಳು. ಗಂಟುಮೋರೆ ಹಾಕಿಕೊಂಡು ತಪ್ಪು ಹುಡುಕುವ ಗುಣ ಆಕೆಯದಲ್ಲ ಆಕೆಯ ಉಪಕಾರ ಬುದ್ಧಿ, ಒಳ್ಳೆಯತನ, ವಿಚಕ್ಷಣ, ವಿನಯ ಮುಂತಾದುವು ಅತಿಶಯವಾ ಗಿದ್ದುವು. ಜೀವನದ ಕಷ್ಟಸುಖಗಳಲ್ಲಿ ಭದ್ರವ್ವನ ತಿಳಿವಳಿಕೆಗೆ ಎಣೆ ಇರಲಿಲ್ಲ. ಆ ಊರಲ್ಲಿ ಯಾರಿಗೆ ರೋಗ ಬಂದರೂ, ಎಲ್ಲಿ ಹೆಣ ಬಿದ್ದರೂ, ಮಕ್ಕಳಿಗೆ ಅಸ್ವಸ್ಥವಾದರೂ, ಬಸುರಿಯರಿಗೆ ಸೂಲಗಿತ್ತಿ ಸಿಕ್ಕದಿದ್ದರೂ ಭದ್ರವ್ವನನ್ನು ನೆನೆಯುತ್ತಿದ್ದರು. ಆಕೆ ಸಿದ್ಧ ಆಗಲೇ. ಜನರಿಗೆ ಆಕೆಯ ಮಾತೆಂದರೆ ಒಂದು ಬಗೆಯ ಗೌರವ, ಸಂತೋಷ ಆಕೆ ಸದಾ ಘನವಾಗಿ, ಗಂಭೀರವಾಗಿ, ಹರ್ಷಚಿತ್ತಳಾಗಿ, ಒಂದೊಂದು ಸಲ ಕೊಂಚ ತಲೆ ಅಲ್ಲಾಡಿಸುತ್ತಲೋ ಅಥವಾ ನಿಟ್ಟುಸಿರು ಬಿಡುತ್ತಲೋ ತನ್ನ ಅಸಮಾಧಾನವನ್ನು ಸೂಚಿಸು ವಳು. ಆಕೆಗೂ ಶಂಕರಪ್ಪನಿಗೂ ಹೊಂದಿಕೆಯಾದುದು ಹೆಚ್ಚೇ ಶಂಕರಪ್ಪ ನಿಗೆ ಗೇಲಿ, ಹರಟೆ, ಊಟ ಎಂದರೆ ಬಲು ಇಷ್ಟ. 'ಗಂಡಸರೇ ಹಾಗೆ. ಹೆಂಗಸು ಸಹಿಸಬೇಕು' ಎಂದು ಆಕೆ ಹೇಳುತ್ತಿದ್ದಳು

ಇಂತಹ ಹೆಂಗಸಿಗೆ ದಾಸನನ್ನು ನೋಡಿದರೆ ಮರುಕ ಹುಟ್ಟದಿದ್ದೀತೆ, ಅದರಲ್ಲಿಯೂ ಅವನು ಹಾಗೆ ಕಷ್ಟ ಪಡುತ್ತಿದ್ದಾಗ? ಒಂದು ದಿನ ಮಧ್ಯಾಹ್ನ ಆಕೆ ತನ್ನ ಮಗ ಶಿವನೊಡನೆ ದಾಸನ ಮಂಟಪಕ್ಕೆ ಸ್ವಲ್ಪ ತಿಂಡಿ ತೆಗೆದು ಕೊಂಡು ಹೋದಳು. ಶಿವನಿಗೆ ಆಗ ಏಳು ವರ್ಷ. ಮಾವಿನ ಹಣ್ಣಿನಂತಹ ಗುಂಡು ಕೆನ್ನೆ, ಕೆಂಪನೆಯ ತುಟಿ, ಒಗೆದ ಬಟ್ಟೆ, ಒಳ್ಳೆಯ ನಡತೆ—ಇವು ಗಳಿಂದ ಭದ್ರವ್ವನು ಶಿವನನ್ನು ಸಾಕುತಿದ್ದ ರೀತಿಯು ತಿಳಿಯುಬರುತ್ತಿದ್ದಿತು ಶಿವನಿಗೆ ಮಂಟಪದ ಹತ್ತಿರ ಹೋಗಲು ಭಯ. ಹೋದಮೇಲೆ ಮಗ್ಗದ ಸದ್ದು ಅವನ ಕಿವಿಗೆ ಬಿದ್ದಿತು. ಅದೇನೆಂಬುದು ಅವನಿಗೆ ಅರ್ಥವಾಗಲಿಲ್ಲ. ಅವನ ಭಯ ಇಮ್ಮಡಿಸಿತು.

'ನಾನು ಯೋಚಿಸಿಕೊಂಡಹಾಗೇ' ಎನ್ನುತ್ತ ಭದ್ರವ್ವನು ನಿಟ್ಟುಸಿರು ಬಿಟ್ಟಳು. ಎಷ್ಟು ಕದ ತಟ್ಟಿದರೂ ನೇಯುತ್ತಿದ್ದ ದಾಸನಿಗೆ ಕೇಳಿಸಲೇ ಇಲ್ಲ. ಹಿಂದೆ ಯಾರಾದರೂ ಹೀಗೆ ಬಂದಿದ್ದರೆ ಅವನಿಗೆ ಸಿಟ್ಟೊ ಬೇಸರವೂ ಆಗು

ತ್ತಿದ್ದಿತು. ಈಗ ಅವನು ಹಾಗೆ ಸಿಟ್ಟುಗೊಳ್ಳಲಿಲ್ಲ, ಅಂಧಕಾರದಲ್ಲಿ ತೊಳಲು ತ್ತಿದ್ದ ಅವನಿಗೆ ಸಹಾಯ ಬಂದರೆ ಹೇಗೋ ಹೊರಗಿನಿಂದಲೇ ಬರಬೇಕೆಂದು ಅವನು ಅಂದುಕೊಳ್ಳುತ್ತಿದ್ದನು. ನೆರೆಹೊರೆಯವರನ್ನು ಕಂಡರೆ ಅವನಿಗೆ ಈಗ ಹೊಸದಾಗಿ ಸ್ವಲ್ಪ ಸಮಾಧಾನ ತೋರುತ್ತಿದ್ದಿತು. ಮಾನವನಿಗೆ ಸಹಜವಾದ ಪರಸ್ಪರಾವಲಂಬನ, ಅಭಿಮಾನ, ಮೈತ್ರಿ—ಅವನ ಅಂತ ರಂಗದಲ್ಲಿ ಪುನಃ ಅಂಕುರಿಸಲಾರಂಭಿಸಿದುವು. ಬಾಗಲು ತೆರೆದು, ಮಾತ ನಾಡದೆ, ದಾಸನು ಮಣೆಯನ್ನು ಭದ್ರವ್ವನ ಹತ್ತಿರಕ್ಕೆ ತಳ್ಳಿದನು.

ಆಕೆಯು ಮಣೆಪಕ್ಕದಲ್ಲಿ ಕುಳಿತು, ತಾನು ತಂದಿದ್ದ ತಿಂಡಿ ಗಂಟನ್ನು ಬಿಚ್ಚಿ ಮುಂದಿಟ್ಟು ಗಂಭೀರವಾಗಿ ಹೀಗೆಂದಳು

'ದಾಸಣ್ಣ, ನಾನು ಬೆಳಿಗ್ಗೆ ಸೇವಿಗೆ ಮಾಡಿದೆ. ಚೆಂದಾಗಿತ್ತು ನಿನಗೆ ಕೊಂಚ ಸೇವಿಗೆ ಪಾಯಸ ತಂದಿದ್ದೇನೆ. ನನಗೆ ಹಸಿವಾದಾಗ ಇಷ್ಟು ಹಿಟ್ಟೇ ಸಾಕು. ಗಂಡಸರಿಗೆ ರುಚಿ ತಿಂಡಿ ಕಂಡರೆ ಇಷ್ಟ.' ನೀನು ತಿನ್ನಣ್ಣ.

ಭದ್ರವ್ವನು ಪುನಃ ನಿಟ್ಟುಸಿರು ಬಿಟ್ಟಳು. ದಾಸನು ಸೇವಿಗೆ ಪಾಯಸ ತೆಗೆದುಕೊಂಡು ಪಕ್ಕದಲ್ಲಿ ಇಟ್ಟು, ಅದನ್ನು ನೋಡುತ್ತ ಏನೋ ಯೋಚಿಸ ತೊಡಗಿದನು. ಶಿವನಿಗೆ ದಾಸನನ್ನು ಕಂಡು ಅಚ್ಚರಿ. ಅವನು ತಾಯಿಯ ಹಿಂದೆ ನಿಂತು ದಾಸನ ಕಡೆ ಇಣಿಕಿ ನೋಡುತ್ತಿದ್ದನು ಆಗ ಈ ರೀತಿ ಸಂಭಾಷಣೆ ನಡೆಯಿತು.

'ಇದು ಈಶ್ವರನ ಪಟ ಇದರ ಕೆಳಗೆ ಏನೋ ಬರೆದಿದೆ. ದೇವರ ಪಟ ಮನೆಯಲ್ಲಿರಬೇಕು. ನಿನ್ನಲ್ಲಿ ಒಂದೂ ಇಲ್ಲ. ಇದನ್ನು ಇಟ್ಟುಕೊ. ಶಿವ, ಓದೋ ಇದನ್ನ' ಎನ್ನುತ್ತ ಭದ್ರವ್ವನು ತನ್ನ ಮಡಲಿನಿಂದ ಒಂದು ಸಣ್ಣ ಪಟವನ್ನು ತೆಗೆದು ನೆಲದಮೇಲಿಟ್ಟು, ದಾಸನ ಕಡೆಗೆ ನೋಡಿದಳು.

ಇದನ್ನು ಕೇಳುತ್ತಲೇ ಆಗತಾನೆ ಕೊಂಚ ಮುಂದೆ ಬಂದಿದ್ದ ಶಿವ ಪುಸಕ್ಕನೆ ಹೋಗಿ ಅವಳ ಹಿಂದೆ ಅವಿತುಕೊಂಡನು.

'ಹಾಗಾದರೆ ನೀನು ಜಾಣನಲ್ಲ' ಎನ್ನುತ್ತ ಆಕೆಯು ದಾಸನ ಮುಂ ದಕ್ಕೆ ಆ ಪಟವನ್ನು ತಳ್ಳಿ 'ದಾಸಣ್ಣ, ಅದು ಏನಾದರೂ ಇರಲಿ. ಒಳ್ಳೆ ಯದೇ ಆಗಿರಬೇಕು. ನಮಗೆ ಶುಭವಾಗುವದು ಮುಖ್ಯ.' ಎಂದಳು.

ಅಷ್ಟು ಹೊತ್ತಿಗೆ ದಾಸನು ಪಟವನ್ನು ಹಿಡಿದುಕೊಂಡು ನೋಡಿ 'ಶ್ರೀ ಸಾಂಬಶಿವಾಯನಮಃ' ಎಂದು ಓದಿದನು.

ಆಗ ಶಿವನು ದಾಸನ ಕಡೆ ಇಣಿಕಿ ನೋಡಿ ದಾಸನು ಓದಿದುದ್ದ್ಧ ಪರಿಕಿಸ ತೊಡಗಿದನು.

ದಾಸನಿಗೆ ಪಟದಲ್ಲಿ ಮಹತ್ವವೇನೂ ಕಾಣಿಸಲಿಲ್ಲ. ಪರಂತು ಭದ್ರವ್ವನ ಅರ್ಥವೇನೋ ಸ್ವಲ್ಪ ಭಾಸವಾದಂತಾಯಿತು.

ಈ ಸಲ ದಾಸನು ತಾನಾಗಿಯೇ ಹೊಸ ಉತ್ಸಾಹಪ್ರೀತಿಗಳಿಂದ 'ಆಗಲವ್ವ, ಆಗಲಿ ತುಂಬ ಉಪಕಾರವಾಯಿತು' ಎಂದು ತನ್ನ ಕೃತಜ್ಞತೆಯನ್ನು ಸೂಚಿಸಿ ಮತ್ತೆ ಸುಮ್ಮನೆ ಕುಳಿತನು ಇನ್ನೂ ಭದ್ರವ್ವನ ಪ್ರೇಮದ ಪ್ರಭಾವವಾಗಲಿ, ಪಾಯಸದ ಸವಿಯಾಗಲಿ, ದೇವರ ನಾಮದ ಶಕ್ತಿಯಾಗಲಿ ಅವನಿಗೆ ಚೆನ್ನಾಗಿ ತಿಳಿದಿರಲಿಲ್ಲ. ಶಿವನು ಮಾತ್ರ ಮಗ್ಗ ನೋಡಿ ಭದ್ರವ್ವನಿಗೆ ಏನೇನೋ ಪ್ರಶ್ನೆಗಳನ್ನು ಹಾಕುತ್ತಿದ್ದನು.

ಸ್ವಲ್ಪ ಹೊತ್ತಿನ ಮೇಲೆ 'ಎಲ್ಲಾ ಒಳ್ಳೆಯದಾಗಲಿ' ಎಂದು ಭದ್ರವ್ವನು ಎದ್ದು ನಿಂತಳು.

ಅವಳ ಕಣ್ಣಲ್ಲಿ ಮರುಕವೂ ಮಮತೆಯೂ ತುಂಬಿದ್ದಿತು

ಹೊರಗೆ ಹೋಗುತ್ತ 'ದಾಸಣ್ಣ ಬೆಳಿಗ್ಗೆ ಪೂಜೆಯಾದಾಗ ಗುಡಿ ಗಂಟೆ ಕೇಳಿಸಲಿಲ್ಲವ? ಇಂದು ಏನು ಹೇಳು ನೋಡುವ, ಈಗ ಇಲ್ಲಿ ಮಾಘ ಮಾಸ. ಒಬ್ಬನೇ ಸೇರಿಕೊಂಡು ನಿನಗೆ ದಿನ, ವಾರ, ಹಬ್ಬ ಎಲ್ಲಾ ಮರೆತು ಹೋಗಿದೆ. ಇಲ್ಲಿಗೂ ಗುಡಿ ಗಂಟೆ ಕೇಳಿಸುತ್ತೊ' ಎಂದು ಪ್ರಶ್ನಿಸಿದಳು.

'ಹೂಂ! ಕೇಳಿಸುತ್ತೆ' ಎಂದನು ದಾಸ.

ಆಗ ಅವನಿಗೆ ಪೂಜಾಕಾಲವಾಗಲಿ ಘಂಟಾನಾದವಾಗಲಿ ಹೆಚ್ಚಿನ ವಿಷಯಗಳಾಗಿರಲಿಲ್ಲ.

'ಹೀಗೂ ಉಂಟೆ!' ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡು ಭದ್ರವ್ವನು 'ನೀನು ಪೂಜೆ ದಿನಕೂಡ ನೇಯುತ್ತ ಕುಂತಿರುವದು ಅನ್ಯಾಯ ಜಳಕಮಾಡಿ, ಮಡಿ ಉಟ್ಟು ಇಂಥ ದಿನ ಗುಡಿಗೆ ಹೋಗಬೇಕು. ನೀನಿರುವದು ಒಬ್ಬ. ಪೂಜೆಗೆ ಎಷ್ಟಾದೀತು! ಆದರೆ ತಾನೆ ಏನು? ಸಂಪಾದನೆ ಏಕೆ? ಹಬ್ಬ ನಿತ್ಯವೂ ಬರುತ್ತೆಯೆ? ನೀನು ಮುಂದಿನ ಶಿವರಾತ್ರಿ ದಿನ

ಗುಡಿಗೆ ಹೋಗಿ ಅಲ್ಲಿ ಪೂಜೆ ನೋಡು. ನೀನೇ ಪೂಜೆ ಮಾಡಿಸಿದರೂ ಸರಿಯೆ. ಇದರಿಂದ ನಮ್ಮ ಪಾಪ ಸವೆಯುತ್ತೆ. ಭಕ್ತರಿಗೆ ಭಯ ಇಲ್ಲ' ಣ್ಣಾ ಎನ್ನುತ್ತ ಭದ್ರವ್ವನು ಹೊರಡಲು ಅನುವಾದಳು.

ಗುಡಿಗೆ ಹೋಗದ ವಿಷಯವನ್ನು ಕುರಿತು ದಾಸದೊಡನೆ ಯಾರೂ ಹೀಗೆ ಪ್ರಸ್ತಾಪಿಸಿರಲಿಲ್ಲ. ಅವನ ವಿಲಕ್ಷಣಗಳಲ್ಲಿ ಇದೂ ಒಂದು. ಎಲ್ಲರೂ ಸುಮ್ಮನಿದ್ದರು. ಭದ್ರವ್ವನ ಮಾತು ಅವನ ಎದೆಯನ್ನೂ ಬಿಚ್ಚಿತು.

'ಇಲ್ಲ, ಅವ್ವ, ಇಲ್ಲ. ಗುಡಿಗೆ ಹೋಗಿ ನನಗೆ ಅಭ್ಯಾಸ ಇಲ್ಲ. ಅದು ನನಗೆ ಹೊಸದು' ಎಂದು ದಾಸನು ಹೇಳಿದನು.

ಇದನ್ನು ಕೇಳುತ್ತಲೆ 'ಹೊಸದು!' ಎನ್ನುತ್ತ ಆಕೆಯು ಬೆರಗಾದಳು. ದಾಸನಿಗೆ ಹುಟ್ಟಿದ ಊರಿನ ನೆನಪು ಬಂದಿತು,

'ನಿಮ್ಮೂರಲ್ಲಿ ಗುಡಿ ಇರಲಿಲ್ಲ?' ಎಂದು ಆಕೆ ಕೇಳಿದಳು.

'ಇತ್ತು ಇತ್ತು' ಎನ್ನುತ್ತ ದಾಸನು ತಲೆಯೆತ್ತಿ 'ಮೂರು ನಾಲ್ಕು ಇದ್ದವು. ನಮ್ಮೂರೂ ದೊಡ್ಡದು. ಆದರೆ ನಾನು ಗುಡಿಗೆ ಹೋಗುತ್ತಿರಲಿಲ್ಲ. ನಾನು ಹೋಗುತ್ತಿದ್ದುದು ಮಂದಿರಕ್ಕೆ' ಎಂದು ಉತ್ತರ ಕೊಟ್ಟನು.

'ಮಂದಿರ'ವೇನೆಂಬುದು ಭದ್ರವ್ವನಿಗೆ ತಟ್ಟನೆ ಸರಿಯಾಗಿ ಅರ್ಥವಾಗಲಿಲ್ಲ.

'ಅದು ಹೇಗಾದರೂ ಇರಲಿ. ತಿದ್ದಿಕೊಳ್ಳುವುದಕ್ಕೆ ಯಾವಾಗ ಆದರೇನು? ದಾಸಣ್ಣಾ, ಇನ್ನು ಮೇಲೆ ತಪ್ಪದೆ ಗುಡಿಗೆ ಹೋಗು. ನೀನೂ ತಪ್ಪದೆ ಪೂಜೆ ಮಾಡಿಸು. ಪೂಜೆ ನೋಡಿದರೆ ಮನಸ್ಸಿಗೆ ಸಂತೋಷ. ಆಗ ಮೈಗೆ ನೆಟ್ಟಗಿಲ್ಲದಿದ್ದರೂ, ನೆಟ್ಟಗೆ ಆಗುತ್ತೆ. ಎಲ್ಲರಿಗೂ ಶಿವನೇ ಗತಿ ದಾಸಣ್ಣಾ' ಎಂದು ಆಕೆ ಉಪದೇಶ ಮಾಡಿದಳು.

ದಾಸನಿಗೆ ಆಗಲೂ ಹೆಚ್ಚು ಸ್ಫೂರ್ತಿಯಾಗಲಿಲ್ಲ. ಅಭ್ಯಾಸವಶಾತ್ ಯಂತ್ರದಂತಿದ್ದ ಅವನ ಬಾಯಿಯಿಂದ ಸರಿಯಾಗಿ ಮಾತೇ ಹೊರಡದು.

ಈ ಹೊತ್ತಿಗೆ ಶಿವನಿಗೆ ಭಯ ಕಡಮೆಯಾಯಿತು. ದೂರದಲ್ಲಿದ್ದ ಅವನು ತಾನಾಗಿಯೇ ದಾಸನ ಬಳಿಗೆ ಬಂದು ನಿಂತನು. ಅವನನ್ನು ಕತ್ತೆತ್ತಿ ನೋಡಿ, ಭದ್ರವ್ವನ ಪ್ರೀತಿಗೆ ಪ್ರತಿಯಾಗಿ ತನ್ನ ಪ್ರೀತಿಯನ್ನು ತೋರಿಸಲೋಸುಗ, ದಾಸನು ಅವನ ಕೈಯಲ್ಲಿ ಕೊಂಚ ಸೇವಿಗೆಯನ್ನು ಇಡಹೋದನು.

ಶಿವನಿಗೆ ಇನ್ನೂ ಭಯ ಮತ್ತು ನಾಚಿಕೆ. ಹಿಂದಕ್ಕೆ ಸರಿಯುತ್ತ ಅವನು ತಾಯಿಯ ಸೆರಗನ್ನು ಹಿಡಿದುಕೊಂಡು, ಕೈ ನೀಡಿದನು.

'ಬೇಕೆ ಇನ್ನೂ? ಎಷ್ಟಾಸೆ!' ಎಂದು ಬಿಸುಸುಯ್ಯುತ್ತ 'ಇವನು ಈಚೆಗೆ ಕೊಂಚ ಕೆಡುತ್ತಿದ್ದಾನೆ. ಇದಕ್ಕೆ ನಮ್ಮ ಮುದ್ದೇ ಕಾರಣ. ಸದಾ ಇವನು ನನ್ನ ಕಣ್ಣೆದುರಿಗೋ ತಂದೆ ಕಣ್ಣೆದುರಿಗೊ ಇದ್ದರೆ ಒಳ್ಳೆಯದು' ಎಂದಳು.

ಎಂತಹವರಿಗೂ ಮುದ್ದು ಮಕ್ಕಳು ಕಂಡರೆ ಇಷ್ಟ. ಹತ್ತಿರಕ್ಕೆ ಎಳೆದು, ಭದ್ರವ್ವನು ಶಿವನನ್ನು ದಾಸನಿಗೆ ತೋರಿಸಿ ಅವನ ಮುಂಗುರುಳನ್ನು ಸವರಿದಳು. ದಾಸನು ಆಗಲೂ ಶಿವನ ಕಡೆ ನೋಡದೆ ಮಗ್ಗದ ಕಡೆ ನೋಡುತ್ತಿದ್ದನು

'ಶಿವನ ಗಂಟಲು ಚೆನ್ನಾಗಿದೆ ಇವನ ತಂದೆ ಇವನಿಗೆ ದಿನಾ ಪದ್ಯ ಹೇಳಿಕೊಡುತ್ತಾರೆ. ಇವನು ಕಲಿಯುವದು ಬಲು ಬೇಗ! ಶಿವ ಜಾಣ, ಶಿವ ಸರಿಯಾಗಿ ನಿಂತುಕೊಂಡು "ದೀನನಾನು" ಎಂಬ ಪದ್ಯ ಹೇಳು. ಕೇಳೋಣ ಎಂದಳು.

ಶಿವ ನಾಚಿಕೆ ತೋರಿ ಹಿಂದಕ್ಕೆ ಸರಿದನು.

'ಹಾಗಾದರೆ ಹೋಗು, ನೀನು ಹೆಡ್ಡ' ಎಂದ ಜರೆಯುತ್ತ ಭದ್ರವ್ವನು 'ಹೇಳು, ಕೇಳೋಣ. ದೊಡ್ಡವರ ಮಾತು ಕೇಳಬೇಕು ಒಳ್ಳೆಯ ಹುಡುಗರು. ಆಮೇಲೆ ಸೇವಿಗೆ ತಿನ್ನು. ಈಗ ನನಗೆ ಕೊಟ್ಟರು. ಬೇಗ ಹೇಳು ಜಾಣ' ಎನ್ನುತ್ತ ಮಗನನ್ನು ಮತ್ತೆ ಪ್ರೋತ್ಸಾಹಿಸಿದಳು.

ಶಿವನು ಕಣ್ಣನ್ನು ಉಜ್ಜಿಕೊಳ್ಳುತ್ತ, ದಾಸನ ಕಡೆ ನೋಡುತ್ತ, ನಾಚಿಕೆ ತೋರುತ್ತ ತಾಯಿಯ ಪಕ್ಕದಲ್ಲಿ ನಿಂತು ಹೇಳಲು ಮೊದಲು ಮಾಡಿದನು.

ಕೇಳಿಸಲಿಲ್ಲ. ಭದ್ರವ್ವ 'ಗಟ್ಟಿಯಾಗಿ ಹೇಳು' ಎಂದಳು.

ಶಿವ ಗಟ್ಟಿಯಾಗಿ ಹೇಳಿದನು. ಇನ್ನೂ ಸರಿಯಾಗಿ ಕೇಳಿಸಲಿಲ್ಲ. ಮತ್ತೆ ಭದ್ರವ್ವ 'ಇನ್ನೂ ಗಟ್ಟಿಯಾಗಿ ಹೇಳು, ಮೊದಲಿನಿಂದ.' ಎಂದಳು. ಶಿವನು ಹೇಳಿದನು.

" ದೀನ ನಾನು ಸಮಸ್ತ ಲೋಕಕೆ |
ದಾನಿ ನೀನು ವಿಚಾರಿಸಲು ಮತಿ |
ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು ||
ಏನ ಬಲ್ಲೆನು ನಾನು ನೆರೆಸು |
ಜ್ಞಾನ ಮೂರುತಿ ನೀನು |
ನಿನ್ನ ಸಮಾನರುಂಟೇ ದೇವ ರಕ್ಷಿಸು ನಮ್ಮನನವರತ || "

ಭದ್ರಮ್ಮನು ಭಕ್ತಿಯಿಂದ ಕೇಳಿ, ದಾಸನನ್ನು ಅಡಿಗಡಿಗೆ ನೋಡುತ್ತ, ಇದರಿಂದಲಾದರೂ ಅವನಿಗೆ ದೈವಭಕ್ತಿ ಹುಟ್ಟಿ, ಗುಡಿಗೆ ಹೋಗಬೇಕೆಂಬ ಇಚ್ಛೆಯುಂಟಾದೀತೆಂದು ಬಗೆದಳು.

'ಶಿವನಿಗೆ ಇನ್ನೂ ಬರುತ್ತೆ. ಅವನು ಜಾಣ. ಇನ್ನೊಂದು ದಿನ ಹೆಚ್ಚಾಗಿ ಹೇಳಬೇಕು ಶಿವ.' ಎಂದು ಆಕೆಯು ಅವನಿಗೆ ಸೇವಿಗೆ ಕೊಟ್ಟಳು.

ದಾಸನ ಮೌನವು ಭದ್ರಮ್ಮನಿಗೆ ಸರಿಬೀಳಲಿಲ್ಲ. 'ದೇವರು ದೊಡ್ಡವನು. ನಾವೇನು ಅವನ ಮುಂದೆ! ಜಗಳ, ಗುದ್ದಾಟ, ಹುಟ್ಟು, ಸಾವು, ರೋಗ—ಇದೆಲ್ಲ ನೋಡಿ ನನಗೆ ಬೇಸರವಾಗಿ ಹೋಗಿದೆ. ದೇವರ ಮಹಿಮೆ ಎಂದರೆ ನನಗೆ ಬಹಳ ಭಕ್ತಿ. ಶಿವ ಚೆನ್ನಾಗಿ ಹೇಳಿದನೆ?' ಎನ್ನುತ್ತ ಆಕೆಯು ಹೊರಟಳು.

ಪದ್ಯವು ದಾಸನ ಕಿವಿಗೆ ಬಿದ್ದಿತು ಮನಸ್ಸಿನಲ್ಲಿ ಪರಿಣಾಮ? ಇಗಲೇ ಯಾರು ಹೇಳಬಹುದು!

ಶಿವನ ಕೈಯಲ್ಲಿ ದಾಸನು ಇನ್ನಷ್ಟು ಸೇವಿಗೆ ಇಡಲು ಹೋದನು.

ಭದ್ರಮ್ಮನು 'ಬೇಡ ಬೇಡ ದಾಸಣ್ಣ. ಹೆಚ್ಚಾಯಿತು. ಹೊತ್ತಾಗಿದೆ. ಹೋಗಬೇಕು' ಎನ್ನುತ್ತ ಚಾಚಿದ್ದ ಶಿವನ ಕೈಯನ್ನು ಎಳೆದುಕೊಂಡು 'ಬೇಕಾದಾಗ ಹೇಳಿಕಳಿಸು, ದಾಸಣ್ಣ. ಪೂಜೆ ದಿನ ನೇಯಬೇಡ. ಅದರಿಂದ ಮೈಗೂ ಸರಿಯಲ್ಲ, ಆತ್ಮಕ್ಕೂ ಕೆಡಕು. ಹಾಗೆ ಹಣ ಸಂಪಾದಿಸಿದರೆ ಏನು ಉಪಯೋಗ?' ಎಂದು ಹಿತೋಕ್ತಿ ಹೇಳಿ, ಶಿವನೊಡನೆ ತನ್ನ ಮನೆಗೆ ಹಿಂದಿರುಗಿದಳು.

'ಆಗಲವ್ವ ಆಗಲಿ. ತುಂಬಾ ಉಪಕಾರವಾಯಿತು' ಎಂದು ದಾಸನು ಬಾಗಿಲು ತೆರೆದು, ಪಕ್ಕದಲ್ಲಿ ನಿಂತು, ಅವರು ಹೋಗುವುದನ್ನೇ ನೋಡುತ್ತಿದ್ದನು.

ಭದ್ರವ್ವನ ಮಾತುಗಳೂ ತತ್ವಗಳೂ ಸುಖಸಂತೋಷಗಳೂ ದಾಸನಿಗೆ ಆಗ ಅಷ್ಟಾಗಿ ಅರ್ಥವಾಗಲಿಲ್ಲ. ತನ್ನ ಸದ್ಯಃ ಸ್ಥಿತಿಗಿಂತ ಮೇಲಾದ ಸ್ಥಿತಿಯೊಂದು ಉಂಟೆಂಬುದು ಮಾತ್ರ ಅವನಿಗೆ ಬೋಧೆಯಾಯಿತು. ಅವನ ಆಗಿನ ಜೀವನ ಪ್ರವಾಹವನ್ನು ಬಿಸಿಲಿನಿಂದ ಬತ್ತಿ, ಮರಳುದಿಬ್ಬಗಳ ಮಧ್ಯೆ ಸಿಲುಕಿಕೊಂಡು, ಮುಂದೆ ಹರಿಯಲಾರದೆ, ಕೊಳಕು ನೀರನ್ನು ಒಯ್ದು ಹೆಣಗುತ್ತಿದ್ದ ತೊರೆಗೆ ಹೋಲಿಸಬಹುದು !

ದಿನಗಳು ಕಳೆದುವು. ಶಿವರಾತ್ರಿ ಬಂದಿತು ಗುಡಿಗೆ ದಾಸನು ಆಗಲೂ ಬರಲೇ ಇಲ್ಲ. ಊರಿನವರು ತಾವಾಗಿ ಬಂದು ಮರುಕದಿಂದ ಕೊಟ್ಟ ಹಣ್ಣು ಹಂಪಲುಗಳನ್ನು ಅವನು ತನ್ನ ಮಂಟಪದಲ್ಲಿಯೇ ಕುಳಿತು ತಿಂದನು. ಯಾರೊಡನೆಯೂ ಸೇರುವ ಬುದ್ಧಿ ಅವನಿಗೆ ಇನ್ನೂ ಬಂದಿರಲಿಲ್ಲ.

ಊರಿನಲ್ಲಿ ಶಿವರಾತ್ರಿಯ ಆಚರಣೆಯು ಯಥಾಪ್ರಕಾರ ನಡೆಯಿತು. ಗುಡಿಯು ತುಂಬ ಜನರು ನೆರೆದಿದ್ದರು. ಭಕ್ತಿಗೆ ಕೊರತೆ ಇರಲಿಲ್ಲ. ಗುಡಿಯಲ್ಲಿಯೇ ಪೂಜೆ, ಭಜನೆ, ಜಾಗರಣೆ ಮುಂತಾದುವನ್ನು ಕೆಲವರು ರಾತ್ರಿಯೆಲ್ಲ ನಿರಾಹಾರಿಗಳಾಗಿ ಭಕ್ತಿಯಿಂದ ಮಾಡಿದರು. ಮತ್ತೆ ಕೆಲವರು ಗುಡಿಗೆ ಹೋಗಿಬಂದು ಮನೆಯಲ್ಲಿ ಬಗೆಬಗೆಯಾದ ತಿಂಡಿಗಳನ್ನು ತಿಂದು ಮಲಗಿದರು. ಇನ್ನು ಕೆಲವರು ಫಲಾಹಾರ ತೆಗೆದುಕೊಂಡು ದೇವರ ನಾಮಗಳನ್ನು ಹಾಡುತ್ತ ಸತ್ಕಾಲಕ್ಷೇಪ ಮಾಡಿದರು. ಆದರೆ ಬಹು ಮಂದಿಗೆ ಹಬ್ಬವೆಂದರೆ ಹೊಟ್ಟೆತುಂಬ ತಿನ್ನುವ ಸವಿಯೂಟದ ದಿನವಲ್ಲವೆ !

ಹೆಗ್ಗಡೆ ಮನೆಯಲ್ಲಿಯೂ ಶಿವರಾತ್ರಿಯ ಆಚರಣೆಯಾಯಿತು. ಮನೆಯ ತುಂಬ ಬೇಕಾದ ಜನರು ಸೇರಿದ್ದರು. ತಿಂಡಿ ಉಪಚಾರಗಳಿಗೂ ಮಾತುಕತೆಗಳಿಗೂ ಕಡಮೆ ಇರಲಿಲ್ಲ. ಅವರ ಸಂಭ್ರಮದಲ್ಲಿ ನಾಗಣ್ಣನ ನೆನಪೇ ಯಾರಿಗೂ ಬರದು. ಜಗಳಗಳ ನೆನವು, ಚಾಡಿಗಳ ಹೇಳಿಕೆ, ಗಂಡಹೆಂಡರಿಗೆ ರಾಜಿ, ಕರುಕೋಳಿಗಳ ಕಳ್ಳತನದ ತೀರ್ಮಾನ, ಹಳೇ ವಿವಾದಗಳ ಪಂಚಾಯತಿ, ಹಿಂದಿನ ಗುರುತುಗಳ ಪರಿಚಯ, ಹೊಸ

ಸ್ನೇಹದ ಸಂಪಾದನೆ ಮುಂತಾದುವು ಸಾಂಗೋಪಾಂಗವಾಗಿ ನೆರವೇರಿದುವು. ಇದು ಸಂಪತ್ಸಮೃದ್ಧಿ ಸೌಹಾರ್ದ ಸೌಜನ್ಯಗಳಿಂದ ರಾಜಿಸುತ್ತಿದ್ದ ಶಾಂತಿ ಸುಭಿಕ್ಷದ ಕಾಲದ ಮಾತು !

ಮುಂಬೆಳಗು ಎಲ್ಲೆಲ್ಲಿಯೂ ಕವಿದು ಕೊರೆಯುತ್ತಿದ್ದ ದಟ್ಟವಾದ ಮಂಜಿನ ಮಳೆ. ತಂಗಾಳಿಯು ಹೊಡೆತಕ್ಕೆ ಸಿಕ್ಕಿದ್ದ ಕೆಂಪು ನೀರಿನ ಮಂಜು ಮುಸುಕಿದ ಕುಳಿ.

ಇವೇ ಆಗ ದಾಸನ ಜೀವನದ ಮುಂದಿದ್ದ ದೃಶ್ಯಗಳು. ಈ ಸಲದ ಶಿವರಾತ್ರಿಯ ದಿನವೂ ಹಗಲೆಲ್ಲ ಉದ್ಯೋಗ, ರಾತ್ರಿಯೆಲ್ಲ ದುಃಖ. ಹೊತ್ತು ಹೋಗದೆ, ಬಾಗಿಲು ಕೂಡ ಮುಚ್ಚದೆ, ಮೊಳಕಾಲಮೇಲೆ ತಲೆಯಿಟ್ಟು ಅವನು ಬೆಳಗು ಹರಿಯುವ ತನಕ ರೋದಿಸುತ್ತ ಕಾಲ ಕಳೆದನು. ಅವನ ಹಿಂದಿನ ಬಾಳಿಗೂ ಇಂದಿನ ಬಾಳಿಗೂ ಮೂಡಲು ಪಡವಲಷ್ಟು ಅಂತರ ಅವನ ಪ್ರೇಮ ಭಕ್ತಿ ಉತ್ಸಾಹಗಳು ಪುನಃ ಮೂಡುವುದೆಂತು ?

ಆಗಂತುಕರೂ ಆಶ್ರಿತರೂ ಆಪ್ತರೂ ಮನೆಗೆ ಬಂದು ತಿಂದು ತೇಗಿ ಹೋಗುತ್ತಿದ್ದಾಗ ಬಸಪ್ಪನು ಮಾತ್ರ ಹೊರಳುತ್ತ ಹಾಸಿಗೆಯಲ್ಲಿ ಅಸ್ವಸ್ಥದ ನೆಪದಿಂದ ಬಿದ್ದಿದ್ದನು. ಒಮ್ಮೊಮ್ಮೆ ಅವನು ತನ್ನಲ್ಲಿ ತಾನೇ ಮಾತಾಡಿಕೊಳ್ಳುತ್ತ ಇದ್ದುದರಿಂದ ಹುಚ್ಚನಂತೆ ತೋರುತ್ತಿದ್ದಿತು. ಅವನಿಗೆ ಒಂದು ಕಡೆ ಚಿಂತೆ ಮತ್ತು ಭಯ; ಇನ್ನೊಂದು ಕಡೆ ಉತ್ಸಾಹ ಮತ್ತು ಶುಭಾಕಾಂಕ್ಷೆ. ಚಿಂತೆ ಮತ್ತು ಭಯ ನಾಗಣ್ಣ ಮತ್ತು ಮಾಯಿಯ ಸಲುವಾಗಿ; ಉತ್ಸಾಹ ಮತ್ತು ಶುಭಾಕಾಂಕ್ಷೆ ಚೆನ್ನಮ್ಮ ಮತ್ತು ಅವಳ ಮದುವೆ ದೆಸೆಯಿಂದ. ಒಟ್ಟಿನಲ್ಲಿಯೇ ಚಿಂತೆಯೇ ಹೆಚ್ಚಾಗಿ ಅವನು ಪರಿತಪಿಸುತ್ತಿದ್ದನು. ಚೆನ್ನಮ್ಮನ ಪಕ್ಕದಲ್ಲಿ ಆಗಲೇ ಕುಳಿತಿರುವ ಸವಿಗನಸೂ ಒಮ್ಮೊಮ್ಮೆ ಅವನಿಗೆ ತೋರುತ್ತಿದ್ದಿತು. ಅನಿಷ್ಟ ನಿವಾರಣೆಯಾಗಿ ಇಷ್ಟಾರ್ಥ ಸಿದ್ಧಿಯಾಗುವದೆಂತು ಎಂದವನಿಗೆ ರಾತ್ರಿಯೆಲ್ಲ ಯೋಚನೆ. ಎಷ್ಟು ತಂಬಾಕು ತಿಂದರೂ ಆ ಯೋಚನೆ ಬಗೆ ಹರಿಯದು.

‘ ಚಿತಾ ದಹತಿ ನಿರ್ಜೀವಂ ಚಿಂತಾ ದಹತಿ ಜೀವನಂ ’

೧೨

# ಹೆಗ್ಗಡೆ ಸೋದರ ಸೊಸೆ ಮದುವೆ

ಶಿವರಾತ್ರಿಯಾದ ಐದಾರು ದಿನಗಳ ಮೇಲೆ ಹೆಗ್ಗಡೆ ಮನೆಯಲ್ಲಿ ಬಂಧು ಬಳಗವ ಗದ್ದಲ. ಹೆಗ್ಗಡೆಯ ತಂಗಿ ಮಗಳಿಗೂ ಮಗ್ಗಲು ಊರಿನ ಸಾಹುಕಾರ ಸಂಜಪ್ಪನವರ ಮಗನಿಗೂ ಹೆಗ್ಗಡೆ ಮನೆಯಲ್ಲಿ ಮದುವೆ ನಡೆಯತಕ್ಕುದೆಂದು ನಿಶ್ಚಯವಾಗಿದ್ದಿತು. ಹೆಗ್ಗಡೆಯೇ ನಿಂತು ಸೋದರ ಸೊಸೆ ಮದುವೆಯನ್ನು ಸಂಭ್ರಮದಿಂದ ನಡೆಯಿಸಿದನು. ಬೊಮ್ಮನ ಹಳ್ಳಿಯ ಬಂಧುಮಿತ್ರರಲ್ಲದೆ ಬೇರೆ ಬೇರೆ ಊರುಗಳಿಂದಲೂ ನೆಂಟರಿಷ್ಟರು ಆ ಸಮಾರಂಭಕ್ಕೆ ಆಹ್ವಾನಿತರಾಗಿ ನಾಲ್ಕೈದು ಮನೆಗಳ ತುಂಬ ಕಿಕ್ಕಿರಿಯು ತ್ತಿದ್ದರು.

ಆಗ ಹೆಗ್ಗಡೆ ಮನೆ ಸುಣ್ಣಬಣ್ಣಗಳಿಂದಲೂ, ತಳಿರುತೋರಣ ಗಳಿಂದಲೂ, ಬಾಳೆಯ ಕಂಬಗಳಿಂದಲೂ ಶೋಭಿಸುತ್ತಿದ್ದಿತು. ಹೆಗ್ಗಡೆಯ ತಂಗಿಯೂ ಆಕೆಯ ಗಂಡನೂ ಅವರ ಬಂಧುಗಳೂ ಲಗ್ನದ ದಿನಕ್ಕೆ ಒಂದು ವಾರ ಮುಂಚಿತವಾಗಿ ಬಂದು ಎಲ್ಲ ಸಿದ್ಧತೆಗಳನ್ನೂ ಮಾಡಿದರು. ಎಲ್ಲೆಲ್ಲಿಯೂ ಸಡಗರ.

ಲಗ್ನದ ಹಿಂದಿನ ದಿನ. ಸಂಧ್ಯಾಕಾಲ. ವರನ ಕಡೆಯವರು ಹೆಗ್ಗಡೆ ಮನೆ ಎದುರಿಗೆ ಸಿದ್ಧವಾಗಿದ್ದ ಬಿಡಾರದಲ್ಲಿ ಬಂದು ಇಳಿಯಬೇಕಾಗಿದ್ದಿತು ಹೆಣ್ಣಿನ ಕಡೆಯವರು ವಸ್ತ್ರಾಲಂಕಾರ ಭೂಷಿತರಾಗಿ ಸಡಗರದಿಂದ ದೀಪ ವಾದ್ಯಗಳೊಡನೆ ಹೊಸಬೀಗರನ್ನು ಎದುರುಗೊಳ್ಳಲು ಊರ ಬಾಗಿಲಲ್ಲಿ ಕಾದಿದ್ದರು. ಹೆಣ್ಣಿನ ಜನರೊಂದಿಗೆ ಬಸಪ್ಪನೂ ಬಂದು ನಿಂತಿದ್ದನು ಹೊತ್ತಿಗೆ ಸರಿಯಾಗಿ ವರನೂ ವರನ ಕಡೆಯವರೂ ಗಾಡಿಗಳಲ್ಲಿ ಬಂದಿಳಿ ದರು. ಆ ಗುಂಪಿನಲ್ಲಿ ಚೆನ್ನಮ್ಮನೂ ಅವಳ ಅಕ್ಕ ಮಲ್ಲಮ್ಮನೂ ತಮ್ಮ ತಂದೆತಾಯಿಬಳಗಗಳೊಡನೆ ಬಂದು ಸೇರಿದ್ದರು. ಹೆಣ್ಣಿನವರು ಗಂಡಿನವ

ರನ್ನು ಎದುರುಗೊಂಡ ಮೇಲೆ ಎಲ್ಲರೂ ತಮ್ಮ ತಮ್ಮ ಬಿಡಾರಗಳಿಗೆ ಹೋದರು. ಚೆನ್ನಮ್ಮನನ್ನು ಕಾಣುತ್ತಲೇ ಬಸಪ್ಪನ ಮನಸ್ಸಿನಲ್ಲಿ ಕುತೂಹಲ ವ್ಯಸನಗಳು ಏಕಕಾಲದಲ್ಲಿ ಮೂಡಿದುವು. ಆದರೆ ಅವು ಯಾರಿಗೆ ಗೊತ್ತು?

ಗಂಡಿನವರು ತಮ್ಮ ಬಿಡಾರಕ್ಕೆ ಬಂದು ಇಳಿದರು. ಅವರ ಸಾಮಾನುಗಳನ್ನು ತಕ್ಕ ಸ್ಥಳಗಳಲ್ಲಿ ಇಡಿಸಿ ಅವರೆಲ್ಲರಿಗೂ ಉಪಾಹಾರಗಳನ್ನು ಯಥೋಚಿತವಾಗಿ ಹಂಚಿ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವ ಭಾರವು ಬಸಪ್ಪನ ಪಾಲಿಗೆ ಬಿದ್ದಿದ್ದಿತು. ಅವರವರ ಸ್ಥಾನಗಳಲ್ಲಿ ಅವರವರು ನಿಂತ ಮೇಲೆ ಬಸಪ್ಪನು ಮನೆಗೆ ಬಂದನು

ಬಳಿಕ ವರಪೂಜೆಗೆ ಹೊರಡಲು ಸಿದ್ಧತೆ ಹೆಂಗಸರು ಕನ್ನಡಿಗಳನ್ನು ನೋಡಿ ನೋಡಿ, ಜೈತಲೆ ತಿದ್ದಿ ಜಡೆ ಹಾಕಿಕೊಂಡು, ಬೇಕಾದ ಉಡಿಗೆ ತೊಡಿಗೆಗಳನ್ನು ಆರಿಸಿ ಧರಿಸಿಕೊಳ್ಳುತ್ತ ಸಿಂಗರಿಸಿಕೊಳ್ಳಲು ಮೊದಲು ಮಾಡಿದರು. ಎಲ್ಲೆಲ್ಲಿ ನೋಡಿದರೂ ಗಂಧ, ಪುಷ್ಪ, ಪರಿಮಳ. ಅವರಿದ್ದ ಎಡೆಗಳಲ್ಲಿಯೇ ಕೊಡಿಸಲು ಬಸಪ್ಪನು ಹಾಲು ನೀರು ಹಣ್ಣು, ಎಳನೀರು ತಿಂಡಿ ಮುಂತಾದ ಉಪಾಹಾರಗಳನ್ನು ತೆಗೆಸಿಕೊಂಡು ಕೋಣೆಯಿಂದ ಕೋಣೆಗೆ ಸಹಾಯಕರೊಡನೆ ಹೋದನು. ಇವನು ಹೋದುದನ್ನು ಕಂಡು ಅವರೇ ಉಪಾಹಾರಕ್ಕೆ ಬಂದುಬಿಟ್ಟರು. ಆಗ ಅವರ ಪೆಟ್ಟಿಗೆಗಳೂ ಬಟ್ಟೆ ಬರೆಗಳೂ ಅಸ್ತವ್ಯಸ್ತವಾಗಿ ಬಿದ್ದಿದ್ದುವು. ಅವಸರದಲ್ಲಿ ಅವರಾರೂ ಅದನ್ನು ಗಮನಿಸಲಿಲ್ಲ. ಆದರೆ ಒಂದು ಕಡೆ ಮಾತ್ರ ಒಬ್ಬ ತರುಣಿ ತನ್ನ ಪದಾರ್ಥಗಳನ್ನು ಸರಿಯಾಗಿಟ್ಟ ಹೊರತು ಸ್ಥಳಬಿಟ್ಟು ಕದಲಲಿಲ್ಲ. ಆದರೆ ಅವಳೂ ಹಂಚಿಕೆ ಮುಗಿಯುವದರೊಳಗೇ ಬಂದು ನಿಂತಳು. ಅಷ್ಟರಲ್ಲಿ ಹಿರಿಯ ಮುತ್ತೈದೆಯೊಬ್ಬಳು 'ಬಸಪ್ಪ, ಅಲ್ಲಿ ಒಬ್ಬ ಹುಡುಗಿ ಇದ್ದಾಳೆ. ಮರೆಯಬೇಡ. ಸರಿಯಾಗಿ ನೋಡಿಕೊ' ಎಂದು ಕೈ ತೋರಿಸಿದಳು. ನೋಡಿದರೆ ಚೆನ್ನಮ್ಮ! ಆಗಲೇ ಬಸಪ್ಪ ಚೆನ್ನಮ್ಮನನ್ನೂ ಚೆನ್ನಮ್ಮ ಬಸಪ್ಪನನ್ನೂ ಅಷ್ಟು ಸಮೀಪದಲ್ಲಿ ಕಣ್ಣಾರ ನೋಡಿದುದು. ಇಬ್ಬರ ಮುಖವೂ ಕೆಂಪೇರಿತು. ಚೆನ್ನಮ್ಮನು ನಾಚಿ ತಲೆ ತಗ್ಗಿಸಿದಳು. ಹತ್ತಿರವಿದ್ದವರೂ ಕಾಣದವರ ಹಾಗೆ ನಟಿಸಿದರು. ಬಸಪ್ಪ ಅದನ್ನು ನೋಡಿ ಬೇರೆ ಕಡೆ ತಿರುಗಿ

ದನು. ಆಮೇಲೆ ರಾತ್ರಿಯಲ್ಲಿ ವರಪೂಜೆ ಊಟ ಉಪಚಾರಗಳು ಯಥಾ ವಿಧಿಯಲ್ಲಿ ನೆರವೇರಿದುವು.

ಮದುವೆ ಮನೆಯಲ್ಲಿ ಎಲ್ಲರಿಗೂ ಚೆನ್ನಮ್ಮನ ನಡೆನುಡಿಗಳನ್ನೂ ರೂಪಲಾವಣ್ಯಗಳನ್ನೂ ನೋಡಿ ಅತಿಶಯವಾದ ಮೆಚ್ಚಿಗೆ. ಚೆನ್ನಮ್ಮ ನೆಂದರೆ ಕುಲಸ್ತ್ರೀಮೂರ್ತಿ ಎನ್ನಬಹುದು. ಅವಳು ಅಂದಚೆಂದಗಳಿಗೆ ತಕ್ಕಷ್ಟು ಗಮನಕೊಟ್ಟರೂ ಬೆಡಗು ಒಯ್ಯಾರಗಳಿಗೆ ಎಡೆಗೊಡದಿದ್ದುದನ್ನು ಕಂಡು ಅವರು ತಮ್ಮ ತಮ್ಮ ಲ್ಲಿಯೇ ಮಾತನಾಡಿಕೊಳ್ಳುವರು. ಸಹಜ ವಾದ ಸೌಂದರ್ಯ, ಉಚಿತವಾದ ವಸ್ತ್ರಭೂಷಣ, ಹಿರಿಯರಲ್ಲಿ ನಯ ವಿನಯ, ಕಿರಿಯರಲ್ಲಿ ಸೌಹಾರ್ದ, ಎಲ್ಲರಲ್ಲಿಯೂ ಮಿತಭಾಷಣ, ಸ್ತ್ರೀ ಯೋಗ್ಯವಾದ ಲಜ್ಜೆ!

ಚೆನ್ನಮ್ಮನಿಗೆ ತನ್ನ ಅಕ್ಕ ಮಲ್ಲಮ್ಮನನ್ನು ಕಂಡರೆ ಪ್ರಾಣ ಮಲ್ಲ- ನಿಗೆ ಸುಮಾರು ಇಪ್ಪತ್ತು ವರ್ಷ ವಯಸ್ಸು. ಮದುವೆಯಾದ ಕೆಲವು ತಿಂ ಳಲ್ಲಿಯೇ ಅವಳು ವಿತಂತುವಾದಳು. ಅವಳು ಚೆನ್ನಮ್ಮನಷ್ಟು ರೂಪ ಲಾವಣ್ಯವಿವೇಕಗಳುಳ್ಳವಳಲ್ಲ. ಅವಳಿಗೆ ಆಗಲೇ ಜೀವನದಲ್ಲಿ ವಿರಕ್ತಿ, ಅವಳು ಬಹಳ ಯಥಾರ್ಥವಾದಿ. ಅದರ ದೆಸೆಯಿಂದಲೂ ಅವಳು ಜನರ ಅವಿಶ್ವಾಸಕ್ಕೆ ಗುರಿಯಾಗುತ್ತಿದ್ದುದೂ ಉಂಟು. ತಂಗಿಯ ಸುಖ ಸಂತೋಷ ಗಳೇ ತನ್ನವು ಎಂದು ಅವಳು ಬಗೆಯುತ್ತಿದ್ದಳು. ಚೆನ್ನಮ್ಮನಿಗೂ ಅಕ್ಕನ ಪ್ರೀತಿಗೆ ಸರ್ವಪ್ರಕಾರದಲ್ಲಿಯೂ ಪಾತ್ರಳಾಗಬೇಕೆಂದು ಆಸೆ. ಆ ಆಸೆಗೆ ಅನುಗುಣವಾಗಿ ಅವಳು ಯಾವಾಗಲೂ ನಡೆಯುತ್ತಿದ್ದಳು. ತಾವು ಅಕ್ಕ ತಂಗಿಯರೆಂಬುದು ತಮ್ಮ ಉಡಿಗೆ ತೊಡಿಗೆಗಳಿಂದಲೇ ಸ್ಪಷ್ಟವಾಗಬೇಕೆಂ ಬುದು ಚೆನ್ನಮ್ಮನ ಉದ್ದೇಶ. ಆದರೆಸದಾ ತಾನ್ನಿಟ್ಟಂತಹ ವಸ್ತ್ರಭೂಷಣ ಗಳನ್ನೇ ಅಕ್ಕನೂ ಇಡಬೇಕೆಂದು ಅವಳು ಹಟ ಹಿಡಿಯುವಳು. ಒಂದೊಂದು ಸಲ ಅವು ಮಲ್ಲಮ್ಮನಿಗೆ ಒಪ್ಪುತ್ತಿರಲಿಲ್ಲ. ಇಷ್ಟವಿಲ್ಲದಿದ್ದರೂ ತಂಗಿಯನ್ನು ಸಂತೋಷಪಡಿಸಲು ಮಲ್ಲಮ್ಮನು ಅವಳ ಮಾತಿನಂತೆ ನಡೆಯುತ್ತಿದ್ದಳು. 'ನನ್ನನ್ನು ಹೀಗೆ ಆಡಿಸಬೇಡ. ನೋಡೋಣ. ಕೈ ಹಿಡಿದ ಗಂಡನನ್ನು ಹೇಗೆ ಆಡಿಸುವೆಯೊ?' ಎಂದು ತಂಗಿಯನ್ನು ಅವಳು ಹಾಸ್ಯಮಾಡು

ವಳು 'ಹೋಗಕ್ಕ. ಬೇಡಗೇಲಿ. ನಾನು ಹೇಳಿದ ಹಾಗೆ ಕೇಳು ನೀನು. ಮದುವೆ ಸುದ್ದಿ ಏಕೆ?' ಎನ್ನುತ್ತ ಚೆನ್ನಮ್ಮನು ಕೋಪ ತೋರಿ ಅಕ್ಕನಿಗೆ ಕೊರೆ ಇಡುತ್ತಿದ್ದಳು.

ಆ ಮದುವೆ ಮನೆಗೆ ದೂರದ ಪಟ್ಟಣದಿಂದ ಕೆಲವರು ನೆಂಟರು ಬಂದಿದ್ದರು. ಅವರು ಬಹಳ ಹಣವಂತರು, ಅಷ್ಟು ಗುಣವಂತರಲ್ಲ. ಅವರ ಹಂಗಸರಿಗೂ ಚೆನ್ನಮ್ಮನಿಗೂ ಭಾಷೆವೇಷಭೂಷಣಗಳಲ್ಲಿ ಅಜಗಜಾಂತರ ವ್ಯತ್ಯಾಸವಿದ್ದಿತು ಕೋಡಗನಿಗೆ ಅಲಂಕರಿಸಿದ ಮಾತ್ರಕ್ಕೆ ಕುರೂಪವು ಕಡಮೆಯಾಗುವುದೆ ಅಥವಾ ಬುದ್ಧಿ ಹೆಚ್ಚುವುದೆ? ಚೆನ್ನಮ್ಮನ ಸೌಜನ್ಯ ಸೌಂದರ್ಯಗಾಂಭೀರ್ಯಾದಿಗಳನ್ನು ನೋಡಿ, ಅಸೂಯೆಯಿಂದ ತಪ್ಪು ಹುಡುಕುತ್ತ, ಅವರು ತಮ್ಮ ಹೀನ ಗುಣವನ್ನೂ ಹೀನ ರೂಪವನ್ನೂ ಹೆಚ್ಚಾಗಿ ತೋರಿಸಿಕೊಳ್ಳುವರು. ಒಂದು ಕಡೆ ತಾರತಮ್ಯವಿಲ್ಲದೆ ಮನೆ ಕೆಲಸಮಾಡಿ ಚೆನ್ನಮ್ಮನ ಕೈ ಒರಟಾಗಿದ್ದುದನ್ನು ಕಂಡು ಅವರಿಗೆ ತಿರ ರ ಇನ್ನೊಂದು ಕಡೆ ಅವಳ ಸಹಜ ಸೌಂದರ್ಯ ಸರಳತೆಯನ್ನು ನೋಡಿ ಅಚ್ಚರಿ. ಇವರು ಹೊರತು ಮತ್ತಾರೂ ಚೆನ್ನಮ್ಮನಲ್ಲಿ ದೋಷ ಎಣಿಸಲು ಯತ್ನಿಸಲಿಲ್ಲ. ಹಳ್ಳಿಯಲ್ಲಿಯೂ ಇಂತಹ ಹೆಣ್ಣುಂಟೆ ಎಂಬ ಸೋಜಿಗದಿಂದ ಅವರು ಎವೆ ಇಕ್ಕದೆ ಅವಳನ್ನೇ ನೋಡುವರು. ಪಾತ್ರೆ ತೊಳೆಯುವುದು, ಕಸ ಗುಡಿಸುವುದು, ಅರಿಶಿನ ಕುಂಕುಮ ಕೊಡುವುದು ಮುಂತಾದ ಎಲ್ಲ ಕೆಲಸಗಳನ್ನು ಚೆನ್ನಮ್ಮ ತಾನಾಗಿಯೇ ಎಲ್ಲರು ಒಪ್ಪುವ ಹಾಗೆ ಮಾಡುವಳು. ಪಟ್ಟಣದ ಹೆಣ್ಣುಗಳಲ್ಲಿ ಬರಿ ಬಿಂಕ ಬೆಡಗು ಆಪಾದ ಮಸ್ತಕ ತುಂಬಿದ್ದಿತೆ ಹೊರತು ಸೇವೆಯಿಂದ ಸಹಾಯಮಾಡುವ ಬುದ್ಧಿಯಾಗಲಿ ಕಾರ್ಯನಿರ್ವಾಹ ಶಕ್ತಿಯಾಗಲಿ ಇರಲಿಲ್ಲ ಹಣಕ್ಕಿಂತ ಗುಣಕ್ಕೆ ಹೆಚ್ಚು ಪ್ರಾಶಸ್ತ್ಯ!

ಮರುದಿನ ವಿಜೃಂಭಣೆಯಿಂದ ಲಗ್ನವು ಸಕಾಲಕ್ಕೆ ನೆರವೇರಿತು. ಹೆಗ್ಗಡೆಯೇ ಮದುವೆ ಚಪ್ಪರಕ್ಕೆ ಬಂದು ಎಲ್ಲರನ್ನೂ ಸ್ವಾಗತಿಸಿ ಫಲಪುಷ್ಪ ತಾಂಬೂಲಾದಿಗಳಿಂದ ಉಪಚಾರ ಮಾಡಿದನು. ಎಲ್ಲರೂ ಸಂತುಷ್ಟರಾದರು.

ಲಗ್ನದ ಮುಹೂರ್ತ ಕಾಲದಲ್ಲಿ ಊರಿನ ಹಿರಿಯರೆಲ್ಲರೂ ಸಭೆಗೆ ಬಂದಿದ್ದರು. ಅಲ್ಲಿಗೆ ಶಂಕರಪ್ಪನು ತನ್ನ ಕಿರಿಮಗ ಶಿವನನ್ನು ಕರೆದುಕೊಂಡು ಬಂದು ಕುಳಿತಿದ್ದನು. ಶಿವನಿಗೆ ಹೆಣ್ಣೂಗಂಡೂ ಹಸೆಜಗುಲಿ ಮೇಲೆ ಕಂಕಣ ಧರಿಸಿ ಕೈ ಹಿಡಿದು ನಿಂತಿದ್ದುದು ಅರ್ಥವಾಗಲಿಲ್ಲ. 'ಅಪ್ಪ, ಅಪ್ಪ ಅವರೇಕೆ ಹಾಗೆ ನಿಂತಿದ್ದಾರೆ? ಅವರ ತಲೆ ಮೇಲೆ ಏನಿದೆ? ಅವರು ಯಾರು' ಎಂದು ಅವನು ತಂದೆಯನ್ನು ಕೇಳಿದನು. 'ಈಗ ಮಾತು ಆಡಬಾರದು. ನೀನು ಜಾಣ. ಸುಮ್ಮನಿರು' ಎಂದು ಶಂಕರಪ್ಪನು ಮಗನಿಗೆ ಬುದ್ಧಿ ಹೇಳಿದನು.

ಸಂಜೆ ಉರಟಣೆ ಕಾಲ. ಬಂದಿದ್ದವರೆಲ್ಲರೂ ಮದುವೆ ಚಪ್ಪರದಲ್ಲಿ ನೆರೆದರು. ವಧೂವರರನ್ನು ಹಸೆಮಣೆಯ ಮೇಲೆ ಕೂರಿಸಿದುದೂ ಆಯಿತು. ಆಮೇಲೆ ಹೆಂಗಸರ ಹಾಡು. ಪದ್ಧತಿ ಪ್ರಕಾರ ಒಬ್ಬಳು ಮತ್ತೊಬ್ಬಳನ್ನು ಒತ್ತಾಯಪಡಿಸಿ ಹೆಂಗಸರು ಹಾಡು ಹೇಳಿ ಹೇಳಿಸಿದರು. ಚೆನ್ನಮ್ಮನ ಸರದಿ ಬಂದಿತು. ಅರೆನಾಚುತ್ತ ಅವಳು 'ದಯಮಾಡಿಸೈ ದಾನವಾಂತಕಾ' ಎಂದು ಹಾಡು ಹೇಳಲು ಮೊದಲು ಮಾಡಿದಳು. ಅದನ್ನು ಕೇಳುತ್ತಲೇ ಹೆಗ್ಗಡೆಯ ಕಿವಿ ನೆಟ್ಟಗಾಯಿತು. ಅವನಿಗೆ ಆ ಹಾಡು ಕೇಳಲು ಬಲು ಇಷ್ಟ. ಸಂಗೀತ ಜ್ಞಾನವಿಲ್ಲದಿದ್ದರೂ ಹಿಂದೆ ಕೇಳಿದ್ದ ಹಾಡುಗಳನ್ನು ಪುನಃ ಕೇಳಿದರೆ ಅವನಿಗೆ ಹೊಸ ಸಂತೋಷ. ಆಮೇಲೆ ಅವನು 'ಇದು ಹೇಳಮ್ಮ, ಅದು ಹೇಳಮ್ಮ ನಾಚಿಕೆ ಬೇಡ. ಎಲ್ಲರೂ ಸಂತೋಷಪಡಲಿ' ಎಂದು ಕೇಳಿಕೇಳಿ ತನಗೆ ಬೇಕಾದ ನಾಲ್ಕಾರು ಹಾಡುಗಳನ್ನು ಚೆನ್ನಮ್ಮನ ಬಾಯಿಂದ ಹೇಳಿಸಿ ಸಂತೋಷಪಟ್ಟನು. ಚೆನ್ನಮ್ಮನ ತಾಯಿ ಹೆಗ್ಗಡೆಯ ದೂರದ ಬಂಧು. ಆ ಕಾರಣದಿಂದಲೂ ಹೆಗ್ಗಡೆಗೆ ಚೆನ್ನಮ್ಮನನ್ನು ಕಂಡರೆ ಹೆಚ್ಚು ಪ್ರೀತಿ. 'ಅವಳು ನನ್ನ ತಂಗಿ ಮಗಳು' ಎಂದು ಅವನು ತನ್ನ ಸಂಬಂಧ ಹೇಳಿ ಸ್ವಾಭಿಮಾನವನ್ನು ತೋರಿಸಿಕೊಳ್ಳುತ್ತಿದ್ದನು. ಮೇವಿಗಿಂತ ತಳಿಯೇ ಮುಖ್ಯ ಎಂದು ನಾಣ್ಣುಡಿಯುಂಟು. ಎಂದರೆ ಹಿಟ್ಟಿಗಿಂತ ಹುಟ್ಟೆ ಹೆಚ್ಚೆಂದರ್ಥ. ಇದಕ್ಕೆ ಉದಾಹರಣೆಯಾಗಿ ಆಗಾಗ ಹೆಗ್ಗಡೆ ಚೆನ್ನಮ್ಮನನ್ನು ತೋರಿಸುತ್ತಿದ್ದನು. ಇಂತಹವಳು ತನ್ನ ಸೊಸೆಯಾಗುವಳೆಂಬ ಸಂತೋಷದಿಂದ ಅವನ ಮೈ ಉಬ್ಬಿದ್ದಿತು. ಅಷ್ಟರಲ್ಲಿ ಜೋಯಿಸರು

'ಹೆಗ್ಗಡೆಯವರೇ, ಇದೇನು ಸೊಸೆ ಪರೀಕ್ಷೆಯೋ ? ಹೇಗೂ ಒಪ್ಪಿಗೆಯಾಗಿದೆ. ಮದುವೆ ಯಾವಾಗ ? ಮುಂದಿನ ಲಗ್ನ ಬಹಳ ಪ್ರಶಸ್ತವಾಗಿದೆ. ನೆಂಟರೆಲ್ಲರೂ ಸೇರಿದ್ದಾರೆ. ಶುಭಸ್ಯ ಶೀಘ್ರಂ' ಎಂದು ಹೇಳಿದರು. ಮಾತಿನ ಮಲ್ಲಪ್ಪ ಬೆರಳು ತಿರುಗಿಸುತ್ತ 'ನಿಜನಿಜ. ಜೋಯಿಸರ ಮಾತು ಸರಿ. ಯಾವಾಗ ಮದುವೆ ? ಈಗಲೇ ಹೇಳಿ' ಎಂದನು. ಉಳಿದ ಹಿರಿಯರೂ 'ಹೆಗ್ಗಡೆ ಒಪ್ಪಬೇಕು ಜೋಯಿಸರ ಮಾತಿಗೆ' ಎಂದು ಅಭಿಪ್ರಾಯಪಟ್ಟರು. 'ಆಗಬಹುದು ಮುಂದೆ ಗೊತ್ತು ಮಾಡೋಣ ಈಗಿನ ಕೆಲಸ ನಡೆಯಲಿ' ಎಂದು ಉತ್ತರವಿತ್ತನು ಹೆಗ್ಗಡೆ.

ಈ ಮಧ್ಯೆ ಮೇಳದವರ ಮೇಲಾಟ ಆರಂಭವಾಯಿತು. ಅವರಿಗೂ ಗೊತ್ತು ಹೆಗ್ಗಡೆಯ ಇಷ್ಟಾನಿಷ್ಟಗಳು. ಓಲಗದವರ ಕೌಶಲ್ಯ ಮುಗಿದ ಮೇಲೆ ಮದ್ದಲೆಯವನದು. ಮದ್ದಲನೆಯವನದು ಮುಗಿದ ಮೇಲೆ ಓಲಗದವರದು. ಹೆಗ್ಗಡೆ ತಲೆ ತೂಗಿದರಂತೂ ಅದರ ಸ್ಪರ್ಧೆ ಅಷ್ಟಿಷ್ಟಲ್ಲ. 'ಬೇಷ್ ಬೇಷ್!' ಎಂದು ಮೆಚ್ಚಿ ಜೋಯಿಸರೋ ತಾಳ ಹಾಕಿದರು. ಅಲ್ಲಿದ್ದವರಿಗೆ ಇದನ್ನು ನೋಡಿ ಆಶ್ಚರ್ಯವಾಯಿತು. ಜೋಯಿಸರೂ ಮನುಷ್ಯರಲ್ಲವೆ ? ಅವರಿಗೆ ಸಂಗೀತ ಜ್ಞಾನವಿರಬಾರದೆ ? ಅದಿಲ್ಲದಿದ್ದರೂ ಸಂಗೀತ ಸುಖಾನುಭವವಾದರೂ ಇರಬಹುದಲ್ಲ ? ಅಂತೂ ಇಂತೂ ಈ ಮೇಲಾಟದಿಂದ ಬಹಳ ಹೊತ್ತು ಕಳೆದು ಹೋಯಿತು 'ಹೊತ್ತಾಯಿತು. ಮುಂದಿನ ಕೆಲಸಕ್ಕೆ ಅಡ್ಡಿ' ಎಂದು ಹೆಂಗಸರು ಗೊಣಗುಟ್ಟಲು ಉಪಕ್ರಮಿಸಿದರು. ಅಷ್ಟಕ್ಕೆ ಅದು ನಿಂತಿತು.

ಆ ಬಳಿಕ ಆಗ ಅಲ್ಲಿ ನೆರೆದಿದ್ದ ವೃದ್ಧ ತರುಣ ದಂಪತಿಗಳನ್ನು ಹಸೆಗೆ ಕರೆಯಿಸಿ ಗಂಡ ಹೆಂಡಿರ ಹೆಸರುಗಳನ್ನು ಹೇಳಿಸುವ ಕಾರ್ಯಕ್ರಮವು ಮೊದಲಾಯಿತು. ಮೊದಲು ವೃದ್ಧ ದಂಪತಿಗಳು ಒಬ್ಬೊಬ್ಬರಾಗಿ ಬಂದರು. ಕೆಲವರು ಹಸೆಮಣೆಗೆ ಬರಲು ಇಷ್ಟ ಪಡಲಿಲ್ಲ. ಬಲವಂತದಿಂದ, ಬೇಡಿಕೆಯಿಂದ, ಬೇಸರದಿಂದ ಅವರನ್ನು ಬರಮಾಡಬೇಕಾಗಿ ಬಂದಿತು. ಹೆಗ್ಗಡೆ ಮೈದುನನ ಹೆಸರು ರುದ್ರಯ್ಯ. ಅವನಿಗೆ ಪಂಡಿತನೆಂಬ ಬಿರುದೂ ಇದ್ದಿತು. ಅವನಿಗೂ ಸುಮಾರು ಐವತ್ತೈದು ವರ್ಷ ವಯಸ್ಸು. ಅವನು ತೆಳ್ಳಗೆ ಉದ್ದವಾಗಿದ್ದನು. ಅವನಿಗೆ ಹಾಸ್ಯವೆಂದರೆ ಇಷ್ಟ. ಆಗಾಗ ಅವನು ವೈದ್ಯ

ಮಾಡುವುದೂ ಉಂಟು. ಅವನು ಊರಿಗೇ ಚಿರಪರಿಚಿತನು. ಬಾಯಿ ಬಿಟ್ಟರೆ ಅವನು ಎಲ್ಲರಿಗೂ ನಗು. ಅವನಷ್ಟು ಹಾಸ್ಯಪ್ರಿಯ. ಅವನ ಸರದಿ ಬಂದಿತು. ತನ್ನ ಸರದಿ ಬಂದಾಗ ಅವನು ಹೆಂಡತಿಯ ಹೆಸರು ಹಿಡಿದು ಕೂಗಿ, ಅವಳು ಬರದಿರಲು, ತಾನೇ ಎದ್ದು ಹೋಗಿ ಮೂಲೆಯಲ್ಲಿ ಕುಳಿತಿದ್ದ ಅವಳನ್ನು ಕೈ ಹಿಡಿದು ಹಸೆಗೆ ಎಳೆದುಕೊಂಡು ಬಂದನು. ಹೆಂಗಸರು ನಾಚಿಕೆ ತೋರಿ ನಲಿದರು. ಹುಡುಗರೂ ಹುಡುಗಿಯರೂ ಚಪ್ಪಾಳೆ ತಟ್ಟಿ ಕೇಕೆ ಹಾಕಿದರು. ಒಟ್ಟಿನಲ್ಲಿ ಎಲ್ಲರೂ ಹರುಷ ಪಟ್ಟರು. ಆಕೆಯದು ಸ್ವಲ್ಪ ಸ್ಥೂಲಕಾಯ, ಸಂಕೋಚಪ್ರಕೃತಿ. ಬೆವರುತ್ತ, ಸೆರಗು ಸರಿಮಾಡಿಕೊಳ್ಳುತ್ತ, ಹೊರಲಾರದ ಮೈ ಹೊತ್ತು ನಡೆಯುತ್ತ ಅವಳು ನಾಚಿಕೆಯಿಂದ ಹಸೆಗೆ ಬಂದಳು ಆಗ ರುದ್ರಯ್ಯನೇ 'ಕೂತುಕೊ. ಈ ಸಮಯ ಪುನಃ ಎಲ್ಲಿ ಸಿಗುತ್ತೆ? ನಾಚಿಕೆ ಪಡಬೇಡ' ಎನ್ನುತ್ತ ಜೋಯಿಸರ ಕಡೆಗೆ ತಿರುಗಿ 'ಸ್ವಾಮಿ ಉಡುಗೆರೆ ಓದಿಸುವವರೆಲ್ಲ ಓದಿಸಲಿ ತಡಬೇಡ. ಬರ ಹೇಳಿ' ಎಂದು ಹಾಸ್ಯ ಮಾಡಿದನು. ಆಕೆಗೆ ನಾಚಿಕೆ. ಹೊರಟು ಹೋಗಲು ಪ್ರಯತ್ನಪಟ್ಟಳು. 'ಹಾಡು ಹೇಳಲಿಲ್ಲವೆಂದು ಕೋಪವೋ?' ಎಂದು ಹೆಂಡತಿಯನ್ನು ಕೂರಿಸಿಕೊಂಡು, ಅಲ್ಲಿದ್ದ ಹುಡುಗಿಯರ ಕಡೆ ನೋಡಿ 'ನಿಮ್ಮಲ್ಲಿ ಈಗ ಯಾರು ಹಾಡು ಹೇಳುವವರು? ಹೇಳಿ ನೋಡೋಣ' ಎಂದು ಕೇಳಿದನು. ಅದಕ್ಕೆ ತಕ್ಕಹಾಗೆ ಒಬ್ಬ ತುಂಟ ಪುಟ್ಟ ಹುಡುಗಿ ಕಲಿತಿದ್ದ ಒಂದು ಚಿಕ್ಕ ಹಾಡನ್ನು ಹೇಳಿಯೇ ಬಿಟ್ಟಳು. ಎಲ್ಲರೂ ಗೊಳ್ಳೆಂದು ನಕ್ಕರು ಇದೆಲ್ಲ ಆದಮೇಲೆ ಅವನಿಗೂ ಅವನ ಹೆಂಡತಿಗೂ 'ಉಡುಗೆರೆ' ಸಿಕ್ಕಿತು. ಏನು ಅದು? ವೀಳ್ಯದೆಲೆ. ಜೋಯಿಸರು ನಗುತ್ತ ಇದೇ ಉಡುಗೆರೆ ಎಂದು ಕೈಗೆ ವೀಳ್ಯದೆಲೆ ಕೊಟ್ಟರು.

ಅಷ್ಟರಲ್ಲಿ ಹೆಗ್ಗಡೆ 'ಹುಡುಗರಿಗೆ ಅವಕಾಶ ಕೊಡಿ. ದೊಡ್ಡವರದು ಮುಗಿಯಿತಲ್ಲ. ಅವರಿಗೆ ಇನ್ನೂ ಆಸೆ' ಎಂದನು. ಆಮೇಲೆ ತರುಣ ದಂಪತಿಗಳ ಸರದಿ ಬಂದಿತು. ಕಡೆಗೆ ಬಹುವೃದಳಾದ ಸ್ತ್ರೀಯೊಬ್ಬಳು ತಲೆ ನಡುಗಿಸಿಕೊಂಡು 'ಬಸಪ್ಪ ಚೆನ್ನಮ್ಮನನ್ನು ಕೂರಿಸಿ. ಹೇಗೆ ಒಪ್ಪುತ್ತೋ ನೋಡೋಣ. ಈಗಲೇ ಶಾಸ್ತ್ರ ಆಗಲಿ. ನಾನು ವಯಸ್ಸಾದ ಮುದುಕಿ' ಎಂದಳು. ಅವಳು ಹೇಳಿದುದೇ ತಡ. ಆಗಬಹುದೆಂದು

ಎಲ್ಲರೂ ಏಕಕಂಠದಿಂದ ಒತ್ತಾಯ ಪಡಿಸಿದರು. ಎಲ್ಲರ ಇಷ್ಟ ಪ್ರಕಾರ ಹೆಗ್ಗಡೆಯೇ ಮಗನನ್ನು ಹಸೆಮಣೆ ಮೇಲೆ ಕೂರಿಸಿದನು. ಬಸಪ್ಪನಿಗೂ ಆ ಸುಸಮಯವೇ ಬೇಕಾಗಿದ್ದುದು. ಚೆನ್ನಮ್ಮ ಬಹಳ ಹೊತ್ತಾದರೂ ಬರಲಿಲ್ಲ ಕಾರಣವೇನು? ಸ್ವಭಾವಜನ್ಯವಾದ ಸ್ತ್ರೀ ಲಜ್ಜೆ. ಅಷ್ಟೇ ಅಲ್ಲ. ಇನ್ನೊಂದು ಕಾರಣವೂ ಇದ್ದಿತು. ಏನಿರಬಹುದು? ಔದಾಸೀನ್ಯ. ಬಸಪ್ಪನ ವಿಷಯದಲ್ಲಿ ಅವಳಿಗೆ ಒಂದು ವಿಧವಾದ ಔದಾಸೀನ್ಯ ಅಂಕುರಿತವಾಗುತ್ತಿದ್ದಿತು. ಮೊದಲು ಮೊದಲು ಅವಳು ಅವನ ವಿಷಯದಲ್ಲಿ ಅಖಂಡವಾದ ಪ್ರೀತಿಗೌರವಗಳನ್ನಿಟ್ಟು ಅವನಲ್ಲದೆ ಮತ್ತಾರನ್ನೂ ವರಿಸಿ ಮದುವೆಯಾಗೆನೆಂದು ಮನಸ್ಸಿನಲ್ಲಿಯೇ ಬಗೆಯುತ್ತಿದ್ದಳು. ಈಚೆಗೆ ಹೇಗೋ ಅವರಿವರು ಪಿಸುಗುಟ್ಟುವುದನ್ನು ಕೇಳಿ ಅವಳ ಮನಸ್ಸಿನಲ್ಲಿಯೂ ಅವನ ನಡತೆ ವಿಷಯವಾಗಿ ಅಲ್ಪಸ್ವಲ್ಪ ಅವಿಶ್ವಾಸ, ಅಸಮಾಧಾನ ಉಂಟಾಗಿದ್ದಿತು. ಅವನು ಮದುವೆಯಾಗಲು ಒಪ್ಪಿದ ಮಾತ್ರಕ್ಕೇ ಅಯೋಗ್ಯನಾದವನನ್ನು ತಾನು ಮದುವೆಯಾಗಲು ಹೇಗೆ ಒಪ್ಪುವುದು ಎಂದು ಅವಳು ಯೋಚಿಸುತ್ತಿದ್ದಳು. ಇದನ್ನು ಸೂಚಿಸುವುದು ಹೇಗೆ, ಯಾವಾಗ, ಎಲ್ಲಿ? ಹೊತ್ತು ಕಳೆಯುತ್ತ ಹೋಯಿತು. ಚೆನ್ನಮ್ಮ ಬರಲಿಲ್ಲ. ಏನು ಮಾಡಬೇಕೆಂದು ತಿಳಿಯದೆ ಎಲ್ಲರೂ ಸುಮ್ಮನಿದ್ದರು. ಆಗ ಹೆಗ್ಗಡೆಯ ಮೈದುನನೇ ಅವಳನ್ನು ಹೆಚ್ಚು ಕಡಮೆ ಎತ್ತಿ ತಂದು ಹಸೆಮಣೆಯ ಮೇಲೆ ಬಸಪ್ಪನ ಮಗ್ಗುಲಲ್ಲಿ ಕೂರಿಸಿದನು. ಆಗ ಬಸಪ್ಪನಿಗೆ ಎಂದೂ ಇಲ್ಲದ ಸಂತೋಷ. ಚೆನ್ನಮ್ಮ ತನ್ನ ಪಕ್ಕದಲ್ಲಿಯೇ ಎಲ್ಲರ ಮುಂದೂ ಕುಳಿತಿದ್ದಳು. ಪಾಣಿಗ್ರಹಣವು ಶಾಸ್ತ್ರೋಕ್ತವಾಗಿ ನಡೆದಿರಲಿಲ್ಲ. ಕನಸು ದಿಟವಾಯಿತು. ಓರೆಗಣ್ಣಲ್ಲಿ ಅವಳ ಕಡೆ ನೋಡಿದನು. ಅವಳು ಬರುವುದು ತಡವಾದಾಗಲೇ ಅವನ ಮನಸ್ಸಿನಲ್ಲಿ ಕಳವಳ, ಕಾರಣದ ಊಹೆ, ಪಶ್ಚಾತ್ತಾಪ. ಅವಳ ಮುಖದಲ್ಲಿ ಈಗ ಪ್ರಸನ್ನತೆ ಕಂಡುಬರಲಿಲ್ಲ. ತನ್ನ ಅವಿವೇಕವೇ ಕಾರಣವೆಂದು ಅವನಿಗೂ ಆಗ ಸ್ಪಷ್ಟವಾಯಿತು. ಕೊನೆಗೂ ಅವಳೇ ಕಠಿಣಸ್ವಭಾವದವಳೆಂದು ಅವನು ತನ್ನ ಮನದಲ್ಲಿ ಹೇಳಿಕೊಂಡನು.

'ಕಲಾವಿಹೀನಃ ಪಶುಭಿಃ ಸಮಾನಃ' ಎಂದು ಹೇಳುತ್ತಾರೆ ಅದರಂತೆಯೇ 'ಚಾರಿತ್ರಹೀನಃ ಪಶುಭಿಃ ಸಮಾನಃ' ಎಂದು ಹೇಳಬಹುದು.

ವಿಚಾರಮಾಡಿ ನೋಡಿದರೆ ಚಾರಿತ್ರಹೀನನು ಕಲಾವಿಹೀನನಿಗಿಂತಲೂ ಬಹಳ ಕೀಳು. 'ಒಂದು ಗಂಡು, ಒಂದು ಹೆಣ್ಣು' ಇದು ದಾಂಪತ್ಯ ಧರ್ಮ. ಚೆನ್ನಮ್ಮನು ಚಿಕ್ಕವಯಸ್ಸಿನವಳಾದರೂ ಈ ನೀತಿಯನ್ನು ಸ್ವಭಾವತಃ ಅರಿತು ಅದರಂತೆ ನಡೆಯಬಲ್ಲ ಕುಲೀನ ತರುಣಿ. ಅವಳಿಗೆ ಯಾರಲ್ಲಿಯೂ ಯಾವ ವಿಧವಾದ ದೋಷವೂ ಸರಿಬೀಳದು. ಆತ್ಮ ನಿಂದೆಯಿಂದ ಪರಿತಪ್ತ ನಾಗುತ್ತಿದ್ದಾಗ ಅವಳು ಅವನ ಗುಣದೋಷಗಳ ವಿಮರ್ಶೆಯನ್ನು ಮಾಡು ತ್ತಿದ್ದಳು. ಆದರೆ ಆಗ ಅವರ ಮನಸ್ಸನ್ನು ಒಳ ಹೊಕ್ಕು ಅದರ ಸ್ಥಿತಿಯನ್ನು ಅರಿತವರಾರು? ಗಂಡಿಗೆ ತಕ್ಕ ಹೆಣ್ಣು, ಹೆಣ್ಣಿಗೆ ತಕ್ಕ ಗಂಡು. ನೋಡಿದವ ರೆಲ್ಲರಿಗೂ ವಧೂವರ ಸಾಮ್ಯ ಅತ್ಯುತ್ತಮವಾಗಿದೆಯೆನ್ನಿಸಿತು 'ಹೆಗ್ಗಡೆ ಮನೆಗೆ ಚೆನ್ನಮ್ಮನೇ ಸರಿ ಮುಂದಿನ ಯಜಮಾನಿ ಅವಳೇ ಇದು ದಿಟ' ಎಂದು ದೊಡ್ಡವರು ಚಿಕ್ಕವರು ಎಲ್ಲರೂ ಒಂದೇ ಸಮ ಅಭಿಪ್ರಾಯಪಟ್ಟರು. 'ಹೆಗ್ಗಡೆಯವರೇ, ತಡಮಾಡಬೇಡಿ. ಮನೆಗೆ ಸೊಸೆ ಬರಲಿ ಬೇಗ. ನಿಮ್ಮ ಮನೆಯಲ್ಲೂ ಹೆಂಗಸರಿಲ್ಲ. ಚೆನ್ನಮ್ಮ ಜಾಣೆ. ಅವಳು ಬಂದರೆ ನಿಮ್ಮ ಸಂಸಾರ ಇನ್ನೂ ಚೆನ್ನಾಗುತ್ತೆ' ಎಂದು ಜೋಯಿಸರು ಮತ್ತೆ ಹೇಳಿ ದರು. ಮೈದುನ ರುದ್ರಪ್ಪನು 'ಜೋಯಿಸರು ಹೇಳಿದ್ದು ಸರಿ ಈ ಮದುವೆ ಜಾಗ್ರತೆ ಆಗಬೇಕು. ನಾವೆಲ್ಲ ಹೋಳಿಗೆಗೆ ಕಾದಿದ್ದೇವೆ' ಎಂದು ಜೋಯಿ ಸರ ಅಭಿಪ್ರಾಯವನ್ನು ಪುಷ್ಟೀಕರಿಸಿದನು

ಈ ಮಾತು ಬಂದಿದ್ದಾಗ ದೂರದಿಂದ ಬಂದಿದ್ದ ನೆಂಟನೊಬ್ಬನು 'ನಾಗಣ್ಣನ ಸಮಾಚಾರ ಏನು? ಹೊಸದಾಗಿ ತಿಳಿಯಿತೆ? ಎಲ್ಲಿದ್ದಾನೆ?' ಎಂದು ಕೇಳಿದನು. ಯಾರು ಏನು ಕೇಳಿದರೂ 'ಹಸು ಹೊಡೆದುಕೊಂಡು ಸಂತೆಗೆ ಹೋದವನು ಬರಲೇ ಇಲ್ಲ. ಆಮೇಲೆ ಹಸು ಸತ್ತುಹೋಯಿತೆಂದು ವರ್ತಮಾನ ಬಂತು. ನಾಗನ ಸುದ್ದಿಯೇ ಇಲ್ಲ' ಎಂದು ಹೆಗ್ಗಡೆಯ ಮನೆ ಯವರು ಉತ್ತರ ಹೇಳುತ್ತಿದ್ದರು. ಆದರೆ ಯಾರೂ ನಾಗಣ್ಣನ ವಿಷಯದಲ್ಲಿ ಉತ್ಸಾಹಚಿಂತೆಗಳನ್ನು ಹೆಚ್ಚಾಗಿ ತೋರಲಿಲ್ಲ.

ವೈಭವದಿಂದ ಮದುವೆ ಮುಗಿಯಿತು. ಆಗಿನ ಹಾಸ್ಯವಿನೋದಗಳಿಗೆ ಕೊರತೆಯೇ ಇರಲಿಲ್ಲ. ಯಾರಿಗೂ ಬೇನೆ ಇಲ್ಲದೆ, ಬೀಗರು ಮುನಿಸಿ ಕೊಳ್ಳದೆ, ಬಂದಿದ್ದವರು ಮನಸ್ತಾಪ ಪಡದೆ, ಯಾರ ಒಡವೆ ವಸ್ತುಗಳೂ

ಕಳವಾಗವೆ, ಶಾಸ್ತ್ರಗಳೆಲ್ಲವೂ ಸಾಂಗವಾಗಿ ನೆರವೇರಿ, ಸರಿಯಾದ ಹೊತ್ತಿಗೆ ಊಟ ಉಪಚಾರಗಳು ಆಗಿ, ನಿತ್ಯವೂ ಅಡುಗೆಗಳು ರುಚಿಯಾಗಿ, ಎಲ್ಲ ಕಾರ್ಯಕಲಾಪಗಳೂ ನಡೆದುಹೋದುವು. ಬಂದಿದ್ದವರೆಲ್ಲರೂ ತಿಂದು ತೇಗಿ ತೃಪ್ತಿಯಿಂದ ಒಬ್ಬೊಬ್ಬರಾಗಿ ಹಿಂದಿರುಗಿದರು.

ಬಸಪ್ಪನು ಆ ಕಾಲದಲ್ಲಿ ಚೆನ್ನಮ್ಮನನ್ನು ನೋಡಿ ನೋಡಿ ನಲಿದನು. ಆದರೂ ಅವಳ ಮುಖಮುದ್ರೆಯನ್ನು ಕಂಡಾಗಲೆಲ್ಲ ಅವನಿಗೆ ಕೊಂಚ ಕಳವಳವೇ ಆಗುತ್ತಿದ್ದಿತು. ಚೆನ್ನಮ್ಮನಾದರೋ ಅವನ ಮನೋಭಾವವನ್ನು ಊಹಿಸಿ, ಮುಖದಲ್ಲಿನ ಪಶ್ಚಾತ್ತಾಪವನ್ನು ಕಂಡು ತನ್ನ ಮನೋಧರ್ಮವನ್ನೂ ಸ್ವಲ್ಪ ಮಟ್ಟಿಗೆ ಬದಲಾಯಿಸಿಕೊಂಡಳು. ತಿದ್ದಿಕೊಂಡು ಸಜ್ಜನನಾಗಿರಬೇಕೆಂದು ಬಸಪ್ಪನೂ ತನಗೆ ತಾನೇ ಬಹಳವಾಗಿ ಹೇಳಿಕೊಂಡನು. ಆದರೆ ಹೊರಗೆ ನೋಡಿದವರಿಗೆ ಇದೊಂದೂ ತಿಳಿಯುವಂತಿರಲಿಲ್ಲ.

೧೩

## ದಾಸನಿಗೆ ಮಗು ಸಿಕ್ಕಿದುದು

ಇತ್ತ ಹೆಗ್ಗಡೆ ಮನೆಯಲ್ಲಿ ಮದುವೆಯ ಕೊನೆದಿನ ಸಂಜೆ ಮೆರವಣಿಗೆ ನಡೆಯುತ್ತಿದ್ದಾಗ ಅತ್ತ ದಾಸನ ಮಂಟಪದಲ್ಲಿ ವಿಚಿತ್ರ ಘಟನೆಯೊಂದು ಆಯಿತು.

ಬಸಪ್ಪನು ಚೆನ್ನಮ್ಮನ ಸಾಮೀಪ್ಯಸಾನಿಧ್ಯದಿಂದ ಸ್ವರ್ಗಸುಖವನ್ನು ಅನುಭವಿಸುತ್ತಿದ್ದನು. ಈಚೆಗೆ ಅವನು ಮಾಯಿಯ ವಿಷಯದಲ್ಲಿ ಕೇವಲ ಔದಾಸೀನ್ಯವನ್ನು ತೋರಿ, ತನ್ನ ಕರ್ತವ್ಯವನ್ನು ಮಾಡದೆ, ಆ ಸಂಬಂಧವನ್ನು ಕಟ್ಟಿಕೊಳ್ಳುವುದಕ್ಕಿಂತ ಪ್ರಾಣ ಬಿಡುವುದೇ ಲೇಸೆಂದು ಯೋಚಿಸಿ, ಅವಳ ಊರಿನಕಡೆಗೆ ಹೋಗುತ್ತಿರಲಿಲ್ಲ. ಇದರಿಂದ ಮಾಯಿಯ ಕಷ್ಟವು ಹೆಚ್ಚಿ ಅವಳ ದುಃಖವು ದುಸ್ಸಹವಾಯಿತು.

ಮಾಯಿಯು ಅನಾಥಳು. ಕೇವಲ ನಿರ್ಗತಿಕಳು. ಸುಮಾರು ಹದಿನೈದು ವರ್ಷಗಳಾಗುವವರಗೂ ಅವಳು ದೂರದ ಬಂಧುವಾದ, ರೋಗದಿಂದ ನರಳುತ್ತಿದ್ದ ಮುದಿ ಅಜ್ಜಿಯೊಬ್ಬಳ ರಕ್ಷಣೆಯಲ್ಲಿದ್ದಳು. ವಿಧಿವಶಾತ್ ಆ ಅಜ್ಜಿಯೂ ಕಾಲವಾದಳು. ಪಾಪ ಅನಾಥೆಯಾದ ಮಾಯಿಗೆ ರಕ್ಷಕರೇ ಇಲ್ಲವಾಯಿತು. ಮದುವೆಯ ವಯಸ್ಸು. ಪ್ರೇಮದಿಂದ ಸಲಹಿ ಮದುವೆ ಮಾಡುವ ಪೋಷಕರೇ ಇಲ್ಲ. ಮದುವೆ ಹಾಗಿರಲಿ. ಅನ್ನ ಬಟ್ಟೆಗೇ ಕಷ್ಟ. ಅವಳು ಒಬ್ಬಳೇ ಅವರಿವರ ಮನೆಯಲ್ಲಿ ಕೂಲಿಗೆ ಕೆಲಸಮಾಡಿ ಹೊಟ್ಟೆ ಹೊರೆದುಕೊಂಡಿರಬೇಕಾದ ಸ್ಥಿತಿ ಬಂದಿತು. ಆಗ ಇವಳು ಬಸಪ್ಪನ ಕಣ್ಣಿಗೆ ಬಿದ್ದಳು. ಬಸಪ್ಪನಾದರೂ ಸ್ವಭಾವತಃ ದುಷ್ಟನಲ್ಲ. ವಯೋಧರ್ಮದಿಂದ, ಸಂಗದೋಷದಿಂದ, ದೂರಾಲೋಚನೆ ಸಾಲದಿದ್ದುದರಿಂದ ಮಾಯಿ ಇದ್ದ ಮನೆಗೆ ಹೋಗಲು ಮೊದಲು ಮಾಡಿದನು. ಅವಿವೇಕದ ಪರಿಣಾಮವಾಗಿ ಸಂಬಂಧ ಬೆಳೆಯಿತು. ಆಗ ಬಸಪ್ಪನು ತಾನೇ ಮುಂದೆ ಬಹಿರಂಗವಾಗಿ ಇವಳನ್ನು ಮದುವೆಯಾಗುವೆನೆಂದು ಮಾತುಕೊಟ್ಟು, ಮಾಂಗಲ್ಯ ಕಟ್ಟಿ,

ಅವಳ ಪೋಷಣೆಗೂ ಹೊಣೆಯಾದನು. ದಿನ ಕಳೆಯಿತು. ಸಂಬಂಧ ತಪ್ಪಲೂ ಇಲ್ಲ ಸಕಾಲದಲ್ಲಿ ಬಹಿರಂಗವಾಗಿ ಮದುವೆ ನಡೆಯಲೂ ಇಲ್ಲ. ಬೇಗ ಔದಾಸೀನ್ಯ ಅನಾದರಣೆ ಹೆಚ್ಚಿದುವು. ಪೋಷಣೆಯೂ ತಪ್ಪಿತು. ಮಾಯಿಯು ಒಂದು ಹೆಣ್ಣು ಕೂಸಿನ ತಾಯಿಯಾಗಿ ಪಡಬಾರದ ಕಷ್ಟವನ್ನು ಅನುಭವಿಸತೊಡಗಿದಳು. ಬಸಪ್ಪನು ತನ್ನನ್ನು ಬಿಟ್ಟು ಚೆನ್ನಮ್ಮನನ್ನು ಮದುವೆಯಾಗಲಿರುವನೆಂಬ ಸುದ್ದಿಯು ಅವಳ ಕಿವಿಗೂ ಬಿದ್ದಿತು. ತನ್ನ ಕಷ್ಟಸುಖಗಳನ್ನು ಲೇಶವೂ ಗಣಿಸದೆ, ಆಪತ್ತಿಗೆ ಗುರಿಮಾಡಿ, ತಾಳಲಾರದ ಲಜ್ಜೆಗೆ ತನ್ನನ್ನು ಸಿಕ್ಕಿಸಿದ ಬಸಪ್ಪನು ಅವಳ ದೃಷ್ಟಿಯಲ್ಲಿ ಅಕ್ಷಮ್ಯ ದ್ರೋಹಿಯಾಗಿ ತೋರಿದನು ಈಗ ಸ್ವಾರ್ಥಪರತೆಯಿಂದ ಬೇರೆ ಮದುವೆ ಯಾಗಲೆಣಿಸಿ, ತನ್ನ ಅಪರಾಧ ಪ್ರಕಟನೆಗೆ ಅವಕಾಶ ಕೊಡದೆ ಅವನು ಸಭ್ಯನಾಗಿ ನಟಿಸುತ್ತಿದ್ದುದನ್ನು ಮಾಯಿಯು ಸಹಿಸಲಾಗಲಿಲ್ಲ. ಭವಿಷ್ಯವನ್ನು ಯೋಚಿಸಿದಷ್ಟೂ ಅವಳ ದುಃಖವು ಹೆಚ್ಚುತ್ತಿದ್ದಿತು. ನಿಜಸ್ಥಿತಿಯನ್ನು ಪ್ರಕಟ ಮಾಡಿ, ಮಗುವನ್ನು ಒಪ್ಪಿಸಿ ಬಿಟ್ಟು, ವಿಷಸೇವನೆಯಿಂದ ಪ್ರಾಣತ್ಯಾಗ ಮಾಡಬೇಕೆಂಬ ಭಯಂಕರ ಪ್ರತಿಜ್ಞೆಯಿಂದ ಮಗುವಿನೊಡನೆ ಹೊರಟಳು. ಈಚೀಚೆಗೆ ಅವಳ ಆರೋಗ್ಯವೂ ಬಹಳ ಕೆಟ್ಟಿದ್ದಿತು. ತನಗೂ ತನ್ನ ಕಂದನಿಗೂ ಹೊಟ್ಟೆಗಿಲ್ಲದೆ, ಔದಾಸೀನ್ಯದ ಪರಿಣಾಮದಿಂದ ಅಸಾಧಾರಣವಾದ ಕಷ್ಟ, ಚಿಂತೆಗಳಿಗೆ ಒಳಗಾಗಿ, ಕ್ಷಯರೋಗಪೀಡಿತಳಾಗಿ ಅತ್ಯಂತ ದುರ್ಬಲಳಾಗಿದ್ದಳು. ಮಗುವನ್ನು ಹೊರಲಾರದೆ, ಮೇಲುಸಿರು ಬಿಡುತ್ತ, ನಡೆಯಲು ಕೂಡ ಶಕ್ತಿಯಿಲ್ಲದೆ, ಹಜ್ಜೆಹಜ್ಜೆಗೂ ನಿಲ್ಲುತ್ತಿದ್ದ ಆ ಕೃಶ ದೇಹವು ನೋಟಕರ ಮನಸ್ಸನ್ನು ಕರಗಿಸುವಂತಿದ್ದಿತು. ಬಡವಾದ ಅವಳ ಮೈ ತುಂಬ ಬಟ್ಟೆಯೂ ಇರಲಿಲ್ಲ. ಮಗುವಿಗೂ ಸರಿಯಾದ ಬಟ್ಟೆಗೆ ಅಭಾವ. ಯಾರಿಗೂ ಕಾಣದಂತೆ, ಊರ ಹೊರಗಣ ಮನೆಯೊಂದರಿಂದ ಹೊರಬಿದ್ದು, ನಿರ್ಜನ ಮಾರ್ಗದಲ್ಲಿ ನಡೆಯುತ್ತ, ಬೊಮ್ಮನ ಹಳ್ಳಿಯ ಕಡೆಗೆ ಸಂಧ್ಯಾಕಾಲದಲ್ಲಿ ಮಗುವೆತ್ತಿಕೊಂಡು ನಡೆದಳು.

ಆದಿನ ಕೃಷ್ಣಪಕ್ಷದ ಚತುರ್ದಶಿ. ಕತ್ತಲು ಒತ್ತಾಗಿ ಕವಿಯಿತು. ಜಾಗ್ರತೆ ಊರು ಸೇರಲು ಸಾಧ್ಯವಾಗಲಿಲ್ಲ. ದಣಿವು ಹೆಚ್ಚುತ್ತ ಬರಲು, ಅಲ್ಲಲ್ಲಿ ಬಹಳ ಹೊತ್ತು ಕೂತು ದಾರಿ ಸವೆಸಲು ಪ್ರಯತ್ನಪಟ್ಟಳು. ಮಗುವು

ಹಸಿವು ನಿದ್ದೆಯಿಂದ ಅಳಲಿಕ್ಕೆ ಮೊದಲುಮಾಡಿತು. ಸಂತೈಸಲು ಸಾಧ್ಯವಾಗಲಿಲ್ಲ. ಸ್ವಲ್ಪ ಹೊತ್ತಿಗೆ ಊರಿನ ದೀಪಗಳು ದೂರದಲ್ಲಿ ಕಾಣಿಸಿದುವು. ನಿದ್ದೆಯಿಂದ ಭಾರವಾದ ಮಗುವನ್ನು ಹೊರಲಾರದೆ, ಕಾಣದ ದಾರಿಯಲ್ಲಿ ಸಹಾಯಕರಿಲ್ಲದೆ ಅಡಿಗಡಿಗೆ ಮುಗ್ಗರಿಸುತ್ತ ಆ ಅನಾಥ ತರುಣಿ ತತ್ತರಿಸ ತೊಡಗಿದಳು. ಬೊಮ್ಮನಹಳ್ಳಿ ಮುಂದಣ ಕುಳಿಯ ಹತ್ತಿರ ಬಂದಾಗ ದಾಸನ ಮಂಟಪದ ಬೆಳಕು ಕಣ್ಣಿಗೆ ಬಿದ್ದಿತು. ಮುಂದೆ ನಡೆದು ಊರು ಸೇರಲು ಕೇವಲ ಅಸಾಧ್ಯವೆನಿಸಲು, ದಾಸನ ಮಂಟಪದ ಹತ್ತಿರಕ್ಕೆ ತೆವಳಿಕೊಂಡು ಹೋಗಿ, ಮಗುವನ್ನು ನೆಲದ ಮೇಲೆ ಬಟ್ಟೆಹಾಕಿ ಮಲಗಿಸಿ, ಕೂಡುವುದಕ್ಕೂ ಶಕ್ತಿಯಿಲ್ಲದೆ, ದಾರಿಯ ಮಗ್ಗುಲಲ್ಲಿ ಉರುಳಿದಳು. ಸಂಕಟ ಹೆಚ್ಚಿತು. ಕೈ ಕಾಲುಗಳು ಅದುರತೊಡಗಿದುವು. ಮಗುವನ್ನು ನೋಡುತ್ತ ಬಿದ್ದಿದ್ದಾಗಲೇ ಜ್ಞಾನ ತಪ್ಪಿತು. ಪುನಃ ಎಚ್ಚರವಾಗಲಿಲ್ಲ ಸ್ವಲ್ಪ ಹೊತ್ತಿನೊಳಗೆ ತಾನಾಗಿ ಪ್ರಾಣವು ಹಾರಿಹೋಯಿತು ಆಹಾ, ತಾರುಣ್ಯದ ಅವಿವೇಕಕ್ಕೆ ಶಿಕ್ಷೆ ಇಂತಹ ಮರಣವೆ !

ಮಗುವು ನಿದ್ದೆಯಿಂದೆದ್ದು ಅಮ್ಮಾ ಎಂದಳುತ್ತ ತಾಯಿಯನ್ನು ಹುಡುಕಿಕೊಂಡು ಅಂಬೆಗಾಲಿಟ್ಟಿತು ಎಷ್ಟು ಹೊತ್ತು ತೊಳಲಿದರೂ ತಾಯಿ ಕಾಣಿಸಲಿಲ್ಲ. ಅಮ್ಮಾ ಅಮ್ಮಾ ಎಂದು ಅತ್ತು ಅತ್ತು ಸಾಕಾಗಿ ಹಸಿವಿನಿಂದ ಅಲ್ಲಿ ಇಲ್ಲಿ ನೋಡುತ್ತಿದ್ದಾಗ ಬೆಳಕೊಂದು ಹತ್ತಿರದಲ್ಲಿ ಅದರ ಕಣ್ಣಿಗೆ ಬೀಳಲು ಒಡನೆಯೇ ಅಳು ನಿಲ್ಲಿಸಿ ಬೆಳಕನ್ನು ನೋಡುತ್ತ ಕೈ ಚಾಚಿತು. ಬೆಳಕು ಕಾಣಿಸಿದರೂ ಕೈಗೆ ಸಿಗಲಿಲ್ಲ. ಬಳಿಕ ಅಂಬೆಗಾಲಿಡುತ್ತ ಕೈ ಚಾಚಿಕೊಂಡು ಆ ಮಗುವು ಬೆಳಕಿನ ಕಡೆಗೇ ಹೊರಟಿತು. ಕತ್ತಲೆ, ಚಳಿ, ಮೈ ತುಂಬ ಬಟ್ಟೆ ಇಲ್ಲ ತಲೆಗೊಂದು ಹರಕು ಕುಲಾವಿ, ಅರೆಮೈ ಮುಚ್ಚಿದ ಹರಕು ತೆಳು ವಂಗಿ. ಹರಿದಾಡಿ ಹರಿದಾಡಿ ಕೊನೆಗೆ ಮಗುವು ದಾಸನ ಮಂಟಪದ ಹೊಸಲಿನ ಬಳಿಗೆ ಬಂದಿತು.

ನಿಶ್ಶಬ್ದ. ತೆರದ ಬಾಗಿಲು. ಒಳಗೆ ಧಗಿಧಗಿಸುತ್ತಿದ್ದ ಅಗ್ಗಿಷ್ಟಿಕೆ. ಬಾಗಿಲನ್ನು ದಾಟಿ, ಮಗು ನೇರವಾಗಿ ಹೋಗಿ. ಅಗ್ಗಿಷ್ಟಿಕೆ ಹತ್ತಿರ ಹಾಸಿದ್ದ ಗೋಣಿಪಟ್ಟೆಯ ಮೇಲೆ ಕುಳಿತುಕೊಂಡಿತು. ಬಳಲಿಕೆ, ಹಸಿವು, ನಿದ್ದೆ. ಹೀಗೆ ಒಂದೇ ಇದ್ದು, ನರಳಿ ಹರಿದಾಡುವುದು ಆ ಮಗುವಿಗೆ ಆಗಲೇ

ಅಭ್ಯಾಸ. ಹೊರಗಣ ಚಳಿಯಿಂದ ಒಳಗೆ ಬಂದಿದ್ದ ಮಗುವಿಗೆ ಹಿತ ತೋರಿ ಹಾಗೆಯೇ ನಿದ್ದೆ ಹತ್ತಲು ಮಗು ಮಲಗಿತು. ಮಟ್ಟತಲೆ, ಮಿರಗುವ ಮೈ, ಹೊಂಬಣ್ಣದ ಗುಂಗುರು ಕೂದಲು. ತಟ್ಟನೆ ದೂರದಿಂದ ನೋಡಿದರೆ ಉರಿಯ ಬೆಳಕಿನಲ್ಲಿ ಬಂಗಾರದ ರಾಸಿ !

ಆಗ ದಾಸನು ಎಲ್ಲಿದ್ದ? ಚಿನ್ನವು ಕಳವಾದಾಗಿನಿಂದ ಅವನು ಮಂಟಪದ ಬಾಗಿಲನ್ನೇ ಸರಿಯಾಗಿ ಮುಚ್ಚುತ್ತಿರಲಿಲ್ಲ ಈಚೆಗೆ ಅವನು ಬಾಗಿಲನ್ನು ಅರೆ ತೆರೆದು, ಆಗಾಗ ಹೊರಗೆ ಇಣಿಕಿ ನೋಡುತ್ತ ಮಧ್ಯೆ ಮಧ್ಯೆ ತಲೆಮೇಲೆ ಕೈಯಿಟ್ಟು ಸುಮ್ಮನೆ ಕುಳಿತುಕೊಳ್ಳುವನು. ಒಳಗಿನಿಂದ ಹಣ ಹೇಗೆ ಮಾಯವಾಯಿತೋ ಹಾಗೆಯೇ ಹೊರಗಿನಿಂದ ತಾನಾಗಿ ಬಂದೀತೆಂದು ಅವನ ನಿರೀಕ್ಷಣೆ ಹೇಗೆ ಕೂತಿದ್ದು ಮನಸ್ಸು ಬಂದಾಗ ಯಾವಾಗಲೋ ನಡು ಇರುಳಲ್ಲಿ ಅವನು ಕದ ಮುಚ್ಚುವನು.

ಆದಿನ ಸಂಜೆ ತೆರೆದ ಬಾಗಿಲಲ್ಲಿಯೇ ಅವನು ಬಹಳ ಕಾಲ ನಿಂತಿದ್ದು, ದೂರ ಹೊರಗೆ ನೋಡುತ್ತ, ಎಂದೂ ಇಲ್ಲದ ತವಕ ಪಟ್ಟಿದ್ದನು. ಆಗಲೇ ಅವನಿಗೆ ತನ್ನ ಕಡೆ ಏನೋ ಬರುವುದೆಂದು ತೋರಿತು. ಎಷ್ಟು ಕಾದರೂ ಏನೂ ಹತ್ತಿರ ಬರಲಿಲ್ಲ ಸುತ್ತಮುತ್ತಲಿನ ನಿಶ್ಶಬ್ದ ಅವನ ನಿರ್ಜನತೆಯನ್ನು ಹೆಚ್ಚಿಸಿ ಮನದಾಸೆಯನ್ನು ಕುಗ್ಗಿಸಿತು ಐದಾರು ಬಾರಿ ಹೊರಗೆ ಹೋಗಿ ಒಳಗೆ ಬಂದು ಚಾಂಚಲ್ಯದಿಂದ ಬಾಗಿಲನ್ನು ಮುಚ್ಚಲು ಒಳಗಣ ಅಗಣಿಮೇಲೆ ಕೈ ಹಾಕಿದನು. ಮನಸ್ಸು ಬರಲಿಲ್ಲ. ಪುನಃ ಕುಳಿತನು. ಮತ್ತೆ ಎದ್ದು ಬಾಗಲು ಹಾಕಲು ಹೋದಾಗ ಬೆರಳುಗಳು ಇದ್ದಹಾಗೆಯೇ ಸ್ವಾಧೀನ ತಪ್ಪಿ ಮರಗಟ್ಟಿದುವು. ಆಮೇಲೆ ಎಚ್ಚರವೇ ಇಲ್ಲದಂತಾಯಿತು. ಬಾಗಿಲ ಹಿಂದೆ ಕಂಬದಂತೆ ನಿರೋಧಶಕ್ತಿರಹಿತನಾಗಿ ನಿಂತನು. ಕೊಂಚ ಹೊತ್ತು ಕಳೆಯಿತು. ಮಧ್ಯೆಆದುದೇನೋ ಗೊತ್ತಿರಲಿಲ್ಲ.

ಪ್ರಜ್ಞೆ ಬಂದಾಗ ದಾಸನು ಬಾಗಿಲು ಮುಚ್ಚಿ ಹಾಸಿಗೆ ಮೇಲೆ ಹೋಗಿ ಕುಳಿತನು. ಸ್ವಲ್ಪ ಕಾಲದ ಮೇಲೆ ಅವನ ದೃಷ್ಟಿ ಆರುತ್ತಿದ್ದ ಬೆಂಕಿಯ ಕಡೆ ಹೋಯಿತು. ಬಳಿಕ ಅವನು ಎದ್ದು ಬೆಂಕಿಯ ಮುಂದೆ ನಿಂತನು. ಗೋಣಿಪಟ್ಟಿಯ ಮೇಲೆ ಮೆರಗುವ ರಾಸಿ ಕಾಣಿಸಿತು. ನೇತ್ರ ಪಟುತ್ವ ಸ್ವಾಭಾವಿಕವಾಗಿ ಸಾಲದು ಅವನಿಗೆ. ಚಿನ್ನ, ಹೋದ ಚಿನ್ನ, ಹೇಗೆ ಹೋಯಿತೋ

ಹಾಗೆ ಬಂದ ಚಿನ್ನ ಎಂಬ ಭ್ರಾಂತಿಯಿಂದ ಅವನು ಅದನ್ನು ದಿಟ್ಟಿಸಿ ನೋಡಿದನು. ಎಷ್ಟೆಷ್ಟು ನೋಡಿದರೂ ಅದು ತನ್ನ ಚಿನ್ನವೆಂದೇ ನಿರ್ಧಾರವಾಯಿತು ಆ ಚಿನ್ನ ನೋಡುತ್ತಿದ್ದ ಹಾಗೆಯೇ ಹೆಚ್ಚಿ, ಸುರಿದ ರಾಶಿಯಂತೆ ಹೊಳೆಯಲು ಹಿಡಿಯಲಾರದ ಆಸೆಯಿಂದ ಕೆಳಗೆ ಬಗ್ಗಿ ಕೈ ಚಾಚಿದನು. ಸಿಕ್ಕಿದುದೇನು? ನಿರೀಕ್ಷಿತವಾದ, ಗಟ್ಟಿಯಾಗಿದ್ದ, ತಣ್ಣನೆಯ ಚಿನ್ನದ ನಾಣ್ಯದ ರಾಸಿಯಲ್ಲ, ಅನಿರೀಕ್ಷಿತವಾದ, ಮೆದುವಾದ, ಬಿಸಿನೆತ್ತರವುಳ್ಳ ಮುದ್ದು ಮಗುವಿನ ಮುಖ! ಇದೇನು ಕನಸೊ? ತಿರುಗಿ ಮುಟ್ಟಿ ಮುಟ್ಟಿ ದಿಟ್ಟಿಸಿ ನೋಡಿದನು. ಆಗಲೂ ಮಗುವಿನ ಮೈಯೇ ಸಿಕ್ಕಿತು. ನಿದ್ದೆ ಮಾಡುತ್ತಿದ್ದ ಮಗು. ಕೂಡಲೆ ತನ್ನ ತಂಗಿ, ತನ್ನ ತಾಯಿ, ತನ್ನ ತವರೂರು ಮುಂತಾದುವುಗಳ ನೆನಪು ಒಂದೊಂದಾಗಿ ಬಂದಿತು. ಅವನು ಹುಡುಗನಾಗಿದ್ದಾಗ ಅವನ ಚಿಕ್ಕ ತಂಗಿಯೊಬ್ಬಳು ಕೆಲಕಾಲ ಬದುಕಿದ್ದು ಸತ್ತಿದ್ದಳು ಅವನು ಅವಳನ್ನು ಎತ್ತಿ ಆಡಿಸಿದ್ದನು. ಆ ತಂಗಿ ಇರಬಹುದೇ ಎನ್ನಿಸಿತು. ಪುನಃ ನೋಡಿದನು ಅಲ್ಲ ಆಮೇಲೆ ಎದ್ದು, ಬೆಂಕಿಯನ್ನು ಚೆನ್ನಾಗಿ ಉರಿಯುವಂತೆ ಮಾಡಿ, ಒಳ್ಳೆಯ ಬೆಳಕಿನಲ್ಲಿ ಪುನಃ ನೋಡಿದನು. ಈಗಲೂ ಮಗುವೇ. ಆದರೆ ತಂಗಿಯಲ್ಲ. ಹೊಸ ಮಗು. ಮುದ್ದು ಮಗು! ಯಾರದೊ, ಎಲ್ಲಿಯದೋ, ಯಾವಾಗ ಹೇಗೆ ಬಂದಿತೊ ಗೊತ್ತಿರಲಿಲ್ಲ 'ನಾನು ಹೊರಗೇ ಹೋಗಿರಲಿಲ್ಲ. ಇದೇನು ಆಶ್ಚರ್ಯ!' ಎಂದು ಹೇಳಿಕೊಳ್ಳುತ್ತ ನಿಂತನು.

ಸ್ವಲ್ಪ ಹೊತ್ತಿನೊಳಗೆ ಆ ಮಗುವಿನ ಅಳು ಕೇಳಿಸಿತು. ಎಚ್ಚರವಾಯಿತು ಮಗುವಿಗೆ. ಅದೆದ್ದು ಕೂತು ಸುತ್ತ ನೋಡಿ, ಅಮ್ಮಾ ಎಂದಳುತ್ತ, ಕೈ ಚಾಚಿಕೊಂಡು ಮುಂದೆ ಹರಿಯಿತು. ಎತ್ತಿಕೊಳ್ಳಲು ದಾಸನು ಬಗ್ಗಿದನು. ಕೂಡಲೆ ಅದು, ನಿದ್ದೆ ಕಣ್ಣಿನಲ್ಲಿಯೇ ಅವನನ್ನು ಬಿಗಿದಪ್ಪಿ ಅಮ್ಮಾ, ಅಮ್ಮಾ ಎಂದು ಮತ್ತಷ್ಟು ಅಳತೊಡಗಿತು. ಅವನು ಅದನ್ನು ಎತ್ತಿ ತಬ್ಬಿಕೊಂಡು ಸಂತೈಸಲು ಪ್ರಯತ್ನಪಟ್ಟನು. ಆದರೆ ಅವನಿಗೆ ತಾನೇನು ಮಾಡುತ್ತಿದ್ದೆನೆಂಬುದೇ ತಿಳಿದಿರಲಿಲ್ಲ. ಅಳು ಹೆಚ್ಚಾಯಿತು. ಸಮಾಧಾನ ಪಡಿಸಲು ಆಗಲಿಲ್ಲ. ಆಗ ನೆನಪಿಗೆ ಬಂದಿತು ಕೊಂಚ ಅನ್ನ ಮಿಕ್ಕಿದ್ದುದು. ಒಡನೆಯೇ ಅವನು ಆ ಅನ್ನವನ್ನು ಬೆಚ್ಚಗೆ ಮಾಡಿ, ಅದಕ್ಕೆ ಸ್ವಲ್ಪ ತುಪ್ಪ ಮತ್ತು ಸಕ್ಕರೆ ಹಾಕಿ ಕಲೆಸಿ ಮಗುವಿನ ಮುಂದಿಟ್ಟನು. ಸುತ್ತ

ನೋಡದೆ, ಹೊಟ್ಟೆಗಿಲ್ಲದ ಬಡ ಮಗು ಅನ್ನವನ್ನು ಗವಗವನೆ ತಿಂದು, ಹೊಟ್ಟೆ ತುಂಬುತ್ತಿದ್ದ ಹಾಗೆಯೇ, ಹಿಡಿದಿದ್ದ ಅವನ ಕೈಯನ್ನು ಬಿಡಿಸಿ ಕೊಂಡು ಅಂಬೆಗಾಲಿಟ್ಟು ದೂರ ಹೋಗಿ ಬೆಂಕಿಯ ಮುಂದೆ ಪುನಃ ಕುಳಿತು ಕೊಂಡಿತು. ವಿಸ್ಮಯದಿಂದ ದಾಸನು ಇದನ್ನೆಲ್ಲ ನೋಡುತ್ತ ನಿಂತಿದ್ದನು ಮತ್ತೆ ಮಗು ಅಳಲು ಮೊದಲು ಮಾಡಿ, ತನ್ನ ಬೆರಳಿನಿಂದ ಮುಂಡಿಯನ್ನು ಮುಟ್ಟಿನೋಡಿಕೊಳ್ಳುತ್ತ ಕಿರಿಚಲಾರಂಭಿಸಿತು. ದಾಸನು ಎತ್ತಿಕೊಂಡು ಎಷ್ಟು ತಟ್ಟಿದರೂ ಅಳು ನಿಲ್ಲಲಿಲ್ಲ. ಏಕೆ ಅತ್ತಿತೆಂದು ಅವನಿಗೆ ಗೊತ್ತಾ ಗದು ಮಗುವನ್ನು ಬೆಳಕಿನಲ್ಲಿ ಕೂರಿಸಿ ಚೆನ್ನಾಗಿ ನೋಡಿದಾಗ ಅದರ ಮುಂಡಿಯು ಕಿತ್ತು ಕೊಂಚ ರಕ್ತ ಸುರಿಯುತ್ತಿದ್ದಿತು. ಆಮೇಲೆ ದಾಸನು ಆ ಗಾಯಕ್ಕೆ ಸ್ವಲ್ಪ ಗಾಯದೆಣ್ಣೆಯನ್ನು ಬಳಿದು ಮಗುವನ್ನು ತನ್ನ ಹಾಸಿಗೆ ಯಲ್ಲಿಯೇ ಮಲಗಿಸಿ, ಬೆಚ್ಚಗೆ ಹೊದ್ದಿಸಿ, ಚೆನ್ನಾಗಿ ತಟ್ಟಿದನು. ಬೇಗ ಮಗುವಿಗೆ ಪುನಃ ನಿದ್ದೆ ಹತ್ತಿತು.

ಇನ್ನೂ ದಾಸನಿಗೆ ಮಗು ಯಾವುದು, ಹೇಗೆ, ಯಾವಾಗ, ಎಲ್ಲಿಂದ ಬಂದಿತು ಎಂಬುದೊಂದನ್ನೂ ಊಹಿಸಲಾಗಲಿಲ್ಲ. ಹೊರಗೆ ಹೋಗಿ ಸುತ್ತ ಮುತ್ತ ನೋಡಿದನು. ಅಷ್ಟರಲ್ಲಿ ಮಗು ಎಚ್ಚರಗೊಂಡು ಅಳುತ್ತ ಹೊರಗೆ ಬಂದಿತು ಅದನ್ನು ಹೆಗಲಮಾಡಿ ಹಾಕಿಕೊಂಡು ಪುನಃ ಹುಡುಕಲು ಮೊದಲು ಮಾಡಿದನು. ಯಾರೂ ಕಾಣಿಸಲಿಲ್ಲ ಹಾಗೆಯೇ ನೋಡುತ್ತ ದಾರಿಯ ಹತ್ತಿರಕ್ಕೆ ಹೋದನು. ಅಲ್ಲಿ ಏನೋ ಬಿದ್ದಿದಂತೆ ಕಾಣಿಸಿತು. ಅಲ್ಲಿಗೆ ಹೋಗಿ ನೋಡಿದಾಗ ಮಾಯಿಯು ಬಿದ್ದಿದ್ದಳು. ಅವಳು ಯಾರು, ಏಕೆ ಬಿದ್ದಿದ್ದಳು, ಯಾವಾಗ ಬಂದಳು— ಒಂದೂ ತಿಳಿಯದು. ಹೇಳುವವ ರಾರು? ದಾಸನು ನೋಡಿದಾಗ ಉಸಿರಿರಲಿಲ್ಲ. ಮೈ ಬೆಚ್ಚಗಿದ್ದಿತು. ಪ್ರಾಣಾಪಾಯವೆಂದು ಸಹಾಯ ತರಲು ಅವನು ಊರ ಕಡೆಗೆ ಮಗು ಸಹಿತ ಓಡಿದನು.

# ೧೪

# ಬಸಪ್ಪನ ಹರ್ಷ

ದಾಸನು ಹೋಗಿ ನೋಡಿದಾಗ ಊರಿನಲ್ಲಿ ಎಲ್ಲರೂ ಮಲಗಿದ್ದರು. ಹೆಗ್ಗಡೆ ಮನೆಯಲ್ಲಿ ಮಾತ್ರ ಮದುವೆ ಗದ್ದಲ. ಸಮಾಚಾರ ಹೇಳಿ ಸಹಾಯ ತರಬೇಕೆಂದು ಅವನು ಅಲ್ಲಿಗೇ ಹೋದನು.

ಮನೆಯ ಮುಂದೆ ನೆಂಟರು ಇಷ್ಟರು ಊಟ ಮುಗಿಸಿಕೊಂಡು, ಮಾತನಾಡುತ್ತ ಕುಳಿತಿದ್ದರು ಆಗ ತಾಂಬೂಲದ ಹಂಚಿಕೆ ಸಮಯ. ಒಂದು ಕಡೆ ಹೆಗ್ಗಡೆ, ಅವನ ಸುತ್ತಲು ಊರಿನ ಹಿರಿಯರ ಗುಂಪು. ಇನ್ನೊಂದು ಕಡೆ ಮದವಣಿಗ, ಬಸಪ್ಪ ಮೊದಲಾದ ಕಿರಿಯರ ಗುಂಪು. ಮತ್ತೊಂದು ಕಡೆ ಹೆಂಗಸರ ಗುಂಪು. ಎಲ್ಲರೂ ತಾಂಬೂಲ ಚರ್ವಣ ಮಾಡುತ್ತ, ಮಾತನಾಡಿಕೊಂಡು, ವಿನೋದವಾಗಿ ಕಾಲ ಕಳೆಯುತ್ತಿದ್ದರು. ಎಲ್ಲೆಲ್ಲಿಯೂ ನಗು, ಕಥೆ, ವಿನೋದ. ಹತ್ತಿರ ಇದ್ದವರಿಗೆ ನಶ್ಯ ಕೊಟ್ಟು, ಅಂಗೈಯಲ್ಲಿ ನಶ್ಯ ಹಿಡಿದುಕೊಂಡು, ಮೂಗಿಗೆ ನಶ್ಯ ಏರಿಸುತ್ತ ಹೆಗ್ಗಡೆ ಆನಂದ ಪಡುತ್ತಿದ್ದನು. ಅಷ್ಟು ಹೊತ್ತಿಗೆ ಬಂದಿದ್ದವರಲ್ಲಿ ಕೆಲವರು ಹೊರಟುಹೋದರು, ಕೆಲವರು ಇನ್ನೂ ಉಳಿದಿದ್ದರು. ಬಸಪ್ಪನ ಮದುವೆ ಯಾವಾಗ ಎಂಬ ಮಾತು ಪುನಃ ಬಂದಿತು. ಆಗಲೇ ಸಂಬಂಧ ಪಟ್ಟ ಎಲ್ಲ ಹಿರಿಯರೂ ಸೇರಿ ಲಗ್ನದ ದಿನವನ್ನು ನಿಷ್ಕರ್ಷೆ ಮಾಡುತ್ತಿದ್ದಾಗ ಬಾಗಿಲಲ್ಲಿ ಹೊರಗಡೆ ಯಾರೊ ನೆರಳಿನಂತೆ ನಿಂತಿದ್ದುದು ಕಾಣಿಸಿತು. ಬೀರ ಹೆಗ್ಗಡೆ ಮುಂತಾದ ಹುಡುಗರು ನೋಡಿ ಕೂಗಿಕೊಂಡರು. ಬಸಪ್ಪನೇ ಮೊದಲು ಹೊರಗೆ ಬಂದು ನೋಡಿದನು.

ನೋಡಿದರೆ ದಾಸ! ಅವನ ಹೆಗಲಮೇಲೆ ಮಗು, ಆ ಮಗು ಅವನದೇ ! ಇದೇನು ? ಅರ್ಥವಾಗಲಿಲ್ಲ, ನಂಬುಗೆಯೂ ಹುಟ್ಟಲಿಲ್ಲ. 'ಯಾರು, ಯಾರು ?' ಎಂದು ಎಷ್ಟು ಗಟ್ಟಿಯಾಗಿ ಕೂಗಿಕೊಂಡರೂ ನೆಟ್ಟಗೆ ಉತ್ತರ ಬಾರದು. ದೀಪ ತರಿಸಿ ನೋಡಿದಾಗ ಅವನು ನಿಜವಾಗಿಯೂ ದಾಸನೇ !

ಆ ಮಗು ಬಸಪ್ಪನದು ಮತ್ತು ಮಾಯಿಯದು! ಬಸಪ್ಪನ ಹೋಲಿಕೆ ಅದರ ಮುಖದಲ್ಲಿ ಸ್ವಲ್ಪ ಮಟ್ಟಿಗೆ ತೋರುತ್ತಲೂ ಇದ್ದಿತು. ಆದರೆ ಆಗ ಆ ಮಗು ಯಾರದೆಂಬುದು ಯಾರಿಗೂ ಗೊತ್ತಿರಲಿಲ್ಲ; ಹೊಳೆಯಲೂ ಇಲ್ಲ. ಆದರೆ ಗೊತ್ತು ಬಸಪ್ಪನೊಬ್ಬನಿಗೆ! ಮಗು ನೋಡಿ ಬಸಪ್ಪನಿಗೆ ಸಿಡಿಲು ಬಡಿದಂತಾಯಿತು. ಮಾಯಿ ಬಂದಿರಬೇಕೆಂದುಕೊಂಡನು. ಭಯ ಹೆಚ್ಚಿತು. ಆದರೂ ಧೈರ್ಯಶಾಲಿ ಬೆವರಿದರೂ ತೋರಿಕೊಳ್ಳದೆ, ಏನೂ ಅರಿಯದವನಂತೆ 'ಏಕೆ ಬಂದೆ ಈಗ?' ಎಂದು ಎಂದು ದಾಸನನ್ನು ವಿಚಾರಿಸಿದನು. ಈ ಸುದ್ದಿ ಒಳಗಿದ್ದ ಹೆಗ್ಗಡೆ ಕಿವಿಗೂ ಮುಟ್ಟಿತು. ಹೆಗ್ಗಡೆಯೇ ಹೊರಗೆ ಬಂದನು. ಅಷ್ಟರೊಳಗೆ ಸಿದ್ದಪ್ಪ, ಜೋಯಿಸರು, ಮಲ್ಲಪ್ಪ ಮುಂತಾದವರೂ ಸೇರಿದರು. ಬಸಪ್ಪನ ಎದೆ ಡವಡವಗುಟ್ಟುತ್ತಿದ್ದಿತು. ಇವರನ್ನು ನೋಡಿ ಕೊಂಚ ಹಿಂದೆ ಸರಿದನು ಇದೊಂದು ವಿಚಿತ್ರ ದೃಶ್ಯ!

ಆಗ ಎಲ್ಲರ ಕಣ್ಣೂ ದಾಸನ ಮೇಲೆ, ದಾಸನ ಹೆಗಲ ಮೇಲೆ ಇದ್ದ ಮಗುವಿನ ಮೇಲೆ!

'ಅವನು ದಾಸನೇ? ಏನು ಬೇಕಂತೆ? ಈಗೇಕೆ ಬಂದಿದಾನೆ?' ಎಂದು ಹೆಗ್ಗಡೆ ಗರ್ಜಿಸಿದನು.

'ಪಂಡಿತರು! ಪಂಡಿತರು!!' ಎಂದು ದಾಸನು ಉಸಿರು ಬಿಡದೆ ಹತ್ತಿರದಲ್ಲಿದ್ದ ಮಲ್ಲಪ್ಪನಿಗೆ ಕೂಗಿ ಹೇಳಿದನು.

'ಏಕೋ ದಾಸ? ಏನು ಸಮಾಚಾರ? ಪಂಡಿತರು ಇದಾರೆ. ಸರಿಯಾಗಿ ಹೇಳು. ಯಾರಿಗೆ ಏನಾಗಿದೆ?' ಎಂದು ಜೋಯಿಸರು ಮೆತ್ತಗೆ ಕೇಳಿದರು.

'ಯಾವಳೋ ಹೆಂಗಸು' ಎಂದು ದಾಸನು ಮೊದಲುಮಾಡಿ, ಮೇಲುಸಿರು ಬಿಡುತ್ತ, 'ಬಿದ್ದಿದಾಳೆ. ನನ್ನ ಮಂಟಪದ ಹತ್ತಿರ. ಅವಳಿಗೆ ಪ್ರಾಣ ಇದೆಯೋ ಇಲ್ಲವೋ ನೋಡಬೇಕು. ಪಂಡಿತರೆಲ್ಲಿ? ಬೇಗ ಬನ್ನಿ' ಎಂದು ತಿಳಿಸಿದನು.

ಬಸಪ್ಪನಿಗೆ ಯಾರಿಗೂ ಇಲ್ಲದ ಕಳವಳ 'ಆ ಹೆಂಗಸು ಮಾಯಿಯೇ ಆಗಿರಬೇಕು. ಅವಳು ಸತ್ತಿದ್ದರೆ ಸರಿ. ಏನುಗತಿ ಬದುಕಿದ್ದರೆ!'

ಆ ಹೊತ್ತಿಗೆ ದಾಸನ ಸುತ್ತಲೂ ಹೆಂಗಸರೂ ಮಕ್ಕಳೂ ಸೇರಿದರು. ಮಲ್ಲಪ್ಪ ದಾಸನನ್ನು ಕರೆದು ಪಕ್ಕಕ್ಕೆ 'ದಾಸ ಅಲ್ಲಿರು. ಪಂಡಿತರು ಬರಲಿ. ಗಲಾಟೆ ಬೇಡ.' ಎನ್ನುತ್ತ ಹೆಂಗಸರಿಗೂ ಹುಡುಗರಿಗೂ 'ನೀವೆಲ್ಲ ಒಳಗೆ ಹೋಗಿ. ಇಲ್ಲಿ ರಾತ್ರಿಹೊತ್ತು ಏನು ಕೆಲಸ? ಒಳಗೆ ನಡೆಯಿರಿ' ಎಂದು ಹೇಳಿದನು. ಯಾರೂ ಒಳಗೆ ಹೋಗರು. ಆಗ ಹೆಗ್ಗಡೆಗೆ 'ಯಾವಳೋ ಬಿದ್ದಿದ್ದಾಳಂತೆ ಅವನ ಮಂಟಪದ ಹತ್ತಿರ. ಅವಳಿಗೆ ಪ್ರಾಣ ಹೋಗಿರುವಂತೆ ತೋರುತ್ತೆ ಪಂಡಿತರಿಗಾಗಿ ಬಂದಿದಾನೆ. ಈಗೇಕೆ ಆ ಸುದ್ದಿ ಇಲ್ಲಿ ಹರಡಬೇಕು? ಎಲ್ಲರನ್ನೂ ಒಳಕ್ಕೆ ಕಳುಹಿಸು. ಯಾರೋ ಕಾಯಿಲೆ ಎಂದು ಹೇಳು. ಅಷ್ಟೆ' ಎಂದು ಮಲ್ಲಪ್ಪನು ಕಿವಿಯಲ್ಲಿ ಹೇಳಿದನು.

ಆದರೂ ಹೆಂಗಸರು ನಿಲ್ಲದೆ ದಾಸನ ಬಳಿಗೇ ಬಂದರು ಆಗ ಅವರೆಲ್ಲರ ಬಾಯಲ್ಲಿಯೂ 'ಆ ಮಗು ಯಾವುದು' ಎಂದೇ. ಚೆನ್ನಮ್ಮನೇ 'ಅವನು ಯಾರಮ್ಮ? ಆ ಮಗು ಯಾರದು? ಏನು ಬೇಕಂತೆ?' ಎಂದು ತನ್ನ ತಾಯಿಯನ್ನು ಕೇಳಿದಳು. ಆಕೆಯೂ ಇನ್ನೂ ಕೆಲವರೂ ಬಸಪ್ಪನನ್ನೇ 'ಅದು ಯಾರದು?' ಎಂದು ವಿಚಾರಿಸಿದರು. ಬಸಪ್ಪನ ಎದೆಗೆ ಶೂಲ ಇರಿದಂತಾಯಿತು.

'ಗೊತ್ತಿಲ್ಲ ಯಾವಳೋ ಬಿದ್ದಿದ್ದಾಳಂತೆ. ಪಂಡಿತರಿಗಾಗಿ ಬಂದಿದಾನೆ' ಎಂದು ಬಹಳ ಪ್ರಯತ್ನಪಟ್ಟು ಬಸಪ್ಪನು ಎಚ್ಚರಿಕೆಯಿಂದ ಹೇಳಿದನು.

'ದಾಸಣ್ಣ, ಮಗು ಇಲ್ಲಿ ಬಿಡು. ಹಾಗಾದರೆ' ಎಂದು ಹೆಗ್ಗಡೆ ತಂಗಿ ಕನಿಕರದಿಂದ ಹೇಳಿ, ಮಗುವಿನ ಕೊಳಕು ಬಟ್ಟೆಯನ್ನು ಮುಟ್ಟಲು ಇಷ್ಟಪಡದೆ 'ನಾನೊಬ್ಬ ಹುಡುಗಿ ಕಳಿಸಲೆ?' ಎಂದು ಕೇಳಿದಳು.

'ಇಲ್ಲ ಇಲ್ಲ. ಬಿಡಲಾರೆ' ಎನ್ನುತ್ತ ದಾಸನು 'ಅದು ನನ್ನ ಹತ್ತಿರ ಬಂದಿದೆ. ನನಗೆ ಸೇರಿದ್ದು' ಎಂದು ಒತ್ತಿ ಹೇಳಿ ಮಗುವನ್ನು ಬಿಗಿಯಾಗಿ ಅಪ್ಪಿಕೊಂಡನು.

ಮಗುವು ಹೊಸದು. ಬರುವುದು ಗೊತ್ತಿರಲಿಲ್ಲ. ಆ ಮಗುವನ್ನು ದಾಸನು ಅಲ್ಲಿ ಬಿಡಬೇಕೆಂಬ ಈ ಯೋಚನೆಯೂ ಹೊಸದೇ. ಒಂದು ಗಳಿಗೆ

ಹಿಂದೆ ಅವನಿಗೆ ಹಾಗೆ ಉತ್ತರ ಕೊಡಬೇಕೆಂಬ ಸಂಕಲ್ಪ ಇರಲಿಲ್ಲ. ಆಗ ಅವನು ತನ್ನ ಉತ್ತರಕ್ಕೆ ತಾನೇ ಆಶ್ಚರ್ಯಗೊಂಡನು.

'ಕೇಳಿದಿರಾ ದಾಸನ ಮಾತನ್ನು! ಹೀಗೂ ಉಂಟೆ? ಆಶ್ಚರ್ಯ! ಎಂದು ಆಕೆ ನಸುನಕ್ಕಳು.

ಅಷ್ಟು ಹೊತ್ತಿಗ ಎದುರುಮನೆಯಲ್ಲಿದ್ದ ಪಂಡಿತ ರುದ್ರಯ್ಯನು ಅಲ್ಲಿಗೆ ಬಂದನು. ಆಗ ಅವನಿಗೆ ಕೊಂಚ ಕೋಪ ಅಥವಾ ಬೇಸರ. ಇದೇನು! ಸದಾ ರೋಗಿಗಳ ಕಾಟ! ಆದರೆ ರೋಗಿಗಳಿಗೆ ಸಹಾಯ ಮಾಡುವುದು ಧರ್ಮವಷ್ಟೆ!

ಸಮಾಧಾನ ಮಾಡಿಕೊಂಡು ರುದ್ರಯ್ಯನು 'ಹೆಂಗಸರಿಗೂ ಮಕ್ಕಳಿಗೂ ಏನು ಕೆಲಸ ಇಲ್ಲಿ' ಎಂದು ಕೂಗಿದನು.

ಇದೇನು ಗೋಳು! ದಾಸ ಇಲ್ಲಿಗೇ ಬರಬೇಕೆ? ಬೇರೆಕಡೆ ಹೋಗಬಹುದಾಗಿತ್ತಲ್ಲ!' ಎಂದು ಹೆಗ್ಗಡೆ ಅಸಮಾಧಾನ ಪಟ್ಟನು.

'ಬಹುದಾಗಿತ್ತಲ್ಲ! ಬಹುದು ಕಟ್ಟಿಗೊಂಡು ಮಾತೇಕೆ? ಈಗ ನನ್ನ ಜತೆಗೆ ಬರುವವರು ಯಾರು? ದಾಸ ಎಲ್ಲಿ? ಮೊದಲು ಭದ್ರಪ್ಪನಿಗೆ ಹೇಳಿ ಕಳಿಸಿರಿ. ಆಕೆಯೇ ಸರಿ ಇಂತಹ ಸಮಯಕ್ಕೆ' ಎನ್ನುತ್ತ ರುದ್ರಯ್ಯನು 'ಬಸಪ್ಪ, ಏಕೆ ನಿಂತಿದ್ದೀಯೆ? ಬೇಗ ಕಳುಹಿಸು. ನನ್ನ ಮದ್ದಿನ ಚೀಲ ತೆಗೆ.' ಎಂದು ಬಸಪ್ಪನಿಗೆ ಹೇಳಿದನು.

'ನಾನು ಎಲ್ಲ ಕಡೆಯಲ್ಲೂ ನೋಡಿದೆ. ಯಾರೂ ಎದ್ದಿರಲಿಲ್ಲ. ಇಲ್ಲಿ ಮಾತ್ರ ಗದ್ದಲ ಇತ್ತು. ಇಲ್ಲಿಗೇ ಬಂದೆ' ಎಂದು ದಾಸ ತಿಳಿಸಿದನು.

ಮಗುವಿಗೆ ನಿದ್ದೆ ಕಣ್ಣು. ದೀಪ, ಗದ್ದಲ, ಹೊಸಸ್ಥಲ—ಯಾವುದೂ ಗಮನಕ್ಕೆ ಬರಲಿಲ್ಲ. ದಾಸನ ತಲೆಮೇಲೆ ತಲೆಯಿಟ್ಟು, ಕಣ್ಣು ಮುಚ್ಚಿ, ನಿದ್ರಿಸುತ್ತಿದ್ದಿತು.

ಔಷಧದ ಚೀಲ ತಂದು ಕೊಟ್ಟು 'ನಾನೇ ಭದ್ರಪ್ಪನನ್ನು ಕರೆತರುತ್ತೇನೆ' ಎಂದು ಬಸಪ್ಪನು ಓಡಿದನು.

'ಯಾರನ್ನಾದರೂ ಕಳಿಸು' ಎನ್ನುತ್ತ ರುದ್ರಯ್ಯನು ದಾಸನೊಡನೆ ಮಂಟಪಕ್ಕೆ ಹೊರಟನು. ಮೂವರು ಅವರ ಜತೆಯಲ್ಲಿ ಹೋದರು. ಉಳಿದವರು ನೋಡುತ್ತ ನಿಂತರು. ಮಲ್ಲಪ್ಪ ಮಾತ್ರ 'ರುದ್ರಯ್ಯ ನಾನೂ ಬರು

ತ್ತೇನೆ. ಹೇಳಿಕಳಿಸು. ಬೇಕಾದರೆ' ಎಂದು ಕೂಗಿದರು. ಅದು ಅವರಿಗೆ ಕೇಳಿಸಲಿಲ್ಲ.

ಅಷ್ಟರೊಳಗೆ 'ಬಸಪ್ಪ, ಇನ್ನು ನೀನು ಮನೆಗೆ ಹೋಗು. ನಿಮ್ಮ ಮನೆಯಲ್ಲಿ ಮದುವೆ ಗದ್ದಲ. ನಾನು ಯಾರಜತೆಯಲ್ಲಾದರೂ ಮನೆಗೆ ಹೋಗ್ತೇನೆ' ಎಂದಳು ಭದ್ರವ್ವ.

'ಇಲ್ಲೇ ಕಾದಿರುತ್ತೇನೆ. ಇಷ್ಟು ದೂರವೇ ಬಂದದ್ದಾಯಿತು. ಏಕೆ ಹೋಗಲಿ?' ಎಂದನು ಬಸಪ್ಪ.

ಬಸಪ್ಪನ ಚಿಂತೆ ಯಾರಿಗೆ ಗೊತ್ತು!

'ನೀನು ಒಳ್ಳೆಯವನಯ್ಯ, ಬಸಪ್ಪ. ನಿನ್ನ ಮನಸ್ಸು ಮೆದು ನೀನು ಎಲ್ಲ ಹಣವಂತರಹಾಗಲ್ಲ' ಎಂದು ಹೊಗಳುತ್ತ ಭದ್ರವ್ವ ಎಲ್ಲರೂ ಇದ್ದ ಕಡೆಗೆ ಹೋದಳು.

ಬಸಪ್ಪನಿಗೆ ನಾಚಿಕೆಯಾಯಿತು. ತಲೆ ಬಾಗಿ, ಅಲ್ಲೇ ಅಡ್ಡಾಡುತ್ತ ಅವನು ದೂರವಾಗಿಯೇ ನಿಂತನು ಹತ್ತಿರ ಹೋಗಲು ಅವನಿಗೆ ಇಷ್ಟ ಬಾರದು.

ಚಳಿ, ಕೊರೆತ, ಕತ್ತಲೆ, ಅಲ್ಲಿದ್ದವರು—ಇದೊಂದೂ ಬಹಳ ಕಾಲ ತೋರಲೇ ಇಲ್ಲ.

'ಏನಾಗಿದೆಯೊ? ನಾನು ಹೇಗೆ ಮಾಡಲಿ? ಈಗಲಾದರೂ ಧೈರ್ಯತಾಳಿ, ಮಾಯಿ ನನ್ನ ಹೆಂಡತಿಯೆಂದು ಒಪ್ಪಿಕೊಂಡು ಗತಿಯಿಲ್ಲದ ಆ ಮಗುವಿನ ರಕ್ಷಣೆಗೆ ಹೋಗಲೆ?' ಎಂದು ತನ್ನಲ್ಲಿ ತಾನೆ ಮತ್ತೆ ಪ್ರಶ್ನಿಸಿಕೊಂಡನು. ಆದರೆ ಅವನಿಗೆ ಮನೋದಾರ್ಢ್ಯವು ನಾಲದು. ಈಚೆಗೆ ಅವನ ಸತ್ಯವೂ ಶೀಲವೂ ದುರ್ಬಲವಾಗಿ ಅವನು ಸ್ವಾರ್ಥಕ್ಕೆ ಸಿಕ್ಕಿಬಿದ್ದಿದ್ದನು. ಕೊನೆಗೂ ಚೆನ್ನಮ್ಮನ ಚಿಂತೆ ಬಿಟ್ಟು, ಧೈರ್ಯವಾಗಿ ಸತ್ಯದ ಹಾದಿ ಹಿಡಿಯಲು, ಅವನಿಗೆ ಮನಸ್ಸು ಬರಲಿಲ್ಲ.

ಈ ಮಧ್ಯೆ 'ಮಾಯಿ ಸತ್ತಿದ್ದರೆ—ಚೆನ್ನಮ್ಮನನ್ನು ಮದುವೆಯಾಗಲು ಅಡ್ಡಿ ಇಲ್ಲ. ಮುಂದೆ ನಾನು ಖಂಡಿತವಾಗಿ ಸಜ್ಜನನಾಗಿರುತ್ತೇನೆ. ಎಂದಿಗೂ ಇಂತಹ ರಹಸ್ಯಗಳೇ ಬೇಡ! ಇನ್ನು ಈ ಮಗು—ಇದರ ರಕ್ಷಣೆ ಚೆನ್ನಾಗಿ ನಡೆದರೆ ಸರಿ. ಎಂದು ಮತ್ತೆ ಹೇಳಿಕೊಂಡು ತಟಸ್ಥನಾದನು.

ಅಷ್ಟರಲ್ಲಿ 'ಅವಳು ಬದುಕಿರಬಹುದು—! ಆಗ? ಏನು ಮಾಡಬೇಕು?' ಎಂದು ಚಿಂತೆ ಪುನಃ ಬಲವಾಗಿ ಕವಿಯಿತು.

'ನೋಡೋಣ' ಎಂದು ಮತ್ತೆ ಹೇಳಿಕೊಂಡು ಓಡಾಡಲಾರಂಭಿಸಿದನು. ಹೊತ್ತು ಕಳೆದುದೇ ತಿಳಿಯಲಿಲ್ಲ. ಮಾತನಾಡುವ ಸದ್ದು ಕೇಳಿಸಿತು.

ರುದ್ರಯ್ಯ ಭದ್ರವ್ವ ಮುಂತಾದವರು ಬಂದರು.

'ನಾನೇ ಇಲ್ಲಿ ತನಕ ಬಂದಿದ್ದೆ. ಆದ್ದರಿಂದ ನಿಮಗಾಗಿ ಕಾದಿದ್ದೇನೆ' ಎಂದು ಹೇಳಿ ಬಸಪ್ಪ ತನ್ನ ಚಿಂತೆಯನ್ನು ಮುಚ್ಚಿಕೊಂಡನು.

'ಅಯ್ಯೋ! ನೀನೇಕೆ ಬಂದೆ! ಇಲ್ಲಿ ಮಾಡಬೇಕಾದ್ದೇನೂ ಇಲ್ಲ. ಪ್ರಾಣಹೋಗಿಬಿಟ್ಟಿದೆ. ಬಹಳ ಹೊತ್ತಾಗಿರಬೇಕು' ಎಂದನು ರುದ್ರಯ್ಯ.

'ಪ್ರಾಣಹೋಗಿಬಿಟ್ಟಿದೆ! ಅವಳು ಯಾರೊ?' ಎಂದು ಬಸಪ್ಪನು ಕೇಳಿದನು. ಅವನ ಮೈ ಜುಮ್ಮೆಂದಿತು. ಅವನಿಗೇ ತನ್ನ ಪ್ರಾಣದಲ್ಲಿ ಪ್ರಾಣವಿಲ್ಲ!

ಇನ್ನೂ ಚಿಕ್ಕ ಹುಡುಗಿ! ಉದ್ದವಾದ ತಲೆ ಕೂದಲು ಕಪ್ಪು ಬಣ್ಣ. ಮೈ ಕೈ ಬಹಳ ಬಡವಾಗಿದೆ. ಯಾವಳೋ ತಿರುಕ ಹೆಂಗಸು! ಕೊರಳಲ್ಲಿ ಮಾಂಗಲ್ಯ ಇದೆ. ನಾಳೆ ಊರಿನವರೇ ಆ ಹೆಣ ಸುಡಿಸಬೇಕು! ಬಾ ಹೋಗೋಣ' ಎಂದನು ರುದ್ರಯ್ಯ.

ಬಸಪ್ಪನಿಗೆ ಕುತೂಹಲ. ನೋಡಬೇಕೆಂಬ ಆಸೆ. ಅವನು ಮಂಟಪದ ಕಡೆ ತಿರುಗಿ 'ನಾನೂ ನೋಡಿಬರುತ್ತೇನೆ ನಿನ್ನೆ ಒಬ್ಬಳನ್ನು ನೋಡಿದ್ದೆ. ಅವಳಿರಬಹುದೊ? ನೀವು ಹೋಗುತ್ತಿರಿ. ನಾನೂ ಬಂದೆ' ಎಂದು ಒಳಕ್ಕೆ ನುಗ್ಗಿದನು.

ಗೋಣಿ ಪಟ್ಟೆ ಮೇಲೆ ಒಂದು ಹೆಣ. ಭದ್ರವ್ವ ಬರುವುದಕ್ಕೆ ಮುಂಚೆ ಅವರು ಅದನ್ನು ಅಲ್ಲಿಗೆ ಸಾಗಿಸಿದ್ದರು. ಪ್ರಾಣವಿರಲಿಲ್ಲ. ಭದ್ರವ್ವ ಅದನ್ನು ಹಾಗೆ ಒಪ್ಪ ಮಾಡಿ ಮಲಗಿಸಿದ್ದಳು.

ಮಾಯಿ ಅವಳೇ. ಮಗು ಅವಳದೇ ಮತ್ತು ತನ್ನದೇ. ಚೆನ್ನಾಗಿ ಗುರುತು ಸಿಕ್ಕಿತು. ಸಂಗತಿಗಳೆಲ್ಲ ನೆನಪಿಗೆ ಬಂದುವು. ಬಸಪ್ಪನಿಗೆ ಈಗ ಭಯ, ಚಿಂತೆ—ಒಂದೂ ಇಲ್ಲ! 'ಚೆನ್ನಮ್ಮನ್ನ ಮದುವೆ ಆಗಬಹುದು.

ಮಗುವಿನ ಭವಿಷ್ಯ–? ನೋಡೋಣ’ ಎಂದು ಕೊಂಡು ನಿಂತು ನೋಡಿದನು.

ಅಗ್ಗಿಷ್ಟಿಕೆ ಮುಂದೆ ದಾಸನು ಮಗು ತಟ್ಟಿ ಮಲಗಿಸುತ್ತಿದ್ದನು. ಮಗುವಿಗೆ ಇನ್ನೂ ಕಣ್ಣು ತುಂಬ ನಿದ್ದೆ ಬಂದಿರಲಿಲ್ಲ. ಆದರೂ ಅದು ಅಲ್ಲಿಯೇ ಸ್ವಸ್ಥವಾಗಿದ್ದಂತೆ ತೋರಿತು. ಅದಕ್ಕೆ ಅಪ್ಪಅಮ್ಮನ ಚಿಂತೆ, ಯಾವ ಚಿಂತೆಯೂ ಇಲ್ಲ! ದೊಡ್ಡವರಿಗೆ ಚಿಂತೆ, ವಿವಿಧ ಚಿಂತೆ, ಸರ್ವದಾ ಚಿಂತೆ! ಮಕ್ಕಳಿಗೆ ಚಿಂತೆ ಎಲ್ಲಿಯದು? ಮಕ್ಕಳನ್ನು ಕಂಡರೆ ಒಮ್ಮೊಮ್ಮೆ ಎಂತಹವರಿಗೂ ಭಯ ಭಕ್ತಿ ಭ್ರಮೆಗಳು ತೋರಿ ಭಗವಂತನ ನೆನಪು ಬರುತ್ತದೆ! ಬಸಪ್ಪನು ನೋಡಿದಾಗ ಮಗುವಿನ ಕಣ್ಣು ತೆರೆದಿದ್ದಿತು. ತಂದೆಯ ಜ್ಞಾಪಕ ಮಮತೆ ವಿಷಾದ ಸಂತೋಷ—ಇದೊಂದೂ ಅದಕ್ಕೆ ಇರಲಿಲ್ಲ. ಅದು ಅವನನ್ನು ನೋಡಿಯೂ ಗಮನಿಸದೆ, ದಾಸನ ಕಡೆ ಮುಖ ತಿರುಗಿಸಿಕೊಂಡು, ಅವನ ಕೆನ್ನೆಯನ್ನು ಬೆರಳಿನಿಂದ ಕೆರೆಯುತ್ತ ಕಣ್ಣು ಮುಚ್ಚಿತು.

‘ನಾಳೆ ಈ ಮಗುವನ್ನು ಯಾರಿಗಾದರೂ ಸಾಕಲು ಕೊಡುವೆಯೊ?’ ಎಂದು ಕೇಳಿದನು ಬಸಪ್ಪ ಏನೂ ಅರಿಯದವನಂತೆ.

‘ಏಕೆ ಹಾಗೆ ಹೇಳುತ್ತೀಯೆ! ನನ್ನಿಂದ ಕೊಡಿಸುವವರು ಯಾರು? ನನ್ನದು ಮಗು ಈಗ!’ ಎಂದು ದಾಸನು ನಿಸ್ಸಂಕೋಚವಾಗಿ ಹೇಳಿದನು.

‘ಅಲ್ಲಯ್ಯ ನಿನಗೇಕೆ ಅದು? ನೀನೊಬ್ಬ ಮುದಿ ಗೊಡ್ಡು. ಹೆಂಡರಿಲ್ಲ.’ ಎಂದನು ಬಸಪ್ಪ.

‘ಸಂಬಂಧ ಪಟ್ಟವರು ಬಂದು, ಸಂಬಂಧ ತೋರಿಸಿ, ನನ್ನಿಂದ ತೆಗೆದುಕೊಂಡು ಹೋಗುವ ತನಕ ಈ ಮಗು ನನ್ನದು. ಅಮ್ಮ ಸತ್ತಳು. ಅಪ್ಪ–ಇಲ್ಲ ಎನ್ನಬೇಕಷ್ಟೆ. ನಾನೂ ಒಂಟಿ, ಅದೂ ಒಂಟಿ. ನನ್ನ ಹಣ ಹೋಯಿತು—ಎಲ್ಲಿಂದಲೋ ಗೊತ್ತಿಲ್ಲ. ಮಗು ಬಂತು—ಎಲ್ಲಿಂದಲೋ ಗೊತ್ತಿಲ್ಲ. ನಾನೊಂದೂ ಅರಿಯೆ. ಎಲ್ಲವೂ ಅಚ್ಚರಿ’ ಎಂದು ದಾಸನು ಉತ್ತರವಿತ್ತನು.

‘ಪಾಪ! ಬಡಮಗು!’ ಎನ್ನುತ್ತ, ಬಸಪ್ಪನು ಜೇಬಿಗೆ ಕೈ ಹಾಕಿ, ಸಿಕ್ಕಿದ ಒಂದೂವರೆ ರೂಪಾಯಿ ನಷ್ಟು ನಾಣ್ಯ ಹೊರಗೆತೆಗೆದು ‘ಮಗುವಿಗೆ ಬಟ್ಟೆಗೋಸ್ಕರ ಇದನ್ನು ತೆಗೆದುಕೊ’ ಎಂದು ದಾಸನ ಮುಂದೆ ಹಾಕಿ, ಬೇಗ ಹೊರಕ್ಕೆ ಬಂದನು.

ರುದ್ರಯ್ಯ ಮುಂತಾದವರು ಸ್ವಲ್ಪ ದೂರದಲ್ಲಿ ನಿಂತಿದ್ದರು.

ನಡೆದು ಹೋಗುತ್ತ ಬಸಪ್ಪನು ‘ ನೋಡಿದೆ. ಅವಳು ಬೇರೆ ಇವಳು ಬೇರೆ.’ ಎಂದು ಕೂಗುತ್ತಾ ಹೇಳಿಕೊಂಡು ಅವರ ಜತೆ ಸೇರಿ ‘ ಮಗು ಮುದ್ದಾಗಿದೆ ದಾಸನೇ ಸಾಕುತ್ತಾನಂತೆ’ ಎಂದು ತಿಳಿಸಿದನು.

‘ ನನಗೂ ಆ ಮಗು ಬೇಕೆನ್ನಿಸಿತು ನಿಮ್ಮ ಅತ್ತೆಗೆ ಅದನ್ನು ಸಾಕಲು ಕೈಯುಲ್ಲಾಗದು. ಆದ್ದರಿಂದ ಸುಮ್ಮನಾದೆ’ ಎಂದನು ರುದ್ರಯ್ಯ.

‘ ಒಳ್ಳೆ ರಾತ್ರಿ! ಎಷ್ಟು ಕಷ್ಟ. ಇದನ್ನು ಮರೆಯಲಾಗುವುದಿಲ್ಲ !’ ಎಂದು ಗಟ್ಟಿಯಾಗಿ ಹೇಳಿ ಬಸಪ್ಪನು ಮನದಲ್ಲಿ ಏನೇನೋ ಬಗೆಯುತ್ತಿದ್ದನು.

ಎಲ್ಲರೂ ತಮ್ಮ ತಮ್ಮ ಮನೆಗೆ ಹಿಂದಿರುಗಿದರು. ಹೀಗೆ ಮಾಯಿಯ ಭಯ ಮಾಯವಾಯಿತು. ಅವಳನ್ನು ಗುರುತಿಸುವರಾರೂ ಇರಲಿಲ್ಲ. ಬಸಪ್ಪನ ಚಿಂತೆ ತಪ್ಪಿತು—ಬಹುಭಾಗ ! ಇನ್ನು ನಾಗಣ್ಣ ! ‘ ಅವನು ಬಂದು ರಟ್ಟು ಮಾಡಬಹುದು. ಆಗ ಅವನಿಗೆ ಸುಮ್ಮನಿರಲು ಬಾಯಿಗೆ ಹಾಕಿದ ರಾಯಿತು.’ ಎಂದು ಕೊಂಡನು ಬಸಪ್ಪ.

ಉಳಿದಿರುವುದು ಮಗು. ‘ ಅದರ ರಕ್ಷಣೆ ಸರಿಯಾಗಿದ್ದರಾಯಿತಷ್ಟೆ! ಅದರ ಕೈಯನ್ನೂ ಬಿಡದೆ, ಗುಟ್ಟನ್ನೂ ರಟ್ಟು ಮಾಡದೆ ಇರುವುದು ಒಳ್ಳೆಯದು. ಚೆನ್ನಮ್ಮನಿಗಾಗಲಿ ಉಳಿದವರಿಗಾಗಲಿ ಇದರ ಗುಟ್ಟು ಗೊತ್ತಿಲ್ಲ. ಈ ಮಗು ನನ್ನನ್ನು ಅಪ್ಪಯೆಂದು ಕರೆಯದಿದ್ದರೇನು ? ಇದರಿಂದ ತಪ್ಪೂ ಇಲ್ಲ, ನಷ್ಟವೂ ಇಲ್ಲ.’ ಎಂದು ಮುಂತಾಗಿ ಬಸಪ್ಪನು ಹರ್ಷಚಿತ್ತನಾಗಿ ಅದೃಷ್ಟವಿಚಾರಮಾಡುತ್ತ ರಾತ್ರಿ ಕಳೆದನು.

೧೫

# ಮಗುವಿನ ಪೋಷಣೆ

ಮರುದಿನ ಬೆಳಿಗ್ಗೆ ಬೊಮ್ಮನಹಳ್ಳಿಯಲ್ಲಿ ಹೊಸ ಗಲಿಬಿಲಿ. ಮಾಯಿ ಸತ್ತು ಬಿದ್ದಿದ್ದ ಸುದ್ದಿ ಊರಿನಲ್ಲೆಲ್ಲ ಹರಡಿತು. ಅನಾಥಶ್ರವ. ಪರದೇಶಿ. ಊರಿನವರು ಸೇರಿ ಸವ ಸಂಸ್ಕಾರ ಮಾಡಿಸಿದರು. ಆಗ ಯಾರ ಕಣ್ಣಲ್ಲಿಯೂ ನೀರೇ ಬರಲಿಲ್ಲ. ಎಲ್ಲರೂ ಈ ಸಂಗತಿಯನ್ನು ಬಹಳ ಬೇಗ ಮರೆತು ಬಿಟ್ಟರು.

ಆದರೆ ಅದೇ ಊರಿನಲ್ಲಿ ಇದೇ ವಿಷಯವು ಮುಂದೆ ಕೆಲವು ವ್ಯಕ್ತಿಗಳ ಜೀವನ ಪಥದಲ್ಲಿ ಅವರ ಆಮರಣಾಂತದ ಆಗುಹೋಗುಗಳಿಗೂ ಸುಖದುಃಖ ಗಳಿಗೂ ಕಾರಣಭೂತವಾದ, ಬಹಳ ಹೆಚ್ಚಿನ ಪರಿಣಾಮವುಳ್ಳ ಘಟನೆ ಯಾಗಿದ್ದಿತು.

ದಾಸನು ಆ ಬಡಮಗುವನ್ನು ಸಾಕಲು ಇಟ್ಟುಕೊಂಡುದನ್ನು ಕಂಡು ಊರಿನವರೆಲ್ಲ ಪ್ರಶಂಸಿಸತೊಡಗಿದರು. ಅವನ ಹಣವು ಕಳವಾದಾಗ ಹಳ್ಳಿ ಯಲ್ಲಿ ಎಷ್ಟು ಮಾತುಕತೆಗಳು ನಡೆದುವೋ ಅಷ್ಟೇ ಈಗಲೂ ನಡೆದುವು. ಬಹುಶಃ ಇನ್ನೂ ಹೆಚ್ಚಾಗಿ ನಡೆದುವು ಎಂದರೂ ತಪ್ಪಿಲ್ಲ. ಹಣ ಹೋದಾಗಿ ನಿಂದ ದಾಸನ ವಿಷಯದಲ್ಲಿ ಜನರಿಗೆ ದುರಭಿಪ್ರಾಯ ಕಡಮೆ, ಬಹಳ ಮರುಕ. ಮಗು ಸಿಕ್ಕಿದ ಮೇಲಂತೂ ಊರಿನವರ ಸದಭಿಪ್ರಾಯವು ಹೆಚ್ಚಿತು. ಈಗ ಅವನ ಜೀವನವೇ ಹೊಸದು. ಬಹಳಸುಧಾರಿತವಾದುದು! ಮುಖ್ಯ ವಾಗಿ ಊರಿನ ಹೆಂಗಸರಿಗೆ ಅವನ ವಿಷಯದಲ್ಲಿ ಹಿಂದೆಂದೂ ಇಲ್ಲದ ಮಮತೆ, ವಿಚಾರಣೆ ಮತ್ತು ಸಹಾಯ ಬುದ್ಧಿ. ಹಿರಿಯ ತಾಯಂದಿರು ವಯಸ್ಸಾ ದವರು, ಬೇಸರಿಕೆ ಇಲ್ಲದವರು, ತುಂಬಾ ಅನುಭವವುಳ್ಳವರು, ಲಾಲನೆ ಪಾಲನೆ; ಬಲ್ಲವರು ಆದರೆ ಕಿರಿಯ ತಾಯಂದಿರು ವಯಸ್ಸಿಲ್ಲದವರು ಬೇಸರಿಕೆಯುಳ್ಳವರು ಅನುಭವ ಸಾಲದವರು, ಮುದ್ದಿನಿಂದ ಮಕ್ಕಳ ಚೇಷ್ಟೆ ತುಂಟತನಗಳನ್ನು ಹೆಚ್ಚಿಸುವವರು. ಈಗ ಹಿರಿಯ ಕಿರಿಯ ಹೆಂಗಸ

ಎಲ್ಲರೂ ಅವನಿಗೆ ಸಹಾಯ ಮಾಡಲು ಸಿದ್ಧರಿದ್ದರು ಪರಂತು ಕಿರಿಯ ಹೆಂಗಸರಿಂದ ಹೆಚ್ಚು ಸಹಾಯ ಸಿಗಲಿಲ್ಲ, ಸಹಾನುಭೂತಿಯೇನೋ ಸಿಕ್ಕಿತು.

ಸಹಾಯ ಮಾಡಿದ ಹಿರಿಯ ಹೆಂಗಸರಲ್ಲಿ ಭದ್ರವ್ವನು ಮುಖ್ಯ. ದಾಸನ ಮಂಟಪಕ್ಕೆ ಮೂರನೆಯ ದಿನವೇ ಬಂದಳು ಆಕೆ. ನಿಜವಾದ ಅಕ್ಕರೆಯಿಂದ, ಬೇಸರಗೊಳ್ಳದೆ, ಆಕೆಯು ಪ್ರತಿ ದಿನವೂ ಹೋಗಿ ಅವನಿಗೆ ನೆರವಾದಳು.

ಬಸಪ್ಪ ಕೊಟ್ಟ ಹಣ ತೋರಿಸಿ, ಅವನು 'ಇದರಿಂದ ಮಗುವಿಗೆ ಎಂತಹ ಬಟ್ಟೆ ತರಲಿ?' ಎಂದು ಕೇಳಿದನು.

'ಏನೂ ತರಬೇಡ, ದಾಸಣ್ಣ. ನಮ್ಮ ಶಿವನದು ಹಳೆ ಅಂಗಿಗಳಿವೆ. ವು ಇರುವಾಗ ದುಡ್ಡು ಏಕೆ ಹಾಳು ಮಾಡಬೇಕು? ಇದು ಬೆಳೆಯುವ ಮಗು. ಈಗಿನ ಬಟ್ಟೆ ಮುಂದಿನ ಬೇಸಿಗೆ ಹೊತ್ತಿಗೆ ಚಿಕ್ಕದಾಗಿಬಿಡುತ್ತೆ' ಎಂದಳು ಭದ್ರವ್ವ.

'ನೀನು ಹೇಳಿದಂತೆ ಮಾಡುವೆನವ್ವ' ಎಂದು ಉತ್ತರಕೊಟ್ಟನು ದಾಸ.

ಮನೆಗೆ ಹೋಗಿ, ಒಂದು ಬಟ್ಟೆ ಗಂಟು ತೆಗೆದುಕೊಂಡು, ಮತ್ತೆ ಆ ದಿನವೇ ಬಂದಳು ದಾಸನ ಮಂಟಪಕ್ಕೆ ಭದ್ರವ್ವ.

ಆ ಗಂಟಿನಲ್ಲಿ ಚೆನ್ನಾಗಿ ಒಗೆದು, ಮಡಿಸಿ, ಜೋಡಿಸಿ, ಎಚ್ಚರಿಕೆಯಾಗಿ ಇಟ್ಟಿದ್ದ ಬಟ್ಟೆಗಳು ತುಂಬಿದ್ದುವು.

ಭದ್ರವ್ವ, ಗಂಟು ಬಿಚ್ಚಿ, ಒಂದೊಂದಾಗಿ ಕ್ರಮದ ಪ್ರಕಾರ, ಅವುಗಳನ್ನು ಹೊರಕ್ಕೆ ಹಾಕುತ್ತಿದ್ದಾಗ ಮಗು ಹೋಗಿ, ತಾನಾಗಿಯೇ ಭದ್ರವ್ವನ ತೊಡೆಯ ಮೇಲೆ ಕುಳಿತು, ಅರ್ಥವಿಲ್ಲದಶಬ್ದ ಮಾಡುತ್ತ, ಬಟ್ಟೆಗಳನ್ನು ಕೈಯಲ್ಲಿ ಹಿಡಿದು ನೋಡಿ ನಲಿಯತೊಡಗಿತು.

ಅದು ಅಮ್ಮಾ ಎಂದತ್ತರೆ ಅದಕ್ಕೆ ತಾಯಿಯ ನೆನಪು ಬಂದಿತೆಂದು ಹೇಳಲಿಕ್ಕಾಗದು, ಹಸಿವೋ ನಿದ್ದೆಯೋ ಎಂದರ್ಥ. ಬೇಕಾದುದು ಸಿಕ್ಕಿದರೆ ಅದು ಆಟವಾಡಿಕೊಂಡು ಸುಮ್ಮನಿರುವುದು. ಸತ್ತವರ ಮಕ್ಕಳು ಇದ್ದವರ ಕೈಯಲ್ಲಿ ಎಂದು ಗಾದೆ. ಅದರ ಜೀವನವು ಬೊಮ್ಮನಹಳ್ಳಿಯಲ್ಲಿ ಬಹಳ ಅಕ್ಕರೆಯಿಂದ ಮೊದಲಾಯಿತು ಹೀಗೆ.

'ಎಂತಹ ಮುದ್ದು ಮಗು! ಸ್ವರ್ಗಲೋಕದ ದೇವತೆ! ಇದರ ಮೈ ತುಂಬ ಮಣ್ಣೇ! ಇದಕ್ಕೆ ಬಟ್ಟೆ ಗತಿಯಿಲ್ಲ. ಅಮ್ಮ ಸತ್ತು ಬೂದಿಯಾದಳು. ದಿಕ್ಕಾರು ಇದಕ್ಕೆ? ಈಶ್ವರನೇ ಎಲ್ಲರಿಗೂ ದಿಕ್ಕು. ಅವನೇ ಇದನ್ನು ಇಲ್ಲಿಗೆ ಕಳಿಸಿದ್ದು. ಅಲ್ಲವೇ ದಾಸಣ್ಣ' ಎಂದಳು ಭದ್ರವ್ವ.

'ಹೌದವ್ವ. ಎಲ್ಲಿಗೋ ನನ್ನ ಹಣ ಹೋಯಿತು. ಎಲ್ಲಿಂದಲೋ ಈ ಮಗು ಬಂತು.' ಎಂದು ದಾಸನು ಏನೋ ಯೋಚಿಸುತ್ತ ಕುಳಿತನು.

ಸಂತೈಸುವ ಧ್ವನಿಯಿಂದ ಆಕೆ 'ಕತ್ತಲು ಬೆಳಕು, ನಿದ್ದೆ ಎಚ್ಚರ, ಮಳೆ ಬೆಳೆ—ಇವು ಒಂದರ ಹಿಂದೆ ಮತ್ತೊಂದು! ನಮಗೆ ಆಗುವದೆಲ್ಲ ಹಾಗೇ. ಹೇಗೆ, ಎಲ್ಲಿಂದ, ಯಾಕೆ—ಯಾರಿಗೆ ಗೊತ್ತು? ನಾವು ಏನು ಮಾಡಿದರೂ ಬಾಳಿನ ಆಗು ಹೋಗುಗಳು ನಡದೇ ಬಿಡುತ್ತವೆ. ದಾಸಣ್ಣ, ನೀನೇ ಇದನ್ನು ಸಾಕುವದು ಸರಿ. ನೀನಿದ್ದ ಕಡೆಗೇ ಇದು ಬಂದಿದೆ. ಇದು ನಿನ್ನದು. ನಿಜ, ಸಾಕುವದು ಕಷ್ಟ. ಆದರೆ ಚಿಂತೆಯಾಕೆ? ದೇವರಿದ್ದಾನೆ. ಬಿಡುವಾದಾಗ ಬಂದು ನನ್ನ ಕೈಲಾದ ಸಹಾಯ ಮಾಡುತ್ತೇನೆ' ಎಂದು ಹೇಳಿದಳು.

ದಾಸನಿಗೆ ಇದರಿಂದ ಬಹಳ ಧೈರ್ಯ ಬಂದಿತು

'ಆಗಲಪ್ಪ. ಹೇಳಿಕೊಡು. ನಾನೇ ಎಲ್ಲ ಮಾಡುತ್ತೇನೆ.' ಎಂದು, ಭದ್ರವ್ವನ ತೊಡೆಮೇಲಿದ್ದ ಮಗುವನ್ನು ನೋಡಿ, ಮಮತೆಯನ್ನು ತೋರುತ್ತ 'ಅದರ ಪ್ರೇಮ ಬೇರೆಕಡೆ ಹೋಗಬಾರದು. ನನ್ನ ಅದರ ಋಣಾನುಬಂಧ ಬೆಳೆಯಲಿ. ಅದೇ ಮುಖ್ಯ' ಎಂದು ತನ್ನ ಇಷ್ಟವನ್ನು ಸೂಚಿಸಿದನು.

'ಖಂಡಿತವಾಗಿ. ಹಾಗೇ ಆಗಬೇಕು. ಗಂಡಸರೂ ಮಕ್ಕಳನ್ನು ಸಾಕಬಲ್ಲರು' ಎನ್ನುತ್ತ ಆಕೆಯು ಬಟ್ಟೆಗಳನ್ನು ತೆಗೆದು 'ಇಲ್ಲಿನೋಡು. ಮೊದಲು ಇದು, ಹೀಗೆ ಹಾಕಬೇಕು. ಆಮೇಲೆ ಅದು, ಹಾಗೆ ಹಾಕಬೇಕು' ಎಂದು ಒಂದೊಂದಾಗಿ ತೋರಿಸಿಕೊಟ್ಟಳು.

ತಲೆ ಬಗ್ಗಿಸಿಅವನು ಶ್ರದ್ಧೆಯಿಂದ ನೋಡಿದನು.

ಆಮೇಲೆ ಅವಳು 'ನೀನೇ ತೊಡಿಸು ನೋಡೋಣ' ಎಂದಳು.

ಮಗುವನ್ನು ಕರೆದುಕೊಳ್ಳಲು, ಅದು ಎರಡು ಕೈಗಳಿಂದಲೂ ಅವನ ತಲೆ ಹಿಡಿದು, ಅವನ ಮುಖಕ್ಕೆ ತನ್ನ ಮುಖವನ್ನಿಟ್ಟು, ಮುದ್ದು ಮುದ್ದಾಗಿ ಏನೋ ಹೇಳತೊಡಗಿತು.

'ನೋಡಿದೆಯ, ದಾಸಣ್ಣ' ಎನ್ನುತ್ತ ಚಾತುರ್ಯದಿಂದ ಆಕೆಯು ನಿನ್ನ ಕಂಡರೆ ಆಗಲೇ ಅದಕ್ಕೆಷ್ಟು ಪ್ರೀತಿ. ಮಗು ನಿಲ್ಲಿಸಿಕೊ ನೀನೇ ಎಲ್ಲ ಮಾಡು' ಎಂದು ಉತ್ತೇಜನ ಕೊಟ್ಟಳು.

ದಾಸನು ಮಗುವನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು, ಕೈ ನಡಗಿಸುತ್ತ, ಭದ್ರವ್ವನು ತೋರಿಸಿಕೊಟ್ಟ ಪ್ರಕಾರ ಬಟ್ಟೆ ತೊಡಿಸಲು ಹೋದನು ಮಧ್ಯೆ ಮಧ್ಯೆ ಅದರ ಮಾತು ಮತ್ತು ಚೇಷ್ಟೆಗಳು. ಅವನ್ನು ನೋಡುತ್ತ, ದಾಸನು ಬಟ್ಟೆ ತೊಡಿಸಿ 'ಆ ಚಿನ್ನ ಹೋಯಿತು. ಈ ಕಂದ ಬಂತು. ಇದೇ ನನ್ನ ಚಿನ್ನ' ಎಂದು ಹೇಳಿಕೊಂಡನು.

ಭದ್ರವ್ವನು 'ಎಷ್ಟು ಬೇಗ ಕಲಿತೆ ನೋಡಿದೆಯೊ?' ಎಂದು ಪ್ರೋತ್ಸಾಹಿಸುತ್ತ 'ಮಗ್ಗದ ಮುಂದೆ ಕೂತಾಗ ಏನು ಮಾಡುವೆ? ದಿನ ದಿನಕ್ಕೆ ಇದರ ಚೇಷ್ಟೆ ಹೆಚ್ಚುವದು ಖಂಡಿತ. ನಾನು ಈಗಲೇ ಹೇಳಿದ್ದೇನೆ ಬೆಂಕಿ ಆರಿಸಿಬಿಡು. ಅಗ್ಗಿಷ್ಟಿಕೆ ಅದರ ಕೈಗೆ ಸಿಕ್ಕಿಸಬೇಡ. ಮುರಿಯುವ, ಒಡೆಯುವ, ಕತ್ತರಿಸುವ ಸಾಮಾನನ್ನು ಸಿಗದಂತಿಡು.' ಎಂದು ಮುಂದಾಗಿಯೇ ಎಚ್ಚರಿಕೆ ಕೊಟ್ಟಳು.

ಕೊಂಚ ಯೋಚಿಸಿ ದಾಸನು 'ನೇಯುವಾಗ ಇದನ್ನು ಉದ್ದವಾದ ದಾರದಿಂದ ಮಗ್ಗಕ್ಕೆ ಕಟ್ಟಿಹಾಕುತ್ತೇನೆ' ಎಂದನು.

'ಸರಿ. ಆಗಬಹುದು. ಇದು ಹೆಣ್ಣು ಮಗು. ಹೆಚ್ಚು ಕಷ್ಟ ಇಲ್ಲ. ಗಂಡಾದರೆ ಬಲು ಕಷ್ಟ. ನನಗೆ ಸಾಕಾಗಿಹೋಗಿದೆ. ನಾಲ್ವರು ಗಂಡು ಮಕ್ಕಳು ನನಗೆ. ಒಂದಾದರೂ ಹೆಣ್ಣಾಗಿದ್ದರೆ ನಾನು ಅದಕ್ಕೆ ನನ್ನ ಕೈ ಕೆಲಸ ಕಲಿಸುತ್ತಿದ್ದೆ. ಚಿಂತೆ ಇಲ್ಲ. ಇದಕ್ಕೇ ಎಲ್ಲಾ ಕಲಿಸಿದರೆ ಆಯಿತು' ಎಂದು ಹೇಳಿದಳು ಭದ್ರವ್ವ.

'ಆದರೆ ಮಗು ನನ್ನದೇ—ಯಾರದೂ ಅಲ್ಲ' ಎಂದು ದಾಸನು ಉತ್ತರವಿತ್ತನು.

ಆಗಲೇ ಅವನಿಗೆ ಮೇಲೆ ಮೇಲೆ ಹೆದರಿಕೆ!

'ಖಂಡಿತವಾಗಿಯೂ ನಿನ್ನದೇ, ಅದಕ್ಕೆ ನೀನೇ ತಂದೆತಾಯಿ ಈಗ ನೀನೇ ಅದಕ್ಕೆ ನಾಮಕರಣ ಮಾಡಿಸು. ಮೊದಲು ಅದನ್ನು ಕರೆದುಕೊಂಡ. ಹೋಗು ಗುಡಿಗೆ. ನೀನು ಇನ್ನೂ ಗುಡಿಗೆ ಬರುತ್ತಲೇ ಇಲ್ಲ' ಎಂದಳು.

ಈ ಮಾತು ಕೇಳುತ್ತಲೇ ಅವನ ಮುಖದಲ್ಲಿ ಚಿಂತೆ ತೋರಿತು.

'ಯಾಕೆ ದಾಸಣ್ಣ? ಇದಕ್ಕೆ ನಾಮಕರಣ ಆಗಿಲ್ಲ. ನೀನೇ ಮಾಡಿಸು. ಜೋಯಿಸರನ್ನು ನಾನೇ ಕೇಳಲೊ?' ಎಂದು ಭದ್ರವ್ವ ಮತ್ತೆ ಪ್ರಶ್ನಿಸಿದಳು.

ಭದ್ರವ್ವನ ಮಾತು ಅರ್ಥವಾಗಲಿಲ್ಲ. ಅವನು ಶಾಂತವಾಗಿದ್ದನು. ಉತ್ತರ ಬರದಿರಲು ಅವಳು ಮೇಲೆ ಮೇಲೆ ಅದೇ ಪ್ರಶ್ನೆಯನ್ನು ಕೇಳಿದಳು.

'ನಾಮಕರಣ! ಅದು ಬೇಕೆ ಈಗ? ಅದಿಲ್ಲದಿದ್ದರೆ ಕೆಟ್ಟದ್ದೆ?' ಎಂದು ದಾಸನು ವಿಚಾರಿಸಿದನು.

'ಶಿವಶಿವ! ಏನು ದಾಸಣ್ಣ? ನಿನಗೆ ನಾಮಕರಣ ಆಗಿರಲಿಲ್ಲವೆ? ಮಂತ್ರ, ಜೋಯಿಸರು, ಶಾಸ್ತ್ರ—ಇದೆಲ್ಲ ಹೊಸದೊ? ನಾಮಕರಣ ಆದರೆ ಒಳ್ಳೆಯದು' ಎಂದಳು.

'ಸರಿ ನಿನ್ನ ಮಾತೇ ಸಾಕು. ಮಗುವಿಗೆ ಆಗಬೇಕಾದ್ದೆಲ್ಲ ಆಗಲಿ' ಎಂದು ಉತ್ತರವಿತ್ತನು ದಾಸ.

'ಹಾಗಾದರೆ ಮಗುವಿನ ಹೆಸರು? ಜೋಯಿಸರನ್ನೂ ಕೇಳೋಣ. ನಿಮ್ಮ ತಾಯಿ ಹೆಸರೇನು?' ಎಂದು ಮತ್ತೆ ಕೇಳಿದಳು ಭದ್ರವ್ವ.

'ಅವರ ಹೆಸರು ಗೌರಿ. ಗೌರಕ್ಕ ಎನ್ನುತ್ತಿದ್ದೆವು.' ಎಂದನು ದಾಸ.

ಆ ಹೆಸರೇ ಚೆನ್ನಾಗಿದೆ. ಸಿದ್ಧಮಾಡಿಕೊಳ್ಳೋಣ. ಜೋಯಿಸರ ಕೈಯಲ್ಲೇ ನಾಮಕರಣ ಮಾಡಿಸುವ' ಎಂದಳು.

ಇಷ್ಟು ಹೊತ್ತಿಗೆ ಕತ್ತಲಾಗುತ್ತ ಬಂದಿತು. ಭದ್ರವ್ವನು ಮನೆಗೆ ಹೋದಳು. ಮಗುವನ್ನು ದಾಸನು ಬಹಳ ಪ್ರೇಮದಿಂದ ಸಲಹತೊಡಗಿದನು.

ಇದಾದ ಮರುದಿನಕ್ಕೆ ಭಾನುವಾರ. ಪ್ರಶಸ್ತವಾದ ದಿನ. ಆದಿನ ನಾಮಕರಣವೆಂದು ಗೊತ್ತಾಯಿತು. ಭದ್ರವ್ವ ಮುಂದಾಗಿ ಬಂದು ಎಲ್ಲವನ್ನೂ ಸಿದ್ಧಪಡಿಸಿದಳು. ಜೋಯಿಸರು ಸಕಾಲಕ್ಕೆ ಬಂದರು. ಮಗುವಿಗೆ 'ಗೌರಿ' ಎಂದೇ ನಾಮಕರಣವಾಯಿತು. ಅದೇ ದಿನ ದಾಸನು ಗೌರಿ

ಯೊಡನೆ ಗುಡಿಗೆ ಹೋಗಿ ಪೂಜೆಮಾಡಿಸಿಕೊಂಡು ತೀರ್ಥ ಪ್ರಸಾದಗಳ ಸಹಿತ ಹಿಂದಿರುಗಿದನು.

ಈಗ ದಾಸನು ಗುಡಿಗೆ ಹೋದುದು ಅಭೂತಪೂರ್ವವಾದ ಸಂಗತಿಯಾಗಿದ್ದಿತು ಅವನು ಗುಡಿಗೆ ಹೋದುದು ಇದೇ ಮೊದಲನೆಯ ಬಾರಿ. ಇಷ್ಟು ವರ್ಷಗಳಾದರೂ ಅವನು ಗುಡಿಗೆ ಹೋಗಿರಲಿಲ್ಲ. ಹಣ ಹೋದ ಮೇಲೆ ಊರಿನವರು ಅವನು ಗುಡಿಗೆ ಬರುವುದು ಒಳ್ಳೆಯದೆಂದು ಹೇಳಿದ್ದ ಉಪದೇಶಗಳೆಲ್ಲವೂ ವ್ಯರ್ಥವಾಗಿದ್ದುವು.

ಅವನು ಹುಟ್ಟಿದ ಊರಾದ ಗೋಪಾಲಪುರಕ್ಕೂ ಈಗ ವಾಸಿಸುವ ಬೊಮ್ಮನಹಳ್ಳಿಗೂ ಸ್ವಲ್ಪ ಮತಭೇದವಿದ್ದತು. ಗೋಪಾಲಪುರದಲ್ಲಿ ವೈಷ್ಣವ ಮತದ ಪ್ರಾಬಲ್ಯ ಹೆಚ್ಚು. ಬೊಮ್ಮನ ಹಳ್ಳಿಯಲ್ಲಿ ಅದು ಕಡಮೆ. ದಾಸನಿಗೆ ಭಜನೆ ಮಂದಿರಕ್ಕೆ ಹೋಗಿ ಅಭ್ಯಾಸವೇ ಹೊರತು ಗುಡಿಗೆ ಹೋಗಿ ಅಭ್ಯಾಸವಿರಲಿಲ್ಲ. ಅಲ್ಲಿ ಅವನಿಗೆ ಕಬೀರ ಪಂಥದ ಸಂಬಂಧ ಹೆಚ್ಚು. ಬೊಮ್ಮನ ಹಳ್ಳಿಯಲ್ಲಿ ಇಂತಹ ಸಂಪರ್ಕ ತೀರ ಅಭಾವ. ಅಲ್ಲದೆ ಅವನು ಇಲ್ಲಿಯ ಜನರೊಡನೆ ಉದ್ಯೋಗ ನಿಮಿತ್ತ ಹೊರತು ಇತರ ವ್ಯವಹಾರಗಳ ನಿಮಿತ್ತ ಸೇರುತ್ತಿರಲಿಲ್ಲ. ಹಣ ಹೋದಮೇಲೆ ಅವನಿಗೂ ಬೊಮ್ಮನಹಳ್ಳಿಯ ಜನರಿಗೂ ಹೊಸ ಸಂಬಂಧ ಹುಟ್ಟಿ ಈಗ ಗೌರಿಯ ದೆಸೆಯಿಂದ ಆ ಸಂಬಂಧ ನಿಕಟವಾಗಿ ಹೆಚ್ಚಿತು. 'ಜನದೊಡನೊಂದಿದ್ದು ಬಾಳ್ವನೇ ಸತ್ಪುರುಷಂ'. ಅದು ದಾಸನ ಬಾಳಿನಲ್ಲಿ ಅತಿಶಯವಾಗಿ ಸಾರ್ಥಕವಾಯಿತು.

——:o:——

## ೧೬

# ಗೌರಿಯ ಬೆಳೆವಣಿಗೆ

ದಿನಗಳು ಕಳೆದುವು. ವಾರಗಳು ಉರುಳಿದುವು. ವರ್ಷವೂ ತುಂಬಿತು. ಗೌರಿ ಬಳೆಯುತ್ತ ಬಂದಳು. ಅವಳು ಬಳೆದ ಹಾಗೆಲ್ಲ ದಾಸನಿಗೂ ಊರಿಗೂ ಹೊಸ ಸಂಬಂಧಗಳು ಉಂಟಾದುವು ಅವನು ಈಗ ಜನರ ಜೀವನವನ್ನು ಹಿಂದಿನಂತೆ ನಿಷೇಧಮಾಡದೆ ಅದರೊಡನೆ ಬೆರೆಯಲು ಉಪಕ್ರಮಿಸಿದನು.

ನೇದು ಹಣಗಳಿಸುವುದಕ್ಕೂ ಮಗು ಸಲಹಿ ಕಲಿಸುವುದಕ್ಕೂ ಬಹಳ ಅಂತರ. ಚಿನ್ನ ಹೆಚ್ಚಬೇಕಾದರೆ ಹಗಲೂ ಇರುಳೂ ಒಂದೇಕಡೆ ಕುಳಿತು ಮಗ್ಗದ ಮುಂದೆ ಕಣ್ಣಲ್ಲಿ ಕಣ್ಣಿಟ್ಟು ನೇಯುತ್ತ ಸಂಪಾದಿಸಿದ ಚಿನ್ನವನ್ನು ಕತ್ತಲಲ್ಲಿ ಜನರು ಇಲ್ಲದ ಎಡೆ ಹೂತಿಟ್ಟು, ಒಬ್ಬನೇ ಸದಾ ಕಾವಲಿದ್ದರೆ ಸಾಕು. ಮಗುವನ್ನು ಸಾಕಿ ಕಲಿಸಬೇಕಾದರೆ ಹಾಗಲ್ಲ ಮಗು ಬಳೆದ ಹಾಗೆಲ್ಲ ಹೊಸ ಅನುಭವಗಳು ಸೇರುತ್ತವೆ; ಇಷ್ಟಾನಿಷ್ಟಗಳೂ ಕುಂದು ಕೊರತೆಗಳೂ ಬೇಕು ಬೇಡಗಳೂ ಹೆಚ್ಚುತ್ತವೆ. ಮಗುವಿನ ಬೆಳೆವಣಿಗೆಗೆ ಬೇಡದುದೇ ಇಲ್ಲ. ಅನ್ನಬಟ್ಟೆಗಳಿರಲಿ. ಅವು ಇಲ್ಲದಿದ್ದರೆ ಸರ್ವಥಾ ಆಗದು. ಬೆಳಕು, ಆಟ ಪಾಟ, ಹಕ್ಕಿಯ ಗೀತೆ, ಬಣ್ಣ ಬಣ್ಣದ ಹಣ್ಣು ಹೂಗಳು, ಸಜೀವವಾದ ಚೈತನ್ಯವುಳ್ಳ ದನ ಕರು ಮೃಗಗಳು, ಹೊಸ ನೋಟ ಚೇಷ್ಟೆ ಗಳು, ಮಕ್ಕಳು, ಮಂದಿ ಮುಂತಾದ ಅನೇಕಾನೇಕ ಸಾಧನ ಸಮೂಹ ಬೇಕು. ಒಂದೇ ಮಾತಿನಲ್ಲಿ ಜೀವನದ ಎಲ್ಲ ಪದಾರ್ಥಗಳೂ ಕಷ್ಟಸುಖ ಗಳೂ ಅನುಭವಗಳೂ ಸೇರಿದರೇ ಲೌಕಿಕ ಜ್ಞಾನ. ಸಕಲ ಸಾಧನಗಳೂ ಸರಿಯಾಗಿ ಸಂಯೋಗವಾಗದಿದ್ದರೆ ಬೆಳವಣಿಗೆಯು ತೃಪ್ತಿಕರವಾಗಿರದು.

ಗೌರಿಯು ಊರಿನವರ ಮನಸ್ಸನ್ನೇ ಆಕರ್ಷಿಸುತಿದ್ದಳು. ಅಲ್ಲಿನ ಇಡೀ ವಾತಾವರಣದಿಂದ ಅವಳ ಬೆಳವಣಿಗೆಯು ಮುಂದುವರಿಯುತ್ತಿದ್ದಿತು. ಅವಳ ಪರಿಣಾಮ ದಾಸನ ಮೇಲಂತೂ ಅಷ್ಟಿಷ್ಟಲ್ಲ.

ದಾಸನ ರೀತಿನೀತಿಗಳಲ್ಲಿ, ಇಷ್ಟಾನಿಷ್ಟಗಳಲ್ಲಿ, ಜೀವನ ಉದ್ಯೋಗಗಳಲ್ಲಿ ಅನೇಕ ಮಾರ್ಪಾಡುಗಳಾದುವು. ರಾತ್ರಿಯ ಹೊತ್ತಿನಲ್ಲಿ ನೇಯುವುದು ತಪ್ಪಿತು. ಹಗಲು ಹೊತ್ತಿನಲ್ಲಿ ನೇಯುವುದನ್ನೇ ಅವನು ಕಡಮೆ ಮಾಡಿದನು. ಗೌರಿಗೋಸ್ಕರ ಅವನ ಕೆಲಸವೇ ಒಮ್ಮೊಮ್ಮೆ ನಿಂತು ಹೋಗುತ್ತಿದ್ದಿತು. ಹಿಂದೆ ಅವನು ಹಬ್ಬಗಳಲ್ಲಿಕೂಡ ಕೆಲಸ ಬಿಡುತ್ತಿರಲಿಲ್ಲ. ಈಗ ಅವನಿಗೆ ದಿನ ದಿನವೂ ಹಬ್ಬವೇ. ಬೆಳಕೂ ಬಿಸಲೂ ಹಿತವಾಗಿದ್ದಾಗ ಅವನು ಮಗುವಿನೊಡನೆ ಮಂಟಪದ ಆಚೆ, ಕುಳಿಯ ಮಗ್ಗುಲಲ್ಲಿ, ಹೂಗಳನ್ನು ತೋರಿಸುತ್ತ, ದನಕರುಗಳನ್ನು ಕರೆಯುತ್ತ, ಅವರಿವರೊಡನೆ ಹರಟುತ್ತ, ಅಲ್ಲಿಂದಿಲ್ಲಿಗೆ ಮಗುವನ್ನು ಹೆಗಲಮೇಲೆ ಹೊರುತ್ತ, ಕಣ ದೊಡ್ಡಿ ಆಲೆ ಮನೆಗಳಿಗೆ ಹೋಗುತ್ತ, ನಿರಾತಂಕವಾಗಿ ಕಾಲ ಕಳೆಯುವನು. ಒಂದು ದಿನ ಸಂಜೆ, ಒಂದು ದಿನ ಮಧ್ಯಾಹ್ನ, ಮನ ಬಂದಾಗ, ಹಿತ ತೋರಿದಲ್ಲಿಗೆ ಮಗು ಕರೆದುಕೊಂಡು ಹೋಗುವನು. ಎಲ್ಲಿಗೂ ಹೋಗದಿದ್ದ ದಾಸನು ಈಗ ಎಲ್ಲೆಲ್ಲಿಯೂ ಇರುವನು.

ಮಗು ಹಚ್ಚನೆಯ ಹುಲ್ಲುಗಾವಲಲ್ಲಿ ಕೂತು, ಸೊಪ್ಪು ಸದೆ, ಹೂ ಹೀಚು, ಕುರಿಮೇಕೆ, ನೊಣದುಂಬಿ, ಸೂರ್ಯಚಂದ್ರ, ಹಕ್ಕಿಚುಕ್ಕೆ, ಬರುವವರು ಹೋಗುವವರು—ಎಲ್ಲರೊಡನೆ ಮಾತಾಡುವುದು. ಕಂಡುದುದನ್ನೆಲ್ಲ ಕೇಳಿ ಮಗು ಕೈ ಚಾಚುವುದು. ಬೇಕಿರಲಿ, ಬೇಡದಿರಲಿ, ಇಷ್ಟಪಟ್ಟರೆ ಸಾಕು, ಕಣ್ಣಿಗೆ ಬಿದ್ದರೆ ಸಾಕು, ಅಪೇಕ್ಷಿಸುವುದು. ಎಲ್ಲೆಲ್ಲಿಯೂ ಸುತ್ತಬೇಕೆನ್ನುವುದು.

> 'ಇಡೆ ತೊಟ್ಟಿಲಿಲ್ಲಾಡಿಸುವರಿಲ್ಲ ನಿನಗೆ ಪೊಂ।
> ದೊಡಿಗೆಯಿಲ್ಲಿರೆ ನಿಳಯವಿಲ್ಲ ಬಿಡಿದೆರೆವನೀ।
> ರ್ಕುಡಿವಾಲ್ಗೆ ಳಿಣ್ಣೆ ಬೆಣ್ಣೆಗಳಿಲ್ಲ ಲಾಲಿಸಿ ನಲಿವ ತಂದೆ
> ತಾಯ್ಗಳಿಲ್ಲ ॥'

ತಾಯಿ ಬದುಕಿದ್ದಾಗ ಗೌರಿಗೂ ಹೀಗೆಯೇ ಇದ್ದಿತು. ಈಗ ದಾಸನ ಲಾಲನೆಯಲ್ಲಿ ಹೀಗಿರಲಿಲ್ಲ.

ದಾಸನು ಅಸಾಧ್ಯವಾದುದನ್ನೂ ಸಾಧಿಸಿ, ತಾಳ್ಮೆಯಿಂದ ಪ್ರೀತಿಯಿಂದ ಶ್ರದ್ಧೆಯಿಂದ ಎಲ್ಲವನ್ನೂ ಒದಗಿಸಿ ಗೌರಿಯನ್ನು ಸಂತೈಸುವನು:

ಅವಳಿಗೆ ಕಲಿಯಲು ಅವಕಾಶ ಕಲ್ಪಿಸುವನು; ಅವಳ ಸುಖಸಂತೋಷ ವನ್ನು ಹೆಚ್ಚಿಸುವನು. ಅವಳಿಗೆ ಯಾವ ಅರಿಯೂ ಇಲ್ಲ. ಅವಳಿಗೆ ದುಃಖವೇ ತಿಳಿಯದು. ಮೊದಲು ಭದ್ರವ್ವನೇ ಅವಳಿಗೆ ಆಟಕ್ಕೋಸ್ಕರ ಬಣ್ಣದ ಗೊಂಬೆಗಳನ್ನು ತಂದುಕೊಟ್ಟಳು. ಹಾಗೆಯೇ ಇತರರೂ ತಮ್ಮಲ್ಲಿದ್ದ ಸಾಮಾನುಗಳನ್ನು ಗೌರಿಗೆ ಕೊಟ್ಟರು.

ದಿನದಿನಕ್ಕೆ ಮಗುವಿಗೆ ಪ್ರಪಂಚ ಪರಿಚಯ ಹೆಚ್ಚಿದಹಾಗೆಲ್ಲ ದಾಸನಿಗೆ ಪೂರ್ವದ ಜ್ಞಾಪಕ ಹೆಚ್ಚಿತು. ಮಗುವಿನ ಮೈ ಬಳೆದು ಮನಸ್ಸು ಅರಳಿತು. ದಾಸನ ಕೈ ಕಾಲು ಬತ್ತಿ ಆತ್ಮ ವಿಕಸಿತವಾಯಿತು. ಇದು ತಾನೆ ವಯೋಧರ್ಮ—ಜೀವನದ ರಹಸ್ಯ.

ಬಂದಾಗ ಗೌರಿಗೆ ಸುಮಾರು ಒಂದೂವರೆ ವರ್ಷ. ಮೂರು ವರ್ಷ ವಾಗುವುದರೊಳಗಾಗಿ ದಾಸನಿಗೆ ಅವಳನ್ನು ಹಿಡಿದು ಅಂಕೆಯಲ್ಲಿಡುವುದು ಅಸಾಧ್ಯವಾಯಿತು. ಗೌರಿಗೆ ಗೊತ್ತಿಲ್ಲದ ಚೇಷ್ಟೆಯೇ ಇರಲಿಲ್ಲ. ದಾಸನಿಗೆ ಅವಳು ಬಗೆಬಗೆಯಾಗಿ ಹೊಸ ಹೊಸ ತೊಂದರೆಗಳನ್ನು ಲೆಕ್ಕವಿಲ್ಲದಷ್ಟು ಕೊಡುವಳು. ಅವಳಿಂದ ಅವನಿಗೆ ಒಂದು ಕಡೆ ಪ್ರೇಮ, ಒಂದು ಕಡೆ ಬಾಧೆ. ಒಂದಕ್ಕೊಂದು ವಿರೋಧ. ಆದರೆ ಪ್ರೇಮಾಧಿಕ್ಯದಿಂದ ಅವನಿಗೆ ಬಾಧೆಯು ಲೆಕ್ಕಕ್ಕೇ ಬರುತ್ತಿರಲಿಲ್ಲ. ಏನೇ ಆಗಿದ್ದರೂ ಅವನು ಅವಳನ್ನು ನೋಡಿದರೆ ಅಥವಾ ಅಪ್ಪಾ ಎಂದರೆ ಅವನ ಪ್ರೇಮವು ಉಕ್ಕುತ್ತಿದ್ದಿತು.

ಬಾಲಭಾಷೆಯು ಬಹಳ ಅರ್ಥವುಳ್ಳದು ಮತ್ತು ಮನೋಹರ ವಾದುದು. ದಾಸನು ಗೌರಿಯ ಬಾಲಭಾಷೆಯನ್ನು ಬಹಳ ಸಂತೋಷದಿಂದ ಕಲಿತು ಅರ್ಥಮಾಡಿಕೊಳ್ಳುವನು. ಊಟದ ಎಲೆಗೆ 'ಎವೆ' ಎನ್ನುತ್ತಿದ್ದಳು. 'ಒವೆ' ಎಂದರೆ ಅವಳ ಭಾಷೆಯಲ್ಲಿ ಒಲೆ ಅಥವಾ ಒಡವೆ ಎಂದರ್ಥ. ರವೆ ಎನ್ನುವುದಕ್ಕೆ 'ಅವೆ' ಎನ್ನುವಳು. 'ಎವೆ' ಎಂದರೆ ಎಲೆ. ಇದರ ಅರ್ಥ ವನ್ನು ಸ್ಪಷ್ಟಮಾಡಬೇಕಾದರೆ ಬಾಯಿಗೆ ಕೈಯನ್ನಿಟ್ಟು ಊಟ ಮಾಡುವು ದನ್ನು ತೋರಿಸುವಳು. ಒಡವೆ ಎಂಬುದರ ಅರ್ಥವನ್ನು ತಿಳಿಸಬೇ ಕಾದರೆ ಕೊರಳು ಮತ್ತು ಕಿವಿಯನ್ನು ಮುಟ್ಟಿ ಹೇಳುವಳು. 'ಅವೆ' ಎಂದರೆ ರವೆ. ಈ ಪದಾರ್ಥವನ್ನು ತಿಳಿಸಬೇಕಾದರೆ 'ಪಿಟ್ಟು' (ಉಪ್ಪಿಟ್ಟು)

ಎನ್ನುವಳು. ದಾಸನು ಇವುಗಳ ಭೇದಗಳನ್ನೂ ಅರ್ಥಗಳನ್ನೂ ಬಹಳ ಜಾಣತನದಿಂದ ನೋಡಿ ತಿಳಿದುಕೊಳ್ಳುತ್ತಿದ್ದನು.

ಒಮ್ಮೆ ಗೌರಿಯ ಬಾಲ್ಯಚೇಷ್ಟೆಗಳು ಬಹಳ ದುಸ್ಸಹವಾದುವು. ಭದ್ರವ್ವನಿಗೆ ಸಮಯೋಚಿತವಾಗಿ ಅವಳನ್ನು ಶಿಕ್ಷೆಗೆ ಗುರಿಪಡಿಸುವುದು ಅವಶ್ಯಕವೆಂದು ತೋರಿತು. ಒಂದು ಸಲ ಈ ವಿಷಯದ ಪ್ರಸ್ತಾಪ ಬಂದಾಗ 'ದಾಸಣ್ಣ, ಪ್ರೇಮ ಸರಿ. ಆದರೆ ಹೆದರಿಕೆ ಇಲ್ಲದಿದ್ದರೆ ಆಗುವದಿಲ್ಲ. ತುಂಟತನ ಹೆಚ್ಚಾದಾಗ ಮಕ್ಕಳಿಗೆ ಏಟು ಬೀಳುವುದು ಒಳ್ಳೆಯದು. ನೋವು ಕೊಂಚ ಆಗಬೇಕು, ಅಪಾಯ ಆಗಬಾರದು' ಎಂದು ಅವಳು ಶಿಕ್ಷಣನೀತಿಯನ್ನು ಅವನಿಗೆ ಉಪದೇಶ ಮಾಡಿದಳು. ದಾಸನು ಹಾಗೆಯೇ ಮಾಡುತ್ತಿದ್ದನು. ಒಂದೊಂದು ಸಲ ಸ್ವಲ್ಪ ಸ್ವಲ್ಪ ಪ್ರಯೋಜನ ಕಂಡುಬರುತ್ತಿದ್ದಿತು, ಒಂದೊಂದು ಸಲ ಇಲ್ಲ. ಹಾಗೆಯೇ ಭದ್ರವ್ವನೂ ಅವನೂ ಮಾತನಾಡುತ್ತಿದ್ದಾಗ ಕತ್ತಲೆ ಕೋಣೆ ಶಿಕ್ಷೆಯ ಮಾತು ಬಂದಿತು. ದಾಸನಿಗೆ ಅದೇನೆಂಬುದು ತಿಳಿಯಲಿಲ್ಲ ಆಗ ಅವಳು 'ದಾಸಣ್ಣ, ಹೊಡೆಯುವದು ಒಂದೇ ಅಲ್ಲ. ಚೇಷ್ಟೆ ಹೆಚ್ಚಾದಾಗ ಮಕ್ಕಳನ್ನು ಕತ್ತಲೆ ಕೋಣೆಯಲ್ಲಿ ಕೊಂಚ ಹೊತ್ತು ಕೂಡಿ, ಮಾತನಾಡಿಸದೆ ಸುಮ್ಮನೆ ಬಿಟ್ಟಿರುವದು ಒಳ್ಳೆ ಪದ್ಧತಿ. ಶಿವ ಬಹಳ ಚೇಷ್ಟೆ ಮಾಡಿದಾಗ ನಾನು ಹಾಗೆ ಮಾಡುತ್ತಿದ್ದೆ. ಅದರಿಂದ ಪ್ರಯೋಜನ ಇತ್ತು. ಇನ್ನು ಹೀಗೇ ಬಿಟ್ಟುಬಿಟ್ಟರೆ ಗೌರಿ ಕೈಗೆ ಸಿಕ್ಕಳು' ಎಂದು ಅಭಿಪ್ರಾಯಪಟ್ಟಳು. ಕೊನೆಯ ಮಾತು ಕೇಳಿ ದಾಸನಿಗೆ ಕೊಂಚ ಕಳವಳವಾಯಿತು. ಹೊಡೆದು ಬೈದು ದಂಡನೆ ಮಾಡಲು ಅವನಿಗೆ ಇಷ್ಟವೂ ಇರಲಿಲ್ಲ, ಮನಸ್ಸೂ ಬಾರದು. ಕ್ರೂರ ದಂಡನೆಯಿಂದ ಎಲ್ಲಿ ಅವಳಿಗೆ ತನ್ನ ಮೇಲಿನ ಪ್ರೇಮ ಕಡಮೆಯಾದೀತೋ ಎಂಬ ಭಯ. ಅಂತೂ ಇಂತು ಗೌರಿ ದಾಸನನ್ನು ರೇಗಿಸಿ ಕುಣಿಯುವಂತೆ ಮಾಡುತ್ತಿದ್ದಳು.

ಒಂದೇ ಒಂದು ಉದಾಹರಣೆ. ಒಂದು ದಿನ ದಾಸನು ಗೌರಿಯನ್ನು ಮಗ್ಗಕ್ಕೆ ಉದ್ದವಾದ ದಾರದಿಂದ ಕಟ್ಟಿ ತನ್ನ ನೇಯಿಗೆ ಕೆಲಸ ಮೊದಲು ಮಾಡಿದನು. ಆಗ ಅವನಿಗೆ ಮಗ್ಗದ ಮೇಲೆಯೇ ಮನಸ್ಸು, ಕಣ್ಣು. ಮಗ್ಗದ ಮೇಲೆ ಆಗ ಒಂದು ಬೆಲೆಬಾಳುವ ಹೊಸ ಬಟ್ಟೆ ತಯಾರಾಗುತ್ತಿದ್ದಿತು. ಮಗ್ಗದ ಶಬ್ದ. ಗೌರಿ ಪುರೆಯಲ್ಲಿ ಕುಳಿತು ಆಡುತ್ತಿದ್ದಳು.

ಎಷ್ಟು ಹೊತ್ತಾದರೂ ಕಾಣಿಸಲಿಲ್ಲ. ದಾಸನು ಅವಳ ಮೇಲೆಯೂ ಗಮನಿಸದೆ ಕೆಲಸಮಾಡನು. ಈ ದಿನ ಕೆಲಸದ ಆತುರದಲ್ಲಿ ಗಮನ ಸಾಲದು. ಅವನು ಮರೆತು ಕತ್ತರಿಯನ್ನು ಗೌರಿಯ ಕೈಗೆ ಸಿಕ್ಕುವಹಾಗೆ ಇಟ್ಟನು. ಹಿಂದೆ ಅಲ್ಲಿಟ್ಟರೂ ಅವಳಿಗೆ ಅಂದುತ್ತಿರಲಿಲ್ಲ. ಈಗ ಅವಳು ಎತ್ತರವಾಗಿ ದೊಡ್ಡವಳಾಗಿದ್ದುದರಿಂದ ಅಂದಿತು. ಸುಂಡಿಲಿಯಂತೆ ಕಾದಿದ್ದು, ದಾಸನು ಕೆಲಸಮಾಡುತ್ತಿದ್ದಾಗ ಅವನು ಕಾಣದ ಹಾಗೆ ಅದನ್ನು ತೆಗೆದುಕೊಂಡು ಮೊದಲು ಕಟ್ಟಿದ್ದ ದಾರವನ್ನು ಕತ್ತರಿಸಿ ಬಿಡಿಸಿಕೊಂಡಳು. ಅಲ್ಲಿಂದ ಮುಂದೆ ಹಾಗೆಯೇ ಅವಳ ದೃಷ್ಟಿ ಅಲ್ಲಿ ಬಾಗಿಲಿಗೆ ಮರೆಮಾಡಿದ್ದ ತೆರೆಯ ಕಡೆ ಹೋಯಿತು. ಈ ತೆರೆಯಿಂದ ಹೊರಗಿನದು ಕಾಣುತ್ತಿರಲಿಲ್ಲ. ಗೌರಿಗೆ ಅದೊಂದು ಅಡ್ಡಿ. ದಾಸನು ಹೊಸ ಬಟ್ಟೆ ಕತ್ತರಿಸುವುದನ್ನು ಅವಳು ಎಷ್ಟೋ ಸಲ ನೋಡಿದ್ದಳು. ಈಗ ಅವಳಿಗೂ ಬಟ್ಟೆ ಕತ್ತರಿಸಬೇಕೆನ್ನಿಸಿತು. ಕತ್ತರಿಯಿಂದ ತೆರೆ ಬಟ್ಟೆಯನ್ನು ಮನಸ್ಸಿಗೆ ತೋರಿದಂತೆ ಕತ್ತರಿಸಿ ಚೂರು ಮಾಡುತ್ತ ಕುಳಿತಳು. ಅಳುವಿರಲಿಲ್ಲ, ಮಾತಿರಲಿಲ್ಲ. ಕಣ್ಣಿಗೆ ಕಾಣಿಸಲಿಲ್ಲ. 'ಗೌರಿ ಎಷ್ಟು ಜಾಣೆ! ತೊಂದರೆ ಕೊಡುತ್ತಿಲ್ಲ. ಆಡುತ್ತ ಕುಳಿತಿದ್ದಾಳೆ' ಎಂದು ಕೊಂಡು ಅವನು ಕೆಲಸ ಮಾಡಿಕೊಂಡಿದ್ದನು. ಇನ್ನೂ ಹೀಗೆಯೇ ಕೊಂಚ ಹೊತ್ತು ಕಳೆಯಿತು. ಬಗ್ಗಿ ನೋಡಿದರೆ ಗೌರಿ ಕಾಣಿಸಲಿಲ್ಲ. ನೋಡಬೇಕೆನ್ನಿಸಿತು. ಎದ್ದು ಹೋಗಿ ಮುಂದೆ ಹುಡುಕಿದನು. ಅಲ್ಲಿಯೂ ಗೌರಿ ಇರಲಿಲ್ಲ. ದಾರ ಕಿತ್ತು ಬಿದ್ದಿದ್ದಿತು. ಇನ್ನೂ ಮುಂದೆ ಹೋಗಿ ಹೊರಭಾಗದ ಕಡೆ ನೋಡಿದನು. ತೆರೆ ಬಟ್ಟೆಯಲ್ಲಿ ಹೊಸದಾಗಿ ಕಂಡಿ ಕಾಣುತ್ತಿದ್ದಿತು. ಕಂಡಿಯಲ್ಲಿ ಬೆಳಕು. ಅರೆಮುಚ್ಚಿದ್ದ ಬೀದಿಯ ಬಾಗಿಲು ತೆರೆದಿದ್ದಿತು. ಅಲ್ಲಿಯೂ ಗೌರಿ ಕಾಣಿಸಲಿಲ್ಲ. ಭಯಪಡುತ್ತ 'ಗೌರಿ, ಗೌರಿ' ಎಂದು ಕೂಗಿದನು, ಹುಡುಕಿದನು.

ಗೌರಿಯ ಸದ್ದಿರಲಿಲ್ಲ, ಗೌರಿ ಕಾಣಿಸಲಿಲ್ಲ. ಮಂಟಪದ ಹೊರಗೆ ಹೋಗಿ ಸುತ್ತ ನೋಡಿದನು. ಅಲ್ಲಿಯೂ ಗೌರಿ ಇರಲಿಲ್ಲ. ಗಾಬರಿ ಹೆಚ್ಚಿತು. ಅಲ್ಲಿ ಇಲ್ಲಿ ನೀರಿಲ್ಲದ ಸಣ್ಣ ಕುಳಿಗಳಲ್ಲಿ ಹುಡುಕಿದನು. ಅಲ್ಲಿಯೂ ಹುಡುಕಿದನು. 'ಗೌರಿ ಇಲ್ಲ, ಅವಳಿಗೆ ಏನಾಯಿತು! ನೀರಿದ್ದ ದೊಡ್ಡ ಕುಳಿಯೊಳಗೆ ಮಗುಚಿಕೊಂಡಿರಬಹುದೆ?' ಈ ಯೋಚನೆ ಬಂದಮೇಲೆ ದಾಸ

ನಿಗೆ ಭಯ ತಡೆಯಲಾಗಲಿಲ್ಲ. ಕೂಡಲೆ ಮೈ ಬೆವರಿತು. ಕೈ ಕಾಲುಗಳು ನಡುಗತೊಡಗಿದುವು. ಓಡಿಹೋಗಿ ದೊಡ್ಡ ಕುಳಿಯೊಳಗೆ ನೋಡುವುದಕ್ಕೆ ಬಂದನು. ಈ ಮಧ್ಯೆ ಅವನಿಗೆ 'ಅವಳು ಅಲ್ಲಿಗೆ ಹೋಗಿರಲಾರಳು. ಮಗುವು ಓಣಿಗೆ ಹೋಗಿ ಪಕ್ಕದ ಹೊಲದಲ್ಲಿ ಹೂ ನೋಡುತ್ತ ಇರಬಹುದು. ನಾಲ್ಕೈದು ಸಾರಿ ನಾನೇ ಅವಳನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದೆ. ಅಲ್ಲಿಗೆ ಹೋಗಿದ್ದರೆ ಪ್ರಾಣಭಯವಿಲ್ಲ. ಒಂದುವೇಳೆ ಇಲ್ಲಿಗೆ, ದೊಡ್ಡ ಕುಳಿಗೆ ಬಂದಿದ್ದರ.......' ಎಂದು ಬಹಳ ಭಯವಾಯಿತು. ತವಕಪಡುತ್ತ ಕುಳಿಯ ಅಂಚಿಗೆ ಹೋಗಿ ನಿಂತು ನೋಡಿದರೆ ಅಲ್ಲಿ ಗೌರಿ! ನೀರಿನ ತಡಿಯಲ್ಲಿ ತಲೆ ಕುಲಾವಿ ಬಿಚ್ಚಿಕೊಂಡು, ಕೈಲಿ ಒಂದು ಹಳೆ ತೆಂಗಿನ ಚಿಪ್ಪು ಹಿಡಿದುಕೊಂಡು! ಏನೋ ಹೇಳಿಕೊಂಡು, ನೀರೆತ್ತಿ ದನದ ಗೊರಸಿನ ತುಳಿತದಿಂದಾದ ಸಣ್ಣ ಗುಂಡಿಯೊಳಕ್ಕೆ ಸುರಿಯುತ್ತ ಆಡಿಕೊಂಡಿದ್ದಳು! ಬಟ್ಟೆ ಕೈ ಕಾಲುಗಳು ಒದ್ದೆ. ಕಾಲು ತುಂಬ ಮಣ್ಣು. ಪಕ್ಕದಲ್ಲಿಯೇ ನೀರು ಕುಡಿಯುತ್ತ ಒಂದು ಹಸು, ಮೂರು ಕುರಿ, ಒಂದು ನಾಯಿ!

ಗೌರಿ ಜೀವಿತಳಾಗಿ ಸುಖವಾಗಿರುವುದನ್ನು ಕಂಡು ಅವನಿಗೆ ಹಿಡಿಯಲಾರದ ಸಂತೋಷ. ಆಗ ಅವಳನ್ನು ಎತ್ತಿ, ಬಿಗಿದಪ್ಪಿಕೊಂಡು ಎಷ್ಟು ಮುದ್ದಾಡಿದರೂ ಸಾಲದು. ಆಮೇಲೆ ಮನೆಗೆ ಹೋಗಿ ಮೈ ತೊಳೆದು ಬಟ್ಟೆ ಬದಲಾಯಿಸಿದುದಾಯಿತು. ಸ್ವಲ್ಪವಾದರೂ ಕೋಪದ ಗುರುತೇ ಇಲ್ಲ. ಆಗ ಮುಖ, ನಡೆ, ನುಡಿ ಎಲ್ಲದರಲ್ಲಿಯೂ ಪ್ರೇಮ ತುಂಬಿದ್ದಿತು. ಮಹದ್ವಿಪತ್ತು ಪಾರಾಯಿತಲ್ಲ! ಎಂಬ ಹಿರಿಯ ಹಿಗ್ಗಟೆ.

ಆದರೂ ದಾಸನಿಗೆ ಗೌರಿ ಹೆದರುವಂತೆ ಮಾಡಿ ಅವಳಿಗೆ ಬುದ್ಧಿ ಕಲಿಸದಿದ್ದರೆ ಗತ್ಯಂತರವಿಲ್ಲವೆಂಬ ಯೋಚನೆ ಅವನ ತಲೆತುಂಬ ಆಮೇಲೆ ಬರದೆ ಇರಲಿಲ್ಲ. 'ಏನು ಮಾಡಲಿ?' ಎಂದು ಅವನು ಚಿಂತಿಸುತ್ತಿದ್ದಾಗ ಭದ್ರಮ್ಮನ 'ಕತ್ತಲೆ ಕೋಣೆ ಶಿಕ್ಷೆ' ನೆನಪಿಗೆ ಬಂದಿತು. ಇದುವರೆಗೆ ಅವನು ಆ ಶಿಕ್ಷೆಯನ್ನು ಕೊಟ್ಟಿರಲಿಲ್ಲ. ಕೂಡಲೆ ಆ ಶಿಕ್ಷೆಯಿಂದ ಅವಳ ತುಂಟತನವನ್ನು ತಗ್ಗಿಸಬೇಕೆಂದು ಅವನು ನಿಶ್ಚಯಮಾಡಿದನು. ಅವನ ಮಂಟಪದಲ್ಲಿ ಒಂದು ಕಿರುಮನೆ. ಅದನ್ನು ಉಪಯೋಗಿಸುವುದೇ ಕಡಮೆ. ಅದರಲ್ಲಿ ಏನೂ ಇಲ್ಲ. ಸ್ವಲ್ಪ ಕತ್ತಲು, ಕಸ. ಆಗಾಗ ಅವನು ಹೆಚ್ಚಾಗಿದ್ದ ಇದ್ದ

ಲನ್ನು ಅಲ್ಲಿ ಇಡುತ್ತಿದ್ದನು. 'ಅದರೊಳಗೆ ಕೂಡಿ, ಕದ ಮುಚ್ಚಿ, ಮಾತಾಡದೆ ಬಿಟ್ಟರೆ ಗೌರಿಗೆ ಬುದ್ಧಿ ಬಂದೀತು' ಎಂದುಕೊಂಡು, ಅವನು ಅವಳನ್ನು 'ಬಾ ಕತ್ತಲೆ ಕೋಣೆಗೆ. ಆ ಶಿಕ್ಷೆ ನಿನಗಾಗಬೇಕು! ಇನ್ನುಮೇಲೆ ನೀರಿನ ಕುಳಿಗೆ ಹೋಗುವೆಯ?' ಎಂದು ಗದರಿಸಿ, ಆ ಕೋಣೆ ತೋರಿಸಿದನು. ಗೌರಿಗೆ ನಗು, ಭಯವೇ ಇಲ್ಲ. ದಾಸನಿಗೆ ಆಶ್ಚರ್ಯವಾಯಿತು. ಆಮೇಲೆ ಯಾದರೂ ಹೆದರಿಕೆ ಹುಟ್ಟೀತೆಂದು, ಅವನು ಅವಳನ್ನು ಕಿರುಮನೆಹೊಳಕ್ಕೆ ತಳ್ಳಿ ಕದ ಮುಚ್ಚಿದನು. ಗೌರಿ ಅಳಲೇ ಇಲ್ಲ, ಸುಮ್ಮನಿದ್ದಳು. ಕೊಂಚ ಹೊತ್ತಾಯಿತು. ಬಾಗಲು ತಟ್ಟಿ 'ಅಪ್ಪ, ಅಪ್ಪ ತೆಗೆ' ಎಂದು ಕೂಗಿದಳು. ಅವನು ತೆಗೆಯಲಿಲ್ಲ, ಮಾತನಾಡಲಿಲ್ಲ. ಇನ್ನಷ್ಟು ಹೊತ್ತು ಕಳೆಯಿತು. ದಾಸನಿಗೇ ಬಹಳ ಕುತೂಹಲ! ಒಂದು ಸಣ್ಣ ತೂತು ಕದದ ಕೆಳಭಾಗದಲ್ಲಿ. ಅದರಲ್ಲಿ ಅವನು ಬಗ್ಗಿ ನೋಡಿದರೆ ಗೌರಿ ದೂಳಿನ ಮೇಲೆ ಬೆರಳಲ್ಲಿ ತಿದ್ದುತ ಆಟ ಆಡಿ ಕೊಂಡಿದ್ದಳು. ಮತ್ತೆ ಸ್ವಲ್ಪ ಹೊತ್ತು ಬಿಟ್ಟು, ಬಗ್ಗಿ ನೋಡಿ ಹೊರಗಿನಿಂದ ಸದ್ದು ಮಾಡಿದನು. ಆಗ ಅವಳು ಬಾಗಲಿಗೆ ಬಂದು, ತೂತಿನಲ್ಲಿ ಕಣ್ಣಿಟ್ಟು, ದಾಸನನ್ನು ನೋಡಿ ನಗುತ್ತ 'ಏ! ಏ! ಅಪ್ಪ' ಎಂದು ಕೂಗ ತೊಡಗಿದಳು. ಆಗಲೂ ಅವಳು ಅಳಲಿಲ್ಲ. ಇನ್ನೂ ಆಟವೇ! ಹೆದರಿಕೆಯ ಗುರುತೇ ಕಾಣಿಸದು. ಎಷ್ಟು ಹೊತ್ತಾದರೂ ಮತ್ತೆ ಆಡಿ ಕೊಂಡೇ ಇದ್ದಳು. ಕೊನೆಗೆ ಅವಳಿಗೆ ಬೇಸರವಾಯಿತು! ತೂಕಡಿಕೆ. ನೆಲದ ಮೇಲೆಯೇ ತಲೆಯಿಟ್ಟು ಅಲ್ಲೇ ನಿದ್ದೆ ಮಾಡಿದಳು. ಹೀಗೆ ಈ ಶಿಕ್ಷೆಯೂ ಸರಿಹೋಗಲಿಲ್ಲ.

ದಾಸನಿಗೆ ಇದು ನೋಡಿ ಒಂದು ವಿಧವಾದ ಚಿಂತೆ! ಹಾಗೆಯೇ ಬಿಟ್ಟು ಸುಮ್ಮನಿದ್ದನು ಇನ್ನೂ ಸ್ವಲ್ಪ ಕಾಲ. ಊಟದ ಹೊತ್ತಾಯಿತು. ಗೌರಿಗೆ ಊಟವಾಗಿರಲಿಲ್ಲ. ಗೌರಿಗೆ ಬಿಟ್ಟು ತಾನೊಬ್ಬನೇ ಊಟಮಾಡಲು ಅವನಿಗೆ ಮನವೇ ಬಾರದು. ಶಿಕ್ಷೆಯ ಪರಿಣಾಮ ಅಲ್ಪವೂ ಪ್ರಯೋಜನಕಾರಿಯಾಗಿದ್ದಂತೆ ತೋರಲಿಲ್ಲ. ಅಷ್ಟರಲ್ಲಿ ಎಚ್ಚರಗೊಂಡು ಗೌರಿ ಪುನಃ ಸದ್ದು ಮಾಡಿದುದು ಕೇಳಿಸಿತು. ಕೊನೆಗೆ ಅವನು ತಾನಾಗಿಯೇ ಬಾಗಿಲು ತೆರೆದು ಗೌರಿಯನ್ನು ಹೊರಗೆ ಬಿಟ್ಟನು. ಕೂಡಲೆ 'ಅಪ್ಪ ಅಪ್ಪ ಅಪ್ಪ!' ಎನ್ನುತ್ತ ಅವಳು ಅವನ ಬಟ್ಟೆ ಹಿಡಿದು, ಅವನನ್ನು ಮುದ್ದಾಡತೊಡಗಿದಳು.

ಮೊದಲೇ ಅವನಿಗೆ ಕೋಪವಿರಲಿಲ್ಲ. ಇದೆಲ್ಲ ನೋಡಿ ಅವನ ಪ್ರೇಮ ಹೆಚ್ಚಿ, ತುಂಬ ಮರುಕ ಹುಟ್ಟಿತು. ಅವಳ ಮೈ ಕೈ ಬಟ್ಟೆ ಕಪ್ಪಾಗಿ ಕೊಳೆಯಾಗಿ ಊಟಕ್ಕೆ ಹೊತ್ತಾದುದೇ ಈ ಶಿಕ್ಷೆಯ ಪ್ರಯೋಜನ! ತಿರುಗಿ, ಅವನು ಅವಳ ಮೈ ಕೈ ತೊಳೆದು, ಬೇರೆ ಬಟ್ಟೆ ಹಾಕಿ, ಅನ್ನವಿಟ್ಟನು. ಅವಳಿಗೆ ಹೊಟ್ಟೆತುಂಬಿ ಸಂತೋಷವಾಯಿತು. ಆಮೇಲೆ ಅವನು ಊಟಕ್ಕೆ ಕುಳಿತನು. ಆಗ ಗೌರಿ ಮಗ್ಗುಲಲ್ಲಿ ಕುಳಿತು, ಆಟವಾಡುತ್ತ ಸ್ವಲ್ಪ ಹೊತ್ತಿನ ಮೇಲೆ 'ಅಪ್ಪ, ಅಪ್ಪ, ಅದು ಮನೆ' ಎಂದು ಕತ್ತಲೆ ಕೋಣೆ ತೋರಿಸಿ ನಕ್ಕಳು. ಈ ಶಿಕ್ಷೆಯ ನಿಷ್ಪ್ರಯೋಜನತೆ ಆಗ ಇನ್ನಷ್ಟು ಸ್ಪಷ್ಟವಾಯಿತು. ಮಗುವಿಗೆ ಆಟ, ಮುದುಕನಿಗೆ ಕಾಟ!

ಮಧ್ಯಾಹ್ನ ಭದ್ರವ್ವ ಬಂದಳು ಎಂದಿನಂತೆ. ದಾಸನು ಗೌರಿಯ ಆ ದಿನದ ಚೇಷ್ಟೆಯೆಲ್ಲವನ್ನೂ ಯಥಾವತ್ ವಿವರಿಸಿದನು. ಆಗ ಭದ್ರವ್ವನಿಗೂ ಬಹಳ ಯೋಚನೆ. ಈ ಶಿಕ್ಷೆಯಿಂದ ಶಿವನಿಗೆ ಭಯವಾಗಿ ತನಗೆ ಉಪಯುಕ್ತತೆ ಕಂಡುಬಂದರೂ ಗೌರಿಗೆ ಭಯವಾಗಿ ದಾಸನಿಗೆ ಪ್ರಯೋಜನ ಕಂಡುಬರಲಿಲ್ಲ. ಹೀಗೆಯೇ ಮಾತಾಡಿಕೊಂಡು ಇದ್ದಾಗ ದಾಸನೇ 'ಬಿಡವ್ವ, ಹೋಗಲಿ. ಗೌರಿಗೆ ಹಿಂಸೆ ಕೊಡಲು ನನಗೂ ಇಷ್ಟ ಇಲ್ಲ. ನನಗೆ ಕಷ್ಟ ಆದರೆ ಆಗಲಿ. ಅವಳನ್ನು ಕಣ್ಣಿಟ್ಟು ನೋಡಿಕೊಂಡರಾಯಿತು. ಮಗು ಈಗ. ಮುಂದೆ ಹೀಗೆ ಮಾಡೀತೆ?' ಎಂದನು. ತಲೆದೂಗುತ್ತ, ಭದ್ರವ್ವನು 'ದಿಟ ದಿಟ, ದಾಸಣ್ಣ. ಚಿಕ್ಕತನದಲ್ಲಿ ಹೀಗೆ ಅಷ್ಟೇ. ನಾಯಿ ಕೂಡ ಮರಿಯಾಗಿದ್ದಾಗ ಬಲು ಚೇಷ್ಟೆ ಮಾಡುತ್ತೆ.' ಎಂದು ದಾಸನ ಅಭಿಪ್ರಾಯವನ್ನೇ ಅನುಮೋದಿಸಿದಳು. 'ದಂಡಂ ದಶಗುಣಂ ಭವೇತ್? ಎಂದು ಉಕ್ತಿ. ಇದರ ವಿಪರೀತಾರ್ಥದಿಂದ ಅನಿಷ್ಟ ಉಂಟಾಗಬಾರದು!'

ಒಟ್ಟಿನಲ್ಲಿ ಹೀಗೆ ಗೌರಿ ಶಿಕ್ಷೆ, ಭಯ ಮುಂತಾದುವು ಹೆಚ್ಚಾಗಿಲ್ಲದೆ ಪ್ರೇಮ ಲಾಲನ ಪಾಲನ ದಿಂದ ಬಳೆದಳು. ದಿನದಿನಕ್ಕೆ ಅವಳ ಚೇಷ್ಟೆ ತಾನಾಗಿಯೇ ಕಡಮೆಯಾಯಿತು. ದಾಸನ ಕ್ಷಮೆಗೆ ಸಮವೇ ಇರಲಿಲ್ಲ. ಅವನ ಮಂಟಪವೇ ಅವಳಿಗೆ ಅರಮನೆ. ಅವನ ಪ್ರೇಮವೇ ಅವಳ ಸೌಭಾಗ್ಯ. ಯಾವ ಕೊರತೆಯೂ ಅವಳಿಗೆ ತೋರದು. ಅವಳಿಗೆ ದಾಸನ ಮೇಲಿದ್ದ

ಪ್ರೇಮವೂ ಕಡಮೆಯಿರಲಿಲ್ಲ. ಈಗ ಗೌರಿಯ ಆರೋಗ್ಯ ಅಭಿವೃದ್ಧಿ ಆನಂದವೇ ದಾಸನ ಮುಖ್ಯಧ್ಯೇಯಗಳು.

ಊರಿನಲ್ಲಿ ಒಂದು ಸಲ ನಾಯಿ ಕೆಮ್ಮಲು, ಇನ್ನೊಂದು ಸಲ ಸಿಡು ಬಿನ ರೋಗ, ಮತ್ತೊಂದು ಸಲ ಆಮಶಂಕೆ ಮುಂತಾದ ವ್ಯಾಧಿಗಳು ಬಂದು ಹೋದುವು. ದೈವಾನುಗ್ರಹದಿಂದ ಗೌರಿ ಸುಖವಾಗಿ ಪಾರಾದಳು. ಬಸವನ ಹಿಂದೆ ಬಾಲ. ದಾಸನ ಹಿಂದೆ ಗೌರಿ. ಅವಳು ಸದಾ ಅವನೊಡನೆಯೇ ಇರುತ್ತಿದ್ದಳು. ಮಂಟಪದ ಬಳಿಗೆ ಬಂದವರೆಲ್ಲರೂ ಇಣಿಕಿ ನೋಡಿ ಗೌರಿಯೊಡನೆ ಆಡುವರು. ಒಂದೊಂದು ಸಲ ಊರಿನವರು ಬಂದು ಅವಳನ್ನು ಒಯ್ದು ಹೋಗಿ ಆಮೇಲೆ ತಂದು ಬಿಡುವುದೂ ಉಂಟು. ಅವಳಿಗೆ ಯಥೇಚ್ಛವಾಗಿ ಗೊಂಬೆ, ಹಣ್ಣು, ತಿಂಡಿ, ಬಟ್ಟೆ ಮುಂತಾದುವು ಸಿಕ್ಕಿದುವು. ಈಗ ಅವಳ ಪ್ರಭಾವದಿಂದ ದಾಸನ ಮುಖದಲ್ಲಿ ಸದಾ ನಗು, ಸ್ನೇಹ, ಮೃದು ಭಾಷಣ. ಊರಿನವರಿಗೇ ದಾಸನು ಬಹಳ ಪ್ರಿಯನಾದ ವ್ಯಕ್ತಿಯಾದನು.

ಗೌರಿಯ ಜತೆಗೆಂದು ಭದ್ರಮ್ಮನು ಶಿವನನ್ನು ಆಗಾಗ ಕರೆತರುವಳು ಅವರಿಬ್ಬರಿಗೂ ಬಹಳ ಹೊಂದಿಕೆ. ಊರಿನ ಮಕ್ಕಳೂ ಗೌರಿಯೊಡನೆ ಆಡಲು ಬರುವರು ಗೌರಿಯೂ ಎಲ್ಲರೊಡನೆ ಸೇರಲು ಹೋಗುವಳು. ಗೌರಿಯನ್ನು ಊರಿಗೆ ದಾಸನೇ ನೆಪನೆಪದಿಂದ ಕರೆದುಕೊಂಡು ಬರುವನು. ಅವನ ಈಗಿನ ಜೀವನವೆಲ್ಲವೂ ಗೌರಿಯ ಆಧಾರದ ಮೇಲೆಯೇ ನಿಂತಿದ್ದಿತು. ಹಿಂದೆ ಸದಾ ಕೆಲಸ ಮಾಡಿ ಮಾಡಿ, ಹಣ ಕೂಡಿಟ್ಟು, ಕರೆಕರೆಪಡುತ್ತ ಜೇಡನಂತೆ ಕೂತಿದ್ದ ಜಿಪುಣ ದಾಸನಿಗೂ ಈಗ ಕೆಲಸ ತಕ್ಕಷ್ಟು ಮಾಡಿ, ಗೌರಿಗಾಗಿ ವೆಚ್ಚಮಾಡುತ್ತ ಜೀವನದ ಎಲ್ಲ ಹವ್ಯಾಸಗಳನ್ನೂ ಕಟ್ಟಿಕೊಂಡು, ನಲವಿನಿಂದ ಓಡಾಡುವ ಪ್ರೇಮಪೂರಿತ ದಾಸನಿಗೂ ಎಷ್ಟು ಅಂತರ! ಮಕ್ಕಳಿಗಿಂತ ಮಿಗಿಲಾದುದಿಲ್ಲ ಮನುಷ್ಯಮಾತ್ರರಿಗೆ! ಮಕ್ಕಳಿಲ್ಲದ ಮನೆ ಮಸಣ. ಶುದ್ಧ ಪ್ರೇಮದ ಪ್ರಭಾವವು ಹೆಚ್ಚಿನದು.

——:o:——

೧೭

# ಚೆನ್ನಮ್ಮನ ಯಾಜಮಾನ್ಯ

ಗೌರಿಯ ಬೆಳವಣಿಗೆಯಲ್ಲಿ ದಾಸನಿಗೆ ಆಸಕ್ತಿ ಇದ್ದುದು ಸರಿಯಷ್ಟೆ. ಅವಳ ಬೆಳವಣಿಗೆಯಲ್ಲಿ ಹಾಗೆ ಇನ್ನೊಬ್ಬನಿಗೂ ಆಸಕ್ತಿ. ಅವನಾರು? ಬಸಪ್ಪ. ಆದರೂ ಬಸಪ್ಪನು ತನ್ನ ಆಸಕ್ತಿಯನ್ನು ಹೆಚ್ಚಾಗಿ ಹೊರಗೆ ತೋರಿಸುತ್ತಿರಲ್ಲಿಲ್ಲ ಹಾಗೆ ತೋರಿಸಿದರೆ ಜನರು ಹೆಗ್ಗಡೆ ಹಿರಿ ಮಗನಿಗೂ ದಾಸನ ಸಾಕು ಮಗಳಿಗೂ ಸಂಬಂಧವೇನು ಎಂದು ಕೇಳುತಿದ್ದರು. ಆದುದರಿಂದ ಅವನು ಎಲ್ಲರಂತೆಯೇ ಗೌರಿಯ ವಿಷಯದಲ್ಲಿ ಪ್ರೀತಿಯನ್ನು ತೋರಿಸುತ್ತಿದ್ದನು. ಆದರೆ ಅವನಿಗೆ ಮನಸ್ಸಿನಲ್ಲಿ ಇನ್ನೂ ಹೆಚ್ಚಿನ ಪ್ರೀತಿಯಿದ್ದಿತು. ಏನಾದರೂ ನೆಪದಿಂದ ಅವನು ದಾಸನ ಮನೆಗೆ ಬಂದು ಗೌರಿಯನ್ನು ನೋಡಿ ಅವಳಿಗೆ ಬಗೆ ಬಗೆಯಾದ ಬಹುಮಾನಗಳನ್ನು ಕೊಡುವುದುಂಟು. ಅವನಿಗೆ ದಿನ ಕಳೆದ ಹಾಗೆಲ್ಲ ಹೆಚ್ಚು ಹೆಚ್ಚು ಪ್ರೀತಿಯನ್ನು ತೋರಬೇಕೆನಿಸಿತು. ಆದರೆ ಅವನಿಗೆ ಗೌರಿಯ ಜನ್ಮಸಿದ್ಧವಾದ ಅಧಿಕಾರವೆಲ್ಲವನ್ನೂ ಕೊಡಲು ಇಷ್ಟವಿದ್ದಿತೋ? ಅವನು ಆಗ ಅದಕ್ಕೆ ಹಿಂಜರಿಯದೆ ತಾನು ಯಾರೆಂಬುದನ್ನು ತಿಳಿಸಿ ಮುಚ್ಚುಮರೆ ಇಲ್ಲದೆ ಪ್ರೀತಿಯನ್ನು ತೋರಲು ಸಿದ್ಧನಿದ್ದನೆ? ಅದಕ್ಕೆ ಅನುಕೂಲವಿಲ್ಲವೆಂಬ ಚಿಂತೆ ಅವನಿಗೆ ಆಗ ಇರಲಿಲ್ಲವೊ? ಈ ಪ್ರಶ್ನೆಗಳಿಗೆ ಉತ್ತರ ಕೊಡಲು ಕಷ್ಟ. ಅವನು ಸಿದ್ಧನಿರಲಿಲ್ಲ. ಆದರೆ ಚಿಂತೆ ಮಾತ್ರ ಸ್ವಲ್ಪ ಇದ್ದಿತು ಎಂದು ಹೇಳಬಹುದು. ಸುಖಸಂತೋಷಗಳಿಗೆ ಧನವೊಂದೇ ಮುಖ್ಯವಲ್ಲ. ಧನಿಕರ ಮಕ್ಕಳೆಲ್ಲರೂ ಸಂತೋಷಚಿತ್ತರೆಂದು ಹೇಳಲಾಗದು. ಬಡವರ ಮಕ್ಕಳೂ ಧನಿಕರ ಮಕ್ಕಳಿಗಿಂತ ಸಂತೋಷವಾಗಿ ಇರುವುದು ಉಂಟು. ಅದಕ್ಕೆ ಕಾರಣ?

ಬಸಪ್ಪನಿಗೆ ಇದ್ದ ಚಿಂತೆಗಳು ಕಡಮೆಯಾದುದು ನಿಜ. ಮಾಯಿ ಸತ್ತಳು. ಅವಳಿಗೂ ಅವನಿಗೂ ಇದ್ದ ಸಂಬಂಧ ನಾಗಣ್ಣನಿಗೆ ಹೊರತು ಮತ್ತಾರಿಗೂ ಗೊತ್ತಿರಲಿಲ್ಲ. ನಾಗನು ಬಂದಾಗ ಅವನಿಗೆ ಇದನ್ನು ಬಹಿರಂಗಕ್ಕೆ ತರದ

ಹಾಗೆ ಮಾಡಿದರಾಯಿತು. ಆದರೆ ಕಾಲ ಕಳೆಯುತ ಹೋದಷ್ಟು ಬಸಪ್ಪನ ಪಶ್ಚಾತ್ತಾಪವೂ ಹೆಚ್ಚುತ್ತ ಹೋಯಿತೆನ್ನಬಹುದು. ಕಾರಣ ? ಸತ್ಯವನ್ನು ಮರೆಯಿಸಿ, ಕರ್ತವ್ಯವನ್ನು ಬಿಟ್ಟು ಅವನು ಸ್ವಸುಖಕ್ಕೇ ಗಮನ ಕೊಟ್ಟುದು. ಬೇರೆ ಹವ್ಯಾಸಗಳಲ್ಲಿದ್ದರೂ ಒಂಟಿಯಾಗಿ ಅವನು ಮನದಲ್ಲಿಯೇ ಕೊರಗುತ್ತ ತಾನೇ ನಿಂದೆಯನ್ನು ಬಹುವಾಗಿ ಮಾಡಿಕೊಳ್ಳುತಿದ್ದನು.

ಊರಿನಲೆಲ್ಲ ವದಂತಿ ಇದ್ದಂತೆ ಹೆಗ್ಗಡೆ ಸೋದರ ಸೊಸೆ ಮದುವೆ ಯಾದ ಒಂದು ವಾರದಲ್ಲಿಯೇ ಬಸಪ್ಪನಿಗೂ ಚೆನ್ನಮ್ಮನಿಗೂ ಮದುವೆಯಾ ಯಿತು. ವೈಭವವಿದ್ದರೂ ವಿಶೇಷಗಳೇನೂ ಇರಲಿಲ್ಲ. ಎಲ್ಲರೂ ಚೆನ್ನಮ್ಮ ನಂತಹ ಹೆಣ್ಣಿಲ್ಲವೆಂದು ಕೊಂಡಾಡಿದರು. ಅವಳ ಕೈಯನ್ನು ಹಿಡಿ ಯುವ ಸುಯೋಗ ಸಿಕ್ಕಿದುದಕ್ಕಾಗಿ ಬಸಪ್ಪನಿಗೆ ಅತ್ಯತಿಶಯವಾದ ಸಂತೋಷ. ಚೆನ್ನಮ್ಮನ ಯಾಜಮಾನ್ಯ ಮೊದಲಾದ ಮೇಲೆ ಹೆಗ್ಗಡೆ ಮನೆ ವಾರ್ತೆ ಹೊಸ ರೂಪವನ್ನು ಹೊಂದಲು ಪ್ರಾರಂಭವಾಯಿತು.

ನಾಗಣ್ಣ ಬರಲಿಲ್ಲ. ಅವನು ಎಲ್ಲಿಗೆ ಹೋಗಿದ್ದಾನೆ, ಯಾವಾಗ ಬರುವನು ಎಂಬುದು ಯಾರಿಗೂ ತಿಳಿಯದು. ಬಂದರೂ ಈಗ ಬಸಪ್ಪನಿಗೆ ಭಯವೇನು ? ಮನೆಯಲ್ಲಿರಲು ಇಷ್ಟವಿಲ್ಲದೆ ಸೈನ್ಯಕ್ಕೆ ಸೇರಿಕೊಂಡು ಅವನು ದೇಶಾಂತರ ಅಲೆಯುತ್ತಿರಬಹುದೆಂದು ಕೆಲವರು ಊಹಿಸಿದರು. ನಿಜ ಸ್ಥಿತಿ ಯಾರಿಗೂ ತಿಳಿಯದು. ತಿಳಿಯಲಿಕ್ಕೆ ಪ್ರಯತ್ನಪಡಲು ಅಕ್ಕ ರೆಯೂ ಇಲ್ಲ, ಧೈರ್ಯವೂ ಸಾಲದು. ಬಹಳ ವರ್ಷಗಳು ಕಳೆದರೂ ಅವನು ಬರಲಿಲ್ಲ. ಸತ್ತಂತೆಯೇ ಜನರು ಅವನನ್ನು ಭಾವಿಸಿದರು.

ಚೆನ್ನಮ್ಮ ಬಂದ ಮೇಲೆ ಬಸಪ್ಪನ ಮುಖವು ಬದಲಾಯಿತು. ಮೊದ ಲಿನ ಹಾಗೆ ಅವನ ಮುಖದಲ್ಲಿ ದುಃಖವಾಗಲಿ ದುಗುಡವಾಗಲಿ ತೋರುತ್ತಿರ ಲಿಲ್ಲ. ನೋಡಿದವರೆಲ್ಲರಿಗೂ ಅವನು ಈಗ ಹೊಸ ಆಳೇ. ಈಚೆಗೆ ಅವನಲ್ಲಿ ಹೊಸ ಕಳೆ, ಹುರುಪೂ ಲವಲವಿಕೆ ಮುಂತಾದುವು ಕಾಣಬರುತ್ತಿದ್ದುವು. ಅವನು ಎಲ್ಲ ವ್ಯವಹಾರಗಳಲ್ಲಿಯೂ ಮೊದಲಿಗಿಂತ ಹೆಚ್ಚು ಹರ್ಷ ಉತ್ಸಾಹ ಗಳನ್ನು ತೋರುತ್ತಿದ್ದನು.

ಹೆಗ್ಗಡೆ ಮನೆಯಲ್ಲಿ ಈಗ ಚೆನ್ನಮ್ಮನ ಪ್ರಭಾವದಿಂದ ಹಿಂದಿನ ಅಸಡ್ಡೆ, ಅಜಾಗರೂಕತೆ ಅಕ್ರಮಗಳು ಮಾಯವಾದುವು. ದುಂದುಗಾರಿಕೆ

ತಪ್ಪಿತು. ಪಾತ್ರೆ ಪದಾರ್ಥಗಳು, ಒಡವೆ ವಸ್ತುಗಳು, ಬಟ್ಟೆಬರೆಗಳು, ಕಾಳುಕಡ್ಡಿಗಳು, ದನಕರುಗಳು ಎಲ್ಲಕ್ಕೂ ತಕ್ಕ ಸ್ಥಳ, ತಕ್ಕಷ್ಟು ಗಮನ. ನೆಂಟರಿಷ್ಟರಿಗೂ ಮನೆಯುವರಿಗೂ ಈಗ ಊಟ ಉಪಚಾರಗಳಲ್ಲಿ ಹೆಚ್ಚು ವಿಚಕ್ಷಣೆ ಮತ್ತು ತೃಪ್ತಿ. ಸಾಹುಕಾರ ಸಿದ್ದಪ್ಪನ ಮನೆಗಿಂತ ಹೆಗ್ಗಡೆ ಮನೆಯಲ್ಲಿ ಈಚೆಗೆ ಅಂದ, ಅಣಿ, ಆದರ. ಜನರ ಮಾತು ನಿಜವಾಯಿತು. ಚೆನ್ನಮ್ಮನ ಯಾಜಮಾನ್ಯ ಬಹಳ ಹೆಚ್ಚಿನ ಮಟ್ಟಕ್ಕೆ ಸೇರಿದುದು.

ಹೀಗೆಯೇ ವರ್ಷಗಳು ಕಳೆದುವು. ಹೆಗ್ಗಡೆಯು ಹಣ್ಣು ಹಣ್ಣು ಮುದುಕನಾದನು, ಕೊನೆಗಾಲದಲ್ಲಿ ಅವನ ಆರೋಗ್ಯವು ಕೆಟ್ಟು ಶಕ್ತಿಯು ಬಹಳ ಕುಂದಿತು. ಆದರೆ ಚೆನ್ನಮ್ಮನ ಪ್ರೀತ್ಯಾದರಗಳಿಂದ ಅವನ ಮುಪ್ಪಿನ ಕಾಲವು ಅಷ್ಟು ದುಸ್ಸಹವಾಗಿ ಕಾಣಿಸಲಿಲ್ಲ.

ಜನರು ಅಂದುಕೊಂಡಂತೆ ನಾಗಣ್ಣನು ಸತ್ತಿರಬೇಕೆಂದು ಹೆಗ್ಗಡೆಯೂ ಅವನ ಮನೆಯುವರೂ ನಿಶ್ಚಯಮಾಡಿದರು. ಹೆಗ್ಗಡೆಯು ಬದುಕಿದ್ದಾಗಲೇ ಅವನ ಕಿರಿಮಗ ಬೀರಪ್ಪನಿಗೆ ಮದುವೆಯಾಯಿತು. ಬೀರಪ್ಪನೂ ಅವನ ಹೆಂಡತಿಯೂ ಹೆಗ್ಗಡೆ ಬದುಕಿದ್ದತನಕ ಅವಿಭಕ್ತ ಕುಟುಂಬಕ್ಕೆ ಸೇರಿದ್ದರು. ಅವರಿಗೆ ಒಟ್ಟಿಗಿರಲು ಇಷ್ಟವಿರಲಿಲ್ಲ. ಹೆಗ್ಗಡೆ ಮರಣಾನಂತರ ಅವರು ಬೇರೆ ಒಕ್ಕಲು ಹೋದರು.

ಮುಂದಿನ ಸ್ಥಿತಿಗತಿಗಳನ್ನು ಊಹಿಸಿ ಹೆಗ್ಗಡೆ ತನ್ನ ಆಸ್ತಿಯನ್ನು ಹಿರಿಮಗ ಬಸಪ್ಪನಿಗೂ ಕಿರಿಮಗ ಬೀರಪ್ಪನಿಗೂ ತಾನು ಬದುಕಿದ್ದಾಗಲೇ ಹಂಚಿ ವಿವಾದಗಳಿಗೆ ಕಾರಣವಿಲ್ಲದಂತೆ ವ್ಯವಸ್ಥೆ ಮಾಡಿಬಿಟ್ಟನು. ನಾಗಣ್ಣನೂ ಇರಲೂ ಇಲ್ಲ. ಅವನಿಗೆ ಪಾಲೂ ಇಲ್ಲ. ಎಲ್ಲ ದೃಷ್ಟಿಯಿಂದಲೂ ಅವನು ಸತ್ತನೆಂದೇ ಹೇಳಬೇಕು.

ಇನ್ನು ಬೊಮ್ಮನಹಳ್ಳಿಯ ಹಿರಿಯರ ವಿಷಯ. ಹುಚ್ಚಪ್ಪ, ಬೋರಣ್ಣ, ಸಿದ್ದಪ್ಪ ಮೊದಲಾದವರು ಒಬ್ಬೊಬ್ಬರಾಗಿ ತೀರಿಕೊಂಡರು. ಮಾತಿನ ಮಲ್ಲಪ್ಪ ಮಾತ್ರ ಇನ್ನೂ ಜೀವಂತನಾಗಿದ್ದನು. ಈಗ ಅವನಿಗೆ ಸುಮಾರು ತೊಂಬತ್ತು ವಯಸ್ಸು. ಸಂಚಾರವಿಲ್ಲ, ಬಲ ತೀರ ಕಡಮೆ ಮಾತಿನ ಬಿರುಸೂ ಸಾಲದು.

ಒಂದು ಸಲ ಹೆಗ್ಗಡೆ ಬಹಳ ಕಾಯಿಲೆ ಬಿದ್ದನು. ಅವನ ಕೈಕಾಲು ಗಳು ಊದಿದುವು. ಯಾವ ಔಷಧವೂ ಹಿಡಿಯಲಿಲ್ಲ. ಅವನ ಅಂತ್ಯ ಕಾಲದಲ್ಲಿ ಯಾವ ಚಿಂತೆಗಳೂ ಅವನನ್ನು ಬಾಧಿಸವು. ಆದರೆ ಅವನಿಗೆ ಒಂದೇ ಒಂದು ಕೊರತೆ. ಅದು ಬಹಳವಾಗಿದ್ದಿತು. ಹೆಗ್ಗಡೆ ಮೇಲೆ ಮೇಲೆ ಅದನ್ನು ಬಾಯಿಬಿಟ್ಟು ಬಗೆಬಗೆಯಾಗಿ ಹೇಳಿಯೂ ಹೇಳಿ ದನು. ಚೆನ್ನಮ್ಮನನ್ನು ಕಂಡರೆ ಅವನಿಗೆ ಪ್ರಾಣ. ಅವಳ ಮಕ್ಕಳನ್ನೂ ತನ್ನ ತೊಡೆಮೇಲೆ ಕೂರಿಸಿಕೊಂಡು ಅವಕ್ಕೆ ಮುದ್ದಿಡುವ ಪುಣ್ಯ ದೊರೆಯಲಿ ಲ್ಲವೆಂಬ ಒಂದು ಕೊರತೆ ಹೆಚ್ಚಿನದಾಗಿದ್ದಿತು. ಹೆಗ್ಗಡೆ ಮರಣಹೊಂದಿ ದಾಗಲೂ ಇದು ಹೋಗಿರಲಿಲ್ಲ.

ಮಂಜಪ್ಪ ಹೆಗ್ಗಡೆ ಕಾಲಾನಂತರ ಅವನ ಸ್ಥಾನಕ್ಕೆ ಬಸಪ್ಪ ಬಂದನು ಆವನಿಗೆ ತಂದೆಯಂತೆ ಹಗ್ಗಡೆಯೆಂಬ ಹೆಸರಾಗಲಿ ಹಿರಿಯತನವಾಗಲಿ ಬರ ಲಿಲ್ಲ. ಆಗಲೇ ಆ ಹಳ್ಳಿಯ ಜೀವನದಲ್ಲಿಯೂ ಈಗಿನ ಕಾಲದ ಲಕ್ಷಣಗಳು ತೋರಿಬರಲು ಮೊದಲಾಗಿದ್ದುವು.

ಒಮ್ಮೆ ಯುಗಾದಿ ಹಬ್ಬ ಬಂದಿತು. ಎಲ್ಲೆಲ್ಲಿಯೂ ನವನವೋತ್ಸಾಹ. ಹಸಿತೋರಣ, ಬಿಸಿಹೂರಣ. ಹೆಂಗಸರ ಮಕ್ಕಳ ಮೈಮೇಲೆ ಹೊಸ ಬಟ್ಟೆಗಳು ಒಡವೆಗಳು ಅಂದು ಊರಿನ ಗುಡಿಯಲ್ಲಿ ಬಸಪ್ಪ ಹೆಗ್ಗಡೆಯ ಪೂಜೆ. ಊರಿನ ಮುಂದಾಳುಗಳೆಲ್ಲರೂ ಸೇರಿದರು. ಹಿಂದಿನವರು ಇಲ್ಲ. ಎಲ್ಲರೂ ಹೊಸಬರೇ, ಈಗ ಎಲ್ಲರ ಪ್ರಸ್ತಾಪವೂ ಬೇಡ! ಕೆಲವರದು ಮಾತ್ರ ಸಾಕು.

ಪೂಜೆಯಾದಮೇಲೆ ತೀರ್ಥಪ್ರಸಾದಗಳನ್ನು ತೆಗೆದುಕೊಂಡು ಎಲ್ಲರೂ ಹಿಂದಿರುಗಿದರು. ಪ್ರಮುಖರು ಮುಂದುಗಡೆ, ಸಾಧಾರಣರು ಹಿಂದುಗಡೆ. ಈಗಲೂ ಹಾಗೆಯೇ ಎನ್ನಬಹುದು. ಆದರೆ ಆಗ ಈ ಕ್ರಮಕ್ಕೆ ಬಹಳ ಗಮನಕೊಡುತ್ತಿದ್ದರು. ಪ್ರಮುಖರು ಮುಂದೆ ಹೋದ ಮೇಲೆಯೇ ಇತ ರರು ಹಿಂದೆ ಹೋಗತಕ್ಕುದು. ಗುಡಿಯಲ್ಲಿ, ದಾರಿಯಲ್ಲಿ, ಸಿಕ್ಕಿದಾಗ ಕುಶಲಪ್ರಶ್ನೆಗಳು. ಹಿಂದಿನಂತೆ ಈಗ ಹಬ್ಬದ ದಿನಗಳಲ್ಲಿ ಆಶ್ರಿತರಿಗೆ ಅಷ್ಟು ಅನ್ನ ಊಟ ಉಪಚಾರಗಳಿಲ್ಲ. ತಮ್ಮ ತಮ್ಮ ಮನೆಗಳಲ್ಲಿ ಬೇಕಾದವರಿಗೆ ಮಾತ್ರ ಸತ್ಕಾರ.

ಗುಡಿಯಿಂದ ಹಿಂದಿರುಗಿದ ಆ ಜನರ ಗುಂಪಿನಲ್ಲಿ ನಾವು ಕೆಲವರನ್ನು ನೋಡಿದಕೂಡಲೆ ಗುರುತಿಸಬಹುದು. ಕೆಲವರ ಮೇಲೆ ಕಾಲಪುರುಷನ ಪ್ರಭಾವವು ಹೆಚ್ಚಾಗಿ ಬಿದ್ದಿದ್ದಿತು. ಆದುದರಿಂದ ಅವರ ಗುರುತು ಬೇಗ ಸಿಕ್ಕದು.

ಬಸಪ್ಪನಿಗೆ ಈಗ ಸುಮಾರು ನವೆವತ್ತೈದು ವರ್ಷ ವಯಸ್ಸು. ಮೊದಲಿಗಿಂತ ಈಚೆಗೆ ಅವನದು ಸ್ಥೂಲಕಾಯ. ಯೌವನದ ಸೊಂಪು ಅಡಗಿಹೋಗಿ ಮಧ್ಯವಯಸ್ಸಿನ ಲಕ್ಷಣಗಳು ಚೆನ್ನಾಗಿ ತೋರಬರುತ್ತಿದ್ದುವು. ಮದುವೆಯಾದಾಗ ಇದ್ದ ಹರ್ಷೋತ್ಸಾಹಗಳು ಈಗ ಇಲ್ಲ. ಮುಖದಲ್ಲಿ ಈಗಲೂ ಚಿಂತೆಯ ಗುರುತೇ ಕಾಣಿಸುತ್ತಿದ್ದಿತು.

ಅವನ ಜತೆಯಲ್ಲಿ ಬರುತ್ತಿದ್ದ ಮಡದಿಯೇ ಚೆನ್ನಮ್ಮ. ಅವಳೂ ಬದಲಾಯಿಸಿದ್ದಳು. ಆದರೆ ಬಸಪ್ಪನಷ್ಟಿಲ್ಲ. ಅವಳ ಎಳೆವರೆಯದ ಲಾವಣ್ಯ ಹೋಗಿಬಿಟ್ಟಿದ್ದಿತು. ಆದರೂ ಘನತೆ ಗಾಂಭೀರ್ಯಗಳು ಕಡಮೆಯಾಗಿರಲಿಲ್ಲ. ವ್ಯಾಕುಲತೆಯ ಗುರುತು ಅವಳ ಮುಖದಲ್ಲಿಯೂ ಆಗಾಗ ಕೊಂಚ ತೋರಬರುತ್ತಿದ್ದಿತು. ಅವಳ ಮನೋದಾರ್ಢ್ಯವು ಬಹಳ ಹೆಚ್ಚಿನದು. ಅವಳ ತುಟಿಗಳಿಂದಲೇ ಅದು ವ್ಯಕ್ತವಾಗುವುದು. ಅವಳ ಕೈಗಳನ್ನೂ ಬೆರಳನ್ನೂ ನೋಡಿದರೆ ಅವಳ ಉದ್ಯೋಗ ತತ್ಪರತೆಯು ಎಂತಹದೆಂಬುದು ತಿಳಿಯುಬರುತ್ತದೆ. ಚಿಕ್ಕಂದಿನಲ್ಲಿಯೇ ಅವಳಿಗೆ ಬೆಡಗೆಂದರೆ ಆಗದು. ಈಗಲಂತೂ ಅವಳ ಉಡಿಗೆ ತೊಡಿಗೆಗಳಲ್ಲಿ ನಡೆನುಡಿಗಳಲ್ಲಿ ಸೌಲಭ್ಯ ನೈರ್ಮಲ್ಯ ಮತ್ತು ಔಚಿತ್ಯ ಹೊರತು ಮತ್ತಾವ ಗುಣವೂ ಕಾಣಬರುತ್ತಿರಲಿಲ್ಲ.

ಇವನು ದಾಸ—ಹಿಂದಿನ ಜಿಪುಣ, ಈಗ ಗೌರಿಯ ಅಪ್ಪ. ಇವನನ್ನು ಗುರುತಿಸುವುದು ಕಷ್ಟವಿಲ್ಲ. ಮೈ ಬಿಳಿಬಣ್ಣ, ಕಣ್ಣುಗಳು ಅಗಲ. ಕೈಕಾಲುಗಳು ಕೃಶ. ಈಗ ಮೊದಲಿನಷ್ಟು ದುರದುರನೆ ನೋಡನು. ಅವನ ಮುಖದಲ್ಲಿ ವಿಶ್ವಾಸ ಶಾಂತಿ ಪ್ರೇಮ ಕಾಣಬರುವುವು. ಕುಗ್ಗಿದ ಹೆಗಲು, ನರೆತ ಕೂದಲು, ಸುಕ್ಕಾದ ಮೈ, ವಯಸ್ಸು ಸುಮಾರು ಐವತ್ತೈದು. ನೋಡಲಿಕ್ಕೆ ಬಹಳ ಮುದುಕನಂತೆ ಕಾಣುತ್ತಿದ್ದನು.

ಅವನ ಪಕ್ಕದ ಹುಡುಗಿ ಗೌರಿ. ವಯಸ್ಸು ಸುಮಾರು ಹದಿನೈದು. ನಗು ಮೊಗ, ದುಂಡು ಮೈ, ಗುಂಗುರು ಕೂದಲು, ಜಡೆಯು ಉದ್ದ ಕಡಮೆ, ಕೂದಲು ಸ್ವಲ್ಪ ಒರಟು. ಬಹುಶಃ ಅದರಿಂದ ಅವಳಿಗೆ ಸ್ವಲ್ಪ ಅತೃಪ್ತಿ ಇರ ಬಹುದು ಎಲ್ಲದರಲ್ಲಿಯೂ ಅಂದ ಅಚ್ಚುಕಟ್ಟು ಇರಲೇಬೇಕು. ಉಡುಪು ಸಾಧಾರಣ ಮತ್ತು ಸುಭ್ರ ಒಡವೆಗಳು ಹೆಚ್ಚುಕಡಮೆ ಇಲ್ಲವೇ ಇಲ್ಲ. ಕೊರಳಿನಲ್ಲಿ ಒಂದು ಸರ, ಮುಂಗೈಗಳಲ್ಲಿ ಗಾಜಿನ ಬಳೆಗಳು. ನಸುನಗೆ, ನಾಚಿಕೆ ಮತ್ತು ನಯವುಳ್ಳ ನಡೆನುಡಿಗಳು. ಏನಿದ್ದರೂ ಏನಿಲ್ಲದಿದ್ದರೂ ಅಸಾಧಾರಣವಾದ ಮನೋಹರ ಸರಳತೆ. ಕೈಯಲ್ಲಿ ಚೊಕ್ಕಟವಾಗಿ ಬೆಳಗಿದ ತಟ್ಟೆ ಮತ್ತು ಸೊಡಲುಗಳು ತಟ್ಟೆಯು ತುಂಬ ಗುಡಿಯು ಪ್ರಸಾದ !

ಇವಳು ಭದ್ರಮ್ಮ. ಎಲ್ಲದರಲ್ಲಿಯೂ ಮೊದಲಿನ ಹಾಗೆಯೇ. ಹೆಚ್ಚು ವ್ಯತ್ಯಾಸಗಳೇ ಇಲ್ಲ. ಶಕ್ತಿ ಕೊಂಚ ಕಡಮೆ. ಈಗಲೂ ದೈವಭಕ್ತಳು, ಉದ್ಯೋಗತತ್ಪರಳು ಮತ್ತು ಸೇವಾಬುದ್ಧಿಯುಳ್ಳವಳು. ಈಕೆಯೇ ದಾಸನ ಮುಖ್ಯ ಬಂಧು.

ಈ ಹರೆಯದ ಹುಡುಗ ಯಾರು? ಶಿವ! ಪ್ರಾಯದ ಚಿಹ್ನೆಗಳು ಸ್ಪಷ್ಟವಾಗಿ ಕಂಡುಬರುತ್ತಿವೆ. ಹಸನ್ಮುಖ, ಪುಷ್ಟಿಯಾದ ದೇಹ, ಉದ್ದ ವಾದ ಕೈ ಕಾಲುಗಳು. ಉದ್ಯೋಗ ಶೀಲಗಳಿಂದ ಪೂರಿತವಾದ ಉತ್ಸಾಹ. ಪರೋಪಕಾರವೆಂದರೆ ಸದಾ ಸಿದ್ಧ. ಕೀಳುಕೆಲಸ, ದುಂದುವೆಚ್ಚ, ಕೆಟ್ಟ ಜತೆ, ಹರಟೆ ಮೊದಲಾದುವುಗಳಿಗೆ ಸ್ವಲ್ಪವೂ ಎಡೆಗೊಡನು. ತಂದೆತಾಯಿ ಗಳಿಗೆ ಕಷ್ಟಪಟ್ಟು ಸಂಪಾದಿಸಿದ ದ್ರವ್ಯವನ್ನು ಕೊಟ್ಟು, ದಾಸನಿಗೆ ಆಗಾಗ ದೇಹಶ್ರಮದಿಂದ ಕೈಲಾದ ಸಹಾಯ ಮಾಡುವನು. ದಾಸನನ್ನು ಕಂಡರೆ ಅವನಿಗೂ ಬಹಳ ಪ್ರೇಮಾದರಗಳು

ಶಿವನಿಗೂ ಗೌರಿಗೂ ನಿಕಟ ಸ್ನೇಹ. ಮೊದಲಿನಿಂದಲೂ ಅವರು ಒಡನಾಡಿಗಳು. ಈಗ ಅವರಿಗೆ ಪರಸ್ಪರ ಒಂದು ವಿಧವಾದ ಸಂಕೋಚ, ಗೌರವ. ಅವರಿಬ್ಬರೂ ದಾಸನ ಪ್ರೇಮಪಾತ್ರರು. ಅವನಿಗೆ ಸಹಾಯ ಮಾಡಿ ಅವನನ್ನು ಸಂತೋಷ ಪಡಿಸಲಿಕ್ಕೆ ಇಬ್ಬರೂ ಸದಾ ಸಿದ್ಧ.

ಗುಡಿಯಿಂದ ದಾಸನೂ ಗೌರಿಯೂ ಹಿಂದಿರುಗಿದರು. ಗುಡಿಯಲ್ಲಿ ಕಂಡು ಕೇಳಿದುದನ್ನು ಕುರಿತು ಗೌರಿ ಅವನನ್ನು ಆಗಾಗ ಪ್ರಶ್ನಿಸುವಳು; ಊರಿನವರ ವಿಚಾರವಾಗಿ ಮಾತನಾಡುವಳು. ಶಿವನ ವಿಷಯ ಬಂದಾಗ ಈ ದಿನ ಅವಳು ಹೆಚ್ಚು ಆದರ ಉತ್ಸಾಹ ಪ್ರೀತಿಗಳನ್ನು ತೋರಿದಳು. ಏಕೆ? ದಾಸನಿಗೆ ಅರ್ಥವಾಗಲಿಲ್ಲ.

ಅವನ ಪಕ್ಕದ ಹುಡುಗಿ ಗೌರಿ. ವಯಸ್ಸು ಸುಮಾರು ಹದಿನೈದು. ನಗು ಮೊಗ, ದುಂಡು ಮೈ, ಗುಂಗುರು ಕೂದಲು, ಜಡೆಯು ಉದ್ದ ಕಡಮೆ, ಕೂದಲು ಸ್ವಲ್ಪ ಒರಟು. ಬಹುಶಃ ಆದರಿಂದ ಅವಳಿಗೆ ಸ್ವಲ್ಪ ಅತೃಪ್ತಿ ಇರಬಹುದು ಎಲ್ಲದರಲ್ಲಿಯೂ ಅಂದ ಅಚ್ಚುಕಟ್ಟು ಇರಲೇಬೇಕು. ಉಡುಪು ಸಾಧಾರಣ ಮತ್ತು ಸುಭ್ರ ಒಡವೆಗಳು ಹೆಚ್ಚುಕಡಮೆ ಇಲ್ಲವೇ ಇಲ್ಲ. ಕೊರಳಿನಲ್ಲಿ ಒಂದು ಸರ, ಮುಂಗೈಗಳಲ್ಲಿ ಗಾಜಿನ ಬಳೆಗಳು. ನಸುನಗೆ, ನಾಚಿಕೆ ಮತ್ತು ನಯವುಳ್ಳ ನಡೆನುಡಿಗಳು. ಏನಿದ್ದರೂ ಏನಿಲ್ಲದಿದ್ದರೂ ಅಸಾಧಾರಣವಾದ ಮನೋಹರ ಸರಳತೆ. ಕೈಯಲ್ಲಿ ಚೊಕ್ಕಟವಾಗಿ ಬೆಳಗಿದ ತಟ್ಟೆ ಮತ್ತು ಸೊಡಲುಗಳು ತಟ್ಟೆಯ ತುಂಬ ಗುಡಿಯ ಪ್ರಸಾದ !

ಇವಳು ಭವ್ಯನ್ನ. ಎಲ್ಲದರಲ್ಲಿಯೂ ಮೊದಲಿನ ಹಾಗೆಯೇ. ಹೆಚ್ಚು ವ್ಯತ್ಯಾಸಗಳೇ ಇಲ್ಲ. ಶಕ್ತಿ ಕೊಂಚ ಕಡಮೆ. ಈಗಲೂ ದೈವಭಕ್ತಳು, ಉದ್ಯೋಗತತ್ಪರಳು ಮತ್ತು ಸೇವಾಬುದ್ಧಿಯುಳ್ಳವಳು. ಈಕೆಯೇ ದಾಸನ ಮುಖ್ಯ ಬಂಧು.

ಈ ಹರೆಯದ ಹುಡುಗ ಯಾರು ? ಶಿವ ! ಪ್ರಾಯದ ಚಿಹ್ನೆಗಳು ಸ್ಪಷ್ಟವಾಗಿ ಕಂಡುಬರುತ್ತಿವೆ. ಹಸನ್ಮುಖ, ಪುಷ್ಟಿಯಾದ ದೇಹ, ಉದ್ದವಾದ ಕೈ ಕಾಲುಗಳು. ಉದ್ಯೋಗ ಶೀಲಗಳಿಂದ ಪೂರಿತವಾದ ಉತ್ಸಾಹ. ಪರೋಪಕಾರವೆಂದರೆ ಸದಾ ಸಿದ್ಧ. ಕೀಳುಕೆಲಸ, ದುಂದುವೆಚ್ಚ, ಕೆಟ್ಟ ಜತೆ, ಹರಟೆ ಮೊದಲಾದುವುಗಳಿಗೆ ಸ್ವಲ್ಪವೂ ಎಡೆಗೊಡನು. ತಂದೆತಾಯಿಗಳಿಗೆ ಕಷ್ಟಪಟ್ಟು ಸಂಪಾದಿಸಿದ ದ್ರವ್ಯವನ್ನು ಕೊಟ್ಟು, ದಾಸನಿಗೆ ಆಗಾಗ ದೇಹಶ್ರಮದಿಂದ ಕೈಲಾದ ಸಹಾಯ ಮಾಡುವನು. ದಾಸನನ್ನು ಕಂಡರೆ ಅವನಿಗೂ ಬಹಳ ಪ್ರೇಮಾದರಗಳು

ಶಿವನಿಗೂ ಗೌರಿಗೂ ನಿಕಟ ಸ್ನೇಹ. ಮೊದಲಿನಿಂದಲೂ ಅವರು ಒಡನಾಡಿಗಳು. ಈಗ ಅವರಿಗೆ ಪರಸ್ಪರ ಒಂದು ವಿಧವಾದ ಸಂಕೋಚ, ಗೌರವ. ಅವರಿಬ್ಬರೂ ದಾಸನ ಪ್ರೇಮಪಾತ್ರರು. ಅವನಿಗೆ ಸಹಾಯ ಮಾಡಿ ಅವನನ್ನು ಸಂತೋಷ ಪಡಿಸಲಿಕ್ಕೆ ಇಬ್ಬರೂ ಸದಾ ಸಿದ್ಧ.

ಗುಡಿಯಿಂದ ದಾಸನೂ ಗೌರಿಯೂ ಹಿಂದಿರುಗಿದರು. ಗುಡಿಯಲ್ಲಿ ಕಂಡು ಕೇಳಿದುದನ್ನು ಕುರಿತು ಗೌರಿ ಅವನನ್ನು ಆಗಾಗ ಪ್ರಶ್ನಿಸುವಳು; ಊರಿನವರ ವಿಚಾರವಾಗಿ ಮಾತನಾಡುವಳು. ಶಿವನ ವಿಷಯ ಬಂದಾಗ ಈ ದಿನ ಅವಳು ಹೆಚ್ಚು ಆದರ ಉತ್ಸಾಹ ಪ್ರೀತಿಗಳನ್ನು ತೋರಿದಳು. ಏಕೆ? ದಾಸನಿಗೆ ಅರ್ಥವಾಗಲಿಲ್ಲ.

## ೧೮

# ದಾಸನ ಮನೆ

ಹಿಂದಿನ ವರ್ಷಗಳಂತೆ ಈ ವರ್ಷವೂ ಯುಗಾದಿಹಬ್ಬವಾಯಿತು ಊರಿನಲ್ಲಿ. ದಾಸನ ಮಂಟಪದಲ್ಲಿಯೂ ಯುಗಾದಿ ಹಬ್ಬವು ಯಥಾಯೋಗ್ಯವಾಗಿ ಆದುದು ಈ ವರ್ಷವೇ ಮೊದಲು. ಅದಕ್ಕೆ ಕಾರಣ ಈ ಸಾರಿ ಗೌರಿಯು ಎಲ್ಲರಂತೆಯೇ ತಾನೂ ಹಬ್ಬವನ್ನು ಮಾಡಬೇಕೆಂದು ಹಟ ಹಿಡಿದಳು. ದಾಸನು ಆಗಬಹುದೆಂದನು. ಗೌರಿಯು ಸಡಗರದಿಂದ ಹಬ್ಬದ ಅಡುಗೆ ಸಿದ್ಧಪಡಿಸಿ ದಾಸನಿಗೂ ಹಬ್ಬ ಮಾಡಿಸಿದಳು. ಹಬ್ಬದ ಊಟ ಉಪಚಾರಗಳನ್ನು ಇತರರು ತಮ್ಮ ಮನೆಗಳಲ್ಲಿ ಅನುಭವಿಸಿದಹಾಗೆಯೇ ದಾಸನೂ ತನ್ನ ಮಂಟಪದಲ್ಲಿಯೇ ಗೌರಿಯ ಪ್ರಭಾವದಿಂದ ಅನುಭವಿಸಿದನು. ಇದುವರೆಗೂ ಬರಿಯ ಮಂಟಪ ಅಥವಾ ಕೇವಲ ವಾಸಸ್ಥಾನವಾಗಿದ್ದುದು ಈಗ ಪ್ರೇಮಪೂರಿತ ಸಂತೋಷ ಶಾಂತಿಗಳ ನಿಕೇತನವಾಯಿತು. ಇನ್ನುಮೇಲೆ ದಾಸನ ಮಂಟಪವನ್ನು ಮನೆಯೆಂದು ಕರೆಯ ತಕ್ಕುದೇ ಸರಿ. ಊರಿನವರು ಅದನ್ನು ದಾಸನ ಮನೆಯೆಂದೇ ವ್ಯವಹರಿಸುತ್ತಿದ್ದರು.

ಹಬ್ಬದ ದಿನ ಸಂಜೆ. ಹೊತ್ತು ಮುಳುಗುವ ಕಾಲ. ಇನ್ನೂ ಬೆಳಕಿದ್ದಿತು. ದಾಸನೂ ಗೌರಿಯೂ ಮನೆಯ ಮುಂದೆ ಮಾತನಾಡುತ್ತ ಕುಳಿತಿದ್ದರು. ಮನೆಯ ತೋಟದ ವಿಷಯ ಬಂದಿತು. ಅಷ್ಟು ಹೊತ್ತಿಗೆ ಶಿವನೂ ಬಂದು ಸೇರಿದನು.

'ಅಪ್ಪ, ಇಲ್ಲೂ ತೋಟ ಇದ್ದಿದ್ದರೆ ಚೆನ್ನಾಗಿತ್ತು. ಮನೆ ಮುಂದೆ ಹೂಗಿಡಗಳಿದ್ದರೆ ಲಕ್ಷಣ. ಆದರೆ ನಮ್ಮ ತೋಟ ಅಗೆಯುವವರಾರು? ನಿನ್ನ ಕೈಲಾಗದು. ಇನ್ನು ಯಾರಿದ್ದಾರೆ?' ಎಂದು ಗೌರಿ ಕೇಳಿದಳು.

'ನಿನಗೆ ತೋಟಬೇಕೆ, ಅಮ್ಮ? ಆಗಲಿ. ನಿನಗಾಗಿ ಎಲ್ಲ ನಾನೇ ಮಾಡಬಲ್ಲೆ. ಬೆಳಿಗ್ಗೆ ಹೊತ್ತು ನೇಯಿಗೆ ಕೆಲಸ. ಸಂಜೆ ಏನು? ಆಗ

ಮಾಡಿದರಾಯಿತು. ಮೊದಲೇ ಏಕೆ ಹೇಳಲಿಲ್ಲ?' ಎಂದು ದಾಸನು ಉತ್ತರವಿತ್ತನು.

'ಅಪ್ಪ, ನೀವೇಕೆ ಅಗೆಯಬೇಕು? ನಾನು ಅಗೆಯುತ್ತೇನೆ. ನಿಮಗೆ ಇದು ಈಗ ಕಷ್ಟದ ಕೆಲಸ. ನನಗೆ ಸುಲಭ. ಬೇಕಾದರೆ ಬಸಪ್ಪನವರ ತೋಟ ದಿಂದ ಬೀಜ, ಸಸಿ ಎಲ್ಲ ತರುತ್ತೇನೆ' ಎಂದು ಶಿವ ತಾನಾಗಿಯೇ ಹೇಳಿದನು.

ಆ ಉತ್ತರವೇ ಗೌರಿಗೂ ಬೇಕಾಗಿದ್ದುದು.

'ಶಿವ ಮನಸ್ಸು ಮಾಡಿದರೆ ತೋಟ ಆದ ಹಾಗೇ. ಇನ್ನೇನು ಗೌರಿ?' ಎಂದನು ದಾಸ.

'ಆದರೆ ಅಪ್ಪ, ನೀನು ಖಂಡಿತ ಕಷ್ಟಪಡಕೂಡದು. ಈಗ ನಿನಗೆ ಶಕ್ತಿಇಲ್ಲ. ಕಷ್ಟದ ಕೆಲಸವಿದ್ದರೆ ಶಿವನ್ನ ಕರೆಯಿರಿ ಎಂದು ಆ ದಿನ ಭದ್ರವ್ವನೇ ಹೇಳಿರಲಿಲ್ಲವೆ?' ಎನ್ನುತ್ತ ಗೌರಿ ಚಿಂತೆಯನ್ನೂ ಚಮತ್ಕಾರ ವನ್ನೂ ತೋರಿದಳು.

'ಭದ್ರವ್ವ ಹೇಳಬೇಕೆ ಇದನ್ನ? ಗೊತ್ತಿಲ್ಲವೊ ನನಗೆ? ನೀವೇ ಹೇಳಿ ಅಪ್ಪ' ಎಂದು ಶಿವ ತನ್ನ ಸಹಜ ಪ್ರೇಮವನ್ನು ಸೇವಾಪರತೆಯನ್ನೂ ಸೂಚಿಸಿದನು.

'ಹಾಗಿದ್ದರೆ ಅಪ್ಪ, ನೀನೂ ನಾನೂ ಸೇರಿ, ಮಡಿ ವಿಂಗಡಿಸಿ, ಬೀಜ ಹಾಕೋಣ' ಎಂದಳು ಗೌರಿ.

'ನಾಳೆ ಬಿಡುವಾದಾಗ ಬಂದು ನಾನೇ ಅಗೆದುಕೊಡುತ್ತೇನೆ. ನೀವು ಗುರುತು ಮಾಡಿ ಇಟ್ಟಿರಿ. ಈಗ ಹೊತ್ತಾಯಿತು. ಬೇಗ ಹೋಗದಿದ್ದರೆ ಭದ್ರವ್ವನಿಗೆ ಕೋಪ ಬರುತ್ತೆ' ಎನ್ನುತ್ತ ಶಿವ ಹೊರಟನು.

'ಶಿವ, ನಾಳೆ ಭದ್ರವ್ವನನ್ನೂ ಜತೆಯಲ್ಲೇ ಕರೆದುಕೊಂಡು ಬಾ! ನಾನೊಬ್ಬನೇ ಗುರುತು ಮಾಡುವುದಿಲ್ಲ. ಭದ್ರವ್ವನೂ ಇರಲಿ. ಅವರಿಗೆ ಎಲ್ಲಾ ಗೊತ್ತಿರಬೇಕು' ಎಂದು ದಾಸ ಹೇಳಿದನು.

'ಹೌದು ಅಪ್ಪ, ಅವರೂ ಬರಬೇಕು' ಎಂದು ಗೌರಿಯೂ ತನ್ನ ಒಪ್ಪಿಗೆ ಕೊಟ್ಟಳು.

ಶಿವನು ಹೊರಡಲು ಎದ್ದು ನಿಂತನು. ಅಷ್ಟರಲ್ಲಿ ಗೌರಿ ಬೇಗ ಎದ್ದು ಒಳಗೆ ಹೋಗಿ, ಹಬ್ಬಕ್ಕೆ ತಾನು ಮಾಡಿದ್ದ ಹೋಳಿಗೆ ಎರಡರ ಮೇಲೆ

ತುಪ್ಪ ಹಾಕಿಕೊಂಡು, ಶಿವನ ಮುಂದಿಟ್ಟಳು. ಶಿವನ ಮುಖ ಕೆಂಪಾಯಿತು. ಕುಡಿಯಲಿಕ್ಕೆ ನೀರನ್ನೂ ತಂದಿಟ್ಟು ಗೌರಿ ಆ ಕಡೆ ತಿರುಗಿಕೊಂಡಳು. ದಾಸನು ಎಲ್ಲವನ್ನೂ ನೋಡುತ್ತಿದ್ದು, 'ಗೌರಿ ಮಾಡಿದ್ದಯ್ಯ. ಚೆನ್ನಾಗಿದೆಯೋ' ಎಂದು ಕೇಳಿದನು ಪ್ರೇಮಪೂರಿತವಾದ ಪದಾರ್ಥ ಪ್ರಿಯವಲ್ಲವೇ! ಶಿವನು 'ಚೆನ್ನಾಗಿದೆ' ಎನ್ನುತ್ತ ತಿಂದು, ತೇಗಿ, ನೀರು ಕುಡಿದು 'ನಾಳೆ ಬರುತ್ತೇನೆ ಅಗೆಯುವುದಕ್ಕೆ ಸಿದ್ಧ ಮಾಡಿರಿ.' ಎಂದು ಹೊರಟು ಬಿಟ್ಟನು

ದಾಸನೂ ಗೌರಿಯೂ ಮಾತನಾಡುತ್ತಲೇ ಕುಳಿತಿದ್ದರು ಕತ್ತಲಾಯಿತು. ಒಳಗೆ ಹೋಗುವ ಸಮಯ.

ಕೊನೆಗೆ ಪ್ರೇಮದಿಂದ ಕೈ ಹಿಡಿದು ಗೌರಿ 'ಅಪ್ಪ, ನಾನು ಬೇಕೆಂದೇ ಹಾಗೆ ಹೇಳಿದೆ! ಶಿವ ಕೆಲಸ ಮಾಡುತ್ತಾನೆ. ತೋಟ ಆದರೆ ಸಂತೋಷ, ಅಷ್ಟೆ' ಎಂದಳು.

'ನೀನು ಚದುರೆ ಗೌರಿ' ಎನ್ನುತ್ತ ದಾಸನು ಅವಳ ಬೆನ್ನು ತಟ್ಟಿ 'ಆದರೆ ನೀನು ಆ ಹಂಗಿಗಾಗಿ ಅವನನ್ನು ಮದುವೆಯಾಗಬೇಕಾಗುತ್ತೆ' ಎಂದು ಹಾಸ್ಯ ಮಾಡುತ್ತ ಭವಿಷ್ಯವನ್ನು ಉದ್ದೇಶವಿಲ್ಲದೆ ಸೂಚಿಸಿದನು.

ಆಗ ದಾಸನ ಮುಖದಲ್ಲಿ ಪ್ರೇಮ ಹೊರಸೂಸುತ್ತಿದ್ದಿತು.

ಇದನ್ನು ಕೇಳುತ್ತಲೇ ಗೌರಿ ನೆಗೆದೆದ್ದು 'ಇಲ್ಲ, ಇಲ್ಲ, ಅಪ್ಪ. ಅವನಿಗೇ ಮದುವೆ ಇಷ್ಟ!' ಎಂದು ಪುನಃ ತನ್ನಿಷ್ಟವನ್ನೂ ಸಂಕೋಚದಿಂದ ಅವಳೇ ಸ್ಪಷ್ಟವಾಗಿ ತೋರಿದಳು.

ಆಗ ದಾಸನಾಗಲಿ ಗೌರಿಯಾಗಲಿ ಇದೊಂದನ್ನೂ ಯೋಚಿಸಿ ಹೇಳಲಿಲ್ಲ. ಅಷ್ಟು ಹೊತ್ತಿಗೆ ಕತ್ತಲು ಹೆಚ್ಚಿತು. ಇಬ್ಬರೂ ಒಳಗೆ ಬಂದರು. ಸಂಜೆ ದೀಪ ಹೊತ್ತಿಸಿ, ದೇವರ ಪಟಕ್ಕೆ ಕೈ ಮುಗಿದು, ಒಂದೆರಡು ಪ್ರಾರ್ಥನೆ ಹೇಳಿ ಗೌರಿಯು ಕುಳಿತಳು.

ದಾಸನಿಗೂ ಓದುಬರಹ ಮಗ್ಗಿ ಲೆಕ್ಕ ಮುಂತಾದುವು ತಕ್ಕಮಟ್ಟಿಗೆ ಗೊತ್ತಿದ್ದುವು. ಅವನು ತನಗೆ ಬಂದಷ್ಟನ್ನೂ ಗೌರಿಗೂ ಹೇಳಿಕೊಟ್ಟಿದ್ದನು. ಅವಳು ಆಗಾಗ ಭಕ್ತಿಸಾರ, ಗೋವಿನ ಕಥೆ, ಯಕ್ಷಗಾನ, ಭಾರತ ಮುಂತಾದುವನ್ನು ದಾಸನು ಕೇಳುವ ಹಾಗೆ ಓದುವುದುಂಟು.

ಬಳಿಕ ಸ್ವಲ್ಪ ಹೊತ್ತಿನ ತನಕ ಗೌರಿ ದಾಸನು ಇಷ್ಟಪಟ್ಟಭಾಗ ಗಳನ್ನು ಓದಿದಳು.

ರಾತ್ರಿ ಊಟದ ಹೊತ್ತಿಗೆ ಹೊರಗೆ ಹೋಗಿದ್ದ ನಾಯಿ, ಬೆಕ್ಕು, ಬೆಕ್ಕಿನ ಚಿಕ್ಕ ಮರಿಗಳು—ಎಲ್ಲವೂ ಬಂದು ನೇರಿದುವು.

ಸುಮಾರು ಒಂದು ವರ್ಷದ ಹಿಂದೆ ಶಿವನಿಗೆ ಒಂದು ಪುಟ್ಟ ನಾಯಿ ಮರಿ ಸಿಕ್ಕಿತು. ಅವನು ಅದನ್ನು ತಂದು ದಾಸನ ಮನೆಯಲ್ಲಿ ಬಿಟ್ಟನು. ಅದು ದೊಡ್ಡದಾಗಿ ಇವರ ಸಂಸಾರಕ್ಕೇ ಸೇರಿಕೊಂಡಿತು. ಆಮೇಲೆ ಗೌರಿಗೆ ಒಂದು ಬೆಕ್ಕುಸಾಕಬೇಕೆನ್ನಿಸಲು ಅವಳು ಒಂದು ಬೆಕ್ಕನ್ನು ಭದ್ರಪ್ಪನಿಗೆ ಹೇಳಿ ತರಿಸಿಕೊಂಡಳು. ಅದು, ಇವರ ಸಂಸಾರದಲ್ಲಿ ಒಂದಾ ಯಿತು ಈಗ ಅದಕ್ಕೆಮರಿಗಳು—ಹೋದುದು ಬಿಟ್ಟು ಇರುವುದು ಎರಡು.

ಬಳಿಕ ದಾಸನಿಗೂ ಗೌರಿಗೂ ನಾಯಿಗೂ ಬೆಕ್ಕುಗಳಿಗೂ ರಾತ್ರಿ ಊಟ. ಆಮೇಲೆ ಅವುಗಳೊಡನೆ ಸ್ವಲ್ಪ ಸರಸ. ಅದೂ ಆದ ಬಳಿಕ ಕಥೆ, ಹರಟೆ, ಪಗಡೆ, ಮುಂತಾದ ಆಟಗಳು.

ಕೊನೆಗೆ ಎಲ್ಲರೂ ನಿದ್ದೆ ಮಾಡಿದರು. ಇದು ಯುಗಾದಿ ಹಬ್ಬದ ವಿವರಣೆ.

ಇದು ಅವರ ಸಾಧಾರಣ ದಿನಚರಿಯ ಸ್ಥೂಲವಿವರಣೆ.

ಹಗಲಿನಲ್ಲಿ ಬೆಳಗ್ಗೆ ಸ್ವಲ್ಪ ನೇಯಿಗೇ ಕೆಲಸ. ಆ ನೇಯಿಗೇ ಕೆಲ ಸಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿ ಒದಗಿಸುವುದು ಗೌರಿಗೆ ಸೇರಿದುದು. ಅಡುಗೇ ಕೆಲಸವೆಲ್ಲವೂ ಅವಳದೇ. ದೇಹಾಯಾಸದ ಕಾರ್ಯಗಳೆಲ್ಲ ಶಿವ ನದು. ಮಧ್ಯಾಹ್ನ ಊಟ ಮತ್ತು ವಿಶ್ರಾಂತಿ. ಸಂಜೆಹೊತ್ತು ಮೊದಲು ಸ್ವಲ್ಪ ಓಡಾಟ, ಈಚೆಗೆ ತೋಟಗಾರಿಕೆ. ರಾತ್ರಿ ಬೇಗ ಊಟ. ಆಮೇಲೆ ಕಥೆ ಮುಂತಾದುವು. ಬಳಿಕ ನಿದ್ದೆ.

ಈಚೆಗೆ ದಾಸನು ಒಂದೊಂದು ಸಲ ಕೆಮ್ಮು ಹೆಚ್ಚಾದಾಗ ವೈದ್ಯರು ಹೇಳಿದ್ದಂತೆ ಹೊಗೆ ಬತ್ತಿ ಸೇದಿ, ಬಾಧೆ ತಗ್ಗಿಸಿಕೊಂಡು, ಮನಸ್ಸಿನ ಉಲ್ಲಾಸ ಲವಲವಿಕೆಯನ್ನು ಹೆಚ್ಚಿಸಿಕೊಳ್ಳುವ ವಾಡಿಕೆಯುಂಟು. ಅವನಿಗೆ ಮೊದಲಿ

ನಿಂದ ನಶ್ಯ ಎಲೆಅಡಿಕೆ ಮುಂತಾದ ಹೊಸ ಚಟಗಳೊಂದೂ ಸೆರಿಬೀಳುತ್ತಿರ ಲಿಲ್ಲ. ಆದರೆ ಹೊಗೆಬತ್ತಿ ಸೇದುವ ಹೊಸ ಅಭ್ಯಾಸ ಮಾತ್ರ ಆವಶ್ಯಕತೆ ಯಿಂದಲೂ ಅನುಭವದಿಂದಲೂ ಒಳ್ಳೆಯದಾಗಿ ಈಚೆಗೆ ಕಂಡುಬಂದಿತು. ಅದನ್ನೂ ಅವನು ಬಹಳ ಮಿತಿಯಿಂದ ಕೇವಲ ಅವಶ್ಯವಾದಾಗಲೇ ಸೇದು ತ್ತಿದ್ದನು. ಆದರೂ ತನಗೆ ಇದು ಸರಿಯೇ ಎಂದು ಸಂದೇಹ. ಅನಿವಾರ್ಯ ವಾಗಿ, ಉಪಯೋಗ ಕಂಡುಬಂದು, ಬಾಧೆ ತಪ್ಪಿ ಸುಖ ಹೆಚ್ಚಿ, ಆರೋಗ್ಯಸಾಧ ನೆಗೆ ಅನುಕೂಲವಾದರೆ ಔಷಧದಂತೆ ಅವುಗಳನ್ನು ರೋಗದ ದೆಸೆಯಿಂದ ಅವ ಶ್ಯಕವಾದಾಗ ಮಾತ್ರ ಉಪಯೋಗಿಸಿದರೆ ತಪ್ಪಿಲ್ಲ.

ಗೌರಿಗೆ ಭದ್ರವ್ವನನ್ನು ಕಂಡರೆ ಮಾತ್ರ ನಿರ್ವಿಶೇಷವಾದ ಪ್ರೀತಿಭಕ್ತಿ ಗಳು. ಭದ್ರವ್ವನೇ ಅವಳ ಸಾಕು ತಾಯಿ. ಅವಳು ಗೌರಿಗೆ ಸ್ತ್ರೀಯೋಗ್ಯ ವಾದ ಶಿಕ್ಷಣವೆಲ್ಲವನ್ನೂ ಯಾರಿಗೂ ಅರಿಯದಂತೆ ಕೊಡಿಸಿದ್ದಳು. ಗೌರಿ ಕೆಲಸ ಮುಗಿಸಿಕೊಂಡು, ಭದ್ರವ್ವ ಬರುವ ಹೊತ್ತಿಗೆ ಕಾದಿರುತ್ತ, ದಾಸನ ಪೂರ್ವ ವೃತ್ತಾಂತವನ್ನು ಕುರಿತು ಬಾಯಿಗೆ ಬಂದ ಪ್ರಶ್ನೆಗಳನ್ನು ಕೇಳುವು ದುಂಟು. ದಾಸನಿಗೆ ತನ್ನ ಹಿಂದಿನ ಕಥೆಯು ಮರೆತುಹೋದಂತೆ ಇದ್ದಿತು. ಆದರೆ ಈಗ ಗೌರಿ ದೊಡ್ಡವಳಾಗಿ, ಅವರಿಬ್ಬರೂ ಊರಿನವರ ಜೀವನ ದೊಂದಿಗೆ ಬೆರೆತಂತೆಲ್ಲ ಅವನಿಗೆ ತನ್ನ ಹಿಂದಿನ ಅನುಭವಗಳು ನೆನಪಿಗೆ ಬರುವುವು.

ಆಗಾಗ ಅವನು ತನ್ನ ಗೆಳೆತನದ ಕಥೆಯನ್ನು ಭದ್ರವ್ವನಿಗೆ ವಿಶದವಾಗಿ ಹೇಳುವನು. ಅವಳೂ ಅವನನ್ನು ಅಲ್ಲಲ್ಲಿ ಮತ್ತೆ ಮತ್ತೆ ಪ್ರಶ್ನಿಸುವಳು. ಮಿತ್ರದ್ರೋಹ, ಅಪರಾಧ ನಿರ್ಣಯ, ದೈವಕೃಪೆ ಮುಂತಾದ ವಿಷಯಗಳು ಬಂದಾಗಲಂತೂ ಅವರ ಚರ್ಚೆಗಳಿಗೆ ಕೊನೆಯೇ ಇಲ್ಲ. 'ಚೀಟಿ ಪದ್ಧತಿ ಸರಿಯಲ್ಲ' ಎಂದು ಭದ್ರವ್ವನು ಹೇಳಿದರೆ ದಾಸನು 'ಹೌದು. ಈಗ ನನಗೂ ಹಾಗೇ ತೋರುತ್ತೆ. ದೇವರ ಕೃಪೆ ಇಲ್ಲದಿದ್ದರೆ ನಾವು ಬದುಕಲಿಕ್ಕೇ ಆಗದು. ಗೌರಿ ಬಂದ ರೀತಿ ನೋಡು. ಆದರಿಂದಲೇ ದೇವರ ಮಹಿಮೆ ಗೊತ್ತಾಗುತ್ತೆ' ಎಂದು ಉತ್ತರ ಕೊಡುವನು. ಅವರಿಬ್ಬರಿಗೂ ನಡೆಯುತ್ತಿದ್ದ ಸಂಭಾಷಣೆ ಗಳಿಂದ ದಾಸನ ಸ್ವಭಾವಜನ್ಯವಾದ ಭಕ್ತಿ, ಪ್ರೇಮ, ಸೇವೆ, ಕ್ಷಮ

ಮುಂತಾದ ಹಿಂದಿನ ಸ್ಥುಗುಣಗಳೆಲ್ಲವೂ ಒಂದೊಂದಾಗಿ ಪುನರುಜ್ಜೀವನಗೊಳ್ಳುತ್ತಿದ್ದುವು.

ಹೀಗೆ ಅವರು ಮಾತನಾಡುತ್ತಿದ್ದಾಗ ಅನೇಕಾವರ್ತಿ ಗೌರಿಯ ತಂದೆ ತಾಯಿಗಳ ವಿಷಯವೂ ಬರುವುದು. ದಾಸನು ಮಾಯಿಯ ರೂಪನ್ನು ವರ್ಣಿಸುವನು. ಗೌರಿಯು ಸ್ವಲ್ಪ ದೊಡ್ಡವಳಾದಮೇಲೆ ತನ್ನ ತಾಯಿ ಯಾರೆಂದು ಕೇಳುವಳು. ಆಗ ದಾಸನಿಗೆ ಏನು ಹೇಳಲಿಕ್ಕೂ ಆಗದು. ಇನ್ನು ಸ್ವಲ್ಪ ದೊಡ್ಡವಳಾದ ಮೇಲೆ ಹೇಗೋ ಅವಳಿಗೆ ದಾಸನು ತನ್ನ ಸ್ವಂತ ತಂದೆಯಲ್ಲವೆಂಬುದು ತಿಳಿಯಿತು. ಬಹುಕಾಲ ಅವಳು ಅದನ್ನು ನಂಬಲೇ ಇಲ್ಲ. ತಂದೆತಾಯಿಗಳ ವಿಷಯವಾಗಿ ತಾನು ಪ್ರಶ್ನಿಸಿದಾಗ ದಾಸನಿಗೆ ಚಿಂತೆಯುಂಟಾಗುವುದನ್ನು ಕಂಡು ಅವಳು ಕೊನೆಕೊನೆಗೆ ಆ ಪ್ರಸ್ತಾಪವನ್ನೇ ಬಿಟ್ಟುಬಿಟ್ಟಳು. ದಿನ ಕಳೆದಂತೆಲ್ಲಾ ಗೌರಿಯ ಪ್ರೇಮ ಹೆಚ್ಚುತ್ತಿದ್ದಿತು.

ದಾಸನೂ ಗೌರಿಯೂ ಊರ ಹೊರಗೆ ವಾಸಿಸುತ್ತಿದ್ದುದರಿಂದ ವಿಶೇಷವಾಗಿ ಊರಿನವರೊಡನೆ ಸೇರಲು ಸಾಧ್ಯವಾಗಲಿಲ್ಲ. ಎಷ್ಟು ಸೇರಿದರೂ ಅವರು ಬೇರೆಯಾಗಿಯೇ ಇದ್ದರು. ಅವರ ಜೀವನದಲ್ಲಿ ಅಪೂರ್ವವಾದ ಗಾಂಭೀರ್ಯವು ತೋರಬರುತ್ತಿದ್ದಿತು. ಗೌರಿಯ ಸಹಜವಾದ ರೂಪು, ಗುಣ, ಯೌವನ——ಮುಂತಾದುವನ್ನು ನೋಡಿ ಎಲ್ಲರೂ ಶ್ಲಾಘಿಸುತ್ತಿದ್ದರು.

ದಾಸನ ಸಂಸಾರ ಹೆಚ್ಚಿದಂತೆಯೇ ಸಾಮಾನುಗಳೂ ಹೆಚ್ಚಿದುವು. ದಾಸ ಕೆಲವನ್ನು ಸಂಗ್ರಹಿಸಿದನು. ಗೌರಿ ಚಿಕ್ಕ ಮಗುವಾಗಿದ್ದಾಗ ಊರಿನವರು ಅವಳಿಗಾಗಿ ಅನೇಕ ಉಪಯುಕ್ತ ವಸ್ತುಗಳನ್ನು ತಾವಾಗಿಯೇ ಕೊಟ್ಟರು. ಬಸಪ್ಪನಂತು ಅಂತಹ ಬಡವರಿಗೆ ಸಹಾಯ ಮಾಡುವುದು ತನ್ನಂತಹ ಧನಿಕರಿಗೆ ಯೋಗ್ಯವೆಂದು ಹೇಳುತ್ತ ಗೌರಿ ಬಳೆದ ಹಾಗೆಲ್ಲ ಬೇಕಾದ ಸೀರೆ, ಬಟ್ಟೆ ಹಾಸಿಗೆ ಮುಂತಾದವುಗಳನ್ನು ಕೊಡುತ್ತ ಬಂದನು. ಈಗದಾಸನ ಮನೆತುಂಬ ಚಾಪೆ, ಹಾಸಿಗೆ, ಕಂಬಳಿ, ಬಟ್ಟೆ, ಪಾತ್ರೆ ಮುಂತಾದುವು ಹೇರಳವಾಗಿದ್ದುವು ಇವೆಲ್ಲವನ್ನೂ ನೋಡಿದರೆ ಜೀವನದ ಮಟ್ಟವೂ ಹೆಚ್ಚಿನದಾಗಿಯೇ ಇದ್ದಿತೆಂದು ಹೇಳಬೇಕಾಗುತ್ತದೆ.

ಬರುತ್ತ ಬರುತ್ತ ದಾಸನ ಮನೆ ಮುಖ್ಯ ಸ್ಥಳವಾಯಿತು. ಕಾರಣಾಂತರಗಳಿಂದ ಊರಿನವರು ಅಲ್ಲಿ ಹೆಚ್ಚು ಹೆಚ್ಚಾಗಿ ಬರಲು ಪ್ರಾರಂಭ ಮಾಡಿದರು. ಸಾಹುಕಾರ ಸಿದ್ಧಪ್ಪನ ಮನೆಯವರು, ಹೆಗ್ಗಡೆ ತಂಗಿ ಕಡೆಯವರು, ಭದ್ರವ್ವನ ಬಳಗದವರು, ಬಸಪ್ಪ ಹೆಗ್ಗಡೆ, ಚೆನ್ನಮ್ಮ, ಅವಳ ನೆಂಟರು ಹಾಗೆ ಬಂದವರಲ್ಲಿ ಮುಖ್ಯ.

## ೧೯

# ಗೌರಿಯ ಮದುವೆ ಮಾತು

ಪ್ರೇಮದ ಪ್ರಭಾವವೇ ಅತಿಶಯ. ಅವರಲ್ಲಿಯೂ ಸಾತ್ವಿಕ ಪ್ರೇಮದ ಪ್ರಭಾವವು ಮತ್ತೂ ಅತಿಶಯವೇ ಸರಿ. ಅದರ ದೆಸೆಯಿಂದ ಎಂತಹ ಸಂಬಂಧವಾದರೂ ಶ್ರೇಷ್ಠವಾಗುವುದು ! ಶುದ್ಧ ಮತ್ತು ಪೂರ್ಣ ಪ್ರೇಮವು ಉಚ್ಚನೀಚಗಳ ತಾರತಮ್ಯಗಳಿಗೆ ಸಿಕ್ಕದೆ, ಎಂತಹ ಜೀವನವನ್ನೂ ಉತ್ತಮ ಗೊಳಿಸಿ, ಘನಗಾಂಭೀರ್ಯಾದಿ ಸುಗುಣಗಳನ್ನು ವ್ಯಕ್ತಪಡಿಸುತ್ತ, ದೈವ ಸಾಕ್ಷಾತ್ಕಾರಕ್ಕೆ ಸಹಕಾರಿಯಾದ ಶಕ್ತಿಯಾಗಿ ಪರಿಣಮಿಸುವುದು.

ಒಂದು ದಿನ ಸಂಜೆ ಹಿತವಾದ ಹೊಂಬಿಸಿಲು. ಆಗ ದಾಸನೂ ಗೌರಿಯೂ ಹರಟುತ್ತ ಹೊರಗೆ ಹೊರಟರು ಅವಳ ದೃಷ್ಟಿ ಮಂಟಪದ ಹತ್ತಿರ ತನ್ನ ತಾಯಿ ಸತ್ತುಬಿದ್ದಿದ್ದ ಸ್ಥಳದ ಕಡೆಗೆ ಬಿದ್ದಿತು. ದಾಸನಿಂದ ಅವಳು ಮಾಯಿ ಸತ್ತುಬಿದ್ದಿದ್ದ ಕಥೆಯನ್ನು ಕೇಳಿದ್ದಳು. ಗೌರಿಗೆ ಆ ಸ್ಥಳ ವೆಂದರೆ ಸಹಜವಾಗಿ ಬಹಳ ಭಕ್ತಿ. ಅದನ್ನು ತಮ್ಮ ಮನೆ ತೋಟಕ್ಕೆಸೇರಿಸಿ ಕೊಂಡು ಅಲ್ಲಿಯೂ ಹೂಗಿಡವನ್ನು ಹಾಕಬೇಕೆಂದು ಅವಳಿಗೆ ಬಹಳ ಆಸೆ.

'ಅಪ್ಪಾ, ಇಲ್ಲಿ ನಾವು ಸಂಪಿಗೆ ಗಿಡ ಹಾಕಲೇ ಬೇಕು. ಶಿವ ಗಿಡ ತರುತ್ತಾನಂತೆ, ಏನಪ್ಪ?' ಎಂದು ಗೌರಿ ಆ ಸ್ಥಳವನ್ನು ತೋರಿಸಿದಳು.

'ಆಗಬಹುದು, ಮಗು. ಬೇಲಿ ಇಲ್ಲದಿದ್ದರೆ ಇಲ್ಲಿ ಗಿಡ ಬೆಳೆಯುವು ದಿಲ್ಲ. ಎಂಥ ಬೇಲಿ ಹಾಕಬೇಕು?' ಎಂದು ದಾಸನು ಕೇಳಿದನು.

'ಅಪ್ಪ, ಮುಳ್ಳಿನ ಬೇಲಿ ಬೇಡ. ಕುಳಿ ಹತ್ತಿರ ಕಲ್ಲು ಬಿದ್ದಿದೆ. ಅದನ್ನು ತಂದು ಕಟ್ಟಿ ಹಾಕೋಣ. ಶಿವ ದೊಡ್ಡ ಕಲ್ಲು ತರಲಿ. ನೀನೂ ನಾನೂ ಸಣ್ಣ ಕಲ್ಲು ತರಬಹುದು' ಎಂದಳು ಗೌರಿ.

'ನೀನು ತರಲಾರೆ. ಭದ್ರಪ್ಪನ ಮಾತು ದಿಟ. ನೀನೇ ಒಂದು ಹೂವು ಗೌರಿ. ದೊಡ್ಡಕಲ್ಲಿಲ್ಲದಿದ್ದರೆ ಸಣ್ಣದರಿಂದ ಪ್ರಯೋಜನವೇನು?' ಎಂದು ದಾಸನು ಮತ್ತೆ ಕೇಳಿದನು.

'ಅಯ್ಯೋ ನಾನೂ ದೊಡ್ಡದು ತರಬಲ್ಲೆ. ಅಲ್ಲಿ ನೋಡು,' ಎನ್ನುತ್ತ ಕುಳಿ ಕಡೆಗೆ ಓಡಿ ಅಲ್ಲಿ ಬಿದ್ದಿದ್ದ ಒಂದು ಕಲ್ಲನ್ನು ಎತ್ತಲು ಹೋದಳು. ಎತ್ತಲು ಕೈಯಲ್ಲಿ ಆಗಲಿಲ್ಲ. ನಾಚಿಕೆಯಾಯಿತು.

'ಅಪ್ಪ, ಅಪ್ಪ ಇಲ್ಲಿ ಬಾ. ನೀರು ನಿನ್ನೆ ಅಷ್ಟು ಇಲ್ಲವೇ ಇಲ್ಲ. ಅದೇಕೆ?' ಎಂದು ಹಿಂದಿನ ಮಾತನ್ನು ಮರೆಸುವಂತೆ ಕೇಳಿದಳು.

ದಾಸನು ಅಲ್ಲಿಗೆ ಹೋಗಿ, ನೀರಿನ ಕಡೆ ನೋಡುತ್ತ, 'ಹೌದು ಬಸಪ್ಪ ಕಾಲುವೆ ಹೊಡಿಸಿದ್ದಾನೆ. ಈ ಬೇಸಿಗೆಯಿಂದ ಆ ಜಮಾನು ಅವನಿಗೆ ಸೇರಿದ್ದು?' ಎಂದನು ದಾಸ.

'ಸೇರಿದ್ದರೇ ಚೆನ್ನ, ಅಪ್ಪ! ಎನ್ನುತ್ತ ಅವಳು ಇನ್ನೊಂದು ಕಲ್ಲನ್ನೆತ್ತಿ ಹೊತ್ತುಕೊಂಡು 'ನೋಡಿದೆಯ! ನನ್ನ ಕೈಯಲ್ಲೂ ಆಗುತ್ತೆ' ಎಂದು ಜಂಬ ಮಾಡುತ್ತ ಹತ್ತು ಹೆಜ್ಜೆ ಹೋದಳು. ಉಸಿರಾಡುವುದು ಕಷ್ಟವಾಯಿತು. ಅದನ್ನು ಮಧ್ಯೆ ಎತ್ತಿ ಹಾಕಿ, ನಿಟ್ಟುಸಿರುಬಿಡುತ್ತ, ನಿಂತಳು.

'ನಿನ್ನ ಕೈಯ್ಯಲ್ಲೂ ಆಗುತ್ತೆ! ಅಲ್ಲವೆ ಗೌರಿ?' ಎಂದು ದಾಸನು ಪರಿಹಾಸ್ಯಮಾಡಿದನು.

ಸ್ವಲ್ಪ ಹೊತ್ತು ಗೌರಿ ಕೈಮುಟ್ಟಿ ಮುಟ್ಟಿ ನೋಡಿಕೊಳ್ಳುತ್ತಿದ್ದಳು. ಪುನಃ ಅವಳಿಗೇ ನಾಚಿಕೆಯಾಯಿತು. ತಿರುಗಿ ಆ ಕಲ್ಲನ್ನು ಎತ್ತಲು ಪ್ರಯತ ಪಟ್ಟಳು.

'ನಿನ್ನ ಕೈಲಾಗದಮ್ಮ. ನಾನು ಮುದುಕನಾದೆ. ನಮಗೆ ಸಹಾಯ ಬೇಕು' ಎಂದು ದಾಸನು ಬಿಸುಸುಯ್ದನು. ಅದರಲ್ಲಿ ನಿಜವಾಗಿಯೂ ವಿಶೇಷವಾದ ಅರ್ಥವಿದ್ದಿತು. ದಾಸನಿಗೆ ಅದರ ಸಂಪೂರ್ಣಾರ್ಥವು ತಿಳಿಯಲಿಲ್ಲ. ಮನುಷ್ಯನಿಗೆ ಮುಂದಾಗುವುದು ಹೇಗೆ ಗೊತ್ತು!

ಅದಕ್ಕೆ ಸರಿಯಾಗಿ ಗೌರಿ ದಾಸನ ಹತ್ತಿರಕ್ಕೆ ಓಡಿ ಬಂದು 'ಅಪ್ಪ ನನಗೆ ಮದುವೆ ಆದರೆ ನಮ್ಮ ಅಮ್ಮನ ತಾಳಿಯನ್ನೇ ಕಟ್ಟುತ್ತಾರೆಯೆ?' ಎಂದು ಕೇಳಿದನು.

ಮದುವೆಯ ಮಾನನ್ನು ಕೇಳಿ ದಾಸನು ಚಕಿತನಾದನು. ಗೌರಿಗೆ ಈಗ ಗಂಡನ ಚಿಂತೆ ಎಂಬುದು ಸ್ಪಷ್ಟವಾಯಿತು. ಅಜ್ಜಿಗೆ ಅರಿವೆ ಚಿಂತೆ. ಮಗಳಿಗೆ ಗಂಡನ ಚಿಂತೆ. ಅಲ್ಲವೆ!

ದಾಸನು ಸ್ವಲ್ಪ ಚಿಂತೆ ತೋರಿ 'ನಿನಗೂ ಅದೇ ಯೋಚನೆಯೇ, ಅಮ್ಮಾ?' ಎಂದು ಕೇಳಿದನು.

'ಹೋದವಾರ ಭದ್ರವ್ವ, ಯಾರ ಸಂಗಡಲೋ ಹಾಗೆಂದಳು. ಅಷ್ಟೇ ಅಪ್ಪ. ಅದಕ್ಕೆ ಕೇಳಿದೆ' ಎಂದಳು ಗೌರಿ.

'ಹೇಗೆಂದಳು?' ಎಂದು ದಾಸನು ಮತ್ತೆ ಪ್ರಶ್ನಿಸಿದನು. 'ಅದೆಲ್ಲ ಗೊತ್ತಿಲ್ಲ, ಅಪ್ಪ,' ಎಂದು ಗೌರಿ ನಾಚಿದಳು.

'ಹೇಳಮ್ಮ, ಹೇಳು? ಎಂದು ದಾಸನು ಒತ್ತಿ ಹೇಳಿದನು. ಗೌರಿಯು ಹೇಳಲಿಲ್ಲ. ದಾಸನು ಬಿಡಲಿಲ್ಲ. ಅವನಿಗೆ ಅಷ್ಟು ಕುತೂಹಲ!

'ಬಸಪ್ಪನ ಒತ್ತಾಯ ಹೆಚ್ಚಾಗಿದೆ. ಸಿದ್ದಪ್ಪನ ಮಗಳು ನಮಗೆ ಬೇಕಿಲ್ಲ. ಶಿವನಿಗೆ ಗೌರಿಯೇ ಸರಿ ಎನ್ನುತಿದ್ದರು ಭದ್ರವ್ವ. ಅಷ್ಟೆ' ಎಂದು ಗೌರಿಯು ಹೇಳಿದಳು.

'ಶಿವನಿಗೆ ಗೌರಿಯೇ ಸರಿ! ಎಂದರೆ?' ಎಂದು ದಾಸನು ಮತ್ತೆ ತಿಳಿಯದವನ ಹಾಗೆ ಕೇಳಿದನು.

ಗೌರಿಗೆ ಮತ್ತೆ ನಾಚಿಕೆ. ಮಾತಿಲ್ಲ. ದಾಸನಿಗೆ ಸರಿಯಾಗಿ ಅರ್ಥ ಮಾಡಿಕೊಳ್ಳಲು ಆಗದು. ದಾಸನು ಬಿಡದೆ ಪುನಃ ಪುನಃ ಪ್ರಶ್ನಿಸಿದನು.

'ಅದಕ್ಕೇ ಅಪ್ಪ' ಎಂದಳು ಗೌರಿ.

'ಏತಕ್ಕೆ?' ಎಂದು ಮತ್ತೆ ದಾಸನು ಕೇಳಿದನು. 'ಮದುವೆಗೆ ಅಲ್ಲವೆ?' ಎಂದು ಗೌರಿ ಹೇಳಬೇಕಾಯಿತು.

'ಹಾಗಿದ್ದರೆ ನೀನೂ ಒಪ್ಪಿದ್ದೀಯೊ?' ಎಂದು ದಾಸನು ಪುನಃ ವಿಚಾರಿಸಿದನು.

ನಾಚಿಕೆಗೊಂಡು, ತಲೆಬಗ್ಗಿಸಿ 'ಭದ್ರವ್ವ ಹಾಗೆಂದರು' ಎಂದಳು ಗೌರಿ.

ಚಿಕ್ಕ ಮಕ್ಕಳಾಗಿದ್ದಾಗ ಶಿವನೂ ಗೌರಿಯೂ ಎಲ್ಲ ಮಕ್ಕಳ ಹಾಗೆ ಮದುವೆ ವಿಷಯವನ್ನು ಕುರಿತು ಹರಟಿದ್ದರು. ಆಗ ಆಟದಲ್ಲಿ ಶಿವ ಗಂಡ, ಗೌರಿ ಹೆಂಡತಿ. ಈಚೆಗೆ ಅಂತಹ ಹರಟೆ ಇಲ್ಲ. ಆ ಹರಟೆ ಪ್ರಾಯಶಃ ಅವರಿಗೆ ಮರೆತುಹೋಗಿದ್ದಿತು. ಆದರೆ ಈಗ ಆಟವಲ್ಲ, ಬಾಯಲ್ಲಲ್ಲ, ಮನಸ್ಸಿನಲ್ಲಿ, ನಿಜವಾದ ಅರ್ಥದಲ್ಲಿ ಗಂಡ ಹೆಂಡತಿಯರ ಯೋಚನೆ!

ದಾಸನು ಮದುವೆ ಇಲ್ಲದವನು, ಆ ಯೋಚನೆ ಮರೆತುಬಿಟ್ಟಿದ್ದವನು, ಆ ವ್ಯವಹಾರವೇ ತಿಳಿಯದವನು. ಅವನಿಗೂ ಈಚೆಗೆ ಹೇಗೋ ಗೌರಿಯ ಮದುವೆ ಯೋಚನೆ ಮನಸ್ಸಿಗೆ ಹೊಳೆದು, ತಾನೊಬ್ಬನೇ ಹಿಂದಿನಂತೆ ವಾಸಿಸುವ ಸಂದರ್ಭ ಪುನಃ ಬಂದೀತೋ ಎಂಬ ಭಯ ತೋರುತ್ತಿದ್ದಿತು. ಇದು ಕೇವಲ ಸಹಜ. ಅಲ್ಲವೆ? ಆದರೆ ಅವನು ಆ ಯೋಚನೆಗೆ ಅವಕಾಶ ಕೊಡದೆ ಇದ್ದನು. ಈಗ ಪುನಃ, ಹೇಗೋ ಆ ವಿಷಯ ಗೌರಿಯ ಬಾಯಿಂದಲೇ ಹೊರಬಿದ್ದಿತು.

ಆ ಮೇಲೆ ಅವನು 'ಭದ್ರವ್ವನ್ನ ಕೇಳೋಣ?' ಎಂದು ಮಾತ್ರ ಹೇಳಿ ಸುಮ್ಮನಾದನು.

ದಾಸನಿಗೆ ಜಿಪುಣನಾಗಿದ್ದಾಗ ರಾತ್ರಿ ಹೊತ್ತು ನಿದ್ದೆ ಚೆನ್ನಾಗಿ ಬರುತ್ತಿರಲಿಲ್ಲ. ಹಣ ಹೋದ ಮೇಲಂತೂ ಅವನಿಗೆ ನಿದ್ದೆ ತಪ್ಪಿಹೋಯಿತು. ಗೌರಿ ಸಿಕ್ಕಿ ಅವಳು ದೊಡ್ಡವಳಾಗುವ ತನಕ ಅವನಿಗೆ ಅವಳ ದೆಸೆಯಿಂದ ನಿದ್ದೆ ಹೆಚ್ಚಾಗಿ ಬರುತ್ತಿರಲಿಲ್ಲ. ಅವನಿಗೆ ಈಚೆಗೆ ನಿದ್ದೆ ನಿರಾತಂಕವಾಗಿ ಕಣ್ಣು ತುಂಬ ಬರುತ್ತಿದ್ದಿತು. ಆದರೆ ಈ ದಿನ ಅವನಿಗೆ ನಿದ್ದೆ ತುಂಬ ಬರಲಿಲ್ಲ. ಕಾರಣ! ಗೌರಿಯ ಮದುವೆಯ ಯೋಚನೆ. ಅವನಿಗೆ ಈ ವಿಷಯವನ್ನು ಕುರಿತು ಯಾರೊಡನೆ ಹೇಗೆ ಮಾತನಾಡಿ ಗೊತ್ತುಮಾಡಲೆಂದು ಎಷ್ಟು ಚಿಂತಿಸಿದರೂ ಬಗೆಹರಿಯಲಿಲ್ಲ. ಭದ್ರವ್ವ ಬಂದರೆ ಅವಳೊಡನೆ ಈ ವಿಷಯವನ್ನು ಹೇಗೆ ಪ್ರಸ್ತಾಪಿಸಲೆಂದು ಅವನು ಮತ್ತೆ ಯೋಚಿಸಿದನು. ತಕ್ಕ ಉಪಾಯವೇ ತೋರದು. ಅಂತು ಇಂತು ನಿದ್ದೆ ಬಾರದು.

ಮಾರನೆಯ ದಿನ ಎಂದಿಗಿಂತ ಮುಂಚಿತವಾಗಿ ಭದ್ರವ್ವ ದಾಸನ ಮನೆಗೆ ಬಂದಳು. ಆಗ ಗೌರಿಯು ಇರಲಿಲ್ಲ. ನೀರು ತರಲು ಹೋಗಿದ್ದಳು. ಭದ್ರವ್ವನು ಬಂದು ಕುಳಿತುಕೊಂಡು, ಬೇರೆ ಮಾತೆತ್ತದೆ, ಗೌರಿಯ ಮದುವೆಯ ಮಾತನ್ನೇ ಪ್ರಸ್ತಾಪಿಸಿದಳು. ದಾಸನಿಗೆ ಭಯವೂ ಆಶ್ಚರ್ಯವೂ ಆಯಿತು. ಅವನು ಬಹಳ ಹೊತ್ತು ಬಾಯಿತೆರೆಯಲಿಲ್ಲ.

'ದಾಸಣ್ಣ, ಗೌರಿಗೆ ಈ ಸಲವೇ ಮದುವೆ ಆಗಬೇಕು. ನಾನೂ ಮನೆಯಲ್ಲಿ ಕೇಳಿದೆ. ಯಜಮಾನರೂ ಒಪ್ಪಿದರು.' ಎಂದಳು ಭದ್ರವ್ವ.

ಮೌನ. ದಾಸನ ಮುಖದಲ್ಲಿ ಅಗಾಧ ಚಿಂತೆ. ಅವನಿಗೆ ಅರ್ಥವಾದಂತೆಯೇ ತೋರಲಿಲ್ಲ. 'ನೀನು ಹೇಳಿದ್ದೇನು?' ಎಂದನು ದಾಸ.

'ದಾಸಣ್ಣ ಮದುವೆ ಮಾಡದೆ ಹೆಣ್ಣು ಬಿಟ್ಟಿರಬಾರದು. ಶಿವನಿಗೇ ಗೌರಿಕೊಟ್ಟು ಮದುವೆ ಮಾಡೋಣ. ಆಗ ನಿನಗೂ ಅನುಕೂಲ' ಎಂದು ಭದ್ರವ್ವನು ಬೇರೆ ರೀತಿ ಹೇಳಿದಳು

ದಾಸನ ಬಾಯಲ್ಲಿ ಎಷ್ಟು ಹೊತ್ತಾದರೂ ಮಾತೇ ಹೊರಡದು. ಮತ್ತೆ ಅವನು ಸುಮ್ಮನೆ ಕೂತನು. ಅವನಿಗೆ ಏನು ಹೇಳಲಿಕ್ಕೂ ತೋರಲಿಲ್ಲ.

'ಏನು ದಾಸಣ್ಣ? ಏಕೆ ಸುಮ್ಮನಿದ್ದೀಯೆ? ಬಾಯಿಬಿಟ್ಟು ಮಾತಾಡು' ಎಂದು ಭದ್ರವ್ವನು ಮೇಲೆ ಮೇಲೆ ಒತ್ತಿ ಒತ್ತಿ ಕೇಳಿದಳು.

'ಹೇಗೆ ನನಗೂ ಅನುಕೂಲ?' ಎಂದು ದಾಸನ: ಶಂಕೆ ತೋರಿದನು.

'ಮದುವೆಯಾದ ಮೇಲೆ ಗಂಡೂ ಹೆಣ್ಣೂ ಇಲ್ಲೇ ಇರಬಹುದು. ನಿನಗೆ ಜತೆ ಇಲ್ಲ, ಸಹಾಯ ಇಲ್ಲ. ಶಿವನೇ ನಿಮ್ಮ ಜತೆಯಲ್ಲಿರಲಿ' ಎಂದಳು ಭದ್ರವ್ವ.

ದಾಸನು ಈಗಲೂ ಬೇಗ ಉತ್ತರ ಕೊಡಲಿಲ್ಲ.

ಬಹಳ ಹೊತ್ತಿನ ಮೇಲೆ ಪುನಃ 'ಏನು ದಾಸಣ್ಣ?' ಎಂದು ಭದ್ರವ್ವ ಪ್ರಶ್ನಿಸಿದಳು.

'ಸರಿ, ಆಗಬಹುದು. ನನ್ನ ಅಡ್ಡಿ ಇಲ್ಲ' ಎಂದು ದಾಸನು ಉತ್ತರ ಕೊಟ್ಟನು.

ಈಗ ಅವನ ಮುಖದಲ್ಲಿ ಕೊಂಚ ಗೆಲುವು. ಅಷ್ಟು ಹೊತ್ತಿಗೆ ಗೌರಿ ನೀರು ಹೊತ್ತುಕೊಂಡು ಮನೆಯ ಒಳಗೆ ಬಂದಳು. ದಾಸನ ಕೊನೆ ಮಾತು ಅವಳ ಕಿವಿಗೂ ಬಿದ್ದಿತು. ಇಷ್ಟರಿಂದಲೇ ಅವಳಿಗೆ ಎಲ್ಲ ಅರ್ಥವಾಯಿತೆನ್ನಬಹುದು. ಅದು ತನ್ನ ಮಾತು. ಶಿವ ಗಂಡನಾಗುವ ವಿಷಯ. ಆಗಲೇ ಗೌರಿಯ ಮುಖದಲ್ಲಿಯೂ ಕೆಂಪು, ನಾಚಿಕೆ, ಸಡಗರ.

ಈ ದಿನ ಗೌರಿಯು ಅವರ ಜತೆಗೆ ಎಂದಿನಂತೆ ಮಾತಿಗೆ ಸೇರಲಿಲ್ಲ. ಒಳಗೇ ಅಡುಗೆ ನೆಪದಿಂದ ಇದ್ದಳು. ಆದರೂ ಕಿವಿ ಎಲ್ಲ ಇವರ ಮಾತಿನ ಮೇಲೆಯೇ ಇದ್ದಿತು.

'ದಾಸಣ್ಣ, ನೀನೇ ಅದೃಷ್ಟಶಾಲಿ. ಹೆರಲಿಲ್ಲ, ಮಗಳು ಸಿಕ್ಕಿದಳು. ಹೊರಗೆ ಹೋಗಿ ಹುಡುಕಲಿಲ್ಲ, ಮನೆಗೇ ಅಳಿಯ ಬಂದ. ಇನ್ನೇನು?' ಎಂದಳು ಭದ್ರವ್ವ.

' ಅಷ್ಟು ಹೊತ್ತಿಗೆ ದಾಸನು ಚೇತರಿಸಿಕೊಂಡು 'ನಿನ್ನೆ ರಾತ್ರಿ ಗೌರಿ ಹೇಳಿದಳು. ನಾನೇ ಕೇಳಬೇಕೆಂದಿದ್ದೆ. ನಿನ್ನಿಷ್ಟ.' ಎಂದನು ದಾಸ ಮತ್ತೆ.

'ನನ್ನಿಷ್ಟ! ಆಗಲೇ ಹೇಳಿದೆನಲ್ಲ? ನಿನ್ನಿಷ್ಟ ಏನು? ಹೇಳು ಸರಿಯಾಗಿ' ಎಂದು ಭದ್ರವ್ವ ಪುನಃ ಕೇಳಿದಳು.

'ಸರಿ, ಭದ್ರವ್ವ. ನೀನು ಹೇಳಿದ್ದೇ ಒಳ್ಳೆಯದು. ಅದೇ ನನಗೂ ಇಷ್ಟ' ಎಂದು ದಾಸನು ಉತ್ತರ ಕೊಟ್ಟನು.

ಆಗ ಅವನಿಗೆ ತುಂಬಾ ಹರ್ಷ. ಅಷ್ಟು ಹೊತ್ತಿಗೆ ಗೌರಿಯೂ ಅವರಿದ್ದ ಎಡೆಗೆ ಬಂದಳು. ಅವಳ ಮುಖದಲ್ಲಿಯೂ ಹೊಸ ಹರ್ಷ, ನಗೆ, ಕಾಂತಿ.

'ಅಡುಗೆ ಆಯಿತೆ ಗೌರಿ?' ಎಂದು ಭದ್ರವ್ವ ಕೇಳಿದಳು.

'ಆಯಿತು ಅವ್ವ' ಎಂದು ಗೌರಿ ಉತ್ತರ ಕೊಟ್ಟು, ದಾಸನ ಹತ್ತಿರ ಬಂದು ನಿಂತಳು.

ಎಲ್ಲರೂ ಸ್ವಲ್ಪ ಕಾಲ ಸುಮ್ಮನಿದ್ದರು.

ಭದ್ರವ್ವನು ತಲೆದೂಗುತ್ತ, ದಾಸನನ್ನು ನೋಡಿ 'ಒಳ್ಳೆಯದು. ಈ ದಿನ ಕೆಲಸ ಇದೆ. ನಾನು ಈಗಲೇ ಹೋಗಬೇಕು. ಏನು ದಾಸಣ್ಣ ಗೌರಿ ಮದುವೆ ಮಾತು ಗೊತ್ತಾದ ಹಾಗೆ' ಎಂದು ಮನೆಗೆ ಹೊರಟಳು.

ಕೆಮ್ಮು ಹೆಚ್ಚಾಗಿದ್ದುದರಿಂದ ಆ ಮೇಲೆ ದಾಸನು ಕೊಂಚ ಹೊಗೆ ಬತ್ತಿ ಸೇದಿದನು. ಆ ಮೇಲೆ ರಾತ್ರಿ ಊಟ, ಮಾತು ಕಥೆಗಳು, ನಿದ್ದೆ.

ಈ ದಿನ ರಾತ್ರಿ ದಾಸನಿಗೆ ಹಿಂದಿನ ದಿನದ ಹಾಗೆ ಚಿಂತೆ ಇಲ್ಲ. ಚೆನ್ನಾಗಿ ನಿದ್ದೆ ಬಂದಿತು. 'ಗೌರಿಯ ಜತೆಗೆ ಶಿವನೂ ಸೇರುವನು. ಇನ್ನು ಅವನೇ ಅವಳ ಗಂಡ. ನಮಗೆ ಸಹಾಯ ಮನೆಯಲ್ಲೇ ಇದ್ದಂತಾಯಿತು' ಎಂದು ಅವನು ಸಂತೋಷಪಟ್ಟನು.

## ೨೦

# ಚೆನ್ನಮ್ಮನ ವಿವೇಕ

ಇತ್ತ ಊರ ಹೊರಗೆ ದಾಸನೂ ಗೌರಿಯೂ ಮದುವೆಯ ಮಾತು ಆಡುತ್ತಿದ್ದಾಗ ಅತ್ತ ಊರ ಒಳಗೆ ಹೆಗ್ಗಡೆ ಮನೆಯಲ್ಲಿ ಆ ದಿನವೇ ಊರಿಗೆ ಹೋಗುವ ವಿಷಯದಲ್ಲಿ ಚೆನ್ನಮ್ಮನಿಗೂ ಅವಳ ಅಕ್ಕ ಮಲ್ಲಮ್ಮನಿಗೂ ಸಂಭಾಷಣೆ ಮೊದಲಾಯಿತು ಆಗ ಅಲ್ಲಿ ನಾಲ್ವರು ಸೇರಿದ್ದರು—ಮಲ್ಲಮ್ಮ, ಚೆನ್ನಮ್ಮ, ಅವರ ತಂದೆ ಮತ್ತು ಬಸಪ್ಪ. ಚೆನ್ನಮ್ಮನಿಗೆ ಅಕ್ಕನೂ ತಂದೆಯೂ ಆಗ ಊರಿಗೆ ಹೋಗುವುದು ಇಷ್ಟವಿರಲಿಲ್ಲ.

' ಈ ದಿನ ಹೋಗಬೇಡಿ. ನಾಳೆ ಸಂಜೆ ಹೋಗಬಹುದು. ಅಯ್ಯನಿಗೆ ಆಯಾಸವಾಗಿದೆ. ಅವರು ಇಲ್ಲೇ ಸುಧಾರಿಸಿಕೊಳ್ಳಲಿ ' ಎಂದಳು ಚೆನ್ನಮ್ಮ.

' ನೀನು ಹೇಳಿದ್ದು ಸರಿ. ಈ ದಿನ ಬೇಡ. ನಾಳೆ ಹೋಗುವುದೇ ಮೇಲು ' ಎಂದು ಬಸಪ್ಪನೂ ಅದೇ ಅಭಿಪ್ರಾಯ ಪಟ್ಟನು.

ಅಷ್ಟರಲ್ಲಿ ಚೆನ್ನಮ್ಮ ಮಲ್ಲಮ್ಮನನ್ನು ಕುರಿತು ' ಅಕ್ಕ ಈ ಸಲ ಬೆಳೆ ಬಹಳ ಚೆನ್ನಾಗಿದೆಯಂತೆ. ತೋಟಕ್ಕೆ ಹೋಗಿಬರೋಣ. ಬಾ ' ಎಂದಳು.

ಅದಕ್ಕೆ ' ನಾವು ಈ ದಿನವೇ ಖಂಡಿತ ಹೋಗಬೇಕು. ಅಡ್ಡಿ ಮಾಡ ಬೇಡ. ಅಯ್ಯನೇ ಹೇಳಿದರು ಅಲ್ಲಿ ಮನೆಯಲ್ಲಿ ನಾವು ತಪ್ಪದೇ ಇರಬೇಕು ಈ ದಿನ ರಾತ್ರಿ ' ಎಂದು ಮಲ್ಲಮ್ಮ ಹೇಳಿದಳು.

' ಹಾಗಾದರೆ ಅಯ್ಯ ಸ್ವಲ್ಪ ಮಲಗಿದ್ದು ಏಳಲಿ. ಅವರನ್ನೇ ತಿರುಗಿ ಕೇಳೋಣ. ನೀವಿಬ್ಬರೂ ಈಗ ತೋಟಕ್ಕೆ ಬೇಗ ಹೋಗಿ ಬನ್ನಿ. ಬೇಕಾದರೆ ನಾನು ಗಾಡಿ ಸಿದ್ಧಮಾಡಿಸಿ ಇಟ್ಟಿರುತ್ತೇನೆ ' ಎಂದನು ಬಸಪ್ಪ.

' ಬೇಡಬೇಡ. ಅಯ್ಯನನ್ನು ನೋಡಿಕೊಳ್ಳುವವಳು ಅಕ್ಕ. ಅಕ್ಕ ಒಪ್ಪಿದರೆ ಅಯ್ಯ ಒಪ್ಪುತ್ತಾರೆ. ಏನಕ್ಕ? ' ಎಂದು ಕೇಳಿದಳು ಪುನಃ ಚೆನ್ನಮ್ಮ.

ಆಗ ಮಲ್ಲಮ್ಮನು 'ನಾವು ಈ ದಿನವೇ ಹೋಗಬೇಕು. ನಮ್ಮ ಮನೆಗೆ ನೆಂಟರು ಬರುತ್ತಾರೆ. ಇರುವದಕ್ಕೆ ಆಗುವದಿಲ್ಲ' ಎಂದಳು.

ಆಮೇಲೆ ಚೆನ್ನಮ್ಮನೂ ಮಲ್ಲಮ್ಮನೂ ತೋಟಕ್ಕೆ ಹೋದರು. ಬಸಪ್ಪ ಆಳಿನೊಡನೆ ಅಂಗಡಿಗೆ ಹೋದನು. ನಡುಮನೆಯಲ್ಲಿ ಯಾರೂ ಇರಲಿಲ್ಲ. ಬಸಪ್ಪನ ಮಾವನು ಮಲಗಿದ್ದನು.

ಈಗ ಹೆಗ್ಗಡೆ ಮನೆ ಮೊದಲಿನ ಹಾಗಿರಲಿಲ್ಲ, ಮನೆಯಲ್ಲಿ ಜನರು ಕಡಮೆ. ಮಂಜಪ್ಪ ಹೆಗ್ಗಡೆ ಕುಳಿತಿರುತ್ತಿದ್ದ ಮಂಚವು ಖಾಲಿ. ಅವನ ತಟ್ಟೆ ಬಟ್ಟಲು ಕೋಲು ಜೋಡು ಮುಂತಾದುವು ಹೊರಗೆ ಕಾಣಿಸುತ್ತಿರಲಿಲ್ಲ ಹಿಂದಿನ ಕಾಲದ ಚಿತ್ರಪಟಗಳು ಈಗಲೂ ಗೋಡೆಯ ಮೇಲೆ ಅಂದವಾಗಿ ತಕ್ಕ ಸ್ಥಳದಲ್ಲಿ ಶೋಭಿಸುತ್ತಿದ್ದುವು. ಚೆನ್ನಮ್ಮನು ಜಾಣೆ, ಒಳ್ಳೆಯವಳು, ಎಲ್ಲರಿಗೂ ಬೇಕಾದವಳು. ಊರಿನವರೆಲ್ಲರೂ ಅವಳನ್ನು ಕೊಂಡಾಡುವರು

ಆದರೆ ಎಲ್ಲರಿಗೂ ಒಂದು ಕೊರತೆ—ಚೆನ್ನಮ್ಮನಿಗೆ, ಅವಳ ಅಕ್ಕನಿಗೆ, ಅವರ ತಂದೆಗೆ, ಅವರ ಕಡೆಯುವರೆಲ್ಲರಿಗೂ ; ಬಸಪ್ಪನಿಗೆ, ಅವನ ಬಂಧುಮಿತ್ರರಿಗೆ ; ಕೊನೆಗೆ ಅವರಿಗೆ ಬೇಕಾದ ಊರಿನವರೆಲ್ಲರಿಗೂ ಒಂದು ಕೊರತೆ. ಅದೇನೆಂದರೆ ಹೆಗ್ಗಡೆ ಮನೆಯಲ್ಲಿ ಮಕ್ಕಳಿಲ್ಲದುದು.

ಆ ಕೊರತೆ ಬಸಪ್ಪ ಚೆನ್ನಮ್ಮನ ಮದುವೆಯಾದಮೇಲೆ ಬಹಳ ವರ್ಷಗಳವರೆಗೂ ಹೋಗಿರಲಿಲ್ಲ. ಮಂಜಪ್ಪ ಹೆಗ್ಗಡೆಗೂಕೂಡ ಸಾಯುವಾಗ ಆ ಕೊರತೆ ಇದ್ದೇ ಇದ್ದಿತು. ಆ ಮೇಲೆ ಸ್ವಲ್ಪ ಕಾಲ ಇರಲಿಲ್ಲ. ಹೆಗ್ಗಡೆ ಸತ್ತ ಒಂದೆರಡುವರ್ಷಗಳ ಮೇಲೆ ಅವರಿಗೆ ಒಂದು ಹೆಣ್ಣು ಕೂಸು ಹುಟ್ಟಿ, ಬಳೆದು, ಮೂರು ನಾಲ್ಕು ವರ್ಷಗಳು ಬದುಕಿ, ಅಷ್ಟರಲ್ಲಿಯೇ ಅಕಾಲ ಮರಣಕ್ಕೆ ಸಿಕ್ಕಿಹೋಯಿತು. ಆಮೇಲೆ ಅವರಿಗೆ ಪುನಃ ಮಕ್ಕಳ ಯೋಗವೇ ದೊರೆಯಲಿಲ್ಲ. ಚೆನ್ನಮ್ಮನಿಗೂ ಇದರಿಂದ ಮೊದಲು ಮೊದಲು ಬಹಳ ದುಃಖ. ಆದರೆ ಅವಳು ವಿವೇಕದಿಂದ ಸಮಾಧಾನ ತಂದುಕೊಂಡಳು. ಸಾಮಾನ್ಯವಾಗಿ ಅವಳು ಇತರರಂತೆ ದುಃಖಪಡುತ್ತಿರಲಿಲ್ಲ. ಮಗುವಿನ ಬಟ್ಟೆ ಬರೆಗಳನ್ನು ನೋಡಿದಾಗ ಅವಳಿಗೆ ತಡೆಯಲಾರದಷ್ಟು ದುಃಖವಾಗುತ್ತಿದ್ದಿತು. ವಿವೇಕಶಾಲಿಯಾದ ಅವಳು ಬಸಪ್ಪನಿಗೆ ಹೇಳಿ, ಬಡ ದಾಸನ

ಸಾಕುಮಗಳಾದ ಗೌರಿಗೆ ಆ ಬಟ್ಟೆಗಳನ್ನು ಕೊಟ್ಟು, ತನ್ನ ಸೌಜನ್ಯವನ್ನು ತೋರಿದಳು

ಚೆನ್ನಮ್ಮನ ವಿವೇಕವು ನಿಜವಾಗಿಯೂ ಅಸಾಧಾರಣವಾದುದು. ಅವಳ ಪಾಂಡಿತ್ಯವು ಅಷ್ಟು ಹೆಚ್ಚಿನದು ಅಲ್ಲ. ಆದರೂ ಅವಳ ಪ್ರಜ್ಞೆಯು ಬಹಳ ಹೆಚ್ಚಿನದಾಗಿದ್ದಿತು.

ತೋಟಕ್ಕೆ ಚೆನ್ನಮ್ಮನೂ ಮಲ್ಲಮ್ಮನೂ ಹೋಗಿದ್ದಾಗ, ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಏನೇನೊ ಹರಟುತ್ತ ಕೊನೆಗೆ ಹೀಗೆ ಮಾತನಾಡಿಕೊಂಡರು.

ಮಲ್ಲಮ್ಮ—ಈ ದುಃಖ ಮರೆಯಬೇಕಾದರೆ, ಚೆನ್ನಮ್ಮ, ನೀನು ಮಾಡುತ್ತಿರುವುದು ಸರಿ. ಎಲ್ಲ ಮಕ್ಕಳನ್ನೂ ನಮ್ಮ ಮಕ್ಕಳಂತೆ ಕಂಡು, ಕೈಲಾದಷ್ಟು ಸಹಾಯ ಮಾಡಬೇಕು. ಸೇವೆಯೇ ಶ್ರೇಷ್ಠ. ಗೋರಕ್ಷಣೆ ಬಹಳ ಒಳ್ಳೆಯದು. ನನ್ನ ಗತಿ ನೋಡಿ. ನಾನು ಗಂಡನನ್ನು ಕಳೆದುಕೊಂಡು ಹೇಗಿದ್ದೇನೆ!

ಚೆನ್ನಮ್ಮ—ಅಕ್ಕ ದುಃಖ ಏಕೆ? ಪ್ರಯೋಜನವೇನು ಅದರಿಂದ! ಆದರೆ ನಿಮ್ಮ ಭಾವನವರ ದುಃಖ ಹೆಚ್ಚಾಗಿದೆ ಎಷ್ಟು ಹೇಳಿದರೂ ಅವರು ಆ ಚಿಂತೆ ಬಿಡುವುದಿಲ್ಲ. ಆದರೆ ನಾನು ಮಾಡಿದ್ದೂ ತಪ್ಪೇ ಎಂದು ತೋರುತ್ತೆ

ಮಲ್ಲಮ್ಮ—ನೀನು ಮಾಡಿದ ತಪ್ಪೇನು?

ಚೆನ್ನಮ್ಮ—ಅವರಿಗೆ ಮಕ್ಕಳಿಲ್ಲದ ದುಃಖ ಯಾವಾಗಲೂ. ಮೊದಲು ಮಕ್ಕಳು ಹುಟ್ಟದ ದುಃಖ. ಆ ಹೆಣ್ಣುಮಗು ಹುಟ್ಟಿ ಹೋದಮೇಲೆ ಮಕ್ಕಳು ಸತ್ತ ದುಃಖ. ಹತ್ತು ವರ್ಷದ ಹಿಂದೆ ಒಂದು ಸಲ, ತಿರುಗಿ ಐದು ವರ್ಷದ ಹಿಂದೆ ಒಂದು ಸಲ, ದತ್ತು ತೆಗೆದುಕೊಳ್ಳಬೇಕೆಂದು ಒತ್ತಿ ಹೇಳಿದರು. ನಾನು ಒಪ್ಪಲಿಲ್ಲ. ದಾಸನ ಸಾಕುಮಗಳಾದ ಗೌರಿಯನ್ನು ಮನೆಯಲ್ಲಿಟ್ಟುಕೊಳ್ಳೋಣವೆಂದರು. ಅದಕ್ಕೂ ನಾನು ಒಪ್ಪಲಿಲ್ಲ.

ಮಲ್ಲಮ್ಮ—ಅದೇನೋ ನಿನ್ನ ತಪ್ಪು?

ಚೆನ್ನಮ್ಮ—ಇದನ್ನೂ ಕೇಳು. ನನಗೂ ಅವರಿಗೂ ಇನ್ನೂ ಆ ಮಾತು ನಡೆಯುತ್ತಲೇ ಇದೆ ಅವರ ಆಸೆ ತಪ್ಪಿಲ್ಲ, ನಾನು ಒಪ್ಪಿಲ್ಲ. ನಾನೇ ತೀರ್ಥಯಾತ್ರೆ ಹೋಗೋಣವೆಂದರೆ ಅವರ ಕಿವಿಗೆ ಬೀಳದು.

ಮಲ್ಲಮ್ಮ—ಅದೇಕೊ! ದೇವರು ಕೊಡದಿದ್ದಾಗ ದುಃಖಪಟ್ಟರೆ ಪ್ರಯೋಜನವೇನು? ತೀರ್ಥಯಾತ್ರೆಗೆ ಹೋಗುವದು ಸರಿ.

ಚೆನ್ನಮ್ಮ—ಹೊತ್ತಾಯಿತು. ಮನೆಗೆ ಹೋಗೋಣ. ಹಿಂದಿರುಗು.

ಚೆನ್ನಮ್ಮನೂ ಮಲ್ಲಮ್ಮನೂ ಮನೆಗೆ ಬಂದರು.

ಆ ದಿನ ಉಳಿಯಲು ಚೆನ್ನಮ್ಮನ ತಂದೆ ಒಪ್ಪಲಿಲ್ಲ. ಗಾಡಿ ಸಿದ್ಧವಾಗಿದ್ದಿತು. ಬಸಪ್ಪ ಕಾದಿದ್ದನು. ಅವನೇ ಎಲ್ಲರನ್ನೂ ಗಾಡಿಯಲ್ಲಿ ಕೂಡಿಸಿ, ಕೊಂಚ ದೂರ ಗಾಡಿಯ ಹಿಂದೆ ನಡೆದು ಹೋಗಿ, ಆಮೇಲೆ ಮನೆಗೆ ಹಿಂದಿರುಗಿದನು.

ಚೆನ್ನಮ್ಮನು ಒಂದು ದಿನ ಒಬ್ಬಳೇ ಕುಳಿತಿರಲು ಅವಳಿಗೆ ಸಾಕು ಮಗಳ ವಿಷಯವು ಪುನಃ ನೆನಪಿಗೆ ಬಂದಿತು. ಅವಳು ಶ್ರೇಷ್ಠರೀತಿಯ ಸಾಧ್ವಿ. ಅವಳ ಪತಿಭಕ್ತಿಯೂ ದೈವಭಕ್ತಿಯೂ ಸಮವಾಗಿದ್ದುವು. ಗಂಡನ ದುಃಖಕ್ಕೆ ತಾನೆಷ್ಟುಮಟ್ಟಿಗೆ ಕಾರಣ ಎಂದು ಅವಳು ಪದೇಪದೇ ಆತ್ಮ ಪರೀಕ್ಷೆ ಮಾಡಿಕೊಳ್ಳುವಳು ಅವಳಿಗೆ ಗೀತಾ ಅಂತಹ ಉದ್ಗ್ರಂಥಗಳ ಪರಿಚಯುವು ಇದ್ದಿತೆಂದು ಹೇಳಲಾಗದು. ಆದರೂ ಅವಳ ಆತ್ಮಜ್ಞಾನವು ಹೆಚ್ಚಿನ ಮಟ್ಟಕ್ಕೆ ಸೇರಿದುದಾಗಿದ್ದಿತು. ದೈವೇಚ್ಛೆಯಿಂದು ದೇವರು ಕೊಡದಿದ್ದಾಗ ಆಸೆಪಡದೆ, ಭಕ್ತಿಯಿಂದ ಹರ್ಷಚಿತ್ತರಾಗಿರುವುದು ವಿವೇಕ. ಹೀಗೆಂದು ಅವಳು ಅನೇಕಾವೃತ್ತಿ ಹೇಳಿದ್ದಳು.

ಹೀಗೆ ಇನ್ನು ಕೆಲವು ದಿನಗಳು ಕಳೆದುವು.

ಒಂದು ದಿನ ಚೆನ್ನಮ್ಮನಿಗೂ ಬಸಪ್ಪನಿಗೂ ಪುನಃ ಇದೇ ವಿಷಯದಲ್ಲಿ ಮಾತು ನಡೆಯಿತು.

ಚೆನ್ನಮ್ಮ—ನಿಮಗೆ ಇನ್ನೂ ಜ್ಞಾನ ಬರಲಿಲ್ಲವಲ್ಲ! ದುಃಖ ಯಾವಾಗ ತಪ್ಪುವದು. ಚಪಲ ಬೇಡ.

ಬಸಪ್ಪ—ಗೌರಿ ನಮ್ಮ ಮನೆಗೆ ಬಂದರೇನು ಕೆಡಕು? ದಾಸನ ಮನೆಯಲ್ಲಿ ಅವಳು ಚೆನ್ನಾಗಿಲ್ಲವೆ! ಅಂತಹ ಹುಡುಗಿ ಎಲ್ಲಿದೆ ಹೇಳು.

ಚೆನ್ನಮ್ಮ—ದಾಸ ಹುಡುಕಲಿಲ್ಲ. ತಾನಾಗಿ ಬಂದಳು. ಅದೇ ದೈವೇಚ್ಛೆ!
ನಾವಾಗಿ ಮಾಡುವದು ತಾನಾಗಿ ಆಗುವಷ್ಟು ಚೆನ್ನಾಗಿರುವದಿಲ್ಲ.
ದತ್ತು ತೆಗೆದುಕೊಳ್ಳುವರ ಗತಿ ಏನು ಹೇಳಲಿ ?

ಬಸಪ್ಪ—ಹಾಗಿದ್ದರೆ ದತ್ತು ತೆಗೆದುಕೊಳ್ಳುವವರೆಲ್ಲರೂ ದುಃಖ ಪಡುತ್ತಾರೊ? ನಿಮ್ಮ ಊರಿನ ಮಹದೇವಯ್ಯನವರು ದತ್ತು ತೆಗೆದುಕೊಂಡು ಸುಖವಾಗಿಲ್ಲವೊ ? ನಾವೂ ಏಕೆ ತೆಗೆದುಕೊಳ್ಳಬಾರದು ?

ಚೆನ್ನಮ್ಮ—ಏನೇ ಹೇಳಿ. ಅದು ನನಗೆ ಒಪ್ಪಿಗೆ ಇಲ್ಲ. ನಿಮಗೆ ಅದು ಒಪ್ಪಿಗೆ ಇರಬಹುದು. ದೈವೇಚ್ಛೆಗಿಂತ ನಮ್ಮ ಇಚ್ಛೆ ಹೆಚ್ಚಲ್ಲ.

ಬಸಪ್ಪ—ಏನು ಮಾಡೋಣ! ನಿನ್ನಿಷ್ಟ ಹಾಗೆ, ನನ್ನಿಷ್ಟ ಹೀಗೆ.

ಚೆನ್ನಮ್ಮ—ತಪ್ಪೆಂದು ತೋರುವುದನ್ನು ಹೇಗೆ ಒಪ್ಪಲಿ ? ದತ್ತು ಯೋಚನೆ ನಿಮಗೆ ಹಿತವಾಗಿದೆ, ನನಗೆ ಹಿತವಾಗಿಲ್ಲ.

ದೈವೇಚ್ಛೆಯಂತೆ ನಡೆಯಬೇಕು.

ಚೆನ್ನಮ್ಮನು ತನ್ನ ಗಂಡನನ್ನು ಮೆಚ್ಚಿಸಲಿಕ್ಕೆ ಪ್ರಯತ್ನ ಪಟ್ಟಷ್ಟು ಯಾವ ಹೆಂಡತಿಯೂ ಪಡಲಾರಳು. ಅವಳಲ್ಲಿ ಅಹಂಭಾವವು ಸ್ವಲ್ಪವೂ ಇರಲಿಲ್ಲ. ಅವಳ ಪತಿಭಕ್ತಿಯು ಪರಿಪೂರ್ಣವಾಗಿದ್ದಿತು. ಅವಳು ಗಂಡನನ್ನು ಸದಾ ಸರ್ವಪ್ರಕಾರದಲ್ಲಿಯೂ ಸಂತೋಷ ಪಡಿಸುವಳು. ಅವಳ ಕರ್ತವ್ಯನಿಷ್ಠೆ ಉಚ್ಚವರ್ಗಕ್ಕೆ ಸೇರಿದುದು. ಚಿಕ್ಕಂದಿನಿಂದ ಅವಳು ವೈಯಕ್ತಿಕ ಸುಖವನ್ನು ತೃಣೀಕರಿಸಿ ದೈವೇಚ್ಛೆಯನ್ನು ಮಹತ್ತರವಾಗಿ ಎಣಿಸಿದ್ದಳು. ಪಾಂಡಿತ್ಯವಿಲ್ಲದಿದ್ದರೂ ಭಕ್ತಿಯಿಂದ ಅವಳು ಆ ಸಿದ್ಧಾಂತವನ್ನು ಮನಗಂಡು ಆಚರಿಸುತ್ತಿದ್ದಳು.

ಬಸಪ್ಪನು ತತ್ವಜೀವಿಯಲ್ಲ. ಅವನು ತನ್ನ ಇಚ್ಛಾಪೂರ್ತಿಗೆ ಪ್ರಯತ್ನಪಡುವವನು. ಯಾರೂ ಅವನನ್ನು ದುಷ್ಟನೆಂದು ಹೇಳರು. ಚೆನ್ನಮ್ಮನನ್ನು ಕಂಡರೆ ಅವನಿಗೆ ನಿಜವಾಗಿಯೂ ಗೌರವ ಮತ್ತು ಪ್ರೀತಿ. ತನ್ನ ದೆಸೆಯಿಂದ ಗಂಡನಿಗೆ ಮಕ್ಕಳಿಲ್ಲದ ದುಃಖವೆಂಬ ವ್ಯಸನವು ಕೊಂಚ ಮಟ್ಟಿಗೆ ಅವಳನ್ನೂ ಬಾಧಿಸುತ್ತಿದ್ದಿತು. ಆತ್ಮಸಾಕ್ಷಿಗೆ ವಿರೋಧವಾಗಿ ನಡೆಯಲಿಕ್ಕೆ ಅವಳಿಗೆ ಇಷ್ಟವಿಲ್ಲ.

ಗೌರಿಯನ್ನು ಸಾಕುಮಗಳಾಗಿ ಇಟ್ಟುಕೊಳ್ಳಬಹುದೆಂದು ಅವಳಿಗೆ ಸುಮಾರು ಹತ್ತು ವರ್ಷಗಳಿಂದಲೂ ಬಸಪ್ಪನು ಹವಣಿಸುತ್ತಿದ್ದನು. ದಾಸನು ಪ್ರಾಣ ಬಿಟ್ಟರೂ ಗೌರಿಯನ್ನು ಬಿಡನೆಂಬ ಸೂಕ್ಷ್ಮವು ಅವನಿಗೆ ತೋರಲಿಲ್ಲ. ಕಷ್ಟದಿಂದ ಸಾಕಿದ ಹುಡುಗಿಗೆ ಒಳ್ಳೆಯದಾದರೆ ದಾಸನಿಗೆ ಇನ್ನೇನು ಬೇಕು? ಗೌರಿಯ ಕೃತಜ್ಞತೆಯು ಇದ್ದೇ ಇರುತ್ತದೆ. ಅವಳು ಎಲ್ಲಿದ್ದರೇನು? ದಾಸನಿಗೂ ಆಮರಣಾಂತ ಇದರಿಂದ ಅನುಕೂಲವಲ್ಲವೆ' ಎಂದಷ್ಟು ಮಾತ್ರವೇ ಅವನು ಯೋಚಿಸುವನು. ದಾಸನಿಗೂ ಗೌರಿಗೂ ಇದ್ದ ಸಂಬಂಧದ ಸ್ವರೂಪವು ಸ್ವಲ್ಪವೂ ಅವನಿಗೆ ಅರ್ಥವಾಗಲಿಲ್ಲ. ಶುದ್ಧ ಪ್ರೇಮದ ಪವಿತ್ರತೆಯನ್ನಾಗಲಿ ಪ್ರಭಾವವನ್ನಾಗಲಿ ಅವನು ಅರಿಯ ಲಾರನು ಹಿಂಸಾತ್ಮಕವಾದ ಅಂತಹ ವಿಯೋಗವನ್ನು ಅವನು ಉದ್ದೇಶಿಸಿ ದುದಕ್ಕೆ ಅವನ ಮನೋಧರ್ಮವೇ ಕಾರಣ.

ಚೆನ್ನಮ್ಮನಿಗೆ ದತ್ತು ಸ್ವೀಕಾರಕ್ಕೆ ತಾನು ಒಪ್ಪದಿದ್ದುದು ಸರಿಯೆಂದೇ ತೋರಿತು. ಅವರು ಬೇರೆ ಹೆಂಗಸನ್ನು ಮದುವೆಯಾಗಿದ್ದರೆ ಮನೆಯಲ್ಲಿ ಮಕ್ಕಳಿರಬಹುದು ಆದರೆ ಆಗ ಈಗಿನಷ್ಟು ಸುಖವಿದ್ದಿರಲಾರದು. ಬೇರೆ ರೀತಿಗಳಲ್ಲಿ ಅವರಿಗೆ ಆ ಹೆಂಗಸಿಂದಲೇ ಚಿಂತೆಯುಂಟಾಗಿದ್ದಿರಬಹುದು' ಎಂದು ಮುಂತಾಗಿ ಅವಳು ತನ್ನಲ್ಲಿ ತಾನೇ ಯೋಚಿಸಿಕೊಳ್ಳುವಳು. ಬಸಪ್ಪನು ತನ್ನ ವಿಷಯದಲ್ಲಿ ಒಂದು ಸಲವಾದರೂ ಒಂದು ಅಪ್ರಿಯ ವಚನ ಪ್ರಯೋಗವನ್ನು ಮಾಡಿರಲಿಲ್ಲ. ಇದರಿಂದ ಅವಳಿಗೆ ಅವನಲ್ಲಿ ಬಹಳ ಪ್ರೀತಿ ಮತ್ತು ಗೌರವ.

ದತ್ತು ಸ್ವೀಕಾರದ ವಿಷಯದಲ್ಲಿ ಮಾತ್ರ ಚೆನ್ನಮ್ಮನು ಪತಿಯ ಇಷ್ಟಕ್ಕೆ ಒಪ್ಪದೆ ಚಿಂತೆಯುಂಟುಮಾಡಿದಳು. ಅವಳ ಪ್ರೀತಿ ವಿಶ್ವಾಸ ಸುಗುಣಗಳು ಅವನಿಗೂ ಚೆನ್ನಾಗಿ ಗೊತ್ತಿಲ್ಲದೆ ಇರಲಿಲ್ಲ. ಅವಳ ಅನಂಗೀಕಾರಕ್ಕೆ ಅವನು ತಪ್ಪು ಕಾರಣಗಳನ್ನು ಎಂದಿಗೂ ಹೇಳನು. ಅವರಿಬ್ಬರಿಗೂ ಹದಿನೈದು ವರ್ಷಗಳ ದಾಂಪತ್ಯ ಸಂಬಂಧವಿದ್ದಿತು. ಅವಳು ಸ್ವಾರ್ಥವಿಲ್ಲದೆ, ಪ್ರೇಮದಿಂದ, ಪರಿಶುದ್ಧಾತ್ಮಳಾಗಿ, ಸರಳವಾಗಿದ್ದುದನ್ನು ಅವನೂ ಚೆನ್ನಾಗಿ ಬಲ್ಲನು.

ತನ್ನ ಪತ್ನಿಯ ಭಕ್ತಿಯನ್ನು ನೋಡಿ ಬಸಪ್ಪನಿಗೇ ನಾಚಿಕೆ. ಗೌರಿಯು ತನ್ನ ಮಗಳೆಂಬುದನ್ನು ಚೆನ್ನಮ್ಮನಿಗೆ ಹೇಳಲು ಸಾಧ್ಯವೇ ಎಂದು ಮನಸ್ಸಿ

ಲ್ಲಿಯೇ ತಪಿಸುತ್ತಿದ್ದನು. ಬಹುಶಃ ಅವಳಿಗೆ ತಿಳಿದರೆ ತನ್ನ ವಿಷಯದಲ್ಲಿ ಯೂ ಗೌರಿಯ ವಿಷಯದಲ್ಲಿಯೂ ಗೌರವ ಪ್ರೀತಿಗಳು ಕಡಮೆಯಾಗಿ ನಾದರಣೆಯುಂಟಾದೀತೆಂಬ ಭಯ ತೋರಿತು. ತನಗೂ ತನ್ನ ಮೆಚ್ಚಿನ ಬದ್ದು ಮಡದಿಗೂ ಮನಸ್ತಾಪ ಬರದಂತೆ ವರ್ತಿಸುವುದೇ ಲೇಸೆಂದು ವನು ನಿರ್ಧರಿಸಿದನು.

ಒಂದು ದಿನ ಸಂಜೆ ಮೂರು ಗಂಟೆ ಚೆನ್ನಮ್ಮನಿಗೆ ಗೌರಿಯ ನೆನಪು ಂದು ತನಗೂ ತನ್ನ ಗಂಡನಿಗೂ ಐದು ವರ್ಷಗಳ ಹಿಂದೆ ನಡೆದಿದ್ದ ಮಾತು ತೆಗಳು ಜ್ಞಾಪಕಕ್ಕೆ ಬಂದಿತು. ಪುನಃ ಮನಸ್ಸಿನಲ್ಲಿ ತನ್ನ ತೀರ್ಮಾನವು ರಿಯೋ ಎಂಬ ಯೋಚನೆ ಹುಟ್ಟಿತು.

‘ವಯಸ್ಸಾದ ಹಾಗೆಲ್ಲ ಅವರಿಗೆ ಈ ಯೋಚನೆ ಹೆಚ್ಚಬಹುದು. ದೇನೂ ತಪ್ಪಲ್ಲ. ಈಗ ನಮ್ಮಯ್ಯನಿಗೆ ಮಲ್ಲಕ್ಕ ಇಲ್ಲದಿದ್ದರೆ ಏನು ಗತಿ ? ನು ಮುಂಚೆ ಸತ್ತರೆ ಅವರಿಗೆ ಯಾರು ಸಹಾಯಕರು ! ತಮ್ಮನ ಪ್ರೀತಿ ಲ್ಲವೇ ಇಲ್ಲ. ಆದ್ದರಿಂದ ಅವರು ಹೇಳುವದೂ ನ್ಯಾಯ ? ಎಂದು ಂಡು ಯಾವಾಗಲಾದರೂ ಒಂದೊಂದು ಸಲ ತನ್ನನ್ನು ತಾನೇ ಆಕ್ಷೇಪಿಸಿ ಳ್ಳುವಳು. ಹಾಗೆಯೇ ಯೋಚಿಸುತ್ತ ‘ಮುಂದಾಗಿ ಊಹಿಸಿಕೊಂಡು ಂತಿಸುವದು ಸರಿಯಲ್ಲ. ಇರಲಿ ನೋಡೋಣ. ಸದ್ಯದ ಕರ್ತವ್ಯ ನೆರ ೇರಿದರೆ ಸಾಕು. ದೈವಾಜ್ಞೆಯನ್ನು ಮೀರಲಾಗುವುದಿಲ್ಲ’ ಎಂದುಮತ್ತೆ ತನಗೆ ನೇ ಸಮಾಧಾನವನ್ನೂ ಹೇಳಿಕೊಳ್ಳುವಳು. ಕೊನೆಗೆ ವಿಚಾರ ಮಾಡಿ ನಃ ತನ್ನ ಹಿಂದಿನ ಸಿದ್ಧಾಂತವೇ ಸರಿಯೆಂದು ನಿಶ್ಚಯಿಸುವಳು.

ಅಷ್ಟರಲ್ಲಿ ಸೇವಕಳು ತಾಂಬೂಲ ತರುವ ಹೊತ್ತಾಯಿತು. ಏಕೋ ನ್ನಮ್ಮನಿಗೆ ಆಗ ಬಹಳ ವ್ಯಾಕುಲ. ಸೇವಕಳು ಬಂದ ಕೂಡಲೆ ಅವಳಿಗೆ ಂಡನ ವಿಷಯವಾಗಿ ಕೇಳಬೇಕೆನ್ನಿಸಿತು.

ನ್ನಮ್ಮ—ಯಜಮಾನರು ಒಳಗಿದ್ದಾರೆಯೋ ಲಚ್ಮಿ?

ಚ್ಮಿ—ಇಲ್ಲ, ಅಮ್ಮ, ಎಲ್ಲಿಗೋ ಹೋಗಿದ್ದಾರೆ.

ನ್ನಮ್ಮ—ಎಷ್ಟು ಹೊತ್ತಾಯಿತು ?

ಚ್ಮಿ—ಆಗಲೇ ಹೋದರು.

ನ್ನಮ್ಮ—ಒಬ್ಬರೇ ಹೋದರೊ, ಆಳನ್ನೂ ಕರೆದುಕೊಂಡು ಹೋದರೊ ?

ಲಚ್ಮಿ—ಒಬ್ಬರೇ ಹೋದರು. ಆಳು ಹಿತ್ತಲಲ್ಲಿ ಇದಾನೆ.

ಚೆನ್ನಮ್ಮ—ಆಳನ್ನು ಕರೆ. ಹುಡುಕಿಕೊಂಡು ಬರಲಿ.

ಆಗ ಚೆನ್ನಮ್ಮನಿಗೆ ಮೊದಲಿಗಿಂತ ಹೆಚ್ಚು ವ್ಯಾಕುಲವಾಯಿತು. ಏನೂ ಬೇಕಿಲ್ಲ. ಸುಮ್ಮನೆ ಕುಳಿತಳು. ಗಂಡ ಬರುವ ನಿರೀಕ್ಷಣೆ ಹೊರತು ಬೇರೆ ಏನೂ ಯೋಚನೆ ಇಲ್ಲ.

ಲಚ್ಮಿ— ಅಮ್ಮ, ಬೀದಿಯಲ್ಲಿ ತುಂಬಾ ಗದ್ದಲ. ನಾನು ಮಾಳಿಗೆಗೆ ಹತ್ತಿದ್ದಾಗ ನೋಡಿದೆ. ಅದೇನು ಗೊತ್ತೆ ?

ಚೆನ್ನಮ್ಮ—ಗೌಡಪ್ಪನವರ ಗೂಳಿ ಕಿತ್ತುಕೊಂಡಿರಬಹುದು.

ಲಚ್ಮಿ—ಅದು ಯಾರನ್ನು ತಿವಿದುಹಾಕುತ್ತೊ ?

ಚೆನ್ನಮ್ಮ—ಯಜಮಾನರು ಬಂದರೆ? ನೋಡು, ಲಚ್ಮಿ ಮೊದಲು ಹೋಗು. ಏಕೋ ಬಸಪ್ಪನು ಸದ್ಯಕ್ಕೆ ಸೌಖ್ಯವಾಗಿ ಬಂದರೆ ಸಂತೋಷವೆನ್ನಿಸಿತು. ಲಚ್ಮಿ ಬೇಗ ಬಂದು ಹೇಳಲಿಲ್ಲ. ಚೆನ್ನಮ್ಮನೇ ಹೋಗಿ ಬಾಗಿಲ ಮುಂದೆ ನಿಂತಳು ಊರ ಮುಂದೆ ಚಾವಡಿ ಹತ್ತಿರ ಒಂದು ದೊಡ್ಡ ಜನರ ಗುಂಪು ಕಾಣಿಸಿತು. ಆ ಗುಂಪು ಏಕೆಂದು ಅವಳಿಗೆ ಊಹಿಸಲಾಗಲಿಲ್ಲ. ಅಷ್ಟು ಹೊತ್ತಿನಲ್ಲಿ ಬಸಪ್ಪನು ಕಳ್ಳರನ್ನು ಹಿಡಿಯಲು ತೋಟಕ್ಕೆ ಹೋಗಿಬರುವುದುಂಟು. ಅವನು ಬಹಳ ಹೊತ್ತಾದರೂ ಇನ್ನೂ ಬರಲಿಲ್ಲ. ಅವಳ ಕಳವಳ ಹೆಚ್ಚಿತು. ಕೊನೆಗೆ ಒಳಗೆ ಹೋಗಿ ತವಕಪಡುತ್ತ ನಡುಮನೆಯಲ್ಲಿ ಸುಮ್ಮನೆ ಕುಳಿತುಕೊಂಡುಬಿಟ್ಟಳು.

೨೧

# ರಹಸ್ಯ ರಟ್ಟಾದುದು

ಕಾಲಿನ ಸಪ್ಪಳ! ಬಸಪ್ಪ ಒಳಕ್ಕೆ ಬಂದನು. ಚೆನ್ನಮ್ಮ ತಿರುಗಿ ನೋಡಿದಳು. ಆವಳ ಸಂತೋಷ ಅಷ್ಟಿಷ್ಟಲ್ಲ. 'ಸದ್ಯಕ್ಕೆ ಮನೆಗೆ ಬಂದಿರಲ್ಲ! ನಿಜವಾಗಿಯೂ ನನಗೆ ಬಹಳ ....' ಎಂದು ಹೇಳುವುದರಲ್ಲಿದ್ದಳು.

ಅಷ್ಟರಲ್ಲಿ ಬಸಪ್ಪನು, ತಲೆ ಮೇಲಿನ ವಸ್ತ್ರ ತೆಗೆದುಹಾಕಿ, ಮೈ ನಡುಗಿಸುತ್ತ, ಚೆನ್ನಮ್ಮನ ಕಡೆ ನೋಡಿ, ಮಾತನಾಡಲು ಯತ್ನಿಸಿದನು.

ಲಚ್ಚಿ ಈಗ ತಾಂಬೂಲ ತಂದಳು.

ಬಸಪ್ಪ—ಇನ್ನೂ ಆಗಿಲ್ಲವೊ? ಇಟ್ಟು ಹೋಗು. ಇಲ್ಲಿ ನಿಲ್ಲಬೇಡ

ಲಚ್ಚಿ ಹೆದರಿ, ಇಟ್ಟು, ಒಳಗೆ ಓಡಿದಳು. ಬಸಪ್ಪ ಏನೋ ಹೇಳಲು ಪ್ರಯತ್ನಪಟ್ಟು ಚೆನ್ನಮ್ಮನ ಕಡೆ ತಿರುಗಿದನು. ಆವಳಿಗೆ ಗಾಬರಿಯಾಯಿತು ಅವನ ಮುಖ ನೋಡಿ.

ಬಸಪ್ಪ—ಕೂತುಕೊ. ನಾನೇ ನಿನಗೆ ಹೇಳಲು ಓಡಿ ಬಂದೆ. ನನ್ನ ಮೈಯೋ ನಡಗುತ್ತೆ. ನಿನ್ನ ಮೈ ಇನ್ನೆಷ್ಟು ನಡಗುತ್ತೊ?

ಚೆನ್ನಮ್ಮ—ಏನು ಸಮಾಚಾರ? ಯಾರಿಗೆ ಏನಾಗಿದೆ? ಅಯ್ಯ ಮಲ್ಲಕ್ಕ ಎಲ್ಲರೂ ಸೌಖ್ಯವಷ್ಟೆ?

ಚೆನ್ನಮ್ಮನು ತನ್ನ ಮುಖದ ಮೇಲಿನ ಬೆವರನ್ನು ಒರಸಿಕೊಂಡಳು.

ಬಸಪ್ಪ—ಇದು ಅವರ ವಿಷಯವಲ್ಲ. ಸತ್ತವರ ಸುದ್ದಿ. ಚೆನ್ನಮ್ಮನಿಗೆ ಅರ್ಥವಾಗಲಿಲ್ಲ. ಬಹಳ ಚಿಂತೆ.

ಚೆನ್ನಮ್ಮ—ಏನು? ಹೇಳಿ ಬೇಗ.

ಬಸಪ್ಪ—ನಾಗಣ್ಣ ಆಗ ಹೋದವನು, ಅವನ ಸುದ್ಧಿ! ಅವನು ಇಲ್ಲೇ ಸತ್ತುಹೋಗಿದಾನೆ. ಗುರುತುಗಳು ಸಿಕ್ಕಿವೆ.

ಚೆನ್ನಮ್ಮನ ಕಳವಳ ಕಡಮೆಯಾಯಿತು. ಆದರೆ ಅವಳಿಗೆ ತೀರ ಅರ್ಥವಾಗಲಿಲ್ಲ. ಕುತೂಹಲದಿಂದ ಪಕ್ಕದಲ್ಲಿ ಕುಳಿತಿದ್ದಳು.

ಬಸಪ್ಪ—ಎಲ್ಲಿ ಗೊತ್ತೆ ? ದಾಸನ ಮನೆ ಹತ್ತಿರದ ಕುಳಿಯಲ್ಲಿ. ಈಗ ಅದರಲ್ಲಿ ನೀರಿಲ್ಲ ನಾನೇ ಕಾಲುವೆ ಮಾಡಿಸಿ ನೀರು ಹೊರಡಿಸಿದೆ. ಕುಳಿಯಲ್ಲಿ ಎರಡು ಕಲ್ಲುಗಳ ಮಧ್ಯೆ ನಾಗನ ಹೆಣ ಸಿಕ್ಕಿಬಿದ್ದಿತ್ತು. ಕೆಲಸದವರು ಅದನ್ನ ಹೊರಗೆ ತೆಗೆದರು. ಉಂಗುರ, ಚಾವಟಿ ಕೋಲು, ಉಡಿದಾರ ಮೊದಲಾದ ಗುರುತುಗಳೆಲ್ಲ ಇವೆ.

ಬಸಪ್ಪನ ಬಾಯಲ್ಲಿ ಮಾತು ಹೊರಡಲಿಲ್ಲ.

ಚೆನ್ನಮ್ಮ—ಅವನು ಅಲ್ಲಿ ಹೇಗೆ ಸತ್ತ ?

ಬಸಪ್ಪ—ಯಾರಿಗೆ ಗೊತ್ತು ? ಅಷ್ಟೇ ಅಲ್ಲ,

ಚೆನ್ನಮ್ಮ—ಇನ್ನೇನು ?

ಬಸಪ್ಪ—ದಾಸನ ಹೊನ್ನಿನ ಚೀಲಗಳೂ ಅಲ್ಲೇ ಸಿಕ್ಕಿದುವು ಪಕ್ಕದಲ್ಲಿ. ಅವನೇ ಕದ್ದಿರಬೇಕು.

ತಿರುಗಿ ಬಸಪ್ಪನು ಮಾತು ನಿಲ್ಲಿಸಿ ಅವಳ ಕಡೆ ನೋಡಿದನು. ಅವಳ ಮುಖದ ತುಂಬ ಬೆವರು, ನಾಚಿಕೆ, ಅಚ್ಚರಿ. ಅವಳಿಗೇ ಅಧರ್ಮ, ಅಸತ್ಯ, ಅನ್ಯಾಯವೆಂದರೆ ಆಗದು.

ಚೆನ್ನಮ್ಮ—ವಿಚಿತ್ರ ! ನಿಜವೆ ? ಸರಿಯಾಗಿ ಹೇಳಿ.

ಬಸಪ್ಪ—ಕುಳಿಯಲ್ಲಿ ನಾಗನ ಹೆಣ ಹೂತುಬಿದ್ದಿತ್ತು. ಜತೆಯಲ್ಲೇ ದಾಸನ ಚೀಲಗಳೂ ಬಿದ್ದಿದ್ದವು. ಹೆಣ, ಹೊನ್ನು, ಚಾವಟಿ ಎಲ್ಲವನ್ನೂ ಚಾವಡಿ ಮುಂದೆ ತಂದು ಹಾಕಿದ್ದಾರೆ. ನಾನೇ ನಿನಗೆ ಹೇಳುವುದಕ್ಕೆ ಬಂದೆ.

ಪುನಃ ನಿಶ್ಶಬ್ದ. ಕುತೂಹಲ ಚೆನ್ನಮ್ಮನಿಗೆ. ಪ್ರಶ್ನಿಸಬೇಕೆಂದಿರಲು ಬಸಪ್ಪನೇ ಮಾತಾಡತೊಡಗಿದನು. ಎವೆ ಇಕ್ಕದೆ ಚೆನ್ನಮ್ಮ ಕುಳಿತಿದ್ದಳು.

ಬಸಪ್ಪ—ಯಾವ ಗುಟ್ಟಾಗಲಿ ಹೊರಬೀಳದೆ ಇರುವದಿಲ್ಲ. ದೇವರು ಎಲ್ಲಕ್ಕೂ ಸಾಕ್ಷಿ. ಎಲ್ಲರ ಗುಟ್ಟೂ ಹೇಗಾದರೂ ಎಂದಾದರೂ ರಟ್ಟಾಗುತ್ತೆ.

ಚೆನ್ನಮ್ಮ—ಮುಂದಿನ ಮಾತು ? ಮುಂದಿನ ಮಾತೆ ?

ಬಸಪ್ಪ—ದಾಸನಿಗೆ ಚಿನ್ನ ಕೊಡಿಸಿ, ನಾಗನ ಹೆಣ ಒಪ್ಪಮಾಡಿದರಾಯಿತು.

ಅಂತು ನಾಚಿಕೆಗೇಡಿನ ವಿಷಯ! ಚೆನ್ನಮ್ಮನ ಮನಸ್ಸನ್ನು ವರ್ಣಿಸಲಾಗದು.

ಆ ಮೇಲೆ ಊರಿನವರು ಚಾವಡಿ ಬಳಿ ಸೇರಿದರು. ದಾಸನ ಚಿನ್ನ ದಾಸನಿಗೆ ಸೇರಿತು. ನಾಗನ ಹೆಣ ಒಪ್ಪವಾದ ಮೇಲೆ ಎಲ್ಲರೂ ಮನೆಗಳಿಗೆ ಹಿಂದಿರುಗಿದರು.

ಕೆಲವು ದಿನಗಳ ತನಕ ಊರಿನಲ್ಲಿ ಈ ಮಾತೇ ದಾಸನ ಮನೆಗೆ ಹೋಗಿ ವಿಚಾರಿಸುವವರು ಕೆಲವರು. ಕುಳಿಗೆ ಹೋಗಿ ನೋಡುವವರು ಕೆಲವರು. ದಾರಿಯಲ್ಲಿ ಮಾತನಾಡಿಕೊಳ್ಳುವವರು ಕೆಲವರು ಈ ಮಾತು ಮರೆಯಲಿಕ್ಕೆ ಬಹಳ ಕಾಲ ಹಿಡಿಯಿತು.

ಆ ದಿನ ರಾತ್ರಿ ಬಸಪ್ಪನ ಮನಸ್ಸು ಸ್ವಲ್ಪವೂ ಸ್ವಸ್ಥವಿರಲಿಲ್ಲ. ಚೆನ್ನಮ್ಮ ನಿಗೆ ತಾನೇ ತನ್ನ ತಪ್ಪನ್ನು ಒಪ್ಪಿಕೊಂಡ ಹೊರತು ಮನಶ್ಶಾಂತಿ ಬರಲಾರ ದೆಂದು ತೋರಿತು. ಕೊನೆಗೆ ಅವನು ತಾನಾಗಿಯೇ ಸಂಭಾಷಣೆ ಮೊದಲು ಮಾಡಿದನು

ಬಸಪ್ಪ—ನನ್ನ ಮನಸ್ಸಿನಲ್ಲಿ ಒಂದು ಗುಟ್ಟು ಇದೆ. ನಾನು ಅದನ್ನು ನಿನಗೆ ಹೇಳಿಬಿಡಬೇಕೆಂದಿದ್ದೇನೆ ಈಗ. ನಾನು ಸತ್ತ ಮೇಲೆ ಅದು ಬೇರೆ ಯವರಿಂದ ಹೊರಬೀಳಬಾರದು. ಇಷ್ಟು ಕಾಲ ನಾಚಿಕೆ ಸಂಕೋ ಚದಿಂದ ಸುಮ್ಮನಿದ್ದೆ. ಏನೆನ್ನುವಿಯೋ ನೀನು?

ಚೆನ್ನಮ್ಮನಿಗೆ ಪುನಃ ಗಾಬರಿ, ಕುತೂಹಲ, ಅರ್ಥವಾಗದು. ಇಬ್ಬರ ಕಣ್ಣುಗಳೂ ಸಂಧಿಸಿದುವು ಅದು ಪ್ರೇಮ ಪರೀಕ್ಷೆಯ ಸಮಯ.

ಬಸಪ್ಪ—ನಾನು ನಿನ್ನನ್ನು ಮದುವೆಯಾದಾಗ ಒಂದು ಸಂಗತಿ ನಿನಗೆ ಹೇಳಲಿಲ್ಲ. ಆಮೇಲಾದರೂ ತಿಳಿಸಬೇಕಾಗಿತ್ತು. ಮರೆಸಿಟ್ಟಿದ್ದೆ. ಇದು ಮತ್ತಾರಿಗೂ ಗೊತ್ತಿಲ್ಲ. ಗೌರಿ ನನ್ನ ಮಗಳು. ಗೌರಿ ತಾಯಿ ನನ್ನ ಹೆಂಡತಿ. ಅವಳ ಹೆಸರು ಮಾಯಿ. ಆ ದಿನ ಊರಿಗೆ ಬಂದು ದಾಸನು ಹೇಳಿದ ಹೆಂಗಸು ಅವಳೇ.

ಪುನಃ ಬಸಪ್ಪನೂ ಮೂಕನಂತೆ ಕುಳಿತನು. ಇದರಿಂದ ಚೆನ್ನಮ್ಮನ ಮೇಲೆ ಆಗುವ ಪರಿಣಾಮವನ್ನು ಊಹಿಸಲಿಕ್ಕೂ ಅವನಿಗೆ ಅಸಾಧ್ಯ. ಇದನ್ನು ಕೇಳುತ್ತಲೇ ಚೆನ್ನಮ್ಮನ ಮುಖ ತಗ್ಗಿತು. ಕಣ್ಣುಗಳು ಭೂಮಿಯ

ಕಡೆ ತಿರುಗಿದುವು. ವಿವರ್ಣವಾಗಿ, ಪುತ್ಥಳಿಯಂತೆ ಚಲಿಸದೆ, ಕೆನ್ನೆಯ ಮೇಲೆ ಕೈಯಿಟ್ಟು ಮಾತನಾಡದೆ ಅವಳೂ ಕುಳಿತಳು. ಬಹಳ ಹೊತ್ತು ಇಬ್ಬರೂ ಹೀಗೆ ಕೂತಿದ್ದರು.

ಬಸಪ್ಪ—ಕ್ಷಮಿಸು. ಕೋಪಮಾಡಬೇಡ. ತಪ್ಪಾಯಿತು

ಅವನ ಮುಖದ ತುಂಬ ಬೆವರು. ಗದ್ಗದ ಸ್ವರ. ನಾಚಿಕೆ. ಅವನು ಆತ್ಮ ನಿಂದೆಯಿಂದ ನೊಂದು ಬೇಯುತಿದ್ದುದು ಸ್ಪಷ್ಟವಾಗಿ ತೋರಬರುತ್ತಿದ್ದಿತು.

ಚೆನ್ನಮ್ಮನು ಮೌನವಾಗಿ ರೆಪ್ಪೆ ಹೊಡೆಯದೆ ಹಾಗೆಯೇ ಕುಳಿತಿದ್ದಳು.

ಬಸಪ್ಪ—ನಾನು ಗೌರಿಯನ್ನು ಹಾಗೆ ಬಿಟ್ಟು ಬಿಡಬಾರದಾಗಿತ್ತು. ನಾನು ನಿನಗೆ ಹೇಳದೆ ವಂಚನೆ ಮಾಡಿದೆ. ಅದು ತಪ್ಪು. ನನಗೆ ನಿನ್ನನ್ನು ಬಿಡಲು ಮನಸ್ಸು ಬರಲಿಲ್ಲ. ನಾನು ಇಷ್ಟಪಡದಿದ್ದರೂ ನನಗೂ ಅವಳಿಗೂ ಹೇಗೋ ಸಂಬಂಧ ವುಂಟಾಯಿತು ನಾನು ನನ್ನ ಅವಿವೇಕಕ್ಕಾಗಿ ಈಗಲೂ ವ್ಯಸನ ಪಡುತ್ತಿದ್ದೇನೆ.

ಭೂಮಿಯನ್ನು ನೋಡುತ್ತ ಮುಂಚಿನಂತೆಯೇ ಈಗಲೂ ಚೆನ್ನಮ್ಮ ಮಾತನಾಡದೆ ಕುಳಿತಿದ್ದಳು. ಅವಳು ಎಲ್ಲಿ ಎದ್ದು ತನ್ನ ತಂದೆಯ ಮನೆಗೆ ಹೊರಟು ಹೋಗುವಳೊ ಎಂದು ಅವನಿಗೆ ಆಗ ಭಯ. ಚೆನ್ನಮ್ಮನಂತಹ ಸಾಧ್ವಿಯು ಹೇಗೆ ಇದನ್ನು ಸಹಿಸಿ ಕ್ಷಮಿಸುವಳೆಂಬ ಚಿಂತೆಯಿಂದ ಅವನೂ ರೆಪ್ಪೆ ಹೊಡೆಯದೆ ಮೌನದಿಂದ ಅವಳನ್ನು ನೋಡುತ್ತ ಕುಳಿತನು.

ಚೆನ್ನಮ್ಮನೇ ಈ ಸಲ ಮಾತನಾಡಿದಳು. ಪುನಃ ಅವರಿಬ್ಬರ ಕಣ್ಣು ಗಳೂ ಸಂಧಿಸಿದುವು ಅವಳ ಧ್ವನಿಯಲ್ಲಿ ಕೋಪದ ಗುರುತೇ ಇರಲಿಲ್ಲ. ಅವಳೂ ಪಶ್ಚಾತ್ತಾಪದಿಂದ ಮಾತನಾಡುವಂತೆ ತೋರಿತು.

ಚೆನ್ನಮ್ಮ—ಐದಾರು ವರ್ಷಗಳ ಹಿಂದೆಯೇ ನೀವು ಇದನ್ನು ನನಗೆ ಹೇಳಿದ್ದರೆ ಗೌರಿಗೆ ನಾವು ನಮ್ಮ ಕೈಲಾದುದನ್ನೆಲ್ಲ ಮಾಡಬಹುದಾಗಿತ್ತು. ಗೌರಿ ನಮ್ಮ ಮಗು ಎಂದು ತಿಳಿದಿದ್ದರೆ ನಾನು ಅವಳ ಸ್ವೀಕಾರಕ್ಕೆ ಅಡ್ಡಿ ಬರುತ್ತಿರಲಿಲ್ಲ. ನಾನು ಅಷ್ಟು ಕೆಟ್ಟವಳೆ?

ಇದನ್ನು ಕೇಳಿ ಬಸಪ್ಪನಿಗೆ ಶೂಲ ಹಾಕಿದಂತಾಯಿತು. ಪಶ್ಚಾತ್ತಾಪ, ಆಶ್ಚರ್ಯ, ಅಪಮಾನ! ಇಷ್ಟು ವರ್ಷಗಳು ಒಂದಿಗಿದ್ದರೂ ಬಸಪ್ಪನು ತನ್ನ ಪತ್ನಿಯ ಘನತೆಯನ್ನು ತಿಳಿದಿರಲಿಲ್ಲ.

ಬಸಪ್ಪನ ಬಾಯಲ್ಲಿ ಮಾತುಗಳು ಹೊರಡಲಿಲ್ಲ. ಪುನಃ ಚೆನ್ನಮ್ಮನೇ ಮಾತಾಡಿದಳು. ಈಗಲೂ ಅವಳ ಧ್ವನಿಯಲ್ಲಿ ದುಃಖ ಪಶ್ಚಾತ್ತಾಪಗಳು ಕಂಡು ಬಂದುವು.

ಚೆನ್ನಮ್ಮ—ಅಯ್ಯೋ ದೇವರೆ! ಮೊದಲೇ ನಾವು ಗೌರಿಯನ್ನು ನಮ್ಮ ಮನೆಗೆ ಕರೆತಂದಿದ್ದರೆ! ದೈವಾಜ್ಞೆ ಯಾರಿಗೆ ಗೊತ್ತು! ನೀವು ಅವಳನ್ನು ಆಗಲೇ ಬಿಡದೆ ಇದ್ದಿದ್ದರೆ ಅವಳು ನನ್ನನ್ನೇ ತನ್ನ ತಾಯಿಯಂತೆ ಪ್ರೀತಿಸುತ್ತಿದ್ದಳು. ಆಗ ನಿಮಗೂ ನನ್ನನ್ನು ಮದುವೆಯಾದ್ದಕ್ಕೆ ಸಂತೋಷವಾಗುತ್ತಿತ್ತು ನನ್ನ ಮಗು ಸತ್ತರೂ ನನಗೆ ಅಷ್ಟು ವ್ಯಸನವಿಲ್ಲ. ಈಗ ನನಗೆ ಬಹಳ ವ್ಯಸನವಾಗಿದೆ ಗೌರಿ ಬಂದಿದ್ದರೆ ನಮ್ಮ ಜೀವನವು ನಾವು ಯೋಚಿಸಿಕೊಂಡಂತೆಯೇ ಇರುತ್ತಿತ್ತು.

ಚೆನ್ನಮ್ಮನ ಕಣ್ಣುಗಳಿಂದ ಅಶ್ರುಬಿಂದುಗಳು ಉರುಳಿದುವು ಮಾತು ನಿಂತಿತು ಬಸಪ್ಪನು ಮತ್ತೆ ಮಾತಾಡಿದನು.

ಬಸಪ್ಪ—ನಾನು ಆಗ ಹೇಳಿದ್ದರೆ ನಮ್ಮ ಮದುವೆಯು ನಡೆಯುತ್ತಿರಲಿಲ್ಲ. ಈಗ ನೀನು ನಡೆಯುತ್ತಿತ್ತು ಎನ್ನಬಹುದು. ನೀನೂ ನಿನ್ನ ತಂದೆಯೂ ಬಹಳ ಆತ್ಮ ಗೌರವವುಳ್ಳವರು. ಕೋಪಮಾಡಿ ಬಹುಶಃ ನೀವು ನನ್ನೊಡನೆ ಮಾತು ಕೂಡ ಆಡುತ್ತಿರಲಿಲ್ಲ.

ಚೆನ್ನಮ್ಮ—ನಾನು ಈಗ ಏನು ಹೇಳಲಿ? ನನಗೂ ಮೊದಲಿಂದ ನಿಮ್ಮನ್ನೇ ಮದುವೆಯಾಗಬೇಕೆಂಬ ಆಸೆ. ನೀವು ನನ್ನನ್ನು ಮದುವೆಯಾಗುವುದರ ಸಲುವಾಗಿ ತಪ್ಪು ಮಾಡಬಾರದಾಗಿತ್ತು. ಈ ಲೋಕದಲ್ಲಿ ಯಾವುದರ ಸಲುವಾಗಿ ತಾನೆ ತಪ್ಪು ಮಾಡಿದರೆ ಸುಖ?

ಹೆಚ್ಚಾಗಿ ಹೇಳಲೇಕೆ? ಅರ್ಥಗರ್ಭಿತವಾದ ಮಾತುಗಳಿವು. ಅವಳ ಮುಖದಲ್ಲಿ ವಿಚಾರಪರತೆಯು ತುಂಬಿದ್ದಿತು

ಬಸಪ್ಪನು ತನ್ನ ಅವಿವೇಕಕ್ಕಾಗಿ ಪಶ್ಚಾತ್ತಾಪ ಪಡುತ್ತ, ಅವಳ ಘನತೆ ಔದಾರ್ಯಗಳನ್ನು ನೋಡಿ, ದೈನ್ಯದಿಂದ ಬಹಳ ನೊಂದವನಂತೆ ತೋರುತ್ತಿದ್ದನು.

ಬಸಪ್ಪ—ನೀನು ಯೋಚಿಸುವುದಕ್ಕಿಂತ ನಾನು ಬಹಳ ಕೆಟ್ಟವನು. ಕೋಪ ಮಾಡಬೇಡ. ಕ್ಷಮಿಸು ನನ್ನ ತಪ್ಪನ್ನು.

ಬಸಪ್ಪನ ಧ್ವನಿಯಲ್ಲಿ ವ್ಯಸನ ತುಂಬಿದ್ದಿತು.

ಚೆನ್ನಮ್ಮ—ನನಗೆ ನೀವು ತಪ್ಪು ಮಾಡಿಲ್ಲ. ನೀವು ನನ್ನನ್ನು ಸದಾ ಪ್ರೀತಿಸುತ್ತಿರುವಿರಿ. ಈಗ ತಪ್ಪು ಆಗಿರುವದು ಬೇರೆಯವರಿಗೆ. ಕೊನೆಗೂ ಈ ತಪ್ಪು ಸರಿಹೋಗಲಾರದು.

ಬಸಪ್ಪ—ಈಗಲೂ ನಾವು ಗೌರಿಯನ್ನು ಇಟ್ಟುಕೊಳ್ಳಬಹುದು ಅಲ್ಲವೆ? ಯಾರೇನು ಹೇಳಿದರೂ ಚಿಂತೆಯಿಲ್ಲ. ನನ್ನ ಮುಂದಿನ ಜೀವನ ವಾದರೂ ಸರಿ ಹೋಗಲಿ ನಿನ್ನ ಅಭಿಪ್ರಾಯವೇನು?

ಚೆನ್ನಮ್ಮ—ಈಗ ಕಷ್ಟ. ಗೌರಿಗೆ ಪ್ರಾಯ ಬಂದಿದೆ. ಸಾಧ್ಯವಾದರೆ ನೀವು ಅವಳಿಗೆ ಮಗಳೆಂದು ಹೇಳಿ ಅವಳನ್ನು ಮನೆಗೆ ಕರೆತನ್ನಿ. ನಾನೂ ಧರ್ಮದಿಂದ ನಡೆಯುತ್ತೇನೆ. ನನ್ನನ್ನೂ ಪ್ರೀತಿಸುವ ಹಾಗೆ ದೇವರು ಅವಳಿಗೆ ಬುದ್ಧಿ ಕೊಡಲಿ.

ಬಸಪ್ಪ—ಹಾಗಾದರೆ ನಾವು ನಾಳೆ ದಿನ ರಾತ್ರಿಯೇ ಗದ್ದಲ ಅಡಗಿದ ಮೇಲೆ ದಾಸನ ಮನೆಗೆ ಹೋಗಿ ಮಾತನಾಡೋಣ.

ಚೆನ್ನಮ್ಮ—ಆಗಬಹುದು.

ಬಸಪ್ಪನಿಗೆ ಈಗ ಸ್ವಲ್ಪ ಮಟ್ಟಿಗೆ ಮನಶ್ಯಾಂತಿ ಉಂಟಾಯಿತು. ಚೆನ್ನಮ್ಮನ ಸುಗುಣವನ್ನು ನೋಡಿ ಅವನು ತುಂಬ ನಾಚಿಕೆಪಟ್ಟು ಕೊಂಡನು. ಗೌರಿಗೆ ಹೇಳಿಬಿಟ್ಟರೆ ಅವಳು ಬಂದುಬಿಟ್ಟಾಳೆಂಬ ಭ್ರಾಂತಿ ಯಿಂದ ಅವನು ಗಾಳಿಗೋಪುರ ಕಟ್ಟಲು ಆರಂಭವಾಯಿತು.

——:೦:——

## ೨೨

# ಪರೀಕ್ಷೆ—ಪ್ರೇಮ

ರಾತ್ರಿ ಎಂಟು ಅಥವಾ ಒಂಬತ್ತು ಗಂಟೆ. ದಾಸನೂ ಗೌರಿಯೂ ಮಾತನಾಡುತ್ತ ಕುಳಿತಿದ್ದರು. ಹಿಂದಿನ ದಿನವೆಲ್ಲ ಅಲ್ಲಿಯೂ ಗದ್ದಲ. ನಾಗಣ್ಣನ ಹೆಣ, ದಾಸನ ಹೊನ್ನು—ಇವುಗಳ ಮಾತೇ. ಊರಿನ ತುಂಬ ಗುಜುಗುಜು. ದಾಸನಿಗೆ ಹೊನ್ನು ಸಿಕ್ಕಿದುದಕ್ಕಾಗಿ ಸಂತೋಷವಿಲ್ಲದೆ ಇರ ಲಿಲ್ಲ ಆದರೆ ತಡೆಯಲಾರದಷ್ಟು ಬೇಸರಿಕೆ—ಕಾರಣ? ಜನರ ಕಾಟ. ಅವನು ಭದ್ರಪ್ಪ ಶಿವನಿಗೆ ಮನೆಗೆ ಹೋಗಿರೆಂದು ಹೇಳಿಕಳುಹಿಸಿಬಿಟ್ಟನು. ಗೌರಿಯೊಡನೆ ಒಬ್ಬನೇ ಇರಬೇಕೆನ್ನಿಸಿತು ಅವನಿಗೆ. ಅಂದಿನ ರಾತ್ರಿ ನಿದ್ದೆಯೂ ಬರಲಿಲ್ಲ.

ದಾಸನ ಆತ್ಮಜೀವನದಲ್ಲಿ ಅದೊಂದು ಮುಖ್ಯದಿನ! ಆಗ ಅವನ ಮುಖವು ಕಾಂತಿಯಿಂದ ತುಂಬಿದ್ದಿತು. ಅವನ ಕಣ್ಣುಗಳು ಹೊಸ ಹೊಳಪಿನಿಂದ ಬೆಳಗುತ್ತಿದ್ದುವು. ಅವನ ನಡೆನುಡಿಗಳಲ್ಲಿ ಶಾಂತಿ ಆನಂದವು ಹೊರ ಹೊಮ್ಮುತ್ತಿದ್ದಿತು. ಪರಮಾತ್ಮನ ಪ್ರೇರಣೆಯು ಎಂದಿಗಿಂತ ಇಂದು ಅವನಿಗೆ ಚೆನ್ನಾಗಿ ಕೇಳಬಂದು ಅವನು ತನ್ನ ಹಿಂದಣ ಜೀವನವನ್ನು ನೆನೆಯುತ್ತ ಭಗವಂತನಿಗೆ ನಮಸ್ಕಾರವನ್ನು ಅರ್ಪಿಸುತ್ತಿದ್ದನು.

ಆಗ ಸುಖಾಸನದಲ್ಲಿ ಕುಳಿತು ದಾಸನು ಗೌರಿಯ ಕಡೆ ತಿರುಗಿ ಮಾತನಾಡುತ್ತಿದ್ದನು. ಗೌರಿಯು ಪಕ್ಕದಲ್ಲಿ ಕುಳಿತು, ತನ್ನ ಕೈಯನ್ನು ಅವನ ಬೆನ್ನಿನ ಮೇಲಿಟ್ಟು, ಅವನನ್ನೇ ದಿಟ್ಟಿಸುತ್ತಿದ್ದಳು. ಅವಳ ಮಗ್ಗುಲಲ್ಲಿ ಹೋಗಿದ್ದ ಹೊನ್ನು ಪುನಃ ಸಿಕ್ಕಿ ರಾಶಿಯಾಗಿ ಬಿದ್ದಿದ್ದಿತು.

ಹೊನ್ನು ಕಳುವಾಗಿ ಗೌರಿ ಬಂದ ಬಗೆಯನ್ನು ಈ ದಿನ ದಾಸನು ಮತ್ತೆ ಹೇಳಿದನು.

ದಾಸ—ಗೌರಿ, ಆ ಆಶ್ಚರ್ಯ ಏನು ಹೇಳಲಿ! ನೀನು ಬಂದಾಗ ಎಲ್ಲಿ ನೀನೂ ಚಿನ್ನವಾಗಿಬಿಡುವೆಯೋ ಎಂದು ಭಯ. ಆಗ ನನಗೆ

ಚಿನ್ನದ ಚಿಂತೆ ಹೊರತು ಬೇರೆ ಚಿಂತೆಯೇ ಇಲ್ಲ. ನನ್ನ ಚಿನ್ನ ಸಿಕ್ಕಿದರೆ ನನಗೆ ಸಂತೋಷ ಎಂದುಕೊಂಡೆ. ಆದರೆ ಆ ಯೋಚನೆ ಹೆಚ್ಚು ಕಾಲವಿರಲಿಲ್ಲ. ಆ ಚಿನ್ನವೇ ನನಗೆ ಶಾಪ, ಚಿಂತೆಗೆ ಕಾರಣ ಎಂದು ತಿಳಿಯಿತು ನಿನ್ನ ನೋಟ, ನಿನ್ನ ಮೈ, ನಿನ್ನ ಕೈ—ಇವಕ್ಕೆ ಚಿನ್ನ ಸಮವೆ? ಗೌರಿ, ನೀನು ಆಗ ಚಿಕ್ಕ ಮಗು. ನಿನಗೇನು ಗೊತ್ತು ನನ್ನ ಸಂಕಟ!

ಗೌರಿ—ನನಗೂ ಗೊತ್ತಪ್ಪ. ನೀನು ಸಾಕದಿದ್ದರೆ ನಾನೂ ಪರದೇಶಿಯಾಗಿ ಅಲೆಯಬೇಕಾಗಿತ್ತು ನನ್ನನ್ನು ಪ್ರೀತಿಸುವವರು ಯಾರಿದ್ದರು ಆಗ?

ದಾಸ—ನೀನು ಸಿಕ್ಕಿದ್ದು ನನ್ನ ಪುಣ್ಯ ಮಗು ನೀನಿಲ್ಲದಿದ್ದರೆ ನಾನು ಇದುವರೆಗೆ ಸತ್ತಿರುತ್ತಿದ್ದೆ. ನನ್ನ ಹಣ ಆಗ ಹೋಯಿತು, ಈಗ ಸಿಕ್ಕಿದೆ, ನಿನಗೆ ಬೇಕಾದಾಗ ಗೌರಿ. ಜೀವನ ಆಶ್ಚರ್ಯ! ನಮ್ಮ ಜೀವನ ಆಶ್ಚರ್ಯ!! ಪಾಪ! ಗೌರಿಗೆ ಏನು ಹೇಳಲಿಕ್ಕೂ ತೋರದು. ಸ್ವಲ್ಪ ಹೊತ್ತು ನಿಶ್ಶಬ್ದ ಹಣದ ಕಡೆ ನೋಡುತ್ತ ದಾಸನು ಪುನಃ ಹೇಳಿದನು.

ದಾಸ—ಈಗ ನಾನು ಅದರ ಹಿಡಿತಕ್ಕೆ ಸಿಕ್ಕಿಬಿದ್ದಿಲ್ಲ ಅಷ್ಟು ಮುಖ್ಯವಲ್ಲ ಹೊನ್ನು. ನೀನು ಹೋದರೆ ನಾನು ಪುನಃ ಅದರ ಹಿಡಿತಕ್ಕೆ ಸಿಕ್ಕಿ ಬೀಳುವೆನೇನೊ? ಈಗ ನನಗೆ ದೇವರಲ್ಲಿರುವ ಭಕ್ತಿ ಆಗ ತಪ್ಪಿ ಹೋಗುತ್ತದೆ.

ಬಾಗಿಲು ತಟ್ಟಿದ ಶಬ್ದವಾಯಿತು ಗೌರಿ ಎದ್ದು ಕದ ತೆರೆಯಲು ಹೋದಳು. ಯಾರಿರಬಹುದು? ಗೌರಿಯ ಗುಂಡುಮುಖ, ಕೆಂಪುತುಟಿ, ನಸುನಗೆ, ನಾಚುವ ಕಣ್ಣು—ಇವುಗಳನ್ನು ನೋಡದಿರಲು ಯಾರಿಗೂ ಸಾಧ್ಯವಿಲ್ಲ. ಬಾಗಿಲು ತೆರೆದರೆ ಬಸಪ್ಪ, ಚಿನ್ನಮ್ಮ. ಅವರನ್ನು ನೋಡುತ್ತಲೆ ಗೌರಿಯ ಮುಖದ ಕೆಂಪು ಹೆಚ್ಚಿತು. ಕದ ಪೂರ ತೆಗೆದು, ಅವರಿಗೆ ಕೈ ಮುಗಿಯುತ್ತ ಅವಳು ಸರಿದು ನಿಂತಳು.

'ಗೌರಿ, ಹೊತ್ತಲ್ಲದ ಹೊತ್ತಿನಲ್ಲಿ ನಮ್ಮಿಂದ ನಿಮಗೆ ತೊಂದರೆ ಎನ್ನುತ್ತ ಚಿನ್ನಮ್ಮನು ಗೌರಿಯ ಕೈಯನ್ನು ಹಿಡಿದುಕೊಂಡಳು. ಆಗ ಚಿನ್ನಮ್ಮನ ನಡೆನುಡಿಗಳ ತುಂಬ ಪ್ರೀತಿ, ಗೌರವ ಆದರ ಆದರೆ ಅವಳ

ಮುಖ ತಟ್ಟನೆ ಬೆಳ್ಳಗಾಯಿತು. ಅವಳು ಕೊಂಚ ನಡುಗಿದಳು.

ಬಸಪ್ಪನೂ ಚೆನ್ನಮ್ಮನೂ ಒಳಗೆ ಬಂದರು. ಗೌರಿ ಅವರನ್ನು ಮಣೆಯ ಮೇಲೆ ಕುಳ್ಳಿರಿಸಿ ಸತ್ಕರಿಸಿದಳು ದಾಸನು ಅವರ ಎದುರಿಗೆ ಕೂತನು. ಅವನ ಹಿಂದೆ ಗೌರಿ ನಿಂತಿದ್ದಳು

ಬಸಪ್ಪ—ದಾಸಣ್ಣ, ಇಷ್ಟು ವರ್ಷದ ಮೇಲೆ ನಿನಗೆ ನಿನ್ನ ಹಣ ಸಿಕ್ಕಿದ್ದು ಸಂತೋಷದ ವಿಷಯ. ಕದ್ದಿದ್ದವನು ನಮ್ಮವನೇ. ನೆನೆಸಿಕೊಂಡರೆ ಮೈ ಜುಂವೆನ್ನುವದು. ಕೈಲಾದಮಟ್ಟಿಗೂ ಸರಿಪಡಿಸಲಿಕ್ಕೆ ನಾನು ಸದಾ ಸಿದ್ಧ

ಬಸಪ್ಪನಿಗೆ ಹೆಚ್ಚು ಹೇಳಲಾಗಲಿಲ್ಲ ಎಚ್ಚರಿಕೆಯಿಂದ ಮಾತನಾಡ ಬೇಕೆಂದು ಚೆನ್ನಮ್ಮನು ಮೊದಲೇ ವಿಧಿಸಿದ್ದಳು ದಾಸನಿಗೂ ಗೌರಿಗೂ ಮನಸ್ಸು ನೋಯದಂತೆ ಸಂಭಾಷಣೆ ನಡೆಯಬೇಕಾಗಿದ್ದಿತು.

ದಾಸನಿಗೆ ಗ್ರಾಮ ಪ್ರಮುಖರನ್ನು ಕಂಡರೆ ವಿಶೇಷವಾದ ಗೌರವ, ಭಕ್ತಿ, ವಿನಯ.

ಹಾಗೆ ಕಳ್ಳತನವಾದರೆ ತಾವೇನು ಮಾಡಲಾದೀತು. ತಮ್ಮ ಉಪ ಕಾರ ಮರೆಯಲಾರೆ ವಂದನೆಗಳು

ಬಸಪ್ಪ—ಹಾಗಲ್ಲ, ದಾಸಣ್ಣ, ನೀನು ಕೆಲಸ ಮಾಡಿ ಜೀವಿಸುವ ಮನುಷ್ಯ.

ದಾಸ—ಹೌದು, ಸ್ವಾಮಿ, ನನ್ನ ಕೆಲಸವೇ ನನ್ನನ್ನು ಕಾಪಾಡಿದ್ದು. ಅದೇ ಗತಿಯಾಗಿತ್ತು ನನಗೆ!

ಬಸಪ್ಪ—ಆಗ ನಿನಗೆ ಸಂಪಾದನೆಯೂ ಚೆನ್ನಾಗಿ ಆಯಿತು ಈಗ ನಿನಗೆ ವಯಸ್ಸಾಗಿದೆ ಬಹಳ ಬಡವಾಗಿದ್ದೀಯೆ ಈಗೆಷ್ಟು ವಯಸ್ಸು.

ದಾಸ—ಸುಮಾರು ಅರವತ್ತು.

ಬಸಪ್ಪ—ನಿನಗೆ ಮುಪ್ಪಿನ ಕಾಲಕ್ಕೆ ಸಹಾಯ ಬೇಕು. ಆ ಹಣ ಇರಲಿ ನಿಮ್ಮಿಬ್ಬರಿಗೆ ಅದು ಹೆಚ್ಚಲ್ಲ ನಿನ್ನ ಮುಂದಿನ ಗತಿ!

ದಾಸ—ನನಗೆ ಭಯವಿಲ್ಲ. ಯೋಚನೆ ಯಾಕೆ? ನನಗೂ ಗೌರಿಗೂ ಇದೇ ಸಾಕು ನಮಗೆ ಬೇಕಾದ್ದು ಸ್ವಲ್ಪ.

ಗೌರಿ—ತೋಟದ ವಿಷಯ, ಅಪ್ಪ? ನಾಚಿಕೊಂಡು ತಲೆ ತಗ್ಗಿಸಿದಳು

ಚೆನ್ನಮ್ಮ—ಗೌರಿ ನಿನಗೆ ತೋಟ ಕಂಡರೆ ಇಷ್ಟವೊ? ಸರಿ ಸರಿ ನನಗೂ

ತೋಟವೆಂದರೆ ಇಷ್ಟ. ಗಂಡನ ಕಡೆ ನೋಡಿ ಮುಂದೆ ಮಾತನಾಡಲು ಸೂಚನೆ ಕೊಟ್ಟಳು

ಬಸಪ್ಪ—ನೀನು ಗೌರಿಗೋಸ್ಕರ ಇಷ್ಟು ಕಾಲ ಇದೆಲ್ಲ ಮಾಡಿದ್ದು ಬಹಳ ಹೆಚ್ಚೆ. ಅವಳಿಗೆ ಅನುಕೂಲವಾದರೆ ನಿನಗೆ ಸಂತೋಷ ಅಲ್ಲವೆ ದಾಸಣ್ಣ? ಅವಳ ಕೋಮಲವಾದ ಕೈ ಒರಟು ಕೆಲಸಕ್ಕೆ ತಡೆಯಲಾರದು. ಅವಳು ಕೂಲಿಯವರ ಮಗಳಲ್ಲ, ಅವಳನ್ನು ಯಾರಾದರೂ ನೋಡಿಕೊಳ್ಳುವದು ನಿನಗೂ ಒಪ್ಪಿಗೆಯಷ್ಟೆ! ಈ ಕಷ್ಟ ಜೀವನ ತಪ್ಪಿಸಿ ಇಷ್ಟರಲ್ಲೇ ಅವಳ ಸುಖ ಹೆಚ್ಚುವಂತೆ ಮಾಡಬೇಕು.

ದಾಸನ ಮುಖ ಈಗ ಕೊಂಚ ಕೆಂಪಾಯಿತು. ಗೌರಿ ಬಸಪ್ಪ ಹೇಳಿದುದು ನಿಜವಲ್ಲವೆಂದುಕೊಂಡಳು. ಸ್ವಲ್ಪ ದುಗುಡದಿಂದ ದಾಸನು ಮಾತನಾಡಿದನು.

ದಾಸ—ನಿಮ್ಮ ಅರ್ಥವೇನೋ ತಿಳಿಯದು.

ಬಸಪ್ಪ—(ಸ್ಪಷ್ಟವಾಗಿ, ನಿಸ್ಸಂಕೋಚವಾಗಿ ಹೇಳಲು ಇದೇ ಸಮಯವೆಂದುಕೊಂಡು) ನಮ್ಮ ಅರ್ಥ ಇಷ್ಟೆ. ನಮಗೆ ಮಕ್ಕಳಿಲ್ಲ. ನಮ್ಮ ಮನೆ ಆಸ್ತಿ, ಇವಕ್ಕೆಲ್ಲ ಒಬ್ಬರು ಬೇಕು. ಗೌರಿಯನ್ನು ನಾವು ನಮ್ಮ ಮನೆಯಲ್ಲಿ ಮಗಳಂತೆ ಇಟ್ಟುಕೊಳ್ಳಬೇಕೆಂದಿದ್ದೇವೆ. ನೀನೂ ಕಷ್ಟಪಟ್ಟು ಸಾಕಿರುವದರಿಂದ ನಿನಗೂ ಪ್ರತಿಫಲವಾಗಬೇಕು. ಆಗಾಗ ಅವಳೂ ಬಂದು ನಿನ್ನನ್ನು ವಿಚಾರಿಸಿಕೊಂಡು ಹೋಗುತ್ತಾಳೆ. ನಿನಗೆ ಅನುಕೂಲ ಮಾಡುತ್ತೇವೆ ನಾವೆಲ್ಲ.

ಬಸಪ್ಪನಿಗೆ ಇದಕ್ಕಿಂತ ನಯವಾಗಿ ಹೇಳಲು ತೋರಲಿಲ್ಲ. ಇದನ್ನು ಕೇಳುತ್ತ ಗೌರಿ ದಾಸನ ಹಿಂದೆ ನಿಂತು ಅವನ ಹೆಗಲ ಮೇಲೆ ತನ್ನ ಕೈ ಇಟ್ಟುಕೊಂಡಿದ್ದಳು. ದಾಸನ ಮೈ ನಡುಗುತಿದ್ದಿತು. ಅವನ ಮನಸ್ಸಿನಲ್ಲಿ ಏನೇನೋ ಆಲೋಚನೆಗಳು. ಏನು ಹೇಳಲಿಕ್ಕೂ ತೋರಲಿಲ್ಲ. ಅವನು ಮಾತನಾಡುತಿದ್ದಾಗ ಗೌರಿ ತಲೆ ತಗ್ಗಿಸಿದ್ದಳು.

ಗೌರೀ, ನೀನೇ, ಹೇಳಮ್ಮಾ, ಬಸಪ್ಪ ಚೆನ್ನಮ್ಮ ನಿನಗೆ ಉಪಕಾರ ಮಾಡಲು ಬಂದಿದ್ದಾರೆ. ನಿನ್ನ ಎದೆಯಲ್ಲಿರುವದು ಬರಲಿ. ಎಂದನು ದಾಸ.

ಗೌರಿ ಒಂದು ಹೆಜ್ಜೆ ಮುಂದಕ್ಕೆ ಬಂದಳು. ಮುಖವು ಕೆಂಪಾಗಿದ್ದಿತು. ನಾಚಿಕೆ ಅಷ್ಟಿರಲಿಲ್ಲ. ದಾಸನಿಗೆ ನೋವಾದುದನ್ನು ನೋಡಿ ಅವಳ ಮನಸಿನಲ್ಲಿ ಕೋಪವುಂಟಾಗಿದ್ದಿತು.

ಮೊದಲು ಚೆನ್ನಮ್ಮನಿಗೂ ಬಳಿಕ ಬಸಪ್ಪನಿಗೂ ಕೈ ಮುಗಿದು 'ಅಮ್ಮ ನಿಮಗೂ, ಅಯ್ಯ ನಿಮಗೂ ನಮಸ್ಕಾರ. ನಾನು ನಮ್ಮಪ್ಪ ದಾಸನನ್ನು ಬಿಟ್ಟು ಬರಲಾರೆ. ನನಗೆ ಅವನಿಗಿಂತ ಪ್ರಿಯರಿಲ್ಲ. ಅವನ ಪ್ರೇಮ ಹೆಚ್ಚಿನದು. ನನಗೆ ದೊಡ್ಡವರ ಮನೆ ಬೇಡ. ನೀವು ಬಂದದ್ದಕ್ಕಾಗಿ ವಂದನೆಗಳು. ನಾನು ನನಗೆ ಒಗ್ಗಿರುವ ಜನರನ್ನು ಬಿಡಲೊಪ್ಪುವದಿಲ್ಲ' ಎಂದು ಅವರಿಗೆ ಪುನಃ ಕೈ ಮುಗಿದಳು.

ಆಗ ಗೌರಿಯ ತುಟಿಗಳು ಅದುರುತಿದ್ದುವು. ಕಣ್ಣಿನಲ್ಲಿ ನೀರು ತುಂಬಿದ್ದಿತು. ಹಿಂದಕ್ಕೆ ಹೋಗಿ, ದಾಸನ ಭುಜ ಹಿಡಿದುಕೊಂಡು, ಬಿಕ್ಕಿ ಬಿಕ್ಕಿ ಅತ್ತಳು.

ದಾಸನೂ ತನ್ನಕೈಗಳಿಂದ ಅವಳನ್ನು ಅಪ್ಪಿ, ಕಣ್ಣೀರನ್ನು ಒರೆಸಿದನು. ಚೆನ್ನಮ್ಮನ ಕಣ್ಣುಗಳೂ ನೀರಿನಿಂದ ತುಂಬಿದುವು. ಗೌರಿ ಹೇಳಿದುದು ಅವಳಿಗೆ ಒಪ್ಪಾಗಿದ್ದಿತು. ಆದರೆ ಗಂಡನ ದೆಸೆಯಿಂದ ಸರಿಯಾಗಿ ತೋರಲಿಲ್ಲ. ಚೆನ್ನಮ್ಮನ ಮನಸ್ಸನ್ನು ಊಹಿಸಲು ಬಸಪ್ಪನಿಗೆ ಸಾಧ್ಯವಾಗದು.

ಬಸಪ್ಪನಿಗೆ ತನ್ನ ಇಷ್ಟಕ್ಕೆ ಅಡ್ಡಿ ಬಂದುದನ್ನು ನೋಡಿ ಕೋಪವುಂಟಾಯಿತು. ಒಂದು ಕಡೆ ಹಿಂದಿನ ಅವಿವೇಕಕ್ಕಾಗಿ ಪಶ್ಚಾತ್ತಾಪ. ಮತ್ತೊಂದು ಕಡೆ ಇನ್ನು ಮೇಲಾದರೂ ಸರಿಯಾಗಿ ನಡೆಯಬೇಕೆಂಬ ಸಂಕಲ್ಪ. ಇತರರ ಅಭಿಪ್ರಾಯವನ್ನು ಸರಿಯಾಗಿ ತಿಳಿಯುವಷ್ಟು ಸಹಾನುಭೂತಿಯು ಅವನ ಸ್ವಭಾವದಲ್ಲಿರಲಿಲ್ಲ.

'ಗೌರಿ, ನಿನ್ನ ಮೇಲೆ ನನಗೆ ಅಧಿಕಾರವಿದೆ. ಎಲ್ಲರಿಗಿಂತ ಹೆಚ್ಚು ಅಧಿಕಾರ. ದಾಸಣ್ಣ, ಗೌರಿ ನನ್ನ ಸ್ವಂತ ಮಗಳು, ಅವಳ ಯೋಗಕ್ಷೇಮ ನನಗೆ ಸೇರಿದ್ದು. ಅವಳ ತಾಯಿ ನನ್ನ ಹೆಂಡತಿ. ಗೌರಿ ಮೇಲೆ ನನ್ನ ಅಧಿಕಾರವೇ ಹೆಚ್ಚು ?'

ಗೌರಿ ಬೆಚ್ಚಿ, ಬೆವರುತ್ತ, ಬೆಪ್ಪು ಮೋರೆ ಹಾಕಿಕೊಂಡಳು. ದಾಸನಿಗೆ ಗೌರಿಯ ಉತ್ತರ ಕೇಳಿ ಸಮಾಧಾನವಾಯಿತು. ಪಿತೃ ನಿರ್ವಿಶೇಷ ವಾತ್ಸಲ್ಯದಿಂದ ಅಳುಕದೆ ಅವನು ಮಾತನಾಡತೊಡಗಿದನು.

'ಹಾಗಾದರೆ ಸ್ವಾಮಿ, ಹದಿನಾರು ವರ್ಷಗಳ ಹಿಂದೆ ಏಕೆ ಹೀಗೆ ಹೇಳಲಿಲ್ಲ? ಆಗ ಗೌರಿಗೂ ನನಗೂ ಪ್ರೇಮ ಋಣಾನುಬಂಧಗಳು ಬೆಳೆಯುವದಕ್ಕೆ ಮುಂಚೆ ಬರಲಿಲ್ಲ? ಇಷ್ಟು ದಿನ ಅವಳನ್ನು ಕರೆದುಕೊಂಡು ಹೋಗಲಿಲ್ಲ? ಈಗ ಅವಳು ಹೋದರೆ ನನ್ನ ಪ್ರಾಣ ಹೋದ ಹಾಗೇ. ನೀವು ಅವಳನ್ನು ಬಿಟ್ಟಿರಿ, ದೇವರು ನನಗೆ ಅವಳನ್ನು ಕೊಟ್ಟ. ದೈವ ವಶಾತ್ ಅವಳು ನನ್ನವಳು. ನಿಮಗೆ ಈಗ ಅವಳ ಮೇಲೆ ಅಧಿಕಾರ ಇಲ್ಲ. ದೇವರು ಕೊಟ್ಟ ವರವನ್ನು ಬೇಡವೆಂದರೆ ಯಾರು ಬೇಕಾದರೂ ತೆಗೆದುಕೊಳ್ಳಬಹುದು.' ಎಂದು ಉತ್ತರ ಕೊಟ್ಟನು ದಾಸ.

ದಾಸನ ಮಾತು ಕೇಳಿ ಬಸಪ್ಪನ ಎದೆಯೂ ಚುರಚುರಗುಟ್ಟಿತು. 'ದಾಸಣ್ಣ ಅದು ಗೊತ್ತು ನನಗೆ. ನಾನು ಮಾಡಿದ್ದು ತಪ್ಪು. ನಾನೂ ಅದಕ್ಕಾಗಿ ಪಶ್ಚಾತ್ತಾಪಪಟ್ಟಿದ್ದೇನೆ.' ಎಂದು ಬಸಪ್ಪನು ಹೇಳಿದನು.

ದಾಸನಿಗೆ ಇದನ್ನು ಕೇಳಿ ಬಹಳ ವ್ಯಸನವಾಯಿತು. ಆದರೂ ಅವನ ಕೋಪವು ತಗ್ಗಲಿಲ್ಲ. ತಟ್ಟನೆ ಬಸಪ್ಪನ ಮುಖವನ್ನು ನೋಡಿದನು. ಪೆಚ್ಚು ಬಿದ್ದಿದ್ದಿತು.

ಸರಿ ಸ್ವಾಮಿ, ಪಶ್ಚಾತ್ತಾಪ ಪಟ್ಟ ಮಾತ್ರಕ್ಕೇ ಇಷ್ಟು ವರ್ಷ ನಡೆದಿರುವುದು ತಪ್ಪಿಹೋದೀತೆ? ಈಗ ನೀವು ಬಂದು "ನಾನು ಗೌರಿ ಅಪ್ಪ" ಎಂದ ಮಾತ್ರಕ್ಕೆ ನನ್ನ ಅವಳ ವಿಶ್ವಾಸ ಅನುರಾಗಗಳು ಬದಲಾಯಿಸಲಾರವು. ಮಾತು ಕಲಿತಾಗಿನಿಂದ ಅವಳು ನನ್ನನೇ "ಅಪ್ಪ" ಎಂದು ಕರೆಯುತಿದ್ದಾಳೆ. ಎಂದು ದಾಸನು ಪ್ರತ್ಯುತ್ತರ ಕೊಟ್ಟನು.

ದಾಸದ ಮಾತು ನಿಜ. ಬಸಪ್ಪನು ಅವಾಕ್ಕಾದನು. ಎಲ್ಲರೂ ಸ್ವಲ್ಪ ಹೊತ್ತು ಸುಮ್ಮನೆ ಕುಳಿತಿದ್ದರು.

ಬಳಿಕ ಬಸಪ್ಪನು ದಾಸನನ್ನು ನೋಡಿ, ಕೈ ಮುಗಿದು, 'ಇಲ್ಲಿ ನೋಡು, ದಾಸಣ್ಣ, ನಾನು ಹೇಳುವುದನ್ನು ಕೇಳಿ ಆಲೋಚನೆ ಮಾಡು. ನಿನ್ನಿಂದ ಗೌರಿಯನ್ನು ತೀರ ಅಗಲಿಸಬೇಕೆಂದಲ್ಲ. ನೀನೂ ಅವಳನ್ನು

ಮುಂದೆ ನೋಡುತ್ತಲೇ ಇರಬಹುದು. ನಮ್ಮ ಮನೆಯಲ್ಲೇ ಇದ್ದುಕೊಂಡು ಅವಳು ನಿನ್ನನ್ನೂ ವಿಚಾರಿಸಿಕೊಳ್ಳುವಳು. ಈಗಿನ ಹಾಗೇ ಮುಂದೂ ಒಂದೇ ಸಂಬಂಧ ಇರುತ್ತೆ.' ಎಂದು ಬೇಡಿದನು.

ಇದನ್ನು ಕೇಳುತ್ತಲೇ ದಾಸನ ಅಸಮಾಧಾನವು ಮತ್ತಷ್ಟು ಹೆಚ್ಚಿತು. 'ಈಗಿನ ಹಾಗೇ ಮುಂದೂ! ಒಂದೇ! ಹೇಗಾದೀತು? ಈಗ ಒಟ್ಟಿಗೆ ಮಿಂದು, ಉಂಡು, ಮಲಗಿ, ಬೈಗೂ ಬೆಳಗೂ ಜೀವಿಸುತ್ತಿದ್ದೇವೆ. ನೀವು ಹೇಳುವುದು ಸುಳ್ಳು. ಒಂದೇ ದೇಹದಂತಿರುವ ನಮ್ಮನ್ನು ಕತ್ತರಿಸ ಬೇಕೆಂದಿರುವಿರಾ?' ಎಂದು ದಾಸನು ಪ್ರಶ್ನಿಸಿದನು.

ದಾಸನ ಅಭಿಪ್ರಾಯವು ಈಗಲೂ ಬಸಪ್ಪನಿಗೆ ಅರ್ಥವಾಗಲಿಲ್ಲ. ಬಸಪ್ಪನಿಗೂ ಸ್ವಾರ್ಥತ್ಯಾಗಕ್ಕೂ ಬಹಳ ದೂರ! ದಾಸನು ಎಷ್ಟು ಸ್ವಾರ್ಥ ಪರನು ಎಂದು ಬಸಪ್ಪನು ಮನಸ್ಸಿನಲ್ಲಿ ಹೇಳಿಕೊಂಡನು. ಗೌರಿಯ ಹಿತಕ್ಕೆ ದಾಸನು ಅಡ್ಡಿ ಇರುವಂತೆ ಆಗ ಅವನಿಗೆ ತೋರಿತು. ಒಂದು ಕ್ಷಣ ಕಾಲ ಯೋಚಿಸಿ, ಗೌರಿಯ ಹಿತಚಿಂತನೆಗಾಗಿ ತನ್ನ ಅಧಿಕಾರವನ್ನು ಸಾಧಿಸಲೇಬೇಕೆಂದು ನಿಶ್ಚಯಿಸಿದನು.

'ದಾಸಣ್ಣ, ಗೌರಿ ಕಂಡರೆ ನಿನಗೆ ಪ್ರೇಮ. ಅವಳ ಏಳಿಗೆಗಾಗಿ ನೀನೂ ಸಂತೋಷಪಡಬೇಕು. ಅದಕ್ಕಾಗಿ ನೀನು ತ್ಯಾಗಮಾಡಲಿಕ್ಕೂ ಸಿದ್ಧನಿರತಕ್ಕದ್ದು. ನಿನಗೆ ವಯಸ್ಸಾಗಿದೆ. ಅವಳು ಚಿಕ್ಕವಳು. ಈಗ ಅವಳು ಕೂಲಿಕಾರನನ್ನು ಮದುವೆಯಾದರೆ ಮುಂದೆ ನಾನೇನುಮಾಡಿದರೂ ಅವಳ ಸ್ಥಿತಿ ಮೇಲಾಗುವದಿಲ್ಲ. ಈಗ ನಿನ್ನಿಂದ ಅವಳ ಕ್ಷೇಮಕ್ಕೆ ಅಡ್ಡಿ. ಅವಳನ್ನು ನೀನು ಸಾಕಿರುವೆ, ನಾನು ಸಾಕಿಲ್ಲ. ನನಗೆ ನಿಜವಾಗಿಯೂ ವ್ಯಸನವಾಗಿದೆ. ಆ ಮಗಳ ಯೋಗಕ್ಷೇಮವು ನನಗೆ ಸೇರಿದ್ದು. ಸದ್ಯದಲ್ಲಿ ನಾನು ನನ್ನ ಕರ್ತವ್ಯ ಮಾಡಲೇಬೇಕು' ಎಂದು ಬಸಪ್ಪನು ಉಪದೇಶ ಮಾಡಿದನು.

ಆಹಾ! ತ್ಯಾಗ, ಕರ್ತವ್ಯ, ಉಪದೇಶ! ಬಸಪ್ಪನಿಂದ!

ಗೌರಿಗೂ ದಾಸನಿಗೂ ಇದನ್ನು ಕೇಳಿ ಜಿಗುಪ್ಸೆಯಾಯಿತು. ಯಾರಿಗೆ ಹೆಚ್ಚಾಗಿ ಜಿಗುಪ್ಸೆ ಎಂದು ಹೇಳಲಾಗದು. ಒಬ್ಬರಿಗಿಂತ ಮತ್ತೊಬ್ಬರಿಗೆ ಹೆಚ್ಚಾಗಿ ಎಂದು ಹೇಳಬೇಕಾಗಿದೆ.

ಗೌರಿಗೆ ದಾಸನೆಂದರೆ ನಿಜವಾಗಿಯೂ, ಹಿಂದಿನಿಂದಲೂ, ಪ್ರೀತಿ ಪೂಜಾ ಪಾತ್ರನಾದ ತಂದೆಯೆಂದೇ ಭಾವನೆ. ಈಗ ಆ ಭಾವನೆ ಮತ್ತಷ್ಟು ಹೆಚ್ಚಿತು. ಬಸಪ್ಪ ಹೇಳಿದುದನ್ನು ಕೇಳಿ ಅವಳು ಅವನನ್ನು ತನ್ನ ತಾಯಿ ಮಾಯಿಗೆ ಮಾಂಗಲ್ಯ ಕಟ್ಟಿದ್ದೂ, ಅವಳಿಗೆ ವಂಚನೆ ಮಾಡಿ, ತನ್ನನ್ನೂ ವಂಚಿಸಿಬಿಟ್ಟು, ಹೊಸದಾಗಿ ದಾಸನಿಗೆ ವಂಚನೆ ಮಾಡಲು ಬಂದಿರುವ ಕೊಲೆಪಾತಕನೆಂದು ಬಗೆದಳು. ಅವಳಿಗೆ ಬಸಪ್ಪನಲ್ಲಿಯೂ ಅವನ ಮಾತಿನಲ್ಲಿಯೂ ಅಸಹ್ಯ ಹುಟ್ಟಿತೇ ಹೊರತು ಪ್ರೀತಿ ಹುಟ್ಟಲಿಲ್ಲ.

ದಾಸನಿಗೆ ಪುನಃ ಭಯ. ಬಸಪ್ಪ ಹೇಳಿದಂತೆ ತನ್ನಿಂದ ಎಲ್ಲಿ ಗೌರಿಯ ಹಿತಕ್ಕೆ ಅಡ್ಡಿಯಾದೀತೋ ಎಂಬ ಚಿಂತೆ. ಕೆಲಕಾಲ ಸುಮ್ಮ ನಿದ್ದು, ಏನು ಹೇಳಬೇಕೋ ತೋರದೆ, ಕೊನೆಗೆ ಅವನು ಈ ಉತ್ತರ ವಿತ್ತನು ಆವನ ಮಾತಿನಲ್ಲಿ ಮತ್ತೆ ಗದ್ಗದ ಸ್ವರವಿದ್ದಿತು.

'ನಾನು ಹೆಚ್ಚಾಗಿ ಹೇಳುವದಿಲ್ಲ. ನಿಮ್ಮಿಷ್ಟದಂತೆ ಆಗಲಿ. ಕೇಳಿ ಗೌರಿಯನ್ನೇ. ನಾನು ಯಾವದಕ್ಕೂ ಅಡ್ಡಿ ಇಲ್ಲ. ಗೌರಿ, ನಿನ್ನ ಎದೆ ಯಲ್ಲಿರುವುದೇ ಬರಲಿ.'

ಈಗ ಚೆನ್ನಮ್ಮನೂ ಬಸಪ್ಪನಂತೆಯೇ ಯೋಚಿಸಿದಳು. ಆದರೆ ದಾಸನ ಖೇದವು ಅವಳಿಗೆ ತಿಳಿಯದೆ ಇರಲಿಲ್ಲ. ಬಡವರ ಕಷ್ಟಸುಖಗಳೂ ಮನೋಧರ್ಮಗಳೂ ಅವಳಿಗೂ ಕೂಡ ಕೊನೆಯ ತನಕ ಸಂಪೂರ್ಣವಾಗಿ ಅರ್ಥವಾಗದು. ದಾಸನ ಮಾತು ಕೇಳಿ, ತನ್ನ ಗಂಡ ಯೋಚಿಸಿದ್ದ ಪ್ರಕಾರ ತಮ್ಮ ಉದ್ದೇಶವು ನೆರವೇರುವದೆಂದು ಅವಳೂ ಬಗೆದಳು.

ಬಸಪ್ಪ—ಗೌರಿ, ನೀನು ದಾಸನನ್ನು ಹಿಂದಿನಂತೇ ಪ್ರೀತಿಸಬೇಕು. ಅವನಿಗೆ ಸುಖವಾಗುವಂತೆ ಮಾಡಲು ನಾವೂ ನಿನಗೆ ಸಹಾಯ ಮಾಡುತ್ತೇವೆ. ನೀನು ನಮ್ಮನ್ನು ಪ್ರೀತಿಸಬೇಕೆಂಬುದು ನಮ್ಮ ಇಷ್ಟ. ಇನ್ನು ಮೇಲೆ ನಾನು ನಿನಗೆ, ತಂದೆ ಮಗಳಿಗೆ ಮಾಡ ಬಹುದಾದುದೆಲ್ಲವನ್ನೂ ಮಾಡುತ್ತೇನೆ. ಈ ನನ್ನ ಹೆಂಡತಿ ನಿನಗೆ ಉತ್ತಮವಾದ ತಾಯಿ. ನಿನಗೆ ಆ ಪುಣ್ಯ ಈಗ ಸಿಕ್ಕಿದೆ.

ಚೆನ್ನಮ್ಮ—ನೀನೇ ಒಂದು ದೊಡ್ಡ ನಿಧಿ, ಗೌರಿ. ನಮಗಿನ್ನೇನೂ ಬೇಡ. ನೀನು ನಮ್ಮ ಮಗಳು. ನೀನು ಬಂದರೆ ನಮಗೆ ಸಾಕು.

ಎಲ್ಲವೂ ಸರಿಯೇ. ಪ್ರೀತ್ಯಾಸ್ಪದರ ವಿಯೋಗವು ಅತಿ ಕಷ್ಟ. ಈ ಸಲ ಗೌರಿ ಬಹಳ ಖಂಡಿತವಾಗಿ ಉತ್ತರಕೊಟ್ಟಳು. ಅವಳಿಗೆ ಇವರ ಮನೋಭಾವವೇ ಸರಿಬೀಳಲಿಲ್ಲ. ಅವಳ ಉತ್ತರವು ಸ್ಪಷ್ಟವಾಗಿದ್ದು, ಇವರ ಬಾಯನ್ನು ಮುಚ್ಚಿಸಿ, ಪುನಃ ಇವರ ಪ್ರಸ್ತಾಪವೇ ಬರದಂತೆ ಮಾಡಿತು.

ಗೌರಿ—ನಿಮಗೆ ವಂದನೆಗಳು. ನಿಮ್ಮ ಉದ್ದೇಶ ನನಗೆ ಬೇಕಿಲ್ಲ. ಅಪ್ಪ, ದಾಸನನ್ನು ಬಿಟ್ಟು ಅಗಲುವ ಮಾತೇ ಬೇಡ ನನಗೆ. ಅವನನ್ನು ಉಳಿದು ನನಗೆ ಸಂತೋಷವಿಲ್ಲ. ನಾನು ಬರುವ ಮುಂಚೆ ಅವನು ಒಬ್ಬನಿದ್ದನಂತೆ. ಈಗ ನಾನು ಬಿಟ್ಟರೆ ಪುನಃ ಅವನು ಒಬ್ಬನಾಗುವನು. ಮೊದಲಿಂದ ಅವನು ನನ್ನನ್ನು ಸಾಕಿ ಸಲಹಿ ಪ್ರೀತಿಸುತಿದ್ದಾನೆ. ಅವನು ಬದುಕಿರುವ ತನಕ ನಾನು ಅವನನ್ನು ಬಿಟ್ಟು ಅಗಲುವದಿಲ್ಲ. ನಮ್ಮಿಬ್ಬರ ಮಧ್ಯೆ ಯಾರೂ ಬರಲಾರರು. ಇನ್ನು ಈ ಮಾತು ಬೇಡ.

ದಾಸ—ಗೌರಿ, ಎಚ್ಚರಿಕೆ! ದುಡುಕಿ ಮುಂದೆ ವ್ಯಸನಪಡಬೇಡ. ಬಡವರ ಮಧ್ಯೆ ಇದ್ದು, ಅವರ ಅನ್ನ, ಬಟ್ಟೆ ಜೀವನದಿಂದ ತೃಪ್ತಿಹೊಂದಬೇಕಾಗುತ್ತೆ. ಈಗ ನಿನಗೆ ಸಿಕ್ಕುವಂತಿರುವದು ಬಹುಶಃ ಮೇಲ್ತರದ ಜೀವನ. ಯೋಚಿಸಿ ಹೇಳು.

ಗೌರಿ—ನನಗೆ ವ್ಯಸನವೇ ಇಲ್ಲ. ನೀವು ಹೇಳುವ ಮೇಲ್ತರದ ಜೀವನವೂ ಅದರ ಸೊಗಸೂ ಎಂದಿಗೂ ಬೇಡ ನನಗೆ. ನನಗೆ ಹಿತರಾಗಿದ್ದು ಪ್ರೇಮ ತೋರಿದವರು ಸಂತೋಷವಾಗಿರಬೇಕು. ಮಿಕ್ಕದ್ದು ನನಗೇಕೆ?

ಚೆನ್ನಮ್ಮ—ಮಗು, ಗೌರಿ, ನಿನ್ನ ಮಾತು ಸರಿ. ಸಾಕಿ ಸಲಹಿದವರ ಕೈಬಿಡಬಾರದು. ಹೆತ್ತ ತಂದೆಗೂ ನಿನ್ನ ವಿಷಯದಲ್ಲಿ ಕರ್ತವ್ಯವುಂಟು. ಎಲ್ಲರೂ ತ್ಯಾಗಮಾಡಬೇಕು. ನಿನ್ನ ಹೆತ್ತ ತಂದೆ ಕರೆಯುವಾಗ ನೀನು ಬೆನ್ನು ತಿರುಗಿಸಿ ಹೋಗಬಾರದು.

ಗೌರಿ—(ಕಣ್ಣು ತುಂಬ ನೀರು ತುಂಬಿಕೊಂಡು, ಬಿಕ್ಕಿಬಿಕ್ಕಿ ಅಳುತ್ತ, ದಾಸನನ್ನು ತೋರಿಸಿ) ಇವನೇ ನನ್ನ ತಂದೆ. ಇವನೆಲ್ಲಿ ಕೂತಿರುವನೋ ಅದೇ ನನ್ನ ಮನೆ. ಇವನ ಸೇವೆಯೇ ನನ್ನ ಜೀವನದ ಉದ್ದೇಶ.

ನನಗೆ ಬೇರೆ ಮನೆ ಇಲ್ಲ. ನಾನು ಬೆಳೆದದ್ದು ಬಡವರ ಮಧ್ಯೆ. ಅವರ ಕೆಲಸ, ಊಟ, ರೀತಿ, ನೀತಿ ಇವೆಲ್ಲಾ ನನ್ನ ಜೀವನಕ್ಕೆ ಸೇರಿದ್ದು. ನನ್ನ ಮದುವೆ ಗೊತ್ತಾಗಿದೆ. ನನ್ನ ಗಂಡನೂ ಇಲ್ಲೇ ಇದ್ದು ಅಪ್ಪನಿಗೆ ಸೇವೆಮಾಡಲು ಒಪ್ಪಿದ್ದಾನೆ. ನನಗೆ ಹೊಸದಾಗಿ ದೊಡ್ಡವ ಜೀವನ ಬೇಡ ಮತ್ತೇನೂ ಹೇಳಬೇಡಿ.

ಬಸಪ್ಪನು ಚೆನ್ನಮ್ಮನ ಕಡೆ ನೋಡಿದನು. ಅವನ ಮುಖವು ಕೆಂಪಾಗಿ ಕಣ್ಣುಗಳು ಅರಳಿದ್ದುವು. ಉದ್ದೇಶ ನೆರವೇರಲಿಲ್ಲ. ಕರ್ತವ್ಯ ಲೋಪವನ್ನು ಸರಿಪಡಿಸುವೆನೆಂದು ಅವನು ಈಗ ಬಗೆದುದು ವ್ಯರ್ಥವಾಯಿತು.

"ಮನೆಗೆ ಹೋಗೋಣ' ಎಂದು ಚೆನ್ನಮ್ಮನಿಗೆ ಬಸಪ್ಪನು ಮೆತ್ತಗೆ ಹೇಳಿ, ಎದ್ದು ಹೊರಟನು.

'ಇನ್ನು ಈ ಪ್ರಸ್ತಾಪ ಬೇಡ' ಎನ್ನುತ್ತ ಚೆನ್ನಮ್ಮನೂ ಎದ್ದು 'ಗೌರಿ, ನಾವು ನಿನ್ನ ಹಿತಚಿಂತಕರು. ದಾಸಣ್ಣ, ನಾವು ನಿನಗೂ ಹಿತಚಿಂತಕರು ಪುನಃ ಬಂದು ನೋಡುತ್ತೇವೆ. ಈಗ ಹೊತ್ತಾಯಿತು' ಎಂದು ಹೊರಟಳು.

ಇಬ್ಬರೂ ತಮ್ಮ ಮನೆಗೆ ಹಿಂದಿರುಗಿದರು. ಭಗ್ನಮನೋರಥರಾಗಿ.

ದಾಸನು ಸ್ವಲ್ಪ ಕಾಲ ನಿಂತಿದ್ದು ಒಳಗೆ ಬಂದನು. ಗೌರಿ ಇನ್ನಷ್ಟು ಕಾಲ ಅವರು ದೂರ ಹೋಗುವವರವಿಗೂ ನಿಂತಿದ್ದು ಬಾಗಿಲು ಮುಚ್ಚಿದಳು ಇಬ್ಬರೂ ಮಾತನಾಡದೆ ಮಲಗಿದರು

## ೨೩

# ಬಸಪ್ಪನ ಪಶ್ಚಾತ್ತಾಪ

ಬಸಪ್ಪನೂ ಚೆನ್ನಮ್ಮನೂ ಮನೆ ಸೇರಿ ಮಲಗಿದರು.

ಬಸಪ್ಪನು ಕಂಬಳಿ ಹೊದೆದು, ಹಾಸಿಗೆ ಮೇಲೆ ಉರುಳದೆ, ಸಾಕಾಯಿತು. ಅಶಾಂತಿ, ನಿದ್ದೆ ಬರಲಿಲ್ಲ. ಗೌರಿಯ ಯೋಚನೆ. ಎದ್ದು ಕೂತು ಚೆನ್ನಮ್ಮನನ್ನು ಕರೆದನು. ಅವಳೂ ಬಂದು ಕುಳಿತಳು. ಒಬ್ಬರನ್ನೊಬ್ಬರು ನೋಡಿದರು. ಮಾತಿಲ್ಲ. ಕಣ್ಣುಗಳು ಸಂಧಿಸಿದುವು. ಆಗ ಸ್ವಲ್ಪ ಶಾಂತಿ ತೋರಿತು. ಇಂತಹದೇ ದಾಂಪತ್ಯ ಜೀವನದ ಸುಖ!

ಪಕ್ಕದಲ್ಲಿ ಕುಳಿತಿದ್ದ ಚೆನ್ನಮ್ಮನ ಕೈಯನ್ನು ಹಿಡಿದುಕೊಂಡು ಮಾತನಾಡತೊಡಗಿದನು.

ಬಸಪ್ಪ—ಇನ್ನೇನು ಗೌರಿ ಮಾತು ಮುಗಿಯುತಲ್ಲ!

ಚೆನ್ನಮ್ಮ—ಮುಗಿದ ಹಾಗೆ! ಅವಳನ್ನು ಈಗ ಇಲ್ಲಿ ಇಟ್ಟುಕೊಳ್ಳುವದು ಅಸಾಧ್ಯ. ಇಷ್ಟವಿಲ್ಲದಿದ್ದಾಗ ಬಲವಂತ ಮಾಡುವದೂ ತಪ್ಪೇ. ಇದು ಅವಳಿಗೆ ಸಿಕ್ಕಿರುವ ಶಿಕ್ಷಣದ ಫಲ. ಅದನ್ನು ಬದಲಾಯಿಸಲಾಗದು. ಪ್ರೇಮಕ್ಕಿಂತ ಹೆಚ್ಚಿನದಿಲ್ಲ

ಬಸಪ್ಪ—ಹೌದು. ಅದು ನನಗೆ ಗೊತ್ತಾಯಿತು ಈಗ. ಇದು ಹಣದ ಸಾಲದಂತಲ್ಲ. ಇದನ್ನು ಸುಸ್ತಿ ಬಡ್ಡಿ ಕೊಟ್ಟು ತೀರಿಸಲಾಗದು. ಈಗ ಕಾಲ ಮೀರಿತು. ದಾಸನ ಮಾತು ನಿಜ. ದೇವರ ವರಬೇಡಿದವರಿಗೆ. ಕೊನೆಗೂ ನಾನು ಮಕ್ಕಳಿಲ್ಲದ ಪಾಪಿಯಾದೆ.

ಚೆನ್ನಮ್ಮನಿಗೆ ಮಾತನಾಡಲು ತೋರಲಿಲ್ಲ. ಬಸಪ್ಪನೂ ಸುಮ್ಮನಾದನು. ಸ್ವಲ್ಪ ಕಾಲ ಬಿಟ್ಟು ಚೆನ್ನಮ್ಮ ಹೇಳಿದಳು.

ಚೆನ್ನಮ್ಮ—ಗೌರಿ ನಮ್ಮ ಮಗಳೆಂದು ಪ್ರಕಟ ಮಾಡುವದಿಲ್ಲವಷ್ಟೆ?

ಬಸಪ್ಪ—ಪ್ರಯೋಜನವೇನು? ಪ್ರಕಟ ಮಾಡಿದರೆ ಕೆಡಕು ಗೌರಿಗೆ. ಇದ್ದ ಕಡೆಯಲ್ಲೇ ಇದ್ದ ಹಾಗೇ ಸಹಾಯ ಮಾಡುವದು ಒಳ್ಳೆಯದು.

ಚೆನ್ನಮ್ಮ—ಅವಳು ಯಾರನ್ನು ಮದುವೆಯಾಗುವಳೋ ಗೊತ್ತಿಲ್ಲ. ಈ ಸುದ್ದಿ ಮಲ್ಲಕ್ಕನಿಗೂ ನಮ್ಮ ಅಯ್ಯನಿಗೂ ತಿಳಿಯಬಾರದು. ನಾಗಣ್ಣ ಮಾಡಿದ್ದಕ್ಕೆ ನಾವು ತಲೆ ತಗ್ಗಿಸಬೇಕಾಗಿದೆ. ಇದು ಗುಟ್ಟಾಗಿರಲಿ.

ಬಸಪ್ಪ—ನಾಗಣ್ಣ ಮಾಡಿದ್ದು ನನಗೆ ಗೊತ್ತಿರಲಿಲ್ಲ. ನಾನು ಗೌರಿ ವಿಷಯ ವನ್ನು ನನ್ನ ಮರಣ ಶಾಸನದಲ್ಲಿ ಬರೆದಿಡುತ್ತೇನೆ. ಈಗ ಪ್ರಕಟನೆ ಮಾಡುವದಿಲ್ಲ. ಆದಷ್ಟೂ ಸಹಾಯ ಮಾಡೋಣ ಗೌರಿಗೆ. ನೀನು ಹೇಳಿದ್ದು ಸರಿ. ಅವಳು ಶಿವನನ್ನು ಮದುವೆಯಾಗಬಹುದು. ಈಗ ನೆನಪಿಗೆ ಬಂತು.

ಚೆನ್ನಮ್ಮ—ಏನು ? ಶಿವನನ್ನೆ ? ನಿಮಗೆ ಹೇಗೆ ಗೊತ್ತು ?

ಬಸಪ್ಪ—ಆ ದಿನ ಭದ್ರವ್ವ ಹೇಳಿದ ಜ್ಞಾಪಕ. ಮರೆತೆ ನಿನಗೆ ಹೇಳುವದು. ಶಿವನಿಗೂ ಗೌರಿಗೂ ಮದುವೆ ನಿಶ್ಚಯವಾಗಿದೆಯಂತೆ.

ಚೆನ್ನಮ್ಮ—ಶಿವನಿಗೂ ಗೌರಿಗೂ ಒಪ್ಪಾಗಿದೆ. ಶಿವ ಜಾಣ, ಚೆನ್ನಾಗಿ ದಾನೆ, ಉದ್ಯೋಗಿ ಯಾವಾಗ ಮದುವೆ ?

ಬಸಪ್ಪ—ಗೊತ್ತಿಲ್ಲ, ಗೌರಿ ಚೆನ್ನಾಗಿಲ್ಲವೆ ?

ಚೆನ್ನಮ್ಮ—ಮುದ್ದಾಗಿದಾಳೆ. ನಿಮ್ಮ ಹುಟ್ಟೆ ಎಲ್ಲ. ಅವಳ ಕಣ್ಣೂ ನಿಮ್ಮ ಕಣ್ಣೂ, ಅವಳ ಕೂದಲೂ ನಿಮ್ಮ ಕೂದಲೂ ಒಂದೇ.

ಬಸಪ್ಪ—ನಾನು ಗೌರಿ ತಂದೆ ಎನ್ನುತ್ತಲೇ ಅವಳು ನನ್ನನ್ನು ದುರದುರನೆ ನೋಡಿ ದಾಸನ ಕಡೆ ತಿರುಗಿಕೊಂಡುಬಿಟ್ಟಳು. ಪ್ರಾಯಶಃ ಅವಳಿಗೆ ನನ್ನನ್ನು ನೋಡಿ ಬೇಸರ. ಆಮೇಲೆ ಅವಳ ರೀತಿಯೇ ಬೇರೆ ಆಗಿಬಿಟ್ಟಿತು.

ಚೆನ್ನಮ್ಮ—ಹಾಗಲ್ಲ, ಅವಳು ದಾಸನನ್ನು ತನ್ನ ತಂದೆ ಎಂದು ತಿಳಿದಿದ್ದಳು. ನಿಮ್ಮ ಮಾತಿನಲ್ಲಿ ಅವಳಿಗೆ ನಂಬಿಕೆ ಹುಟ್ಟಲಿಲ್ಲ.

ಬಸಪ್ಪ—ಪಾಪ ! ಗೌರಿಯ ಮನಸ್ಸಿನಲ್ಲಿ ನಾನು ಅವಳಿಗೂ ಅವಳ ತಾಯಿಗೂ ವಂಚಕನೆಂಬ ಭಾವನೆ ಇರಬೇಕು. ನನ್ನ ಮನಸ್ಸಿನ ದುಃಖ ಗೊತ್ತೆ ಅವಳಿಗೆ ? ಇದು ನನಗೆ ತಕ್ಕ ಶಿಕ್ಷೆಯೇ ಸರಿ.

ಚೆನ್ನಮ್ಮನು ಮೌನವಾಗಿದ್ದಳು. ಅವಳಿಗೂ ಇದು ಆಗ ನ್ಯಾಯವೆನ್ನಿಸಿತು. ಗಂಡನಿಗೆ ಯಾವ ಸಮಾಧಾನ ಹೇಳಲು ಆಗಲಿಲ್ಲ. ಸುಮ್ಮನೆ ಕುಳಿತು ನೋಡುತಿದ್ದಳು.

ಬಸಪ್ಪನು ತಲೆದೂಗುತ್ತ, ಆತ್ಮ ಪರೀಕ್ಷೆ ಮಾಡಿಕೊಂಡು ಮೆಲ್ನುಡಿಯಲ್ಲಿ ಮತ್ತೆ ಹೇಳಿದನು.

ಬಸಪ್ಪ—ಏನಾದರೂ ಆಗಲಿ. ನಿನ್ನ ಮದುವೆಯಾಗಲು ಸಾಧ್ಯವಾಯಿತಲ್ಲ. ಗೋಣಗಾಡಿ ದುಃಖಪಟ್ಟರೆ ಪ್ರಯೋಜನವೇನು? ನನ್ನ ಯೋಗ್ಯತೆಗೆ ತಕ್ಕ ಪ್ರಾಪ್ತಿ.

ಚೆನ್ನಮ್ಮ—ನೀವು ಸದಾ ನನ್ನನ್ನು ಪ್ರೀತಿಸುತ್ತಿದ್ದೀರಿ. ಇದೇ ನನ್ನ ಭಾಗ್ಯ. ಚಿಂತೆಯಿಂದ ಪ್ರಯೋಜನವಿಲ್ಲ. ನಿಮ್ಮ ಯೋಚನೆ ನೋಡಿ ನನಗೆ ಯೋಚನೆ. ಭಕ್ತಿಯಿಂದ ದೇವರಿಗೆ ಶರಣೆನ್ನಿ.

ಬಸಪ್ಪ—ಇಗೋ ಶರಣು! ಬುದ್ಧಿ ಬಂತು. ಅದಕ್ಕೆ ಕಾಲ ಮೀರಿಲ್ಲ. ಯಾರೇನಾದರೂ ಹೇಳಲಿ. ಕೆಲವು ವಿಷಯಗಳಿಗೆ ಕಾಲ ಮೀರಿ ಹೋಯಿತು.

೨೪

# ಸ್ವಗ್ರಾಮ ಯಾತ್ರೆ

ಮಾರನೆಯ ದಿನ ಬೆಳಿಗ್ಗೆ ದಾಸನೂ ಗೌರಿಯೂ ಮಾತನಾಡುತ್ತ ಕುಳಿತಿದ್ದರು.

**ದಾಸ**—ಗೌರಿ ಕಳೆದ ಎರಡು ವರ್ಷಗಳಿಂದ ಬಹಳ ಆಸೆಯಾಗಿದೆ. ಈಗ ಹಣವೂ ಸಿಕ್ಕಿತು. ಅನುಕೂಲವೂ ಇದೆ. ಗೊತ್ತುಮಾಡಿದೆ ನಿನ್ನೆ ರಾತ್ರಿ. ನಾಳೆ ನೀನೂ ನಾನೂ ಹೊರಡೋಣ. ಮನೆಯಲ್ಲಿ ಭದ್ರವ್ವ ಇರಲಿ. ಬೇಕಾದ ಬಟ್ಟೆ ತೆಗೆದಿಟ್ಟು, ಗಂಟು ಕಟ್ಟಿ, ಸಿದ್ಧಮಾಡಿಕೊ.

**ಗೌರಿ**—(ಆಶ್ಚರ್ಯದಿಂದ) ಎಲ್ಲಿಗೆ ಅಪ್ಪ ?

**ದಾಸ**—ನಮ್ಮೂರಿಗೆ ಗೌರಿ, ನಾನು ಹುಟ್ಟಿದ ಊರಿಗೆ. ಎಲ್ಲರನ್ನೂ ನೋಡಿ ಬರೋಣ. ನನ್ನ ಮೇಲೆ ಹೊರೆಸಿದ್ದ ಕಳ್ಳತನ ಸುಳ್ಳೆಂಬುದು ಈಗ ಹೊರಪಟ್ಟಿರಬಹುದು. ಚೀಟಿ ಪದ್ಧತಿ ಕುರಿತು ಮಠದವರಿಗೆ ಹೇಳಬೇಕೆಂದಿದ್ದೇನೆ. ಆ ಊರ ಪದ್ಧತಿಗೂ ಈ ಊರ ಪದ್ಧತಿಗೂ ಭೇದ ಇದೆ.

**ಗೌರಿ**—ಆಗಲಿ ಅಪ್ಪ, ಹೋಗೋಣ.

ಗೌರಿಗೆ ತಡೆಯಲಾರದಷ್ಟು ಸಂತೋಷ. ಅವಳು ಆ ಊರ ಹೊರಗೇ ಹೋಗಿರಲಿಲ್ಲ. ಹೊಸ ಊರನ್ನು ನೋಡಲು ಅವಳಿಗೆ ಸ್ವಾಭಾವಿಕವಾಗಿ ಬಹಳ ಆಸೆ 'ಶಿವ ನನಗಿಂತ ಜಾಣ' ಆದರೆ ಈಗ ನಾನು ಊರಿಗೆ ಹೋಗಿ ಬಂದರೆ ಅವನಿಗೆ ಗೊತ್ತಿಲ್ಲದ್ದು ನನಗೆ ಗೊತ್ತಾಗುತ್ತೆ. ನಾನು ನೋಡಿದ್ದನ್ನು ಅವನಿಗೆ ಹೇಳಬಹುದು, ಎಂದು ಹೇಳಿಕೊಂಡಳು. ಎಂತಹ ಸರಳತೆ !

ದಾಸನು ಮಾಡಿದ್ದ ನಿಶ್ಚಯ ಭದ್ರವ್ವನಿಗೆ ಮಧ್ಯಾಹ್ನ ತಿಳಿಯಿತು. ಆಕೆಗೆ ಅನವಶ್ಯಕವಾದ ಉಪಯೋಗವಿಲ್ಲದ ಯಾವ ವ್ಯಾಪಾರವೂ ಇಷ್ಟ

ವಿಲ್ಲ. ಮೊದಲು ಆಕೆ ಒಪ್ಪದೆ ಪ್ರಶ್ನಿಸಿದಳು. ತಕ್ಕ ಉತ್ತರವನ್ನು ದಾಸನು ಕೊಟ್ಟನು.

'ದಾರಿಯಲ್ಲಿ ಗಾಡಿಗಳು ಸಿಕ್ಕುತ್ತವೆ. ಭಯ ಇಲ್ಲ. ಸುಖವಾಗಿ ಹೋಗಿಬರಬಹುದು. ಹತ್ತು ಹನ್ನೆರಡು ದಿನ ಹಿಡಿದೀತು. ಜತೆಗೆ ಗೌರಿ ಇದಾಳೆ' ಎಂದು ದಾಸನು ಒತ್ತಿ ಹೇಳಿ ತನ್ನ ಉದ್ದೇಶವನ್ನು ತಿಳಿಸಿದನು.

ಆಗ ಭದ್ರವ್ವನಿಗೆ ಧೈರ್ಯವಾಯಿತು; ಅವಳೂ ಒಪ್ಪಿದಳು. 'ದಾಸಣ್ಣ, ಆಗಬಹುದು. ಹೋಗಿ ಬಾ. ಬೇಸರವೂ ಕಳೆಯಲಿ' ಎಂದಳು ಭದ್ರವ್ವ.

ಮರುದಿನ ದಾಸನೂ ಗೌರಿಯೂ ಹೊರಟರು.

ಮೊದಲು ಕೊಂಚ ದೂರ ನಡಿಗೆ. ಹೆದ್ದಾರಿ ಸಿಕ್ಕಿದ ಮೇಲೆ ಗಾಡಿಯಲ್ಲಿ ಪ್ರಯಾಣ, ಊರ ಹತ್ತಿರಕ್ಕೆ ತಲಪಲು ಐದಾರು ದಿನ ಆಯಿತು. ದಾಸನು ಹುಟ್ಟಿದ ಊರು ಗೋಪಾಲಪುರ. ಆ ಊರು ಇದ್ದ ಸ್ಥಳಕ್ಕೆ ಹೋದಾಗ ದಾಸನಿಗೆ ಅತ್ಯಾಶ್ಚರ್ಯ! ಎಲ್ಲವೂ ಹೊಸದೇ ಊರು ಗುರುತು ಸಿಕ್ಕದ ಹಾಗೆ ದೊಡ್ಡದಾಗಿಬಿಟ್ಟಿದ್ದಿತು. ಜನರೆಲ್ಲರೂ ಹೊಸಬರೇ. ದೊಡ್ಡ ದೊಡ್ಡ ಮನೆಗಳು, ಅಂಗಡಿಗಳು, ಬೀದಿಗಳು, ಬೀದಿ ತುಂಬ ಜನರು ಬಹಳಶಬ್ದ, ಅನೇಕ ಭಾಷೆಗಳು.

ದೂರದಲ್ಲಿ ಕಟ್ಟಡಗಳು — ಅಗಲವಾಗಿ ಎತ್ತರವಾದವು. ಮಧ್ಯೆ ಮಧ್ಯೆ ಹೊಗೆ ಹೊರಡುವ ಕೊಳವಿಗಳು. ಅಲ್ಲಿಯೂ ಶಬ್ದ. ಅವು ಏನು? ಕಾರ್ಖಾನೆಗಳು!

ದಾಸನಿಗೆ ದಿಗ್ಭ್ರಾಂತಿ. ಹಳ್ಳಿ ಇಲ್ಲ. ಪಟ್ಟಣ ಹುಟ್ಟಿ ದೊಡ್ಡದಾಗುತ್ತಿದೆ ಯಾರನ್ನು ಕೇಳಿದರೂ ಸರಿಯಾದ ಉತ್ತರ ಬಾರದು. ಅವನು ಹುಟ್ಟಿದ ಊರು ಅಲ್ಲೇ ಇದ್ದುದು ನಿಜ. ಆದರೆ ಹಳೆ ಮನೆಗಳು, ದಾರಿಗಳು—ಓಣಿಗಳು, ಇವೊಂದೂ ಇಲ್ಲ. ಅವನಿಗೆ ಗುರುತು ಸಿಕ್ಕುವ ವಸ್ತುಗಳೇ ಕಾಣಿಸವು.

ಅವನ ಮನೆ ಹಿಂದೆ ಇದ್ದುದು ದೊಡ್ಡಿ ಬೀದಿಯಲ್ಲಿ. ಈಗ ದೊಡ್ಡಿ ಬೀದಿಯೆಂದರೆ ಯಾರಿಗೂ ತಿಳಿಯದು. ಹೊಸ ದೊಡ್ಡ ಪಟ್ಟಣದ ಆಚೆ ದೂರದಲ್ಲಿದ್ದಿತು. ಹಳೆ ದೊಡ್ಡ ಬೀದಿ ಇದ್ದ ಸ್ಥಳಕ್ಕೆ ಅಲ್ಲಿ ಇಲ್ಲಿ ಕೇಳಿ ಪತ್ತೆ ಮಾಡಿಕೊಂಡು ದಾಸನು ಗೌರಿಯೊಡನೆ ಹೋದನು.

ಅಲ್ಲಿಯೂ ಅನೇಕ ಬದಲಾವಣೆಗಳು. ಆ ಕಾಲದ ಸಣ್ಣ ಮನೆಗಳಾಗಲಿ, ಬೀದಿಗಳಾಗಲಿ, ಗುರುತಾಗಲಿ ಇಲ್ಲ. ಎಲ್ಲವೂ ಹೊಸದು. ದಾಸನಿಗೂ ಗೌರಿಗೂ ಸುತ್ತಿ ಸುತ್ತಿ ಸಾಕಾಯಿತು. ಅವನಿಗೆ ಬೇಕಾದುದು ಒಂದೂ ಸಿಗಲಿಲ್ಲ!

ಈ ಮೂವತ್ತು ವರ್ಷಗರ ಈಚೆಗೆ ಎಷ್ಟು ವ್ಯತ್ಯಾಸ! ಕಾರಣವೇನು? ಚಿನ್ನದ ಗಣಿ ಸಿಕ್ಕಿದುದು. ದಾಸನ ಕಾಲದಲ್ಲಿ ಚಿನ್ನದ ಗಣಿ ಇರಲಿಲ್ಲ. ಹಳ್ಳಿಯಿದ್ದಿತು. ಹಳ್ಳಿಗೆ ತಕ್ಕ ಜೀವನ ಇದ್ದಿತು ಈಚೆಗೆ ಚಿನ್ನದ ಗಣಿ ಸಿಕ್ಕಿತು; ಹಳ್ಳಿ ಹೋಗಿ ಪಟ್ಟಣ ಹುಟ್ಟಿತು. ಯಂತ್ರಗಳು ಬಂದುವು ಕಾರ್ಖಾನೆಗಳು ತಲೆಯೆತ್ತಿದುವು. ಎಲ್ಲೆಲ್ಲಿಯೂ ಆಧುನಿಕ ಜೀವನದ ಗುರುತುಗಳೇ.

ಹಳೆ ಹಳ್ಳಿ ಇಲ್ಲ. ಕೈರಾಟೆ, ಕೈಮಗ್ಗಗಳಿಲ್ಲ. ನೇಯಿಗೆಯವರಿಲ್ಲ. ಎಲ್ಲೆಲ್ಲಿಯೂ ಯಂತ್ರದ ನೂಲು ಮತ್ತು ಬಟ್ಟೆಗಳೇ. ಎಲ್ಲರೂ ಅಪರಿಚಿತರು. ಮಾತನಾಡಿಸುವವರೇ ಇಲ್ಲ. ಜನರು ಹಿಂದಿನ ಹಾಗೆ ಪ್ರೀತಿ, ಆದರ, ವಿಶ್ವಾಸಗಳನ್ನೂ ತೋರರು. ಊಟಕ್ಕೂ ವಾಸಕ್ಕೂ ಕಷ್ಟ. ಯಾರಿಗೂ ವಿರಾಮವಿಲ್ಲ. ಎಲ್ಲರಿಗೂ ಉಪೇಕ್ಷೆ. ಹಿಂದಿನ ಜೀವನಕ್ಕೂ ಈಗಿನ ಜೀವನಕ್ಕೂ ಸಂಬಂಧವಿಲ್ಲ. ಆಗಿನ ಹಳ್ಳಿ ಎಲ್ಲಿ! ಈಗಿನ ಪಟ್ಟಣ ಎಲ್ಲಿ!

ಗೌರಿ—ಅಪ್ಪ, ಊರಿಗೆ ಹೋಗೋಣ. ಇಲ್ಲಿ ಮಾತಾಡಿಸುವವರು ಯಾರು? ಬೇಜಾರಾಗಿದೆ.

ದಾಸ—ಹೋಗೋಣ ಅಮ್ಮ. ನನಗೂ ಬೇಜಾರಾಯಿತು. ಎಲ್ಲಾ ಬದಲಾಯಿಸಿ ಹೋಗಿದೆ. ನಮಗೆ ಬೇಕಾದವರು ಯಾರೂ ಇಲ್ಲ.

ಗೌರಿ—ಮಠಕ್ಕೆ ಹೋಗುವದಿಲ್ಲವೆ, ಅಪ್ಪ? ಅದು ಎಲ್ಲಿತ್ತು? ವಿಚಾರಿಸ ಬೇಡವೆ?

ದಾಸ—ಬಾ, ನೋಡೋಣ. ಈಗ ಅದು ಎಲ್ಲಿದೆಯೊ? ಅಲ್ಲಿ ಏನು ವ್ಯತ್ಯಾಸಗಳಾಗಿದೆಯೊ? ಹೇಳುವವರಾರು?

ದಾಸನು ವಿಚಾರಿಸಿಕೊಂಡು ಮಠಕ್ಕೂ ಹೋದನು. ಅದಿದ್ದ ಸ್ಥಳವೂ ಹೊಸದು. ಗುರುಗಳು, ಭಕ್ತರು, ಎಲ್ಲವೂ ಬೇರೆ. ಇವನ ಪ್ರಶ್ನೆಗಳಿಗೆ ಉತ್ತರವೇ ಇಲ್ಲ.

ಕೊನೆಗೆ ಗೌರಿಯೊಡನೆ ದಾಸನು ಬೊಮ್ಮನಹಳ್ಳಿಗೆ ಹಿಂತಿರುಗಿದನು. ಅವರ ಯಾತ್ರೆ ಒಟ್ಟು ಹದಿನೈದು ದಿನ ಹಿಡಿಯಿತು. ಆದ ಪ್ರಯೋಜನ? ಗೊತ್ತೇ ಇದೆ.

ಇವರು ಊರಿಗೆ ಬಂದು, ಮಾರ್ಗಾಯಾಸವನ್ನು ಪರಿಹಾರ ಮಾಡಿ ಕೊಂಡ ಮೇಲೆ, ಭದ್ರವ್ವನಿಗೂ ದಾಸನಿಗೂ ಈ ಯಾತ್ರೆಯ ವಿಷಯದಲ್ಲಿ ಮಾತುಕತೆಗಳು ನಡೆದುವು.

ಭದ್ರವ್ವ—ದಾಸಣ್ಣ, ಏನು ಹೀಗೆ ಹೇಳುತ್ತೀಯೆ?

ದಾಸ—ಹೌದು, ಭದ್ರವ್ವ. ಎಲ್ಲ ಬದಲಾಯಿಸಿ ಹೋಗಿದೆ. ಮನೆಗಳು, ಜನ, ರೀತಿ, ಎಲ್ಲಾ ಹೊಸದು ಅಲ್ಲಿ ಹಳ್ಳಿ ಗುರುತೇ ಇಲ್ಲ. ಚಿನ್ನದ ಗಣಿ, ಕಾರ್ಖಾನೆ, ಪಟ್ಟಣ, ನನಗೊಂದೂ ಗೊತ್ತಿಲ್ಲ. ಇದೇ ನಮ್ಮೂರು, ಇದೇ ನಮ್ಮನೆ.

ಭದ್ರವ್ವ—ಮಠ ಸಿಕ್ಕಿತೆ? ಅಲ್ಲೇನು ಹೇಳಿದರು? ಏನು ಸಮಾಚಾರ?

ದಾಸ—ಮಠವೂ ಹೊಸದು ಅಲ್ಲಿ ಜನರೂ ಹೊಸಬರು. ನನ್ನ ಪ್ರಶ್ನೆಗೆ ಉತ್ತರವೇ ಇಲ್ಲ. ದೇವರಿಗೇ ಗೊತ್ತು ಬಿಡವ್ವ.

ಭದ್ರವ್ವ—ಅಷ್ಟೇ ದಾಸಣ್ಣ. ಎಲ್ಲ ಗೊತ್ತಿರುವವನು ದೇವರು. ನೀನು ಬಹಳ ಕಷ್ಟಪಟ್ಟೆ. ಅಂತು ಭಕ್ತಿ ಇರಬೇಕು

ದಾಸ—ಆಹಾ.... ಇರಲೇಬೇಕು ಭಕ್ತಿ. ಗೌರಿಯಿಂದ ನನ್ನ ಜೀವನ ಉತ್ತಮವಾಯಿತು. ಅವಳೇ ನನ್ನ ಪ್ರಾಣ. ಇಲ್ಲೇ ಗೌರಿ ಜತೆಯಲ್ಲಿದ್ದುಕೊಂಡು, ದೇವರಿಗೆ ಶರಣಾಗಿ, ಜೀವನ ಮುಗಿಸುತ್ತೇನೆ.

ಅಷ್ಟು ಹೊತ್ತಿಗೆ ಗೌರಿ ಒಳಗಿನಿಂದ ಬಂದು ಅವರೊಡನೆ ಕುಳಿತಳು. ಆಗ ಮಾತು ಬದಲಾಯಿಸಿತು. ಕೊನೆಗೆ ಕತ್ತಲೆಯಾಗಲು ಭದ್ರವ್ವನು ಮನೆಗೆ ಹೋದಳು.

## ೨೫

# ಗೌರಿ ಮದುವೆ—ಸಮಾಪ್ತಿ

ಮಾಘ ಮಾಸ ಮದುವೆಯ ಕಾಲ ಎಲ್ಲೆಲ್ಲಿಯೂ ಓಲಗದ ವಾದ್ಯ. ಬೊಮ್ಮ[illegible]ಯಲ್ಲಿ ಈ ಸಲ ಐದಾರು ಮದುವೆ[illegible] ಆಗಲೇ ಶಿವ ಗೌರಿಯ ಮದುವೆ.

ಇವರ ಮದುವೆ ಭದ್ರವ್ವನ ಮನೆಯಲ್ಲಿಯೇ ಆಯಿತು. ಉಚಿತವಾದ ವೈಭವ, ವಿಜೃಂಭಣೆ. ಗೌರಿಗೂ ಶಿವನಿಗೂ ದಾಂಪತ್ಯಾನುಕೂಲ ಬಹಳ ಚೆನ್ನಾಗಿದ್ದಿತು. ನೋಡಿದವರೆಲ್ಲರಿಗೂ ಸಂತೋಷ. ವಧೂವರರ ಸಂತೋಷವನ್ನು ವರ್ಣಿಸುವುದಕ್ಕೇ ಆಗದು.

ಗೌರಿಗೆ ಒಡವೆ ವಸ್ತುಗಳನ್ನೂ ಸೀರೆ ಕುಪ್ಪಸಗಳನ್ನೂ ಶಿವನಿಗೆ ಅಂಚೆಗಳನ್ನೂ ಉಡಿಗೆ ತೊಡಿಗೆಗಳನ್ನೂ ಚೆನ್ನಮ್ಮನೂ [illegible]ಸಪ್ಪನೂ ಕೊಡಿಸಿ ಕೊಟ್ಟರು. ಗೌ[illegible]ಯೂ ಶಿವನೂ ಇಷ್ಟಪಟ್ಟುದನ್ನೇ ಅವರು ಕೊಡಿಸಬೇಕಾಯಿತು. ಮದುವಣಿಗರು ತಮ್ಮ ಜೀವನದ ಅಂತಸ್ತಿಗೆ ಸರಿಯಾದುದನ್ನೇ ಆರಿಸಿ ತರಿಸಿಕೊಂಡರು. ಮದುವೆ ಬಡವರ ಮನೆಯ ಮದುವೆಗೆ ತಕ್ಕಂತೆ ಮೊದಲಿನಿಂದ ಕೊನೆಯ ತನಕ ನಡೆಯಿತು. ಸಡಗರ, ಸಂತೋಷ, ಸಂಭ್ರಮಕ್ಕೆ ಕೊನೆಯೇ ಇರಲಿಲ್ಲ. ಚೆನ್ನಮ್ಮನೇ ಎಲ್ಲವನ್ನೂ ಜಾಗರೂಕತೆಯಿಂದ ನೋಡಿಕೊಂಡಳು.

ಊರಿನಲ್ಲಿ ಮುಖ್ಯರಾದವರೆಲ್ಲರೂ ಮದುವೆಗೆ ಬಂದಿದ್ದರು. ಮದುವೆಯಾದ ಮೇಲೆ ಕಾಲು ನಡಿಗೆಯಲ್ಲಿಯೇ ಮೆರವಣಿಗೆ. ಶಿವನನ್ನೂ ಗೌರಿಯನ್ನೂ ನೋಡಿದವರೆಲ್ಲರೂ ಸಂತೋಷಪಟ್ಟು ಹರಸಿದರು. ಚೆನ್ನಮ್ಮನ ತಂದೆಯೂ ಮಲ್ಲವ್ವನೂ ಮೆರವಣಿಗೆ ನೋಡಿಕೊಂಡು ಮಾರನೆಯ ದಿನ ಊರಿಗೆ ಹೋದರು. ಮೆರವಣಿಗೆ ನೋಡಿ ಮಲ್ಲವ್ವನಿಗೆ ಬಹಳ ಆನಂದ. ಮನೆಗೆ ಬಂದ ಮೇಲೆ ಅವರು ಇದನ್ನೇ ಕುರಿತು ಮಾತನಾಡುತಿದ್ದರು.

ಮಲ್ಲವ್ವ—ಅಯ್ಯ, ಗೌರಿಯಂತಹ ಹೆಣ್ಣನ್ನು ಪಡೆಯಲಿಕ್ಕೆ ಪುಣ್ಯವಿರ ಬೇಕು.

ತಂದೆ—ಹೌದು. ಪುಣ್ಯವಿದ್ದರೇ ಅಂತಹ ಹೆಣ್ಣು. ನಮ್ಮ ಗತಿ ನೋಡು. ನೀನು ಹೀಗೆ, ಚೆನ್ನಮ್ಮ ಹಾಗೆ.

ಮಲ್ಲವ್ವ—ಅವಳಿಗೂ ಮಕ್ಕಳ ಯೋಗ ಇಲ್ಲ.

ತಂದೆ—ದೈವೇಚ್ಛೆ !

ಮಲ್ಲವ್ವ—ಅಷ್ಟೇ !

ಮದುವೆಗೆ ದೂರದಿಂದ ಬಂದಿದ್ದವರೆಲ್ಲರೂ ಹಿಂದಿರುಗಿದರು. ಆ ಮೇಲೆ ಶುಭ ದಿನದಲ್ಲಿ ಶಿವನು ದಾಸನ ಮನೆಗೆ ಹೋಗಿ ಅಲ್ಲಿಯೇ ನಿಂತು, ವಾಸಿಸತೊಡಗಿದನು. ಗೌರಿಗೂ ದಾಸನಿಗೂ ಸಹಾಯ ದೊರೆಯಿತು.

ಭದ್ರವ್ವನು ಶಿವನನ್ನೂ ಗೌರಿಯನ್ನೂ ಮದುವೆಯಾದ ವಾರದಲ್ಲಿಯೇ ಒಂದು ದಿನ ಮಾತಿನ ಮಲ್ಲಪ್ಪನ ಮನೆಗೆ ಕರೆದುಕೊಂಡು ಹೋಗಿ, ಅವನಿಗೆ ನಮಸ್ಕಾರ ಮಾಡಿಸಿ, ಅವನ ಆಶೀರ್ವಾದವನ್ನು ದಂಪತಿಗಳು ಪಡೆಯು ವಂತೆ ಮಾಡಿದಳು.

ಮಾತಿನ ಮಲ್ಲಪ್ಪನು ಆಗ ಹಣ್ಣು ಹಣ್ಣು ಮುದುಕ. ಅವನ ಜತೆ ಯುವರೆಲ್ಲರೂ ಸತ್ತುಹೋಗಿದ್ದರು. ಅವನಿಗೆ ಈಗ ಹಾಸಿಗೆ ಬಿಟ್ಟೇಳಲು ಕಷ್ಟ. ಆದರೂ ಅವನ ಜ್ಞಾಪಕಶಕ್ತಿಯು ಕೆಟ್ಟಿರಲಿಲ್ಲ. ಈ ದಂಪತಿ ಗಳನ್ನು ಹರಸುತ್ತ ಅವನು, ' ದಾಸನೇ ಪುಣ್ಯವಂತ. ನೋಡಿದಿರೋ ? ಅವನ ಜೀವನ ಹೇಗಾಯಿತು ! ದೇವರೇ ಎಲ್ಲರನ್ನೂ ಕಾಪಾಡುವವನು.' ಎಂದು ಹಿಂದಿನ ಕಥೆಯನ್ನು ಜ್ಞಾಪಿಸಿಕೊಂಡನು.

ಭದ್ರವ್ವನು ಹಿಂದಿನಂತೆಯೇ ಹೋಗಿ ಬಂದು, ಯೋಗಕ್ಷೇಮ ವಿಚಾ ರಿಸಿ, ಸಹಾಯ ಮಾಡಿದಳು.

ಬಸಪ್ಪನೂ ಚೆನ್ನಮ್ಮನೂ ಮೊದಲಿಗಿಂತ ಹೆಚ್ಚಾಗಿ ಅವರ ಮನೆಗೆ ಹೋಗಿ, ಅಲ್ಲಿ ಊಟ ಉಪಚಾರಕ್ಕೂ ನಿಂತು, ಅವರ ಕುಂದು ಕೊರತೆ ಗಳನ್ನು ವಿಚಾರಿಸಿ, ಭೇದವಿಲ್ಲದೆ ಮನೆಯುವರಂತೆ ವರ್ತಿಸುತ್ತ, ಅವರನ್ನೂ ತಮ್ಮ ಮನೆಗೆ ಆಗಾಗ ಕರೆದು ಪ್ರೀತ್ಯಾದರಗಳನ್ನು ತೋರುತ್ತಿದ್ದರು.

ಊರಿನವರ ವಿಚಾರಣೆಯೂ ಸಹಾಯ ಸಹಾನುಭೂತಿಯೂ ಕಡಮೆ ಇರಲಿಲ್ಲ.

ಶಿವನೂ ಗೌರಿಯಂತೆಯೇ ದಾಸನನ್ನು ಬಹಳ ಪ್ರೀತಿಯಿಂದ ನೋಡು ತ್ತಿದ್ದನು. ಅವರಿಬ್ಬರಲ್ಲಿ ಯಾರಿಗೆ ಹೆಚ್ಚು ಪ್ರೀತಿಯೋ ಹೇಳಲಾಗದು. ದಾಸನ ಕೊನೆಗಾಲವು ಅತಿಶಯವಾಗಿ ಸುಖಮಯವಾಗಿದ್ದಿತು.

ಶಿವನು ಮದುವೆಯಾದ ಮೇಲೆ ತನ್ನ ಸ್ಥಿತಿಯನ್ನು ಮೇಲ್ಪಡಿಸಿಕೊಂಡನು. ಹಂಗಿಗೂ ಕಾರ್ಪಣ್ಯಕ್ಕೂ ಒಳಗಾಗಲಿಲ್ಲ. ಗುತ್ತಿಗೆಗೆ ಭೂಮಿ ತೆಗೆದುಕೊಂಡು ಸ್ವಂತ ಕೃಷಿ ಹಿಡಿದನು. ಅವನ ಸಂಪಾದನೆಯೂ ದನ ಕರುಗಳೂ ಹೆಚ್ಚಿದುವು. ಬಸಪ್ಪನು ನಿರೀಕ್ಷಿಸಿದುದಕ್ಕಿಂತ ಶಿವನ ಜೀವನವು ಹೆಚ್ಚಿನ ಮಟ್ಟಕ್ಕೆ ಸೇರಿತು. ಅವರ ಕುಟುಂಬದಲ್ಲಿ ಕೊರತೆಯೇ ಇರಲಿಲ್ಲ. ಎಲ್ಲಿಯೂ ಇಲ್ಲದ ಶಾಂತಿ, ಪ್ರೇಮ, ಸೌಖ್ಯ ಆ ವಾತಾವರಣದಲ್ಲಿದ್ದಿತು. ಊರಿನವರು ಶಿವನನ್ನೂ ಗೌರಿಯನ್ನೂ ಶ್ಲಾಘಿಸಿ, ದಾಸನೇ ಧನ್ಯನೆನ್ನುತ್ತ ಅವನನ್ನು ಊರಿನ ಹಿರಿಯರ ಗುಂಪಿಗೆ ಸೇರಿಸಿಕೊಂಡು ಗೌರವಿಸಿದರು.

ದಾಸನ ಮನೆಯ ಮುಂದಿನ ತೋಟ ಈಗ ಮೊದಲಿಗಿಂತ ದೊಡ್ಡದಾಗಿಯೂ ಸೊಗಸಾಗಿಯೂ ಕಂಗೊಳಿಸುತಿದ್ದಿತು. ಅಲ್ಲಿ ಬಗೆಬಗೆ ಹೂವಿನ, ಹಣ್ಣಿನ ಗಿಡಗಳು ತುಂಬಿದ್ದುವು. ಗೌರಿಯು ಇಷ್ಟಪಟ್ಟಿದ್ದ ಭೂಮಿಯೂ ಸೇರಿತು. ಸಂಜೆ ಹೊತ್ತು ಅವರೆಲ್ಲರೂ ಸರಸ ಸಲ್ಲಾಪ ಮಾಡುತ್ತ ಅಲ್ಲಿ ಕುಳ್ಳಿರುವರು. ಭದ್ರವ್ವ, ಬಸಪ್ಪ, ಚೆನ್ನಮ್ಮ ಮುಂತಾದ ಹಿತಚಿಂತಕರೂ ಅಲ್ಲಿಗೆ ತಪ್ಪದೆ ಆಗಾಗ ಹೋಗುವುದುಂಟು. ಬೊಮ್ಮನಹಳ್ಳಿಯಲ್ಲಿ ಇದು ಬಹಳ ಮುಖ್ಯವಾದ ಸ್ಥಳವಾಯಿತು.

ಗೌರಿ ದಾಸನ ಮಗ್ಗುಲಲ್ಲಿ ಕುಳಿತು, 'ಅಪ್ಪ ಇಷ್ಟೇಸಾಕು. ದೇವರದಯೆ.' ಎನ್ನುವಳು.

ಮದುವೆಯಾಗಿ ಐದಾರು ವರ್ಷ ಕಳೆಯಿತು. ಗೌರಿಯೂ ಶಿವನೂ ಬಸಪ್ಪನನ್ನೂ ಚೆನ್ನಮ್ಮನನ್ನೂ ಅತಿಶಯವಾದ ಗೌರವ, ಪ್ರೀತಿ, ಆದರಗಳಿಂದ ಕಾಣತೊಡಗಿದರು. ಅವರೆಲ್ಲರಿಗೂ ದಾಸನಲ್ಲಿ ಬಹಳ

[illegible] ಮಕ್ಕಳಿಲ್ಲದ ಕೊರತೆ ತಪ್ಪಿತು.

ಒಂದು ದಿನ ಸಂಜೆ. ಎಲ್ಲರೂ ಊರಿನ ಗುಡಿಗೆ ಹೋಗಿ ಬಂದರು. ಶಿವ, ಭದ್ರಮ್ಮ, ಬಸಪ್ಪ, ಚಿನ್ನಮ್ಮ ಮನೆಯ ಒಳಗೇ ಕುಳಿತರು. ಗುಡಿಯಿಂದ ಹಿಂದಿರುಗಿದ ಮೇಲೆ, ಗೌರಿ ದಾಸನ ಮಡುಲಲ್ಲಿ ಮಗುವನ್ನು ಮಲಗಿಸಿದಳು. ದಾಸನಿಗೆ ಹೇಳಲಾರದ ಆನಂದ. 'ಅಪ್ಪ, ಮಗು ಮುಟ್ಟಿ ಆಶೀರ್ವಾದಮಾಡು' ಎಂದಳು. 'ಆಗಲಮ್ಮ, ದೇವರು ಕಾಪಾಡಲಿ' ಎಂದು ದಾಸನು ಕೈ ಮುಗಿದನು.

ಮಗುವಿನ ಹೆಸರು ಶಂಕರ!

ಅವನಿವನೆನಲೇಂ ಸತ್ಕಾ।
ರ್ಯವನಾಚರಿಪು ದರಿ ನೊಗೆದ ಸುಕೃತಮುಮೊಂದೇ ॥
ದಿವಿಜಪುರಕಡರ್ವ ರಮಣೀ।
ಯವೆನಿಪ ಸೋಪಾನಪಙ್ಕ್ತಿಯುಪ್ಪುದದಾರ್ಗಂ ॥

ಶಾಂತಂ! ಶಿವಂ! ಅದ್ವೈತಂ!